ಸಂವಾದ

ಡಿಸೆಂಬರ್ 2002 - ಜನವರಿ 2003 ಸಂಯುಕ್ತ ಸಂಚಿಕೆ ಮಾಸ ಪತ್ರಿಕೆ



ನಿತ್ಯ ಮೂವರು
ದಲಿತ ಮಹಿಳೆಯರ
ಮಾನಭಂಗ

ನಿತ್ಯ ಇಬ್ಬರು
ದಲಿತರ ಕೊಲೆ

ನಿತ್ಯ ದಲಿತರ ಎರಡು
ಮನೆಗಳ ಧ್ವಂಸ

ಪ್ರತಿ ಗಂಟೆಗೆ
ಮೂವರು ದಲಿತರ
ಮೇಲೆ ಹಲ್ಲೆ

ರೂ. 10/-

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 2-3

ಡಿಸೆಂಬರ್ 2002 - ಜನವರಿ 2003

ಸಂಪಾದಕ :

ಇಂದೂಧರ ಹೊನ್ನಾಪುರ

ನೆರವು :

ಕೆ.ಪಿ. ಶಿವರಾಂ

ಡಾ|| ಎಂ. ಶಿವಲಿಂಗಯ್ಯ

ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ
ಬಾಬಾಸಾಹೇಬ್ ಅಂಬೇಡ್ಕರ್
ಸ್ಮಾರಕ ಕೇಂದ್ರ
ಅಂಚೆ ಪೆಟ್ಟಿಗೆ ಸಂಖ್ಯೆ : 9143
ಹೇರೋಹಳ್ಳಿ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - 560 091

ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF SPOORTHIDHAMA
PB NO. 9143, HEROHALLI
VISHWANEEDAM POST
BANGALORE - 560 091
PHONE : 3287943, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ

- ಪತ್ರಗಳು 3
- ಮೇರಾ ಭಾರತ್ ಮಹಾನ್ 4
- ಅಂತರಂಗ 5
- ದಲಿತ ಸಂಘಟನೆಗಳು ಮತ್ತು ರಾಜಕಾರಣ 6
- ಶಾಹು ಮಹಾರಾಜ್ : ಸಾಮಾಜಿಕ ಪ್ರಜಾಸತ್ತೆಯ ರೂವಾರಿ 8

- ನ್ಯಾಯಾಂಗ ಮತ್ತು ಸಾಮಾಜಿಕ ನ್ಯಾಯ 10
- ಅವಲೋಕನ 16
- ಮಾಲ-ಮಾದಿಗ ವಿವಾದ : ಪರಿಶಿಷ್ಟ ಜಾತಿಯವರಿಗೊಂದು ಮನವಿ 18

- ಕುಶಿನಾರದ ಸಾಲ ವೃಕ್ಷಗಳ ನೆರಳಲ್ಲಿ 22
- ಗಾಂಧಿ ಮತ್ತು ಕೋಮುವಾದ 27



- ಧರ್ಮ ನಿರಪೇಕ್ಷ ಭಾರತ : ಚಾರಿತ್ರಿಕ ವ್ಯಾಖ್ಯಾನ 29
- ಮನುಷ್ಯನನ್ನು ನುಂಗಿ ಜೀರ್ಣಿಸಿಕೊಂಡ ಜಾತಿ 36
- ರಾಷ್ಟ್ರೀಯತೆಯ ವ್ಯಾಖ್ಯಾನದಲ್ಲಿ ಗ್ರಾಮಗಳ ಪಾತ್ರ 38
- ಅಂಬೇಡ್ಕರ್ ಹೀಗೆ ಹೇಳುತ್ತಾರೆ... 43

ಇಲ್ಲಿನ ಲೇಖನಗಳಲ್ಲಿ ವ್ಯಕ್ತಪಡಿಸಲಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವುಗಳಾಗಿವೆ.

ಮುಖಪುಟ ಚಿತ್ರ : ಹ್ಯೂಮನ್‌ಸ್ಕೇಪ್

ದಿಕ್ಕೆಟ್ಟ ಚಳವಳಿಗಳ ಸಂಘಟನೆಗೆ ಚೈತನ್ಯ ನೀಡಲಿ

ಪ್ರೀತಿಯ ಇಂದೂಧರ್,

ಮೊನ್ನೆ ಮಿತ್ರ ಶಿವರಾಂ ಅವರು ಕೊಟ್ಟ 'ಸಂವಾದ'ದ ಮೊದಲ ಸಂಚಿಕೆ ಕೊಂಡುಕೊಂಡೆ. ನಿಮ್ಮ ಪತ್ರಿಕೆಯ ಮುಂದಿನ ದಿಕ್ಕನ್ನು ಸೂಚಿಸುವ ಎಲ್ಲ ಬಗೆಯ ಬರಹಗಳೂ ಇಲ್ಲಿರುವಂತೆ ಕಾಣುತ್ತದೆ. ಹಿಂದೊಮ್ಮೆ 'ಪಂಚಮ' ಪತ್ರಿಕೆ ಕಾಲೇಜುಗಳಲ್ಲಿದ್ದ ನಮ್ಮನ್ನು ತಾಕಿ ಮನುಷ್ಯರನ್ನಾಗಿ ಮಾಡಿದ್ದು ನೆನಪಾಯಿತು. 'ಮುಕ್ತ ಸಮಾಜವಾದಿ ಮಾತುಕತೆ'ಯ ಜೊತೆಗೆ 'ಸಂವಾದ'ವೂ ಸೇರಿ 'ಪಂಚಮ' ಮಾಡಿದ್ದ ಕೆಲಸವನ್ನು ಈಗ ಮಾಡಬಹುದೇ? ಅದರ ಜೊತೆಗೇ, ಕಿರುಪತ್ರಿಕೆಗಳಲ್ಲಿ ನಾವು ಹೆಚ್ಚು ದೂರ ಸಾಗಲಾಗದು ಎಂಬನದನ್ನೂ ಮರೆಯದಿರೋಣ.

ಆದರೂ ದಿಕ್ಕೆಟ್ಟಂತಿರುವ ಎಲ್ಲ ದಲಿತ ಸಂಘಟನೆಗಳ ಕಾರ್ಯಕರ್ತರಿಗೆ ಅನೇಕ ವಿಷಯಗಳ ಬಗ್ಗೆ ಸ್ಪಷ್ಟತೆ ಕೊಡುವ ಜವಾಬ್ದಾರಿಯನ್ನು ಈ ಪತ್ರಿಕೆಯ ಮೂಲಕ ಖಂಡಿತ ಮಾಡಬಹುದು. ಈ ಕೆಲಸ ಮಾಡಬೇಕೆಂದರೆ ಪತ್ರಿಕೆಯ ಭಾಷೆ ಕ್ಲೀಷೆಗಳಿಂದ ಮುಕ್ತವಾಗಿ, ಇನ್ನಷ್ಟು ಸರಳವಾಗಿರಬೇಕು. ಅದರ ಜೊತೆಗೇ ಎಲ್ಲ ದಲಿತ ಹಾಗೂ ಎಡ ಪಂಥೀಯ ಸಂಘನೆಗಳೂ ಇಲ್ಲಿ ಮುಕ್ತವಾಗಿ ಚರ್ಚಿಸಿ, ಮುಖ್ಯ ಪ್ರಶ್ನೆಗಳ ಸಂದರ್ಭದಲ್ಲಾದರೂ ಒಂದಾಗುವ ರೀತಿ ಮಾಡಿದರೆ ಎಷ್ಟು ಚೆನ್ನಾಗಿರುತ್ತದೆ!

ನಿಮ್ಮ ಪ್ರೀತಿಯ

ನಟರಾಜ್ ಹುಳಿಯಾರ್, ಬೆಂಗಳೂರು

ಹೊಸ ಪೀಳಿಗೆಗೆ ಸ್ಫೂರ್ತಿ

ಮಾನ್ಯ ಸಂಪಾದಕರೆ,

'ಸಂವಾದ ಮಾಸ ಪತ್ರಿಕೆ'ಯಲ್ಲಿ ಮೂಡಿ ಬರುತ್ತಿರುವ ವಿಶೇಷ ಬರವಣಿಗೆಗಳು ನೊಂದ ಜನರ ಆಶಾಕಿರಣವಾಗಬಲ್ಲದು. ಜ್ಯೋತಿಬಾ ಪುಲೆಯಂತಹ ಸಾಮಾಜಿಕ ಕಳಕಳಿ ಹಾಗೂ ಸಮಾಜೋದ್ಧಾರಕರ ವ್ಯಕ್ತಿತ್ವವನ್ನು ಈಗಿನ ಪೀಳಿಗೆ ಅರಿಯಬೇಕಾದ್ದು ಅತ್ಯವಶ್ಯಕ. ಇಂತಹ ಬರವಣಿಗೆಯನ್ನು ಹೊತ್ತ 'ಸಂವಾದ' ಮಾಸಪತ್ರಿಕೆ ನಿಜಕ್ಕೂ ಸ್ಫೂರ್ತಿಧಾಮದಂತಹ ಜನ ಸೇವಾಸಂಸ್ಥೆಯಿಂದ ಒಡಮೂಡಿರುವುದು ಈಗಿನ ಪೀಳಿಗೆಗೆ ಅದರಲ್ಲೂ ಆರ್ಥಿಕ ಹಾಗೂ ಸಾಮಾಜಿಕ ಶೋಷಿತರಿಗೆ ಸ್ಫೂರ್ತಿದಾಯಕವೇ ಸರಿ.

ಮೂರ್ತಿ ಎಸ್.ಜೆ., ಬೆಂಗಳೂರು

ಚಿಂತನೆಗೆ ಯೋಗ್ಯ

ಮಾನ್ಯ ಸಂಪಾದಕರೆ,

ಸಂವಾದದ ಲೇಖನಗಳು ಚಿಂತನೆಗೆ ಯೋಗ್ಯವಾದರೂ ತೀರಾ ಗಂಭೀರವಾಗಿವೆಯೇನೋ ಎನಿಸಿತು. ಅಕ್ಷರಬಲ್ಲ ಸಾಮಾನ್ಯ ಜನರು, ವಿದ್ಯಾರ್ಥಿಗಳೂ ಸಹ ಈ ಪತ್ರಿಕೆಯಿಂದ ಸಾಕಷ್ಟು ಮಾಹಿತಿಗಳನ್ನು ಅರಿಯಲು ಲೇಖನಗಳ ಆಯ್ಕೆ ಮತ್ತು ಬರವಣಿಗೆ ಸುಲಭವಾಗಿರಲೆಂದು ಕೋರುವ ಜತೆಗೆ ಪತ್ರಿಕೆಯುನ್ನು ಯಾವುದೇ ಕಾರಣಕ್ಕೂ ನಿಲ್ಲಿಸದೆ ಮುಂದುವರಿಸುವ ಇಚ್ಛೆ ಮತ್ತು ಧೈರ್ಯ ನಿಮ್ಮದಾಗಿರಲಿ.

ಹನುಮಂತರಾಯಪ್ಪ, ಊರ್ಡಿಗೆರೆ

ಸ್ತ್ರೀ ಪರ ನಿಲುವಿಗೆ ವೇದಿಕೆಯಾಗಲಿ

ಪ್ರೀತಿಯ ಸಂಪಾದಕರೆ,

ಮನುಷ್ಯರನ್ನು ಮನುಷ್ಯರನ್ನಾಗಿ ನೋಡದ ಭಾರತೀಯ ಸಮಾಜದಲ್ಲಿ ದಲಿತರಷ್ಟೇ ಅನ್ಯಾಯ-ದೌರ್ಜನ್ಯಕ್ಕೆ ಒಳಗಾಗಿರುವವವರು ಮಹಿಳೆಯರು. ಶಾಸ್ತ್ರ-ಪುರಾಣ ಮತ್ತು ಲಿಂಗದ ತಾರತಮ್ಯದಲ್ಲೇ ನೋಡುತ್ತಿರುವ ಮಹಿಳೆಯರಿಗೆ, ಇಂದು ತಾಯ ಗರ್ಭದಲ್ಲೂ ರಕ್ಷಣೆ ಸಿಗದಂತಾಗಿರುವುದು ಹಾಗೂ ಮಹಿಳೆಯರ ಮೇಲಿನ ನಿತ್ಯದ ಹಲ್ಲೆಯನ್ನು ನೋಡದೆ ಸೂರ್ಯ ಕೂಡ ತನ್ನ ದೈನಂದಿನ ಕಾಯಕವನ್ನು ಆರಂಭಿಸಲಾರ ಎಂಬಂತಾಗಿರುವುದು ವಿಷಾದನೀಯ.

ಕಳೆದ ಸಂಚಿಕೆಯಲ್ಲಿನ ತಮ್ಮ ಸಂಪಾದಕೀಯ, ಆಶಿಷ್‌ನಂದಿಯವರ ಲೇಖನ ಇವುಗಳನ್ನೆಲ್ಲಾ ಓದಿದೆ. ಮುಂಬರುವ ದಿನಗಳಲ್ಲಿ ಮಹಿಳೆಯರ ಸ್ಥಿತಿ-ಗತಿಗಳು ಮತ್ತಷ್ಟು ಹದಗೆಡುವ ಲಕ್ಷಣಗಳಿರುವುದರಿಂದ ಅಂತಹ ಒತ್ತಡಗಳಿಂದ ಸಾಮಾನ್ಯ ಮಹಿಳೆಯರು ಹೊರಬರುವಲ್ಲಿ ಬೇಕಾದ ಸಿದ್ಧತೆಗಳ ಬಗ್ಗೆ ನಿಮ್ಮ ಮುಂದಿನ ಸಂಚಿಕೆಗಳಲ್ಲಿ ಲೇಖನಗಳಿರಲಿ.

ಸಾಧ್ಯವಾದರೆ ಪ್ರತೀ ಸಂಚಿಕೆಯಲ್ಲೂ ಮಹಿಳೆಯರನ್ನು ಕುರಿತ ಅವರ ಅಭಿವೃದ್ಧಿಗೆ ಪೂರಕವಿರುವ ಲೇಖನಗಳು ತಪ್ಪದೇ ಇರಲಿ. ನಿಮ್ಮ ಪ್ರಯತ್ನ ಯಶಸ್ವಿಯಾಗಲಿ.

ಶಾರದಾ ಇ. ಹೊಸದುರ್ಗ, ಚಿತ್ರದುರ್ಗ ಜಿಲ್ಲೆ

ನಿತ್ಯ ಸಂವಾದಿಸುತ್ತಿರಲಿ

ಆತ್ಮೀಯ ಇಂದೂರವರೆ,

ಕೋಮುವಾದಿಗಳು ಕಪಿಮುಷ್ಟಿಯಿಂದ ನಾಡಿನ ದಲಿತ, ಹಿಂದುಳಿದ ಅಲ್ಪಸಂಖ್ಯಾತ ವರ್ಗ ಮತ್ತು ಮಹಿಳೆಯರನ್ನು ರಕ್ಷಿಸಬೇಕಾಗಿರುವುದು ಒಂದೆಡೆಯಾದರೆ ಈ ವರ್ಗದ ಬಲಿಷ್ಠ ಸಂಘಟನೆಗಳು ಜವಾಬ್ದಾರಿಯಿಂದ ಜಾರಿಗೊಳ್ಳುತ್ತಿರುವ ಸಂದಿಗ್ಧ ಸಂದರ್ಭದಲ್ಲಿ ಸಂವಾದ ಮಾಸ ಪತ್ರಿಕೆ ಹೊರಬರುತ್ತಿರುವುದು ಸ್ವಾಗತಾರ್ಹ.

ಮೊದಲ ಸಂಚಿಕೆಯಲ್ಲಿರುವ ಲೇಖನಗಳು ದೀನ-ದಲಿತ ಓದುಗರಲ್ಲಿ ಹೊಸ ಭರವಸೆಯನ್ನು ಮೂಡಿಸುತ್ತಿದ್ದು ಭರವಸೆಯನ್ನು ಕಾಯ್ದುಕೊಳ್ಳುವಲ್ಲಿ ಪತ್ರಿಕೆ ರಾಜಿ ಮಾಡಿಕೊಳ್ಳದಿರಲಿ ಮತ್ತು ನಿತ್ಯ ಹೀಗೆ ಸಂವಾದಿಸುತ್ತಿರಲಿ ಎಂದು ಆಶಿಸುತ್ತೇನೆ.

ಗೋಡೇಕೆರೆ ನಾಗರಾಜ್, ಚಿಕ್ಕನಾಯಕನಹಳ್ಳಿ

ವೈಚಾರಿಕ ಶೂನ್ಯ ನೀಗಲಿ

ಸಂವಾದ ಸಂಪಾದಕರೆ,

ದಲಿತರ ಮಧ್ಯೆ ಅದೆಷ್ಟೋ ಪುಡಿ ಪತ್ರಿಕೆಗಳಿದ್ದರೂ, ಒಟ್ಟಾರೆ ದಲಿತರನ್ನು ಚಿಂತನೆಗೆ, ವಿಚಾರ ವಿನಿಯಮಕ್ಕೆ, ಪ್ರೋತ್ಸಾಹಿಸುವ ಪತ್ರಿಕೆಗಳು ಇಲ್ಲವೆನ್ನುವ ಶೂನ್ಯವನ್ನು ಹೋಗಲಾಡಿಸುವಲ್ಲಿ ಸಂವಾದ ಯಶಸ್ವಿಯಾಗಲಿ ಅಂತ ಹಾರೈಸುತ್ತೇನೆ.

ಕೆಪಿದೊಡ್ಡಿ ನಾಣಿ, ಮಾಗಡಿ

ದಲಿತ ಚಳವಳಿ ಮೇಲೆ ಸ್ಪಷ್ಟ ಬೆಳಕು

ಇಂದೂಧರ್‌ರವರೆ,

ತಮ್ಮ ಸಂಪಾದಕತ್ವದಲ್ಲಿ ಬರುತ್ತಿರುವ 'ಸಂವಾದ' ಪತ್ರಿಕೆಯ ಮೊದಲ ಸಂಚಿಕೆ ನೋಡಿದೆ. ತುಂಬಾ ಖುಷಿಯಾಯಿತು.

ಸಾರ್ವಜನಿಕರ ಅಸಹನೆ, ಸರ್ಕಾರದ ಅನಾಧರಣೆ ಮತ್ತು ಕೊಟ್ಟ ಕೂಲಿಯಲ್ಲೇ ಅಷ್ಟಿಷ್ಟು ಕಮೀಷನ್ ಗುಂಜುವ ಅಧಿಕಾರಿಗಳ-ಮಧ್ಯವರ್ತಿಗಳ ಮನೆಹಾಳ ಕೃತ್ಯದ ನಡುವೆಯೂ ನಿತ್ಯದ ಕಾಯಕದಂತೆ, ನಗರ ಸ್ವಚ್ಛಗೊಳಿಸುವ ಪೌರಕಾರ್ಮಿಕರ ಬದುಕು ಮತ್ತು ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಪರ್ಯಾಯ ವೃತ್ತಿಗಳ ಬಗ್ಗೆ ತೆಗೆದುಕೊಳ್ಳಬೇಕಾದ ನಿಲುವುಗಳ ಬಗ್ಗೆ ಮರಿಸ್ವಾಮಿಯವರ ಲೇಖನ ಚೆನ್ನಾಗಿ ಮೂಡಿ ಬಂದಿದೆ.

ಕೋಟಿಗಾನಹಳ್ಳಿ ರಾಮಯ್ಯನವರ ದಲಿತ ಚಳುವಳಿಯನ್ನು ಕುರಿತ ಲೇಖನವಂತೂ, ಸಮಸ್ತ ದಲಿತ ವರ್ಗದ ದನಿಯಾಗಿದ್ದ, ದಲಿತ ಸಂಘರ್ಷ ಸಮಿತಿಯ ಸಮಗ್ರ ಇತಿಹಾಸದ ಬಗ್ಗೆ ಬೆಳಕು ಚೆಲ್ಲಿತು. ಅಲ್ಲದೆ ಮುಂಬರುವ ದಿನಗಳ ಬಗೆಗಿನ ಎಚ್ಚರಿಕೆಯನ್ನು ನೀಡಿತು.

ಅನಂತರಾಮು, ಬೆಂಗಳೂರು



ಮೇರಾ ಭಾರತ್ ಮಹಾನ್

ಹರಿಜನ ಕಾಲೋನಿಗೆ ನುಗ್ಗಿ ಸವರ್ಣೀಯರ ದಾಂಧಲೆ

ಕುಣಿಗಲ್, ತುಮಕೂರು, ನ. 7 : 50 ಮಂದಿ ಸವರ್ಣಿಯರು ಹರಿಜನ ಕಾಲೋನಿಗೆ ನುಗ್ಗಿ ದಾಂಧಲೆ ನಡೆಸಿ, 100ಕ್ಕೂ ಹೆಚ್ಚು ಮನೆಗಳ ಹೆಂಚು, ವಿದ್ಯುದ್ದೀಪಗಳನ್ನು ಜಖಂಗೊಳಿಸಿ, ಮಹಿಳೆಯರು, ಮಕ್ಕಳಿಗೆ ಥಳಿಸಿದ ಪ್ರಸಂಗ ಕಳೆದ ರಾತ್ರಿ ತಾಲ್ಲೂಕಿನ ಉಜ್ಜನಿ ಹರಿಜನ ಕಾಲೋನಿಯಲ್ಲಿ ನಡೆದಿದೆ.

ಬುಧವಾರ ರಾತ್ರಿ 7 ಗಂಟೆ ಸಮಯದಲ್ಲಿ 50ಕ್ಕೂ ಹೆಚ್ಚು ಸವರ್ಣಿಯರ ಗುಂಪು ದೊಣ್ಣೆ ಮತ್ತು ಕಲ್ಲಿನೊಂದಿಗೆ ಹರಿಜನ ಕಾಲೋನಿಗೆ ನುಗ್ಗಿ ಬೀದಿದೀಪಗಳನ್ನು ನಾಶಪಡಿಸಿ, ತದನಂತರ ಮನೆಗಳ ಮುಂಭಾಗವಿದ್ದ ವಿದ್ಯುದ್ದೀಪಗಳನ್ನು ಜಖಂಗೊಳಿಸಿ, 100ಕ್ಕೂ ಹೆಚ್ಚು ಮನೆಗಳ ಹೆಂಚುಗಳನ್ನು ದೊಣ್ಣೆ ಮತ್ತು ಕಲ್ಲಿನಿಂದ ಹೊಡೆದು ಜಖಂಗೊಳಿಸಿದ್ದಾರೆ. **(ಕನ್ನಡ ಪ್ರಭ)**

ಸವರ್ಣಿಯರಿಂದ ದಲಿತರ ಮೇಲೆ ಹಲ್ಲೆ

ಸಿಂಧನೂರು ನ. 20 : ದಲಿತ ಯುವಕನೋರ್ವ ಸವರ್ಣಿಯ ಜನಾಂಗದ ಯುವತಿಯೋರ್ವಳನ್ನು ಚುಡಾಯಿಸಿ ಕೀಟಲೆ ಮಾಡಿದ ಹಿನ್ನಲೆಯಲ್ಲಿ ರೊಚ್ಚಿಗೆದ್ದ ಗುಂಪೊಂದು ಹರಿಜನ ಕೇರಿಗೆ ನುಗ್ಗಿ ಹಲ್ಲೆ ನಡೆಸಿದ ಘಟನೆ ಹತ್ತಿರದ ಜವಳಗೇರಾ ಗ್ರಾಮದಲ್ಲಿ ಇಂದು ಬೆಳಿಗ್ಗೆ ಜರುಗಿದೆ. ಈ ಸಂದರ್ಭದಲ್ಲಿ 7 ಜನ ದಲಿತರಿಗೆ ಗಾಯಗಳಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆಯ ಹಿನ್ನೆಲೆ : ಕಳೆದ 2 ದಿನಗಳ ಹಿಂದೆ ದಲಿತ ಜನಾಂಗಕ್ಕೆ ಸೇರಿದ ಆರೋಗ್ಯಪ್ಪ ಎಂಬ ಯುವಕ ಸವರ್ಣಿಯ ಜನಾಂಗದ ಪಿ.ಯು.ಸಿ. ಓದುತ್ತಿರುವ ವಿದ್ಯಾರ್ಥಿನಿಯೊಬ್ಬಳಿಗೆ ಕೀಟಲೆ ಮಾಡಿ ಚುಡಾಯಿಸಿದ್ದ ಎನ್ನಲಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಎರಡು ದಿನಗಳ ಹಿಂದೆ ಗ್ರಾಮದಲ್ಲಿ ಘರ್ಷಣೆಯಾಗಿ ನಂತರ ತಿಳಿಯಾಗಿತ್ತು. ಆದರೆ, ಇಂದು ಬೆಳಿಗ್ಗೆ ಆ ವಿದ್ಯಾರ್ಥಿ ಕಾಲೇಜಿಗೆ ಹೋಗುತ್ತಿರುವ ಸಂದರ್ಭದಲ್ಲಿ ಮತ್ತೆ ಕೀಟಲೆ ಮಾಡಿ ಚುಡಾಯಿಸಿದ್ದನ್ನು ತಿಳಿದ ಸವರ್ಣಿಯ ಯುವಕರ ಗುಂಪೊಂದು ಹರಿಜನ ಕೇರಿಗೆ ನುಗ್ಗಿ ವಿಚಾರಿಸಿದ ಸಂಬಂಧದಲ್ಲಿ ಎರಡು ಗುಂಪುಗಳ ಮಧ್ಯೆ ಮಾತಿಗೆ ಮಾತು ಬೆಳೆದು ರೊಚ್ಚಿಗೆದ್ದ ಸವರ್ಣಿಯರ ಗುಂಪು ಹರಿಜನ ಗುಂಪಿನ ಮೇಲೆ ಹಲ್ಲೆ ನಡೆಸಿದ್ದು ಘಟನೆಯಲ್ಲಿ ಆರೋಗ್ಯಪ್ಪ ಮರಿಯ ಹುಲಗಪ್ಪ, ರಾಯಪ್ಪ, ಹನುಮಂತಪ್ಪ, ಚಿನ್ನಪ್ಪ, ಬಸ್ಸಮ್ಮ ಎಂಬುವರು ಗಾಯಗೊಂಡಿದ್ದಾರೆ. **(ಪ್ರಜಾವಾಣಿ)**

ಪ್ರತಿಮೆಗೆ ಅವಮಾನ : ಉದ್ವಿಗ್ನ ಸ್ಥಿತಿ

ಚಿಕ್ಕಮಗಳೂರು, ಡಿ. 28 : ಪರಿಶಿಷ್ಟರ ಬಡಾವಣೆಯ ಫಲಕದಲ್ಲಿದ್ದ ಅಂಬೇಡ್ಕರ್ ಪ್ರತಿಮೆಗೆ ಮಸಿ ಬಳಿದು ಚಪ್ಪಲಿ ಹಾರ ಹಾಕಿರುವ ಘಟನೆ ತಾಲ್ಲೂಕಿನ ಉದ್ದೇಬೋರನಹಳ್ಳಿಯಲ್ಲಿ ನಡೆದಿದೆ. ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ಇದ್ದು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. **(ಉದಯವಾಣಿ)**

ಮತಾಂಧರಿಗೆ ಹೆದರಿ ಪ್ರೇಮಿಗಳ ಆತ್ಮಹತ್ಯೆ

ಬೆಂಗಳೂರು, ಡಿ. 24 : ಮತಾಂಧ ಪೋಷಕರಿಗೆ ಹೆದರಿದ ಯುವ ಪ್ರೇಮಿಗಳು ರೈಲಿನಡಿ ಬಿದ್ದು ಆತ್ಮಹತ್ಯೆಗೆ ಶರಣಾದ ಘಟನೆ ಯಶವಂತಪುರ ರೈಲ್ವೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕಿಶೋರ್‌ಕುಮಾರ್ (25), ಆಯೇಶ ತಬಸ್ಸುಮ್ (23) ಆತ್ಮಹತ್ಯೆಗೆ ಶರಣಾದ ಯುವ ಜೋಡಿ. ರಾಜಾನುಕುಂಟೆ ರೈಲ್ವೇ ಹಳಿ ಬಳಿ ಪ್ರೇಮಿಗಳಿಬ್ಬರ ಶವಗಳು ಪತ್ತೆಯಾಗಿವೆ. ಅವರಿಬ್ಬರೂ ಕೈಕೈ ಹಿಡಿದುಕೊಂಡು ರೈಲಿನಡಿ ಬಿದ್ದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. **(ಕನ್ನಡ ಪ್ರಭ)**

ಗಂಡನ ಕಣ್ಣೆದುರೇ ಅತ್ಯಾಚಾರ : ದೂರು ನೀಡಿ ಐದು ತಿಂಗಳಾಗಿತ್ತು...!

ಕಲಬುರ್ಗಿ, 25 : "ನನ್ನ ಮೇಲೆ ಅತ್ಯಾಚಾರ ಮಾಡ್ತಾರ್ರೀ, ನನಗೆ ರಕ್ಷಣೆ ಕೊಡಿ" ಎಂದು ದೇವಕಿ ಕಳೆದ ಐದು ತಿಂಗಳ ಹಿಂದೆಯೇ ಪೊಲೀಸರಿಗೆ ದೂರು ನೀಡಿದ್ದಳು. ಪೊಲೀಸರು ಯಾವುದೇ ಕ್ರಮ ಕೈಗೊಳ್ಳದ ಪರಿಣಾಮವಾಗಿ ಕಳೆದ ದಿ. 19ರಂದು ಆರೋಪಿಗಳು ಗಂಡನ ಕಣ್ಣೆದುರಿನಲ್ಲಿಯೇ ಅತ್ಯಾಚಾರ ಮಾಡಿ ದೇವಕಿ ಜೀವ ಹೊಸಕಿ ಹಾಕಿದರು...!

ಬ್ರಹ್ಮಪುರ ಬಡಾವಣೆಯ ಹಿಂದೆ ಕೊಳಚೆ ಪ್ರದೇಶದಂತಿರುವ ಗಂಗಾನಗರದ ವ್ಯಕ್ತಿಯೊಬ್ಬರು ಮೇಲಿನಂತೆ ತಿಳಿಸಿದರೂ ಮುಖದಲ್ಲಿ ಭಯವಿತ್ತು. ಇದಕ್ಕಿಂತ ಹೆಚ್ಚಿಗೆ ಹೇಳಲು ಅಲ್ಲಿದ್ದವರು ಇಚ್ಛಿಸಲಿಲ್ಲ. ಈ ವಿಷಯ ನಮಗ್ಯಾಕೆ ಎಂದು ಕೆಲವರು ದೂರ ಸರಿದು ಹೋದರು. ದೇವಕಿ ದಹನದ ನಂತರ ಗಂಗಾ ನಗರದ ಕೆಲವು ಅಂಗಡಿ ಮುಂಗಟ್ಟುಗಳು ಮುಚ್ಚಿರುವುದು ಕಂಡು ಬಂತು. **(ಸಂಯುಕ್ತ ಕರ್ನಾಟಕ)**

ಮುಳಬಾಗಿಲು : ದಲಿತ ಯುವಕನಿಗೆ ಮೂತ್ರಪಾನ

ಕೋಲಾರ, ಡಿ. 25 : ಕ್ಷುಲ್ಲಕ ಕಾರಣಕ್ಕಾಗಿ ದಲಿತ ಯುವಕನಿಗೆ ಸವರ್ಣೀಯ ಯುವಕರು ಮೂತ್ರ ಪಾನ ಮಾಡಿಸಲು ಯತ್ನಿಸಿರುವ ಘಟನೆ ಮುಳಬಾಗಿಲು ತಾಲೂಕಿನಲ್ಲಿ ಜರುಗಿದೆ.

ಮುಳಬಾಗಿಲು ತಾಲ್ಲೂಕಿನ ಬಳಪನಹಳ್ಳಿಯ ವೆಂಕಟೇಶ್ ಎಂಬಾತ ಆಟೋ ಚಾಲಕನಾಗಿದ್ದು ಕಳೆದ ರಾತ್ರಿ ರೆಡ್ಡಿ ಜನಾಂಗದ ಸ್ನೇಹಿತರೊಂದಿಗೆ ಬಳಪನಹಳ್ಳಿಯಿಂದ ತಾಯಲೂರಿಗೆ ತೆರಳಿದ್ದನೆನ್ನಲಾಗಿದೆ. ಮಾರ್ಗಮಧ್ಯೆ ಆಟೋದಲ್ಲಿ ಪೆಟ್ರೋಲ್ ಖಾಲಿಯಾಗಿದ್ದು, ಆಟೋದಲ್ಲಿ ಪ್ರಯಾಣಿಸುತ್ತಿದ್ದ ರೆಡ್ಡಿ ಜನಾಂಗದ ಯುವಕನೊಬ್ಬ ಮುಳಬಾಗಿಲಿನಿಂದ ಪೆಟ್ರೋಲ್ ತರಲು ಹೋಗಿದ್ದನೆನ್ನಲಾಗಿದೆ. ಆತ ಬರುವುದು ತಡವಾಗಿದ್ದಾಗ ಆಟೋ ಚಾಲಕ ವೆಂಕಟೇಶ್ ತನ್ನ ಮಿತ್ರನನ್ನು ಬೈಯ್ದನೆಂಬ ಕಾರಣಕ್ಕೆ ನಾಗಿರೆಡ್ಡಿ, ಅಶ್ವತ್ಥರೆಡ್ಡಿ, ನಾರಾಯಣರೆಡ್ಡಿ ಮತ್ತಿತರರ ಗುಂಪು ವೆಂಕಟೇಶ್‌ನನ್ನು ಹಿಗ್ಗಾಮುಗ್ಗ ಥಳಿಸಿ ಕಟ್ಟಿಹಾಕಿ ಮೂತ್ರಪಾನ ಮಾಡಿಸಲು ಪ್ರಯತ್ನಿಸಿದ್ದಾರೆ. **(ಉದಯವಾಣಿ)**

ಕಮಲಾಪುರದಲ್ಲಿ ಅಂಬೇಡ್ಕರ್ ಪ್ರತಿಮೆ ಭಗ್ನ

ಬಳ್ಳಾರಿ, ಡಿ. 25 : ಪ್ರೇಮ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸಪೇಟೆ ಸಮೀಪದ ಕಮಲಾಪುರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ನಡುವೆ ನಡೆದ ಕಲ್ಲು ತೂರಾಟದಲ್ಲಿ ಅಂಬೇಡ್ಕರ್ ಪ್ರತಿಮೆ ಭಗ್ನಗೊಂಡಿದೆ. ಉದ್ರಿಕ್ತರನ್ನು ಚದುರಿಸಲು ಪೊಲೀಸರು ಹತ್ತು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ.

ಘರ್ಷಣೆ ಹಿನ್ನೆಲೆಯಲ್ಲಿ ಕಮಲಾಪುರ ಪ್ರಕ್ಷುಬ್ಧಗೊಂಡಿದೆ. ಕಮಲಾಪುರದ ಅಂಬೇಡ್ಕರ್ ನಗರದ 10ಕ್ಕೂ ಹೆಚ್ಚು ಗುಡಿಸಲುಗಳಿಗೆ ಬೆಂಕಿ ಹಚ್ಚಲಾಗಿದ್ದು, ಸುಮಾರು 12 ಜನರು ತೀವ್ರವಾಗಿ ಗಾಯಗೊಂಡಿದ್ದಾರೆ.

ಘರ್ಷಣೆ ಸಮಯದಲ್ಲಿ ನಡೆದ ಕಲ್ಲು ತೂರಾಟದಿಂದಾಗಿ ವೃತ್ತವೊಂದರಲ್ಲಿದ್ದ ಅಂಬೇಡ್ಕರ್ ಪ್ರತಿಮೆ ಭಗ್ನಗೊಂಡಿತು. ಪ್ರತಿಮೆಯ ತಲೆ ಮತ್ತು ಬಲಗೈ ಕಡೆ ಕಲ್ಲಿನ ಏಟು ಬಿದ್ದಿದೆ. ಘರ್ಷಣೆ ನಿಯಂತ್ರಿಸಲು ಧಾವಿಸಿದ ಪೊಲೀಸರಲ್ಲಿ 7 ಜನರಿಗೆ ಗಾಯಗಳಾಗಿವೆ. **(ಕನ್ನಡ ಪ್ರಭ)**

ಚರ್ಚ್ ಮೇಲೆ ಬಾಂಬ್ : 6 ಮಂದಿಗೆ ಗಾಯ

ಕೋಲ್ಕತಾ, ಡಿ. 25 : ಇಪ್ಪತ್ತು ಮಂದಿ ಸಶಸ್ತ್ರಧಾರಿ ದುಷ್ಕರ್ಮಿಗಳ ಗುಂಪೊಂದು ನಿನ್ನೆ ರಾತ್ರಿ ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯಲ್ಲಿನ ಮಲ್ಲೆಪೊಟದ ಚರ್ಚ್‌ವೊಂದರ ಮೇಲೆ ಬಾಂಬ್ ದಾಳಿ ನಡೆಸಿದ್ದರಿಂದ ಚರ್ಚ್‌ನ ಪ್ರಮುಖ ಪಾದ್ರಿಯೂ ಸೇರಿದಂತೆ ಆರು ಮಂದಿ ಗಾಯಗೊಂಡರು.

ಇದಲ್ಲದೆ ಚರ್ಚ್‌ನಿಂದ ಹಣವನ್ನು ಸಹ ಲೂಟಿ ಮಾಡಲಾಗಿದೆ ಎಂದು ಡಿಜಿಐ ಎನ್.ಸಿ. ಘೋಷ್ ಅವರು ಕೋಲ್ಕತ್ತಾದಲ್ಲಿ ತಿಳಿಸಿದ್ದಾರೆ. **(ಸಂಯುಕ್ತ ಕರ್ನಾಟಕ)**

ಅಂತರಂಗ

ನಮ್ಮ ಕಣ್ಣೆದುರೇ ಈ ಘಟನೆಗಳು ನಡೆದಿವೆ.

ಮತಾಂಧ ಪೋಷಕರಿಗೆ ಹೆದರಿ ಬೆಂಗಳೂರಿನ ಯುವ ಪ್ರೇಮಿಗಳು ರೈಲಿಗೆ ತಲೆಕೊಟ್ಟಿದ್ದಾರೆ.

ರಾಯಚೂರು ಜಿಲ್ಲೆ ಜವಳಗೇರಾದಲ್ಲಿ ದಲಿತ ಯುವಕನೊಬ್ಬ ಸವರ್ಣೀಯ ಹೆಣ್ಣುಮಗಳೊಬ್ಬಳನ್ನು ಪ್ರೇಮಿಸಿದ್ದಕ್ಕಾಗಿ ಇಡೀ ದಲಿತ ಕೇರಿಯನ್ನು ನಾಶ ಪಡಿಸಲಾಗಿದೆ.

ಬಳ್ಳಾರಿಯ ಕಮಲಾಪುರದಲ್ಲಿ ಎರಡು ದಲಿತ ಪಂಗಡಗಳ ಪುಂಡು ಹುಡುಗರ ಹೊಡೆದಾಟ ಜಾತಿ ಗಲಭೆಯಾಗಿ ಪರಿಣಮಿಸಿ, ಒಂದು ಪಂಗಡದ ಜನರಿಗೆ ಸೇರಿದ ಆಸ್ತಿ ಪಾಸ್ತಿಯನ್ನು ಲೂಟಿ ಮಾಡಲಾಗಿದೆ.

ಇಂಥದೇ ಘಟನೆ ತುಮಕೂರು ಜಿಲ್ಲೆಯ ಉಜ್ಜನಿಯಲ್ಲಿ ನಡೆದಿದೆ. ಮೇಲ್ಜಾತಿಯ ಯುವತಿಯೊಬ್ಬಳಿಗೆ ದಲಿತ ಹುಡುಗನೊಬ್ಬ ಪ್ರೇಮ ಪತ್ರ ಬರೆದದ್ದಕ್ಕಾಗಿ ಇಡೀ ದಲಿತ ಕೇರಿಯನ್ನು ಲೂಟಿ ಮಾಡಲಾಗಿದೆ. ಸಾರ್ವಜನಿಕ ಬಹಿಷ್ಕಾರ ಹಾಕಲಾಗಿದೆ. ಈ ಎಲ್ಲವನ್ನು ನೋಡಿ ಸರ್ಕಾರ ಪರಿಹಾರದ ನಾಟಕವಾಡಿ ತೆಪ್ಪಗೆ ಕುಳಿತಿದೆ.

ಭಾರತೀಯ ಮನಸ್ಸು ಎಷ್ಟು ಅಮಾನವೀಯವಾಗಿದೆ ಅನ್ನುವುದಕ್ಕೆ ಮೇಲಿನ ಘಟನೆಗಳು ಈಚಿನ ಸಾಕ್ಷಿಗಳು. ಅಸಮಾನತೆಯನ್ನು ಧಾರ್ಮಿಕ ಮೌಲ್ಯ ಮಾಡಿರುವ ಮನುವಾದಿಗಳು ಭಾರತೀಯ ಸಮಾಜದ ಮೇಲೆ ಹೇರುತ್ತಿರುವ ಒತ್ತಡದ ಪರಿಣಾಮದಿಂದಾಗಿ ಇಡೀ ದುರ್ಬಲ ವರ್ಗಗಳು ತತ್ತರಿಸಿ ಹೋಗುತ್ತಿವೆ. ಸದಾ ಕೀಳರಿಮೆಯಿಂದ ನರಳಿ ಜರ್ಜರಿತವಾಗಿರುವ ಶೂದ್ರ ವರ್ಗ ತನ್ನ ಅಧಃಪತನಕ್ಕೆ ತಾನೇ ಕಾರಣವಾಗುತ್ತಿದೆ. ಬಾಬಾಬುಡನ್ ಗಿರಿಯ ಉದಾಹರಣೆಯನ್ನೇ ನೋಡಿ. ಇಡೀ ದೇಶಕ್ಕೆ, ಜಗತ್ತಿಗೆ ಆದರ್ಶವಾಗಬೇಕಾದ ಬಾಬಾಬುಡನ್ ಗಿರಿ ಇಂದು ಮತಾಂಧರ ಕೆನ್ನಾಲಿಗೆಗೆ ಬಲಿಯಾಗುತ್ತಿದೆ. ಮನುವಾದಿಗಳು ಸೃಷ್ಟಿಸಿದ ಹುಸಿ ಧಾರ್ಮಿಕ ಆಚರಣೆಗಳಿಗೆ ಬಲಿಯಾಗಿರುವ ಶೂದ್ರ ವರ್ಗಗಳು ಹುಚ್ಚೆದ್ದು ಕುಣಿಯುತ್ತಿವೆ. ಬಾಬಾಬುಡನ್‌ಗಿರಿಯಲ್ಲಿದ್ದ ದತ್ತಾತ್ರೇಯ ಹಿಂದುವೂ ಅಲ್ಲ, ಬಾಬಾ ಬುಡನ್ ಮುಸ್ಲಿಮನೂ ಅಲ್ಲ. ಹುಸಿ ಧಾರ್ಮಿಕ ಚೌಕಟ್ಟನ್ನು ಮೀರಿದ ಮಹಾ ಸಂತರು ಅವರು.

ಬಾಬಾಬುಡನ್ ಮುಸ್ಲಿಂ ಷರಿಯತ್ತನ್ನು ಮೀರಿದವರು. ದತ್ತಾತ್ರೇಯರಂತೂ ನಾಲ್ಕು ವೇದಗಳನ್ನು ನಾಯಿಗಳನ್ನಾಗಿ ಮಾಡಿ ಕಾಲಿನ ಹೆಬ್ಬೆರಳಿಗೆ ಕಟ್ಟಿ ಅವುಗಳ ಅಪ್ರಸ್ತುತತೆಯನ್ನು ಸಾರಿದವರು. ಜತೆಗೆ ಎರಡು ವಿಭಿನ್ನ ಧಾರ್ಮಿಕ ನಿಲುವುಗಳನ್ನು ಮೀರಿ ಸೌಹಾರ್ದತೆಯ ಆದರ್ಶವನ್ನು ಜಗತ್ತಿಗೇ ಸಾರಿದವರು. ಆದರೆ ಕ್ಷುಲ್ಲಕ ರಾಜಕೀಯ ಆಸೆಗಳಿಗೆ ಬಲಿಬಿದ್ದ ದುಷ್ಟರು ಬಾಬಾಬುಡನ್‌ಗಿರಿಯ ನೆಮ್ಮದಿಗೆ ಈಗ ಬೆಂಕಿ ಹಚ್ಚಿದ್ದಾರೆ. ಅಲ್ಪಸಂಖ್ಯಾತರಿಗೆ ಜೀವ ಭಯ ಒಡ್ಡಿದ್ದಾರೆ. ಸದಾ ಭಯ-ಆತಂಕಗಳಿಂದ ನರಳುವ ಅಲ್ಪ ಸಂಖ್ಯಾತರಿಗೆ ಸಾಂತ್ವನ ಹೇಳಬೇಕಾದ ಸರ್ಕಾರ ಮತಾಂಧರ ಅಟ್ಟಹಾಸವನ್ನು ಮಟ್ಟಹಾಕುವ ಬದಲು ಪರೋಕ್ಷವಾಗಿ ಅವರಿಗೇ ಅನುಕೂಲವಾಗುವಂತೆ ವರ್ತಿಸುತ್ತಿದೆ.



ಬಾಬರಿ ಮಸೀದಿ ಘಟನೆಯನ್ನೇ ನೆನಪಿಸಿಕೊಳ್ಳಿ. ಯಾವ ಅಲ್ಪಸಂಖ್ಯಾತರ ಪರವಾಗಿರುವೆನೆಂದು ಹೇಳುತ್ತಿತ್ತೋ ಅದೇ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗಲೇ ಬಾಬರಿ ಮಸೀದಿ ಆವರಣದಲ್ಲಿ ರಾಮ ಪೂಜೆಗೆ ಮೊದಲು ಅವಕಾಶ ಕಲ್ಪಿಸಿ ಕೊಡಲಾಯಿತು. ನಂತರ ಅದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗ ಬಾಬರಿ ಮಸೀದಿಯ ಧ್ವಂಸ ಕಾರ್ಯಕೂಡ ಹಾಡೇ ಹಗಲು ನಡೆಯಿತು. ಈಗ ಅದೇ ಪಕ್ಷದ ಸರ್ಕಾರ ಕರ್ನಾಟಕದಲ್ಲಿದೆ. ಪ್ರವೀಣ್ ತೊಗಾಡಿಯಾರಂಥ ದೇಶ ದ್ರೋಹಿಗಳು ಬಾಬಾಬುಡನ್‌ಗಿರಿಯನ್ನು ಮತ್ತೊಂದು ಅಯೋಧ್ಯೆ ಮಾಡುವುದಾಗಿ ಘೋಷಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ತೋಗಾಡಿಯಾರ ಘೋಷಣೆಗೆ ಅನುವು ಮಾಡಿಕೊಟ್ಟು ಜಾತ್ಯಾತೀತತೆಯ ನಾಟಕವಾಡುತ್ತಿದೆ!

ಇನ್ನೊಂದು ದುರಂತ ನೋಡಿ! ಅದೇ ಸರ್ಕಾರದ ಸಚಿವೆ ಮೋಟಮ್ಮ ಅವರು ತೊಗಾಡಿಯಾ ವಿರುದ್ಧ ಮಾಡಿದ ಕಟು ಟೀಕೆಗೆ ಸಂಘ ಪರಿವಾರ ನೀಡುತ್ತಿರುವ ಅನಾಗರೀಕ ಪ್ರತಿಕ್ರಿಯೆ ಬಗ್ಗೆ ಸರ್ಕಾರ ಚಕಾರವೆತ್ತುತ್ತಿಲ್ಲ. ಮತೀಯ ವಾದಿಗಳ ಬಗ್ಗೆ ಮೃದು ಧೋರಣೆ ತಳೆದಿರುವ ಕಾಂಗ್ರೆಸ್ ಪ್ರಭಾವಿ ಮಹಿಳಾ ಮಂತ್ರಿಯೊಬ್ಬರ ರಕ್ಷಣೆಗೆ ಕೂಡ ಧಾವಿಸದಷ್ಟು ಅಸಹಾಯಕವಾಗಿದೆ. ಕಠಿಣ ಕ್ರಮಕ್ಕೆ ಮುಂದಾದರೆ ಮತೀಯವಾದಿಗಳ ಬಿರುಗಾಳಿಯಲ್ಲಿ ತಾನೆಲ್ಲಿ ಕೊಚ್ಚಿ ಹೋಗುವೆನೋ ಎಂಬ ಭಯ ಕಾಂಗ್ರೆಸ್ ಅನ್ನು ಕಾಡುತ್ತಿದೆ! ಕಾಂಗ್ರೆಸ್‌ನ ಜಾತ್ಯಾತೀತತೆಗೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕೆ?

ಗುಜರಾತಿನಲ್ಲಿ ಮನುವಾದದ ಪ್ರಯೋಗದಿಂದ ಜಯಶಾಲಿಗಳಾದ ಮತಾಂಧರು ದೇಶದೆಲ್ಲಡೆ ಅದನ್ನು ಹಬ್ಬಿಸಲು ವ್ಯವಸ್ಥಿತ ಪಿತೂರಿ ನಡೆಸುತ್ತಿದ್ದಾರೆ. ಈ ಪಿತೂರಿಯ ಮೊದಲ ಬಲಿಪಶುಗಳು ಅಲ್ಪಸಂಖ್ಯಾತರು. ನಂತರದ ಗುರಿಯೇ ದಲಿತರು. ಅಲ್ಪ ಸಂಖ್ಯಾತರ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ಗಮನ ಹರಿಸಲು ಅಂತರ ರಾಷ್ಟ್ರೀಯ ಸಮುದಾಯವಾದರೂ ಇದೆ. ಆದರೆ ದಲಿತರಿಗೆ ಯಾರಿದ್ದಾರೆ? ಮನುವಾದಿಗಳ ಎಂಜಲಿಗೆ ಹಲ್ಲುಗಿಂಜುತ್ತಾ ಅವರೊಂದಿಗೆ ಶಾಮೀಲಾಗಿರುವ ದಲಿತರು ಯೋಚಿಸಬೇಕಾಗಿದೆ!

✦ ✦ ✦ ✦ ✦

ಇದು 'ಸಂವಾದ'ದ ಎರಡನೇ ಸಂಚಿಕೆ. 'ಸಂವಾದ'ದಂತ ಗಂಭೀರ ಪತ್ರಿಕೆಗಳನ್ನು ಕನ್ನಡದಲ್ಲಿ ತರಲು ಎಷ್ಟು ಹೆಣಗಬೇಕಾಗಿದೆ ಎಂದು ನನಗೀಗ ಅರ್ಥವಾಗುತ್ತಿದೆ. ಟ್ಯಾಬ್ಲಾಯಿಡ್ ಮತ್ತು ದಿನಪತ್ರಿಕೆಗಳ ಪತ್ರಿಕೋದ್ಯಮಕ್ಕೆ ಹೊಂದಿಕೊಂಡಿದ್ದ ನನ್ನಂಥವರಿಗೆ ಕನ್ನಡದಲ್ಲಿರುವ ವೈಚಾರಿಕ ಬರಹಗಳ ಕೊರತೆ ಈವರೆಗೆ ಕಾಡಿಸಿರಲಿಲ್ಲ. ಎಲ್ಲ ಜನವರ್ಗಗಳ ವೈಚಾರಿಕ ಚೈತನ್ಯ ಶಕ್ತಿಯಾಬೇಕೆಂದಿರುವ 'ಸಂವಾದ'ಕ್ಕೆ ಕನ್ನಡದ ವೈಚಾರಿಕ ಬರಹಗಳ ಕೊರತೆ ಎದ್ದು ಕಾಣುತ್ತಿದೆ. ಇಂಗ್ಲೀಷ್‌ನಲ್ಲಿ ಸಿಗುವಷ್ಟು ವಿಪುಲವಾದ ವೈಚಾರಿಕ ಸಾಹಿತ್ಯ ಕನ್ನಡದಲ್ಲಿ ಸಿಗುತ್ತಿಲ್ಲ. 'ವಿಚಾರ ಸಾಹಿತ್ಯ'ದ ಹೊಸ ಕಲೆಗಾರಿಕೆ ನಮ್ಮ ಲೇಖಕರಿಗೆ ಅಗತ್ಯವಾಗಿ ಬೇಕಾಗಿದೆ. 70-80ರ ದಶಕದಲ್ಲಿದ್ದಷ್ಟು ವೈಚಾರಿಕ ತುಡಿತ ಲೇಖಕರಲ್ಲಿ ಈಗ ಕಾಣಬರುತ್ತಿಲ್ಲ. ಹಾಗಾಗಿ ನಾವು ಇಂಗ್ಲೀಷ್ ಲೇಖನಗಳ ಅನುವಾದಕ್ಕೇ ಹೆಚ್ಚು ಅವಲಂಬಿತವಾಗಬೇಕಾಗಿದೆ. ಮುಂದೆ ಈ ಕೊರತೆಯನ್ನು ನೀಗಿಸುವಂತ ಕನ್ನಡ ಬರಹಗಳು ಬರಬಹುದೆಂಬ ಆಶೆ ನನ್ನದು. ದಯವಿಟ್ಟು 'ಸಂವಾದ'ಕ್ಕೆ ಬರೆಯಿರಿ ಎಂದು ಎಲ್ಲ ಲೇಖಕರಲ್ಲಿ ಈ ಮೂಲಕ ವಿನಂತಿ ಮಾಡುವೆ.

○ ಇಂದೂಧರ ಹೊನ್ನಾಪುರ

ಸಂಪಾದಕ

ದಲಿತ ಸಂಘಟನೆಗಳು ಮತ್ತು ರಾಜಕಾರಣ

> ಮನುಷ್ಯ ಹುಟ್ಟುತ್ತಲೇ ಸಾಮಾಜಿಕ ಜೀವಿ ಹೇಗೋ ಹಾಗೇ ರಾಜಕೀಯ ಜೀವಿ ಸಹ. ಸಮಾಜದಿಂದ ಹೊರತಾಗಿ ಬದುಕುವವನು ಮಾತ್ರ ರಾಜಕೀಯದಿಂದ ಹೊರತಾಗಿ ಬದುಕಬಲ್ಲ. ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬುವುದನ್ನು ಮರೆಯದಿದ್ದರೆ, ಈ ಚರ್ಚೆಗೆ ಜೀವಂತಿಕೆ ಇರುತ್ತದೆ. ದ.ಸಂ.ಸ. ಸಾಮಾಜಿಕ ಸಂಘಟನೆ ಎಂದು ಗುರುತಿಸಿಕೊಂಡ ಕ್ಷಣವೇ ರಾಜಕೀಯ ಸಂಘಟನೆಯು ಆಗಿರುತ್ತದೆ. ಆದರೆ ಎಂತಹ ರಾಜಕಾರಣ ದ.ಸಂ.ಸ.ದ ಎದುರಿಗೆ ಇದೆ ಎಂಬುವುದನ್ನು ನಾವೆಲ್ಲರೂ ಚರ್ಚೆಮಾಡಬೇಕಾದ ಹಾಗೂ ಒರೆಗಲ್ಲಿಗೆ ಹಚ್ಚಬೇಕಾದ ವಿಚಾರ.
>
> ○ ಬಿ.ವಿ. ಚಂದ್ರಪ್ರಸಾದ್ ತ್ಯಾಗಿ

ಜಾತಿ ರಹಿತ ಹಾಗೂ ಸಾಮಾಜಿಕ, ಆರ್ಥಿಕವಾಗಿ ಸಮಾನತೆಯ ಮಾನವೀಯತೆಯ ಸಮಾಜವನ್ನು ನಿರ್ಮಿಸುವ ಆಶಯವನ್ನು ಗುರಿಯಾಗಿಸಿಕೊಂಡಿರುವ ದಲಿತ ಸಂಘರ್ಷ ಸಮಿತಿ ಬೌದ್ಧಿಕವಾಗಿ ಇಡೀ ರಾಷ್ಟ್ರದಲ್ಲಿಯೇ ವಿಭಿನ್ನ ಹಾಗೂ ಉನ್ನತ ಮೌಲ್ಯಗಳ ಸಂಘಟನೆ ಎನ್ನಿಸಿದೆ.

ಈ ದೇಶದಲ್ಲಿ ಎಷ್ಟೋ ದಲಿತ ಸಂಘಟನೆಗಳು ಹುಟ್ಟಿಕೊಂಡಿರಬಹುದು ಅಥವಾ ಈಗ ಸಕ್ರಿಯವಾಗಿ ಚಾಲ್ತಿಯಲ್ಲಿ ಇರಲೂಬಹುದು. ಆದರೆ ಆ ಸಂಘಟನೆಗಳ ಅಂತರಂಗ, ದಲಿತ ಸಂಘರ್ಷ ಸಮಿತಿಯಷ್ಟು ವಿಶಾಲವಾದ, ಘನವಾದ ದೃಷ್ಟಿಯನ್ನು ಹೊಂದಿರಲಾರದು ಎಂದು ನನ್ನ ಭಾವನೆ.

ಈ ದೇಶದ ರಾಜ್ಯಾಂಗದ ಪಿತಾಮಹಾರಾದ, ಡಾ|| ಅಂಬೇಡ್ಕರ್ ವಿಚಾರಗಳನ್ನು ಹಾಗೂ ಅವರ ಸಮಗ್ರ ಜೀವನ ದೃಷ್ಟಿಯನ್ನು ಸೀಮಿತ ಅರ್ಥಗಳಲ್ಲಿ ಮಾತ್ರ ಗ್ರಹಿಸಿ ಆ ಮೂಲಕ ಸಂಘಟನೆಗಳನ್ನು ಕಟ್ಟಿಕೊಂಡು ಸ್ವಾತಂತ್ರ್ಯಾನಂತರ ಜನಾಂದೋಲಗಳನ್ನು ನಡೆಸಿಕೊಂಡು ಬಂದಿರುವ ಹಲವಾರು ಸಂಘಟನೆಗಳು ನಮ್ಮ ಕಣ್ಣೆದುರಿಗೆ ಇವೆ.

ಈ ಸಂಘಟನೆಗಳಿಂದ ಈ ನಾಡಿನ ತುಳಿತಕ್ಕೊಳಗಾದವರಿಗೆ, ಹಾಗೂ ಶೋಷಿತರಿಗೆ ಆಯಾ ಕಾಲ ಘಟ್ಟಗಳಲ್ಲಿ ನ್ಯಾಯ ಹಾಗೂ ಸಮಾತನೆಯನ್ನು ದೊರಕಿಸಿಕೊಡುವ ಪ್ರಯತ್ನಗಳು ನಡೆದಿವೆ.

ಈ ಸಂಘಟನೆಗಳಿಂದ ಶೋಷಿತ ವ್ಯವಸ್ಥೆಯ ವಿರುದ್ಧ ಸಂಘರ್ಷ ಹಾಗೂ ಹೋರಾಟಗಳು ಈ 50 ವರ್ಷಗಳಲ್ಲಿ ನಿರಂತರವಾಗಿ ನಡೆದಿದ್ದರೂ ಆಯಾ ಸಂಘಟನೆಗಳ ಸೀಮಿತ ಅರ್ಥವ್ಯಾಪ್ತಿಗಳು ಇದ್ದುದರಿಂದ ಈ ನಾಡಿನ ಸಮಗ್ರ ಬದಲಾವಣೆಯತ್ತ ಅಥವಾ ಜಾತಿರಹಿತ, ವರ್ಗರಹಿತ, ಮಾನವ ಸಮಾಜದ ನಿರ್ಮಾಣದ ಅತ್ತ ಒಂದಿನಿತೂ ಚಲನೆಯು ಸಾಧ್ಯವಾಗಲಿಲ್ಲ.

ಡಾ|| ಅಂಬೇಡ್ಕರ್ ಈ ದೇಶದ ಅಸ್ಪೃಶ್ಯರಿಗೆ ಶೋಷಿತರಿಗೆ ಸಂವಿಧಾನದಲ್ಲಿ ಕೊಡಮಾಡಿದ ಮೀಸಲಾತಿ ಪ್ರಕ್ರಿಯೆಗಳಿಗೆ ಚ್ಯುತಿ ಉಂಟಾಗದಂತೆ, ಜೀವಂತವಾಗಿ ಹೋರಾಟವನ್ನು ಉಳಿಸಿಕೊಳ್ಳುವ ಹಾಗೂ ರೂಪಿಸುವ ಶಕ್ತಿಯೇ ಈವರೆಗಿನ ಎಲ್ಲಾ ಸಂಘಟನೆಗಳ ಜೀವಾಳವಾಗಿತ್ತು.

ಆದರೆ ಅವರ ಕನಸಿನ ಭಾರತವನ್ನು ಸಾಕಾರೊಗಳಿಸುವ ಯೋಜನೆಗಳಿಗೆ ಚಾಲನೆ ದೊರೆಯದೇ ಇರುವುದು ನಾವೆಲ್ಲರೂ ವಿಶಾದಪಟ್ಟುಕೊಳ್ಳಬೇಕಾದ ಅಂಶ.

ಡಾ|| ಅಂಬೇಡ್ಕರ್‌ರವರನ್ನೆ ಅಷ್ಟೆ ಅಲ್ಲದೆ, ಜಗತ್ತಿನ ಶ್ರೇಷ್ಠ ಹಾಗೂ ಸಾರ್ವಕಾಲಿಕ ದಾರ್ಶನಿಕರಾದ ಬುದ್ಧ, ಬಸವಣ್ಣ, ಗಾಂಧಿ, ಪೆರಿಯಾರ್, ಜ್ಯೋತಿಭಾಪುಲೆ, ಯಂತವರ ವಿಚಾರಧಾರೆಗಳು ದಲಿತ ಸಂಘರ್ಷ ಸಮಿತಿ ಎಂಬ ದೇಹಕ್ಕೆ ರಕ್ತ ಮಾಂಸಗಳು ಆಗಿರುವುದರಿಂದಲೇ ಈ ಸಂಘಟನೆಯನ್ನು ಈ ದೇಶದ ವಿಭಿನ್ನ ಸಂಘಟನೆ ಎಂದು ಗುರುತಿಸಬೇಕಾಗುತ್ತದೆ.

ದಲಿತ ಎಂಬ ಪದವನ್ನು ಉಳಿದ ಎಲ್ಲಾ ಸಂಘಟನೆಗಳು, ಸೀಮಿತ ಅರ್ಥವ್ಯಾಪ್ತಿಯಿಂದ ಪರಿಭಾವಿಸಿದ್ದರಿಂದಲೇ ಅಂತಹ ಸಂಘಟನೆಗಳು ಹಾಗೂ ಅದರ ಮುಂಚೂಣಿಯಲ್ಲಿ ಇರುವವರು ಬೌದ್ಧಿಕವಾಗಿ ದಿವಾಳಿಗೊಂಡು, ಸಾಮಾಜಿಕವಾಗಿ ಸವಕಲು ನಾಣ್ಯಗಳಾಗಿ ತೊಡಗಿರುವ ಸತ್ಯ ನಮ್ಮ ಎದುರಿಗೇ ಇದೆ.

ಅಸ್ಪೃಶ್ಯರಷ್ಟೇ ಅಲ್ಲದೇ ಈ ನಾಡಿನ ಎಲ್ಲಾ ಜಾತಿಯ ಶೋಷಿತರು, ಶ್ರೇಣಿಕೃತ ಪುರೋಹಿತರಿಂದ ನಿರ್ದೇಶಿತವಾದ ಕುವ್ಯವಸ್ಥೆಯನ್ನು ಛಿದ್ರಗೊಳಿಸಿ, ಸಮಾನತೆಯ ಪ್ರೀತಿಯ ಸಮಾಜವನ್ನು ಕಟ್ಟುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗಳ ಬಗ್ಗೆ ದ.ಸಂ.ಸ. ಸಂವಿಧಾನ ಚಿಂತಿಸಿದೆ.

ದ.ಸಂ.ಸ. ಈ ಮೂರು ದಶಕಗಳಲ್ಲಿ ನಡೆಸಿರುವ ಅಸ್ಪೃಶ್ಯತೆಯ ವಿರುದ್ಧದ ಹೋರಾಟಗಳು, ಭೂ ಹೋರಾಟಗಳು, ಬೆತ್ತಲೆ ಸೇವೆ, ಮುಂತಾದ ಮೌಢ್ಯಗಳ ವಿರುದ್ಧ ನಡೆಸಿರುವ ಹೋರಾಟಗಳು, ಮೀಸಲಾತಿ ಹಾಗೂ ಶೈಕ್ಷಣಿಕ ಹೋರಾಟಗಳು ಗಣನೀಯ ಪ್ರತಿಫಲವನ್ನು ನೀಡಿವೆ. ಉಳಿದೆಲ್ಲಾ ರಾಜ್ಯಗಳಿಗೆ ಹೋಲಿಸಿದರೆ ಈ ರಾಜ್ಯದ ದಲಿತರ ಸ್ಥಿತಿಗತಿಗಳು ಸ್ವಲ್ಪಮಟ್ಟಿಗಾದರೂ ಸುಧಾರಿಸಿವೆ. ಇದಲ್ಲದೇ ದಲಿತರಲ್ಲಿ ಈ ವ್ಯವಸ್ಥೆಯ ವಿರುದ್ಧ ಮೂಡಿರುವ ಪ್ರಜ್ಞಾವಂತಿಕೆಯ ಅಗಾಧಶಕ್ತಿಯ ಹಿಂದೆ ದ.ಸಂ.ದ. ಪ್ರಭಾವವೇ ಗೋಚರವಾಗುತ್ತದೆ.

ಆದರೆ, ಹಲವಾರು ವೈಯಕ್ತಿಕ ಕಾರಣಗಳಿಗೆ, ಲಾಲಸೆಗಳಿಗೆ, ದ.ಸಂ.ಸ. ಎಂಬ ಮಹಾನದಿಯನ್ನು ತಮಗೆ ಬೇಕಾದ ಕಡೆ ತಿರುಗಿಸಿ, ಕಾಲುವೆ ಮಾಡಿಕೊಂಡು ಇದೇ ನದಿ ಎಂದು ಸಮಾಜವನ್ನು ನಂಬಿಸುವ ಭ್ರಮೆ ಹೊತ್ತುಕೊಂಡವರಿಂದಾಗಿ ದ.ಸಂ.ಸ. ಪ್ರಭಾವ ಸ್ವಲ್ಪ ಅಸ್ಪಷ್ಟವಾಗಿದೆ. ಹಾಗೂ ತಾತ್ಕಲಿಕವಾಗಿ ಗೊಂದಲಮಯವಾಗಿದೆ. ಈ ನದಿಯಿಂದಲೇ ಹರಿದು ಹೋದ ಕಾಲುವೆ ಹಾಗೂ ಚರಂಡಿಗಳ ಅಬ್ಬರದಲ್ಲಿ ದ.ಸಂ.ಸ. ಮಹಾನದಿಯ ಅರಿವಿಗೆ, ವೇಗಕ್ಕೆ ಅಲ್ಲಲ್ಲಿ ಹಾಗೂ ಆಗಾಗ್ಗೆ ತಾತ್ಕಾಲಿಕ ತೊಡಕಗಳು ಉಂಟಾಗಿವೆ. ಇರಲಿ.

ಇನ್ನು ದ.ಸಂ.ಸ. ಹಾಗೂ ರಾಜಕಾರಣ ಎಂಬ ವಿಚಾರಕ್ಕೆ ಬರೋಣ. ಅತ್ಯಂತ ಸೂಕ್ಷ್ಮ ಸಾಮಾಜಿಕ ಸಂವೇದನೆಗಳುಳ್ಳ ದ.ಸಂ.ಸ.ಕ್ಕೆ ರಾಜಕಾರಣ ಮುಖಾಮುಖಿಯಾಗಬೇಕಾಗಿರುವುದು ಅತೀ ಸೂಕ್ಷ್ಮ ಹಾಗೂ ಗಂಭೀರವಾದ ಸವಾಲು.

ಮನುಷ್ಯ ಹುಟ್ಟುತ್ತಲೇ ಸಾಮಾಜಿಕ ಜೀವಿ ಹೇಗೋ ಹಾಗೇ ರಾಜಕೀಯ ಜೀವಿ ಸಹ. ಸಮಾಜದಿಂದ ಹೊರತಾಗಿ ಬದುಕುವವನು ಮಾತ್ರ ರಾಜಕೀಯದಿಂದ ಹೊರತಾಗಿ ಬದುಕಬಲ್ಲ ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬುವುದನ್ನು ಮರೆಯದಿದ್ದರೆ, ಈ ಚರ್ಚೆಗೆ ಜೀವಂತಿಕೆ ಇರುತ್ತದೆ. ದ.ಸಂ.ಸ. ಸಾಮಾಜಿಕ ಸಂಘಟನೆ ಎಂದು ಗುರುತಿಸಿಕೊಂಡ ಕ್ಷಣವೇ ರಾಜಕೀಯ ಸಂಘಟನೆಯು ಆಗಿರುತ್ತದೆ. ಆದರೆ ಎಂತಹ ರಾಜಕಾರಣ ದ.ಸಂ.ಸ.ದ ಎದುರಿಗೆ ಇದೆ ಎಂಬುವುದನ್ನು ನಾವೆಲ್ಲರೂ ಚರ್ಚೆಮಾಡಬೇಕಾದ ಹಾಗೂ ಒರೆಗಲ್ಲಿಗೆ ಹಚ್ಚಬೇಕಾದ ವಿಚಾರ.

ನಮ್ಮ ಸ್ವಾತಂತ್ರ್ಯಾನಂತರ ರಾಜಕಾರಣಕ್ಕೆ ಅನರ್ಥಗಳನ್ನು ತುಂಬುತ್ತಾ ಬಂದಿರುವುದರಿಂದಲೇ ಸಮಾಜ ಅರಾಜಕಗೊಳ್ಳುತ್ತಲೇ ಸಾಗಿರುವುದು ಈ ದೇಶದ ದುರಂತ. ಸ್ವಜನ ಪಕ್ಷಪಾತ, ಜಾತಿಯತೆ, ಕಪಟ ಕಾರಾಸ್ಥಾನಗಳು, ಕುತಂತ್ರಗಳು, ತಲೆಹಿಡುಕತನ, ಸ್ವಾರ್ಥ, ಲಂಪಟತೆ, ಭ್ರಷ್ಟತೆ ಅನೈತಿಕತೆ ಇತ್ಯಾದಿಗಳ ಕ್ರಿಯೆಯೇ ರಾಜಕಾರಣ ಎಂಬ ಅರ್ಥಗಳನ್ನು ಈ ಸಮಾಜ ನೀಡುತ್ತಲೇ ಅದನ್ನು ನಿರತಂರವಾಗಿ ಪೋಷಿಸಿಕೊಂಡು ಬಂದಿದೆ.

ಈ ಕುವ್ಯವಸ್ಥೆಯನ್ನು ನಿರ್ನಾಮ ಮಾಡಲು ಹಾಗೂ ಸರ್ವರು ಸಮಾನರು ಎಂಬ ಸಮಾಜವಾದದ ಚಿಂತನೆಗಳ ಮೇಲೆ ಸ್ವಚ್ಛ ನವ ಸಮಾಜವನ್ನು ನಿರ್ಮಿಸಲು ಮಹಾನ್

ರಾಜಕೀಯ ಆಂದೋಲನದ ಅವಶ್ಯಕತೆ ಇದೆ. ಆದರೆ ಈ ಸಂದರ್ಭದಲ್ಲಿ ಇಡೀ ಇಂಡಿಯಾದ ಸಮಸ್ಯೆಗಳು ಕಾಲದ ಮಾನದಂಡವನ್ನು ಮೀರಿ ಅತ್ಯಂತ ಸಂಕೀರ್ಣ ಗೊಳ್ಳುತ್ತಿರುವುದರಿಂದ ದ.ಸಂ.ಸ. ಹಾಗೂ ರಾಜಕಾರಣದ ನಿರ್ಧಾರಗಳು ಅತ್ಯಂತ ಸೂಕ್ಷ್ಮ ಎನಿಸಿವೆ.

ಇವತ್ತು ಒಳ್ಳೆಯ ಆಶಯಗಳನ್ನು ಇಟ್ಟುಕೊಂಡು ಬೀಜ ಬಿತ್ತಿದರೆ ಇದರ ಪ್ರತಿ ಫಲಕ್ಕಾಗಿ ನೂರಾರು ವರ್ಷಗಳು ಕಾಯಬೇಕಾಗುವುದು. ದ.ಸಂ.ಸ.ಕ್ಕೆ ಒಳ್ಳೆಯ ಆಶಯದ ಬೀಜಗಳು ಇವೆ. ಆದರೆ ರಾಜಕಾರಣದ ನೆಲ ಪೂರ್ಣವಾಗಿ ಕೊಳೆತು ನಾರುತ್ತಾ ಇದೆ. ಹೀಗಾಗಿ ಈ ನೆಲ ಹದಗೊಳಿಸುವುದೇ ನಮ್ಮ ಮುಂದೆ ಇರುವ ಗಂಭೀರವಾದ ಸವಾಲು.

ಈದಿನ ಪ್ರತಿಯೊಬ್ಬ ಸಾಮಾಜಿಕ ಕಾರ್ಯಕರ್ತನ ಎದುರು, ಅತ್ಯಂತ ಸಂಕೀರ್ಣದ ಸವಾಲುಗಳು ಇರುವುದರಿಂದ, ಆತನ ಬೌದ್ಧಿಕ ಹಾಗೂ ವೈಚಾರಿಕ ಹಿನ್ನೆಲೆ ಹಾಗೂ ಆತ್ಮಸಾಕ್ಷಿಯ ಮೂಸೆಯಿಂದ ಮೂಡಿದ ಅನುಭವಗಳಿಂದ ಈ ಸವಾಲುಗಳನ್ನು ಎದುರಿಸುವ ದಾರಿ, ಸರ್ವ ಸಮ್ಮತವಲ್ಲದಿದ್ದರೂ ಅದನ್ನು ಮಾನ್ಯತೆ ಮಾಡಬೇಕಾದ ಜವಾಬ್ದಾರಿ ಸಹ ಕಾರ್ಯಕರ್ತರುಗಳಲ್ಲಿ ಇರಲೇ ಬೇಕಾಗುತ್ತದೆ.

ಇಲ್ಲದೇ ಇದ್ದರೆ ಆಂದೋಲನಗಳು ದಿಕ್ಕು ದೆಸೆ ತಪ್ಪಿ ಅವುಗಳ ಅಂತರಂಗ ಕುರುಡು ಆಗಿ ಹುಸಿ ಹೋರಾಟಗಳನ್ನಷ್ಟೆ ಮಾಡಬೇಕಾಗುತ್ತದೆ.

ಇಂಡಿಯಾದ ರಾಜಕಾರಣದ ಇತಿಹಾಸ ಅತ್ಯಂತ ಗೊಂದಲಮಯ ಹಾಗೂ ರೋಗಗ್ರಸ್ಥಗೊಂಡು ವಿನಾಶಕ್ಕೆ ಹೋದ ಕಾಲಸ್ಥಿತಿಯನ್ನು, ತುರ್ತುಪರಿಸ್ಥಿತಿಯಿಂದ ಈಚೆಗೆ ಹಾಗೂ ಕೇಂದ್ರದಲ್ಲಿ ಕೋಮುವಾದಿ ವಾಜಪೇಯಿ ಸರ್ಕಾರ ಅಸ್ತಿತ್ವಕ್ಕೆ ಬಂದ ಈವರೆಗಿನ ಕಾಲಘಟ್ಟಗಳನ್ನು ಪರೀಕ್ಷೆಗೆ ಇಟ್ಟುಕೊಳ್ಳೋಣ.

ಇದನ್ನು ಅತ್ಯಂತ ಸಂಕ್ಷಿಪ್ತವಾಗಿ ನಿಮ್ಮ ಮುಂದೆ ಇಡಬೇಕಾಗಿದೆ.

ತುರ್ತು ಪರಿಸ್ಥಿತಿಯನ್ನು ಇಂದಿರಗಾಂಧಿ ಜಾರಿಮಾಡುವವರೆವಿಗೂ ಈ ದೇಶದಲ್ಲಿ ಆಳುವುದಕ್ಕೆ ಒಂದು ವರ್ಗ, ಹಾಗೂ ಅಳಿಸಿಕೊಳ್ಳುವುದಕ್ಕೆ ಒಂದು ವರ್ಗ ಎಂಬ ಭಾವನೆ ಇತ್ತು ಅಥವಾ ರಾಜಕೀಯ ಪ್ರಜ್ಞಾವಂತಿಕೆ ಇರಲಿಲ್ಲ. ಅದು ಇದ್ದರೂ ಜಾಗೃತವಾಗಿ ಇರಲಿಲ್ಲ.

ಶೋಷಿತರ ಬಗ್ಗೆ ಕೃತಿಯಲ್ಲಿ ಅಲ್ಪಸ್ವಲ್ಪ ಹಾಗೂ ನಾಲಿಗೆಯ ಮೇಲೆ ಧಾರಾಳ ಕಾಳಜಿ ಇದ್ದ ಇಂದಿರಾಗಾಂಧಿಯವರಿಗೆ ಒಂದು ಸಂದರ್ಭದಲ್ಲಿ ಭಟ್ಟಂಗಿಗಳು ಜಾಸ್ತಿಯಾದರು. ಅಧಿಕಾರದ ಮದ ಏರಿದ ಆಕೆ ಇಡೀ ದೇಶದ ಬಾಯಿಗೆ ಬೀಗ ಜಡಿದು ತುರ್ತು ಪರಿಸ್ಥಿತಿ ಘೋಷಿಸಿದರು.

ಏಕಾಂಗಿತನ, ಹತಾಶೆಗಳು ಹಾಗೂ ಯಾರನ್ನು ನಂಬದಂತಹ ಸ್ಥಿತಿಗಳು ಆಕೆಯನ್ನು ಈ ಪರಿಸ್ಥಿತಿಗೆ ದೂಡಿದ್ದವು ಎಂದು ಆಕೆಯ ನಿಕಟವರ್ತಿಗಳು ಈಗ ಹೇಳುತ್ತಾರೆ.

ಆಕೆಯ ಭ್ರಷ್ಟತೆ ಸ್ವಜನಪಕ್ಷಪಾತ, ಕರಾಳ ದಬ್ಬಾಳಿಕೆ ಆಳಿಸಿ ಜನರಿಗೆ ಪುನರ್ ಸ್ವಾತಂತ್ರ್ಯ ಹಾಗೂ ಸಮಾಜದ ನವ ನಿರ್ಮಾಣಕ್ಕಾಗಿ ಹಂಬಲಿಸಿದ ಜಯಪ್ರಕಾಶ್ ನಾರಾಯಣ್ ಇಂದಿರಾ ಆಳ್ವಿಕೆಯನ್ನು ಅಳಿಸಿ ಹಾಕಿದರು.

ಈ ಮಹಾನ್ ಸಮರದ ಗುರಿ ಮಾತ್ರ ಇಟ್ಟುಕೊಂಡಿದ್ದ ಜೆ.ಪಿ. ಈ ಆಂದೋಲನದ ಒಳಗೆ ವೈವಿಧ್ಯವಿಚಾರಗಳನ್ನು ಹೊಂದಿದ್ದ ಸೋಷಿಯಲಿಸ್ಟರು, ಕಮ್ಯುನಿಷ್ಟರು ಹಾಗೂ ಹಿಟ್ಲರ್‌ವಾದಿಗಳಾದ ಆರ್.ಎಸ್.ಎಸ್.ನವರು ಮುಂತಾದವರನ್ನು ಒಂದೇ ವೇದಿಕೆ ಅಡಿ ತಂದು ಜನತಾ ಪಕ್ಷವನ್ನು ಕಟ್ಟಿದರು.

ತದ್ವಿರುದ್ಧವಾಗಿ ಇರುವ ಯಾರು ಒಂದೇ ಪಕ್ಷದೊಳಗೆ ಉಳಿಯಲು ಸಾಧ್ಯವಾಗದೇ ಜನತಾ ಪಕ್ಷ ಜೆ.ಪಿ. ಸಾವಿನೊಂದಿಗೆ ನಂತರ ಸಮಾಧಿಯಾಯಿತು. ಸಮಾಜದ ನವ ನಿರ್ಮಾಣದ ಕನಸನ್ನು ಹೊತ್ತಿದ್ದ ಜೆ.ಪಿ.ಯವರ ವಿಚಾರಗಳಿಗೆ ಆರ್.ಎಸ್.ಎಸ್ಸಿಗರು ಎಳ್ಳುನೀರು ಬಿಟ್ಟರು ಈ ಸಂದರ್ಭದಲ್ಲಿ ಸೋಷಿಯಲಿಸ್ಟರು ದಿಕ್ಕು ಕೆಟ್ಟರು.

ತದನಂತರ ಕಾಂಗ್ರೆಸಿಗೆ ಪರ್ಯಾಯ ಶಕ್ತಿಯಾಗಬೇಕಾಗಿದ್ದ ಎಲ್ಲಾ ವಿರೋಧ ಪಕ್ಷಗಳು ಕಾಂಗ್ರೆಸ್ ಸಂಸ್ಕೃತಿಯನ್ನು ಮೈಗೂಡಿಕೊಂಡವು. ಬಿ.ಜೆ.ಪಿ.ಯಲ್ಲಿ ಬ್ರಾಹ್ಮಣರು, ಬನಿಯಾ, ಸೇಠುಗಳಂತಹ ವ್ಯಾಪಾರಸ್ಥರ ಪಕ್ಷವಾದರೆ ಉಳಿದ ಪಕ್ಷಗಳು ಮೇಲ್‌ಜಾತಿ ಪಟೇಲರ, ಠಾಕೂರರ, ಲಿಂಗಾಯತ ಹಾಗೂ ಒಕ್ಕಲಿಗರ ಹಿಡಿತದಲ್ಲಿರುವ ರಾಜಕೀಯ ಪಕ್ಷಗಳು ಆದವು. ಕಾಂಗ್ರೆಸ್ ಪಕ್ಷ ಮೇಲ್‌ಜಾತಿಯವರ ಹಿಡಿತಕ್ಕೆ ಸಿಕ್ಕಿದ್ದರೂ ಹಿಂದುಳಿದವರಿಗೆ ಅಲ್ಪ ಸಂಖ್ಯಾತರನ್ನು ಹಾಗೂ ದಲಿತರನ್ನು ಎಂದೂ ನಿರಾಕರಿಸಲಿಲ್ಲ. ಕಮ್ಯುನಿಷ್ಟ್ ಪಕ್ಷ ಮಾತ್ರ ವಿಚಾರ ನಿಷ್ಠವಾಗಿ ಉಳಿದುಕೊಂಡಿತ್ತು.

ಕಾಂಗ್ರೆಸ್ಸೇತರ ಎಲ್ಲಾ ರಾಜಕೀಯ ಪಕ್ಷಗಳು ಮೇಲ್‌ಜಾತಿಯವರ ಉಸ್ತುವಾರಿಗಳಾಗಿ ಇದ್ದರೆ ಅವತ್ತಿಗಾಗಲೇ ವಿಶ್ವ ರಾಜಕೀಯ ನಾಯಕಿಯಾಗಿ ರೂಪುಗೊಂಡಿದ್ದ ಇಂದಿರಾಗಾಂಧಿ ಸಮಾಜವಾದವನ್ನು ಸಮರ್ಥವಾಗಿ ಪ್ರಯೋಗಿಸಿದರು. ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ದತಿ ಹಾಗೂ ಸಾರ್ವಜನಿಕ ಉದ್ದಿಮೆಗಳನ್ನು ಬಲಿಷ್ಟಗೊಳಿಸಿದ್ದರು.

ಇಂದಿರಾಗಾಂಧಿಯವರ ಈ ಕಾರ್ಯಕ್ರಮಗಳನ್ನು ಸಮಾಜಿಕ ಕ್ರಾಂತಿಯ ಸಲುವಾಗಿ ಬಳಸಿಕೊಂಡು ಈ ರಾಜ್ಯದ ದೇವರಾಜ ಅರಸ್ ಕಾಂಗ್ರೆಸ್ ಇತಿಹಾಸದಲ್ಲಿ ಬಂದು ಹೋದ ಮಹಾನ್ ಕ್ರಾಂತಿಯ ಹರಿಕಾರ.

ಎಲ್ಲಾ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರಿಗೆ ರಾಜಕೀಯ ಶಕ್ತಿಕೊಡುವುದರೊಂದಿಗೆ ಭೂಸುಧಾರಣೆ ಉಳುವವನೆ ಹೊಲದ ಒಡೆಯ ಮುಂತಾದ ಅರಸುರವರ ಕಾರ್ಯಕ್ರಮಗಳು ರಾಜ್ಯದಲ್ಲಿ ಹೊಸ ಶಕೆಯನ್ನು ತೆರೆದವು.

ಅರಸರ ಆತ್ಮದಂತೆ ಇದ್ದ ಕ್ರಾಂತಿಕಾರಿ ಬಿ. ಬಸವಲಿಂಗಪ್ಪ, ದಲಿತರು ತಲೆಯ ಮೇಲೆ ಮಲಹೊರುವ ಪದ್ಧತಿಯನ್ನು ನಿಷೇದಿಸುವ ಕಾನೂನು ಮಂಡಿಸಿ ಹಾಗೂ ಜಾರಿಗೆ ತಂದಿದ್ದು ಎಲ್ಲಾ ರಾಜ್ಯಗಳ ದಲಿತರಿಗೂ ಎಚ್ಚರಿಕೆಯ ಗಂಟೆಯಾಯಿತು. ಹಾಗೂ ಕ್ರೂರ ಸವರ್ಣೀಯರಿಗೆ ಮರಣ ಶಾಸನವಾಯಿತು.

ಸವರ್ಣೀಯರು ಸೃಷ್ಟಿಸುತ್ತಿದ್ದ ಜೀವಪರವಲ್ಲದ, ಸಾಹಿತ್ಯವನ್ನು ಭೂಸಾ ಸಾಹಿತ್ಯ ಎಂದು ಹೀಗಳೆದು ಕನ್ನಡ ಸಾಹಿತ್ಯದಲ್ಲಿ ಹೊಸ ರಕ್ತ ಸಂಚಾರಕ್ಕೆ ಕಾರಣವಾಯಿತು. ಬಂಡಾಯ ಸಾಹಿತ್ಯ ಸಂಘಟನೆ ಅಸ್ತಿತ್ವಕ್ಕೆ ಬರಲು ಬಸವಲಿಂಗಪ್ಪನವರೇ ನೇರ ಕಾರಣರಾದರು. ಈ ಸಾಹಿತ್ಯ ಚಳುವಳಿ ರಾಜ್ಯದ ಅನೇಕ ಆಂದೋಲನಗಳಿಗೂ ಪರೋಕ್ಷ ಕಾರಣವಾಯಿತು.

ಕೆಲಕಾಲದ ನಂತರ ರಾಜ್ಯ ವಿಧಾನಸಭೆಯಲ್ಲಿಯು ಕಾಂಗ್ರೆಸ್ ವಿರೋಧ ಪಕ್ಷದ ಸ್ಥಾನದಲ್ಲಿರುವರೆಗೆ ದಲಿತ ಮಲ್ಲಿಕಾರ್ಜುನ ಖರ್ಗೆಯವರನ್ನೆ ವಿರೋಧಿ ನಾಯಕನ ಸ್ಥಾನದಲ್ಲಿ ಕೂಡಿಸಿತ್ತು ಆದರೆ ಅಧಿಕಾರಕ್ಕೆ ಬರುತ್ತಲೇ ಅವರ ಸ್ಥಾನಪಲ್ಲಟವಾಗಿ ಮುಖ್ಯಮಂತ್ರಿಯಾಗದೇ ಹೋಗಿದ್ದು ಈ ರಾಜ್ಯದ ದುರಂತ.

ಉತ್ತರ ಭಾರತದಲ್ಲಿ ಕಳೆದ 70ರ ದಶಕದಿಂದಲೂ ದಲಿತ ಅಲ್ಪಸಂಖ್ಯಾತ ಹಿಂದುಳಿದ ವರ್ಗಗಳು ಸೇರಿದಂತೆ ಬಹುಜನರ ರಾಜಕೀಯ ಪಕ್ಷವನ್ನು ಅಸ್ತಿತ್ವಕ್ಕೆ ತರಬೇಕು ಎಂದು ಕಾನ್ಸಿರಾಮ್ ಶ್ರಮಪಟ್ಟಿದ್ದು ಸಹ ಸಫಲಗೊಂಡು ಅದರ ಫಲವನ್ನು ಈಗ ಮಾಯಾವತಿ ಉಣ್ಣುತ್ತಿದ್ದಾರೆ. ಆದರೆ ಮನುವಾದಿಗಳನ್ನು ದೂರಿಕೊಂಡೇ ಅವರೊಡನೆ ಅನೈತಿಕ ಒಪ್ಪಂದ ಮಾಡಿಕೊಂಡು ಬಹುಜನರನ್ನು ಐತಿಹಾಸಿಕವಾಗಿ ದಿಕ್ಕುತಪ್ಪಿಸಿ ಕುರ್ಚಿ ಹಿಡಿದಿರುವುದು ಈ ದೇಶದ ರಾಜಕೀಯ ಇತಿಹಾಸದ ಕರಾಳ ಅಧ್ಯಾಯ.

ಹಿಂದುಳಿದ ವರ್ಗಗಳನ್ನು ಸಂಘಟಿಸಿಕೊಂಡು, ಯಾದವರ ಪ್ರಾಬಲ್ಯದಲ್ಲಿ ಅಧಿಕಾರಕ್ಕೆ ಬಂದ ಲೋಹಿಯವಾದಿಗಳಾದ ಮುಲಾಯಮ್‌ಸಿಂಗ್‌ಯಾದವ್, ಲಾಲುಪ್ರಸಾದ್ ಯಾದವ್ ಅಂತಹವರು ಇಂದು ಕೋಮುವಾದಿಗಳ ವಿರುದ್ಧ ಆಶಾಕಿರಣವಾಗಿದ್ದಾರೆ ನಿಜ ಆದರೆ ಈ ರಾಷ್ಟ್ರದ ರಾಜಕೀಯ ನಕಾಶೆಯನ್ನು ಬದಲಾಯಿಸುವ ಇರಾದೆಯನ್ನು ಅವರು ವ್ಯಕ್ತಗೊಳಿಸಿಲ್ಲ. ಈ ಎಲ್ಲ ಶೂದ್ರ ಹಾಗೂ ದಲಿತ ರಾಜಕೀಯದ ಗೊಂದಲಗಳನ್ನು, ದಿಕ್ಕೆಟ್ಟ ಸ್ಥಿತಿಗಳನ್ನು ಸಮರ್ಥವಾಗಿ ಬಳಸಿಕೊಂಡ ಕೋಮುವಾದಿ ಬಿ.ಜೆ.ಪಿ.ಗಳು ನಿರಂತರ 6 ವರ್ಷಗಳು ಯಾವ ಎಗ್ಗಿಲ್ಲದೆ ಕೂತರು. ಯುದ್ಧ ಹಾಗೂ ಹಿಂಸೆಗಳ ವಿಕಟ ನಗೆ ನಗುತ್ತಾ ದೇಶವನ್ನು ದಿವಾಳಿ ಸ್ಥಿತಿಗೆ ತಂದರು. ಅಲ್ಪಸಂಖ್ಯಾತರ ಮೇಲೆ ಗುಮಾನಿಗಳನ್ನು ಸೃಷ್ಟಿಸುತ್ತಲೇ ಅವರನ್ನು ಬಗ್ಗುಬಡಿದರು ದಲಿತರ ನಿರ್ಮಾಣಕ್ಕಾಗಿ ಸಂವಿಧಾನವನ್ನು ತಿದ್ದುಪಡಿಗೊಳಿಸುವ ಕುತಂತ್ರದ ಬಗ್ಗೆಯು ಯೋಚಿಸಿದರು ಬೆದರಿಕೆ ಒಡ್ಡಿದರು.

ಈ ವಿನಾಶಕಾರಿ ಕೋಮುವಾದಿಗಳ ವಿರುದ್ಧ ಪ್ರಾಮಾಣಿಕವಾಗಿ ಪ್ರಬಲವಾಗಿ, ತುರ್ತಾಗಿ, ಸೆಣಸಬಲ್ಲ ರಾಜಕೀಯ ಶಕ್ತಿಯತ್ತ ದ.ಸಂ.ಸ. ನೋಡಬೇಕಾಗಿದೆ.

80ರ ದಶಕದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಆಳ್ವಿಕೆಯನ್ನು ಕೊನೆಗಾಣಿಸಲು ಹೆಗ್ಗಡೆ ನೇತೃತ್ವದ ಜನತಾ ಪರಿವಾರಕ್ಕೆ ದ.ಸಂ.ಸ. ಬೆಂಬಲಿಸಿತು. ರೈತಸಂಘ, ದ.ಸಂ.ಸ. ಹಾಗೂ ಕನ್ನಡ ಪರ ಹೋರಾಟಗಳ ಋಣ ತಿಂದ ಜನತಾ ಪರಿವಾರದವರು ಅಧಿಕಾರ ಸಿಕ್ಕಾಕ್ಷಣ ಪ್ರಗತಿಪರ ಸಂಘಟನೆಗಳನ್ನು ನುಚ್ಚುನೂರು ಮಾಡಿರುವ ಅಪಾಯಗಳನ್ನು ನಾವು ಮರೆಯಲಾಗದು.

ಈ ಸಂದರ್ಭದಲ್ಲಿ ಅತ್ಯಂತ ಎಚ್ಚರಿಕೆಯಿಂದ ಜಾಗರೂಕತೆಯಿಂದ ಕೋಮುವಾದಿಗಳ ವಿನಾಶಕ್ಕಾಗಿ ಯಾವ ಪಕ್ಷದೊಂದಿಗೆ ಕೈಜೋಡಿಸಬೇಕು, ಅಥವಾ ಯಾವ ತಂತ್ರವನ್ನು ರೂಪಿಸಬೇಕು ಎಂಬುದು ದ.ಸಂ.ಸ ಎದುರಿಗೆ ಇರುವ ಅತಿದೊಡ್ಡ ಸವಾಲು. ಈ ವ್ಯವಸ್ಥೆಯನ್ನು ಟೀಕಿಸುವುದು ಮಾತ್ರವಲ್ಲ ಇದಕ್ಕೆ ಪ್ರಬಲ ಪರ್ಯಾಯವಾಗಿ ರಾಜಕೀಯ ವೇದಿಕೆ ನಿರ್ಮಿಸುವುದು ದ.ಸಂ.ಸದ ಮಹತ್ವದ ಜವಾಬ್ದಾರಿಯಾಗಿದೆ. ●

ಛತ್ರಪತಿ ಶಾಹು ಮಹಾರಾಜ್

ಸಾಮಾಜಿಕ ಪ್ರಜಾಪ್ರಭುತ್ವದ ರೂವಾರಿ

ಮಹಾತ್ಮ ಜ್ಯೋತಿಬಾ ಫುಲೆಯವರ ಹೋರಾಟದ ಫಲವಾಗಿ ಅಸ್ಪೃಶ್ಯರು ಮತ್ತು ಹಿಂದುಳಿದವರಿಗೆ ಶಿಕ್ಷಣ ದೊರೆಯಿತು. ಶಿಕ್ಷಣದ ಜೊತೆಗೆ ಅವರಿಗೆ ಅಧಿಕಾರದಲ್ಲಿ ಸಮಪಾಲು ಮತ್ತು ಸಾಮಾಜಿಕ ಸ್ಥಾನ-ಮಾನ ದೊರಕಿಸಿಕೊಟ್ಟ ಮಹಾನ್ ಚೇತನ, ಛತ್ರಪತಿ ಶಾಹು ಮಹಾರಾಜ್‌ರವರು. ಇವರು ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ 1874 ಜುಲೈ 26ರಂದು ಜನಿಸಿದರು. ಏಪ್ರಿಲ್ 2, 1894ರಲ್ಲಿ ಕೊಲ್ಲಾಪುರ ಪ್ರಾಂತ್ಯದ ಮಹಾರಾಜರಾಗಿ ಅಧಿಕಾರ ವಹಿಸಿಕೊಂಡರು. ಇವರು ಹಿಂದುಳಿದ ಕುಣುಬಿ ಮರಾಠ ಸಮಾಜಕ್ಕೆ ಸೇರಿದವರು.

ಶಾಹು ಮಹಾರಾಜರ ಆಸ್ಥಾನ ಪುರೋಹಿತನೊಬ್ಬ ಮಹಾರಾಜರು ಪಂಚಗಂಗಾ ಕಲ್ಯಾಣಿಯಲ್ಲಿ ಸ್ನಾನ ಮಾಡುವಾಗ ಇವರು ಶೂದ್ರ ಜಾತಿಯವರೆಂದು ಪರಿಗಣಿಸಿ ವೈದಿಕ ಸಂಪ್ರದಾಯದ ಪ್ರಕಾರ ಮಂತ್ರಪಠಣ ಮಾಡುವುದನ್ನು ನಿರಾಕರಿಸಿದರು. ಈ ಘಟನೆಯಿಂದ ಅವಮಾನಿತರಾದ ಮಹಾರಾಜರು ಬ್ರಾಹ್ಮಣರು ಮತ್ತು ಕುಲಕರ್ಣಿಗಳಿಗೆ ತಮ್ಮ ಪ್ರಾಂತ್ಯದಲ್ಲಿ ನೀಡುತ್ತಿದ್ದ ವಂಶಪಾರಂಪರ್ಯ ಸವಲತ್ತುಗಳನ್ನು ಸಂಪೂರ್ಣವಾಗಿ ನಿಷೇಧಿಸಿದರು. "ತಮ್ಮ ರಾಜಮನೆತನದ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಹಾರಾಜರು ಬ್ರಾಹ್ಮಣವಾದಿ ಪದ್ಧತಿ ಮತ್ತು ಆಚರಣೆಗಳಿಗೆ ವಿರುದ್ಧವಾಗಿ ವೇದಗಳ ಸೂಕ್ತಿಗಳಂತೆ ಬ್ರಾಹ್ಮಣೇತರರಿಂದ ಆ ಆಚರಣೆಗಳನ್ನು ನಡೆಸಲು ಪ್ರಾರಂಭಿಸಿ ಅದಕ್ಕೆ ಕಾನೂನಿನಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟರು. 1900 ರಿಂದ 1905ರವರೆಗೆ ನಡೆದ ವೇದೋಕ್ತ ಪ್ರಕರಣ ಶಾಹು ಮಹಾರಾಜರ ಜೀವನದ ತಿರುವು ಎಂದು ಹೇಳಬಹುದು.

ಮಹಾತ್ಮ ಜ್ಯೋತಿ ಬಾ ಫುಲೆಯವರ ಸತ್ಯಶೋಧಕ ಸಮಾಜದ ಚಳುವಳಿಯನ್ನು ಶಾಹು ಮಹಾರಾಜರು ಮುಂದುವರೆಸಿದರು. "ಶೂದ್ರ ಅತಿ ಶೂದ್ರರ ದುರವಸ್ಥೆಗೆ ಅಜ್ಞಾನ ಮತ್ತು ಅನಕ್ಷರತೆ ಕಾರಣ" ಎಂಬುದನ್ನು ಅರಿತ ಶಾಹು ಮಹಾರಾಜ್‌ರವರು ಅವರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಶಾಲಾ ಕಾಲೇಜು ಮತ್ತು ಹಾಸ್ಟೆಲ್‌ಗಳನ್ನು ತೆರೆದರು. ಇವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಮನ್ನಿಸಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯವು 1902 ಜೂನ್ 10ರಂದು ಶಾಹು ಮಹಾರಾಜರಿಗೆ ಎಲ್.ಎಲ್.ಡಿ. ಪದವಿಯನ್ನು ನೀಡಿ ಗೌರವಿಸಿತು. ಇದರ ಪ್ರಯುಕ್ತ ಭವ್ಯವಾದ ಸಮಾರಂಭವನ್ನು ಏರ್ಪಡಿಸಿದ್ದ ವಿಂಚೆಸ್ಟರ್ ಕಾಲೇಜಿನಲ್ಲಿ ಶಾಹು ಮಹಾರಾಜರು ಈ ಪದವಿಯನ್ನು ಸ್ವೀಕರಿಸುತ್ತಾ ಇಂಡಿಯಾ ದೇಶದ ಮಿಲಿಯಾಂತರ ಶೋಷಿತ ಜನರಿಗೆ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಿದರು.

ಅಸ್ಪೃಶ್ಯರು ಮತ್ತು ಹಿಂದುಳಿದವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಶಾಹು ಮಹಾರಾಜರ ಕೊಡುಗೆ :

1) ಮೊದಲ ಬಾರಿಗೆ ಕೊಲ್ಲಾಪುರ ಪ್ರಾಂತ್ಯದಲ್ಲಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನನ್ನು ಜಾರಿಗೆ ತಂದರು.
2) ಅಸ್ಪೃಶ್ಯರು ಮತ್ತು ಹಿಂದುಳಿದ ಜಾತಿಯ ಮಕ್ಕಳಿಗೆ ವಿದ್ಯಾರ್ಥಿವೇತನ ಜಾರಿಗೊಳಿಸಿದರು.
3) ಮೊದಲ ಬಾರಿಗೆ ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆದರು.
4) ಖಾಸಗಿ ಹಾಸ್ಟೆಲ್‌ಗಳಿಗೆ ಸಹಾಯಧನವನ್ನು ನೀಡಿದರು.
5) 1901ರಲ್ಲಿ ಮೊಟ್ಟ ಮೊದಲ ಬಾರಿಗೆ ವಿಕ್ಟೋರಿಯಾ ಮರಾಠ ಬೋರ್ಡಿಂಗ್ ಶಾಲೆಯನ್ನು ತೆರೆದು ಮುಸ್ಲಿಂ, ಕೋಳಿ, ಮಾಳಿ, ಗೌವಳಿ ಸಮಾಜದ ಮಕ್ಕಳಿಗೆ ವಿದ್ಯಾಭ್ಯಾಸ ದೊರಕುವಂತೆ ಮಾಡಿದರು.
6) ಶಾಹು ಮಹಾರಾಜರ ಆಳ್ವಿಕೆಯಲ್ಲಿ ಸುಮಾರು 20 ಬೋರ್ಡಿಂಗ್ ಶಾಲೆಗಳನ್ನು ಕೊಲ್ಲಾಪುರ ಮತ್ತು 6 ಬೋರ್ಡಿಂಗ್ ಶಾಲೆಗಳನ್ನು ಬಾಂಬೆ ಪ್ರಾಂತ್ಯದಲ್ಲಿ ತೆರೆಯಲಾಯಿತು.

ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಮಕಾಲೀನರಾಗಿದ್ದ ಶಾಹು ಮಹಾರಾಜ್ ಅಸ್ಪೃಶ್ಯರು ಮತ್ತು ಹಿಂದುಳಿದವರ ಬಗ್ಗೆ ಅಪಾರ ಕೆಲಸ ಮಾಡಿದವರು.

ಮಹಾತ್ಮ ಜ್ಯೋತಿ ಬಾ ಫುಲೆಯವರ ಸತ್ಯ ಶೋಧಕ ಸಮಾಜದ ಚಳುವಳಿಯನ್ನು ಶಾಹು ಮಹಾರಾಜರು ಮುಂದುವರೆಸಿದರು. ಅವರು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ಶಾಲಾ ಕಾಲೇಜು ಮತ್ತು ಹಾಸ್ಟೆಲನ್ನು ತೆರೆದರು.

ಶಾಹು ಮಹಾರಾಜರ ಸಾಮಾಜಿಕ ಸುಧಾರಣೆಗಳು :

1) ವಿಧವಾ ಪುನರ್ ವಿವಾಹ ಪದ್ಧತಿಯನ್ನು ಜಾರಿಗೆ ತಂದರು.
2) 1919ರ ಅಸ್ಪೃಶ್ಯತೆ ಆಚರಣೆ ವಿರುದ್ಧ ಕಾನೂನು ಜಾರಿ ಮಾಡಿದರು. ಈ ಕಾನೂನನ್ನು ಜಾರಿಗೊಳಿಸಲು ಮಹರ್‌ಜಾತಿಯ ಗಂಗಾರಾಂ ಕಾಂಬ್ಳೆ ಎಂಬುವರಿಗೆ ಧನಸಹಾಯ ಮಾಡಿ, ಹೋಟೆಲ್ ಪ್ರಾರಂಭಿಸುವಂತೆ ತಿಳಿಸಿ, ಸದರಿ ಹೋಟೆಲ್‌ಗೆ ಪ್ರತಿನಿತ್ಯ ತಾವೇ ತಮ್ಮ ಪರಿವಾರ ಸಮೇತ ಖುದ್ದಾಗಿ ಭೇಟಿ ನೀಡಿ ಕಾಫಿ ಕುಡಿಯುವ ಮೂಲಕ ಅಸ್ಪೃಶ್ಯತೆಯ ವಿರುದ್ಧ ತಾವೇ ಸಮರ ಹೂಡಿದರು.
3) ಶಾಹು ಸತ್ಯ ಶೋಧಕ ಸಮಾಜವನ್ನು ಪ್ರಾರಂಭ ಮಾಡಿ ಸಮಾಜಿಕ ಪರಿವರ್ತನಾ ಚಳುವಳಿಗೆ ಹೆಚ್ಚಿನ ಚಾಲನೆ ನೀಡಿದರು.
4) 1919 ಜುಲೈ 12ರಂದು ಅಂತರಜಾತಿ ವಿವಾಹ ಕಾಯಿದೆ ಜಾರಿಗೆ ಮಾಡಿದರು.
5) 1920 ಜುಲೈ 17ರಂದು ದೇವದಾಸಿ ಪದ್ಧತಿ ನಿರ್ಮೂಲನ ಕಾನೂನು ಜಾರಿಗೆ ಬಂದಿತು.
6) 1918ರಲ್ಲಿ "ಮಹರ್ ವತನ್" ಪದ್ಧತಿಯನ್ನು ನಿಷೇದಿಸಿ, ಅಸ್ಪೃಶ್ಯರಿಗೆ ವಂಶಾವಳಿಯಾಗಿ ಬಂದಿದ್ದ ಜೀತ ಪದ್ಧತಿಯನ್ನು ನಿಷೇಧ ಮಾಡಲಾಯಿತು. ಅಲ್ಲದೆ ಅವರಿಗೆ ತನ್ನ ಖಾಸಗಿ ಅರಮನೆಯಲ್ಲಿ ಗೌರವಯುತ ಉದ್ಯೋಗ ಕೊಟ್ಟು ಅವರಲ್ಲಿ ಸ್ವಾಭಿಮಾನ ಮೂಡಿಸಿದರು.
7. 1920 ಏಪ್ರಿಲ್ 16ರಂದು ನಾಸಿಕ್‌ನಲ್ಲಿ ಡಿಪ್ರೆಸ್ಡ್‌ಕ್ಲಾಸ್ ಅಧಿವೇಶನದಲ್ಲಿ ಪಾಲ್ಗೊಂಡರು.

8) 1920 ಮೇ 30ರಂದು ನಾಗಪುರದಲ್ಲಿ ಡಿಪ್ರೆಸ್ಡ್ ಕ್ಲಾಸ್ ಅಧಿವೇಶನವನ್ನು ತಾವೇ ನಡೆಸಿದರು.

9) ಡಾ|| ಅಂಬೇಡ್ಕರ್‌ರವರಿಗೆ ಹೆಚ್ಚಿನ ವ್ಯಾಸಂಗಕ್ಕಾಗಿ ಹೊರ ದೇಶಕ್ಕೆ ಹೋಗಲು ಧನಸಹಾಯ ಮಾಡಿದರು. "ಸುಶಿಕ್ಷಿತ ಅಸ್ಪೃಶ್ಯನಿಂದ ಮಾತ್ರ ಸುಶಿಕ್ಷಿತ ಬಹುಜನ ಸಮಾಜದ ನಿರ್ಮಾಣ ಸಾಧ್ಯ" ಎಂದು ಹೇಳಿದ್ದ ಶಾಹು ಮಹಾರಾಜ್ ಒಬ್ಬ ಮಹಾನ್ ದಾರ್ಶನಿಕರಾಗಿದ್ದರು. ಮಾರ್ಚ್ 21, 1920ರಲ್ಲಿ ಮನ್‌ಗಾಂವ್‌ನಲ್ಲಿ ನಡೆದ ಮಹರ್ ಸಮ್ಮೇಳನದಲ್ಲಿ ಶಾಹು ಮಹಾರಾಜ್‌ರವರು ಡಾ|| ಅಂಬೇಡ್ಕರ್ ಅವರನ್ನು ಜಗತ್ತಿಗೆ ಪರಿಚಯಿಸಿ "ಸಾಮಾಜಿಕ ಪರಿವರ್ತನೆಯ ಚಳುವಳಿಯನ್ನು ಇನ್ನು ಮುಂದೆ ದೇಶಾದ್ಯಂತ ಡಾ|| ಅಂಬೇಡ್ಕರ್ ಮುನ್ನಡೆಸುತ್ತಾರೆ." ಎಂದು ಘೋಷಿಸಿದರು.

10) ಡಾ|| ಅಂಬೇಡ್ಕರ್‌ರವರು ನಡೆಸುತ್ತಿದ್ದ 'ಮೂಕನಾಯಕ್' ಪತ್ರಿಕೆಗೆ ಮಾಸಿಕ 2,500 ಧನ ಸಹಾಯ ಮಾಡಿ, ಆ ಪತ್ರಿಕೆಯನ್ನು ಹಳ್ಳಿಗಳಿಗೆ ತಲುಪಿಸಿ ಜನತೆಯ ಮುಂದೆ ಓದಿ ಹೇಳಲು ವಿದ್ಯಾವಂತ ಯುವಕರನ್ನು ನೇಮಿಸಿದ್ದರು.

11) 1922 ಫೆಬ್ರವರಿ 22ರಂದು ದೆಹಲಿಯಲ್ಲಿ ನಡೆದ ಅಖಿಲ ಭಾರತ ಡಿಪ್ರೆಸ್ಡ್ ಕ್ಲಾಸ್ ಕಾನ್ಫರೆನ್ಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು.

12) ಶಾಹು ಮಹಾರಾಜರವರು 1902 ಜುಲೈ 26ರಂದು ಮೊಟ್ಟ ಮೊದಲ ಬಾರಿಗೆ ತಮ್ಮ ಪ್ರಾಂತ್ಯದ ಆಡಳಿತದಲ್ಲಿ ಅಸ್ಪೃಶ್ಯರು ಮತ್ತು ಹಿಂದುಳಿದ ಜಾತಿಗಳಿಗೆ ಶೇ. 50%ರಷ್ಟು ಮೀಸಲಾತಿಯನ್ನು ನೀಡಿ ಸಾಮಾಜಿಕ ಕ್ರಾಂತಿಗೆ ಹೆಚ್ಚಿನ ಚಾಲನೆಯನ್ನು ನೀಡಿದರು.

ಕೃಷಿ ಅಭಿವೃದ್ಧಿಗೆ ಸಂಬಂಧಪಟ್ಟ ಸುಧಾರಣೆಗಳು :

1) ಭೂ ಹೀನರಿಗೆ ಉಚಿತವಾಗಿ ಭೂಮಿಯನ್ನು ಹಂಚಲಾಯಿತು.

2) ಒಣ ಭೂಮಿಯಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಿ ಹೆಚ್ಚು ಬೆಳೆಗಳನ್ನು ತೆಗೆಯಲು ಪ್ರೋತ್ಸಾಹ ನೀಡಿದರು.

3) ಸಣ್ಣ ಹಿಡುವಳಿದಾರರಿಗೆ, ಸಣ್ಣ ಉದ್ದಿಮೆದಾರರಗೆ ಲಾಭ ಹೆಚ್ಚಾಗುವಂತೆ ಮಾಡಲು ಅವರಿಗೆ ಸರಿಯಾದ ರಸ್ತೆಗಳು, ನೀರು ಸರಬರಾಜು, ಬಡ್ಡಿ ರಹಿತ ಸಾಲ ಮುಂತಾದ ಸೌಲಭ್ಯಗಳನ್ನು ಜಾರಿಗೆ ತಂದರು.

4) ಅರಣ್ಯ ಸಂಪತ್ತನ್ನು ಹೆಚ್ಚಿಸುವುದಲ್ಲದೆ ಅವುಗಳ ಸದ್ಬಳಕೆಯ ಬಗ್ಗೆ ಅರಿವು ನೀಡಿ ಆಗಿನ ಕಾಲಕ್ಕೆ ಕಾಡಿನ ಸಂಪತ್ತಿನ ಶೋಷಣೆಯ ವಿರುದ್ಧ ಸಮರ ಸಾರಿದ್ದರು.

5) ಕೆಲವೇ ಕೆಲವು ಬಂಡವಾಳಗಾರರ ಕೈಯಲ್ಲಿ ಸಿಕ್ಕಿ ರೈತರು ಸಂಕಷ್ಟಕ್ಕೊಳಗಾಗುವುದನ್ನು ತಪ್ಪಿಸಲು ಸಹಕಾರಿ ಮಾರುಕಟ್ಟೆ ಪದ್ಧತಿಯನ್ನು ಮೊದಲ ಬಾರಿಗೆ ತಮ್ಮ ಪ್ರಾಂತ್ಯದಲ್ಲಿ ಜಾರಿಗೆ ತಂದರು.

ಬ್ರಾಹ್ಮಣೇತರ ಚಳುವಳಿಗಳ ಸಂಪರ್ಕ :

ತಮಿಳುನಾಡಿನ ಬ್ರಾಹ್ಮಣೇತರ ಚಳುವಳಿಯ ಬಗ್ಗೆ ಅಪಾರ ಒಲವಿದ್ದ ಶಾಹುರವರು ಸತ್ಯ ಶೋಧಕ ಸಮಾಜದ ಸಭೆಗಳಿಗೆ ಜಸ್ಟೀಸ್ ಪಾರ್ಟಿಯ ನೇತಾರರಾಗಿದ್ದ ಡಾ|| ಟಿ.ಎಂ. ನಾಯರ್, ಸರ್. ಪಿ.ಟಿ. ಚೆಟ್ಟಿಯಾರ್, ರಾಮಸ್ವಾಮಿ ಮೊದಲಿಯಾರ್ ಮುಂತಾದವರನ್ನು ಆಹ್ವಾನಿಸುತ್ತಿದ್ದರು. ಎರಡೂ ಚಳುವಳಿಗಳು ಒಂದೇ ದೃಷ್ಟಿಕೋನಗಳನ್ನು ಇಟ್ಟುಕೊಂಡಿದ್ದರಿಂದ ಸ್ವತಃ ಶಾಹುರವರು ಜಸ್ಟಿಸ್ ಪಾರ್ಟಿಗೆ ಅನೇಕ ಸಲ ಕಾಗದ ಪತ್ರಗಳನ್ನು ಬರೆದು ವಿಚಾರ ವಿನಿಮಯ ನಡೆಸುತ್ತಿದ್ದರು. 1920 ಏಪ್ರಿಲ್ 15ರಂದು ನಾಸಿಕ್‌ನಲ್ಲಿ ನಡೆದ ಸತ್ಯ ಶೋಧಕ ಸಮಾಜದ ಅಧಿವೇಶನದಲ್ಲಿ ಮದ್ರಾಸಿನಲ್ಲಿ ಪನಗಲ್ ಮಹಾರಾಜರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಶಾಹು ಮಹಾರಾಜರ ಭಾಷಣವನ್ನು ಅಂದಿನ ಕಾಲಕ್ಕೆ ತಮಿಳು ಮತ್ತು ತೆಲುಗಿಗೆ ಭಾಷಾಂತರ ಮಾಡಿ ಪ್ರಚಾರ ಪಡಿಸಲಾಗಿತ್ತು.

ಮೈಸೂರಿನ ನಾಲ್ವಡಿ ಹಾಗೂ ಶಾಹು ಮಹಾರಾಜ್ ಇಬ್ಬರು ಸಮಕಾಲೀನರಾಗಿದ್ದು ಅಸ್ಪೃಶ್ಯರ ಮತ್ತು ಹಿಂದುಳಿದವರ ಬಗ್ಗೆ ಒಂದೇ ದೃಷ್ಟಿಕೋನವುಳ್ಳವರಾಗಿದ್ದರು. ಮೈಸೂರಿನಲ್ಲಿ ಸುಮಾರು 1919-20ರಲ್ಲಿ ನಡೆದ ದಸರಾ ಉತ್ಸವದ ಸಂದರ್ಭದಲ್ಲಿ ಅಖಿಲ ಭಾರತ ಡಿಪ್ರೆಸ್ಡ್ ಕಾಸ್ಟ್ ಕಾನ್ಫರೆನ್ಸ್ ನಡೆದಿತ್ತು. ಆಗ ಶಾಹುಮಹಾರಾಜರಿಗೆ ನಾಲ್ವಡಿಯವರು ಆಮಂತ್ರಣ ನೀಡಿ ಈ ಅಧಿವೇಶನದಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದರು. ಆದರೆ ಶಾಹುರವರು ತಾವು ಭಾಗವಹಿಸಲು ಸಾಧ್ಯವಾಗದ ಕಾರಣ ಶ್ರೀ ವಿ. ಆರ್. ಶಿಂಧೆ ಎಂಬ ಸತ್ಯಶೋಧಕ ಸಮಾಜದ ಮುಖಂಡರನ್ನು ಮೈಸೂರಿಗೆ ಕಳುಹಿಸಿದ್ದರು.

ಅಸ್ಪೃಶ್ಯರಿಗೆ, ಹಿಂದುಳಿದವರಿಗೆ ಆಶಾಕಿರಣವಾಗಿದ್ದು ಸಾಮಾಜಿಕ ಕ್ರಾಂತಿಯಲ್ಲಿ ತಮ್ಮದೇ ಆದ ವಿಶಿಷ್ಟವಾದ ಛಾಪನ್ನೊತ್ತಿ ಬಹುಜನ ಸಮಾಜದ ಆಧಾರ ಸ್ತಂಭಗಳಲ್ಲಿ ಒಬ್ಬರಾಗಿದ್ದ ಶಾಹು ಮಹಾರಾಜರು ಕೆಲವು ಕಾಲ ಸಕ್ಕರೆ ಕಾಯಿಲೆಯಲ್ಲಿ ಬಳಲಿ, 1922ರಲ್ಲಿ ನಿಧನರಾದರು.

●

ಛಾಯೆಗಳು



೧

ಈ ದೇಹ ಮನಸ್ಸುಗಳು ನಮ್ಮವಲ್ಲ!
ರಕ್ತ ಕೂಡ ನಮ್ಮ ಹೆತ್ತಮ್ಮರದ್ದಲ್ಲ!
ರಕ್ತಕ್ಕೆ ಧರ್ಮ ಬೆರಸಿ ಧಾರೆಯೆರೆದಿದ್ದಾರೆ
ಮಾಂಸಕ್ಕೂ ಜಾತಿಯ ಅಚ್ಚ ಛಾಪಿಸಿದ್ದಾರೆ.
ಅರಿವೆಯ ದೇಹದೊಳಗೆ
ಅಜ್ಞಾನದ ದೀಪ ಉರಿಸಿ
ಹಾಲ್ಕಡಲುಗಳಿಗೆ ಹಾಲಹಲನವಿಕ್ಕಿದ್ದಾರೆ
ಉರಿವ ಜೀವಿಗಳ ಉರಿದು ಮುಕ್ಕಿದ್ದಾರೆ.

೨

ದೇಹ ದೇಗುಲವಾಗಲಿಲ್ಲ
ಮಠ, ಮಸೀದಿ, ಚರ್ಚುಗಳಾದವು...
ಹೊಸಹಾದಿಗಳಾಗುವ ಬದಲು
ಅಮಾನುಷ ಕಾಲುಗಳಿಗೆ ಚಪ್ಪಲಿಗಳಾದೆವು
ಬೆಂಕಿ ಹೊತ್ತಿಸಿ ಬೆಳಕ ಮಾಡಿ
ಬದುಕುವುದಕ್ಕೆ ಬದಲು
ಕತ್ತಲೆಯಲ್ಲಿ ಕಣ್ಣು ಬಿಟ್ಟು
"ಮಾಯ" ಅಂದುಕೊಂಡೆವು.

೩

ನಾವು ಇಷ್ಟೇ ಕಾಣೆರಯ್ಯಾ
ಅಚ್ಚಿಂದ ಇಳಿಯಲಾರದ
ನೆಲ ಮುಗಿಲುಗಳ ಕಾಣದ
ಬೂಟಾಟಿಕೆ ಮಾತಿನ
ಬರೀ ಮೂಳೆ ಮಾಂಸದ
ಯಾರದೋ ಬಿಂಬದ
ಛಾಯೆಗಳು.

ತಮಿಳು ಮೂಲ : ಪೆರಿಯಾರ್ ರಾಮಸ್ವಾಮಿ
ಕನ್ನಡಕ್ಕೆ : ಬಿ.ಆರ್. ರವಿಕಾಂತೇಗೌಡ

ನ್ಯಾಯಾಂಗ ಮತ್ತು ಸಾಮಾಜಿಕ ನ್ಯಾಯ



ಭಾರತಕ್ಕೆ ಸ್ವಾತಂತ್ರ್ಯ ಬಂದು 53 ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ದೇಶದ ದುರ್ಬಲ ವರ್ಗಗಳ ಬದುಕಿನಲ್ಲಿ ಹೆಚ್ಚಿನ ಬೆಳಕೇನೂ ಮೂಡಿದಂತಿಲ್ಲ. ದೇಶದ ಒಟ್ಟು ಜನಸಂಖ್ಯೆಯಲ್ಲಿ ದುರ್ಬಲ ವರ್ಗಗಳ ಜನಸಂಖ್ಯೆಯೇ ಗರಿಷ್ಠ, ಪರಿಶಿಷ್ಟ ಜಾತಿಗಳವರು, ಪರಿಶಿಷ್ಟ ಪಂಗಡಗಳವರು, ಇತರ ಹಿಂದುಳಿದ ಜಾತಿಗಳವರು, ಧಾರ್ಮಿಕ ಅಲ್ಪಸಂಖ್ಯಾತರು, ಮುಂತಾದ ಜನಸಮುದಾಯಗಳಲ್ಲಿ ಶೇಕಡಾ ತೊಂಭತ್ತು ಭಾಗ ದುರ್ಬಲವರ್ಗದವರಾಗಿದ್ದಾರೆ. ಇವರ ಜೊತೆಗೆ ಇತರ ಜಾತಿಗಳಲ್ಲಿನ ಮಹಿಳೆಯರು, ಕೃಷಿಕೂಲಿಕಾರರು, ಜೀತಗಾರರು, ಅಸಂಘಟಿತ ಕಾರ್ಮಿಕರು ಕೂಡ ದುರ್ಬಲ ವರ್ಗಗಳ ವ್ಯಾಪ್ತಿಯಲ್ಲೇ ಬರುತ್ತಾರೆ. ಹೀಗೆ ಪರಿಗಣಿಸಿದಾಗ, ದೇಶದ ಬಹು ಸಂಖ್ಯಾತ ಜನತೆ ದುರ್ಬಲ ವರ್ಗಗಳಲ್ಲಿ ಸೇರಿ ಹೋಗುತ್ತಾರೆ.

ಸ್ವಹಿತ, ಸ್ವಜಾತಿ-ಸ್ವವರ್ಗಹಿತ

ಸ್ವತಂತ್ರ ಭಾರತದ ನೇತೃತ್ವದ ವರ್ಗಚರಿತ್ರೆ ಮತ್ತು ಜಾತಿ ಚರಿತ್ರೆಗಳಿಂದಾಗಿ ಹಾಗೂ ಅಧಿಕಾರ ಲಾಲಸೆಯಿಂದಾಗಿ ದೇಶ ಹಿತ, ಜನಸಮುದಾಯದ ಹಿತ, ಶೋಷಿತ ವರ್ಗಗಳ ಹಿತ ಮೂಲೆ ಗುಂಪಾಯಿತು. ಸ್ವಪ್ರತಿಷ್ಠೆ, ಸ್ವಹಿತ, ಸ್ವಜಾತಿ-ಸ್ವವರ್ಗ ಹಿತಗಳೇ ಪ್ರಧಾನವಾದವು. ಪರಿಣಾಮವಾಗಿ ಇಡೀ ಭಾರತ ರೋಗಿಷ್ಠವಾಗೇ ಮುಂದುವರೆಯಿತು.

ಅಂಬೇಡ್ಕರರ ನಿರೀಕ್ಷೆ

ಸ್ವತಂತ್ರ ಭಾರತದ ಇಂಥ ಸ್ವಾರ್ಥಿ ಹಾಗೂ ಅವಿವೇಕಿ ನೇತೃತವದ ಕೃಪೆಗೆ ಭಾರತದ ದುರ್ಬಲ ವರ್ಗಗಳಲ್ಲಿ ಅತ್ಯಂತ ದುರ್ಬಲ ವರ್ಗವಾದ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಹಿತವನ್ನು ಬಿಡಬಾರದೆಂಬ ಧ್ಯೇಯ ಹೊಂದಿದ್ದ ಡಾ|| ಬಿ.ಆರ್. ಅಂಬೇಡ್ಕರರು ದೇಶದ ಸಂವಿಧಾನವನ್ನು ಸಿದ್ಧಪಡಿಸುವಾಗಲೇ ಹಲವೊಂದು ರಕ್ಷಣಾತ್ಮಕ ಅಂಶಗಳನ್ನು ಸೇರ್ಪಡೆ ಮಾಡಿದರು. ಸಂವಿಧಾನದ ಒತ್ತಾಸೆ ಇದ್ದಾಗಲಾದರೂ ಭಾರತದ ಆಳುವ ವರ್ಗ ಈ ಜಾತಿ ಮತ್ತು ವರ್ಗಗಳ ಹಿತವನ್ನು ಕಡ್ಡಾಯವಾಗಿ ಕಾಪಾಡೀತು ಎಂಬುದು ಅಂಬೇಡ್ಕರರ ನಿರೀಕ್ಷೆಯಾಗಿತ್ತು. ಆದರೆ ದೇಶದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿ ತುಂಬಿಕೊಂಡಿದ್ದ ಮನುವಾದಿ ದೃಷ್ಟಿಕೋನವು, ಸಂವಿಧಾನಬದ್ಧ ಹಕ್ಕುಗಳನ್ನೂ ಕೂಡ ಪ. ಜಾತಿ/ಪಂಗಡಗಳವರಿಂದ ಕಿತ್ತುಕೊಳ್ಳುವ ಹೀನ ನಡವಳಿಕೆ ತೋರುತ್ತದೆ ಎಂಬುದನ್ನು ಅವರಾದರೂ ಊಹಿಸಿರಲಿಕ್ಕಿಲ್ಲ.

ಪರಿಣಾಮವಾಗಿ, ಸ್ವತಂತ್ರ ಭಾರತದಲ್ಲೂ ಕೂಡ ದಲಿತರು ಕಗ್ಗೊಲೆಗೆ ಗುರಿಯಾಗುತ್ತಿದ್ದಾರೆ. ದಲಿತರ ಸಾಮೂಹಿಕ ಹತ್ಯೆ ನಡೆಯುತ್ತಿದೆ. ದಲಿತರು ಗರಿಷ್ಠ ಸಂಖ್ಯೆಯಲ್ಲಿ ಜೀತಗಾರರಾಗುತ್ತಿದ್ದಾರೆ. ಅವಿದ್ಯಾವಂತರಲ್ಲಿ ನೀರು-ಬೆಳಕುಗಳಿಂದ ವಂಚಿತರಾಗಿರುವವರಲ್ಲಿ, ಬಡತನ ರೇಖೆ ಕೆಳಗಿರುವವರಲ್ಲಿ ದಲಿತರು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಭೂಮಿಯಿಂದ, ವಸತಿಯಿಂದ, ನಾಗರಿಕ ಸೌಲಭ್ಯಗಳಿಂದ ದಲಿತರು ದೂರವಿಡಲ್ಪಟ್ಟಿದ್ದಾರೆ. ಅಸ್ಪೃಶ್ಯತೆಯ ತಾಂಡವ ನಡೆದೇ ಇದೆ. ಒಟ್ಟಾರೆ ಸ್ವತಂತ್ರ ಭಾರತದಲ್ಲಿ ಕೂಡ ದಲಿತರನ್ನು ಮನುಷ್ಯರಂತೆ ನೋಡಿಕೊಳ್ಳಲಾಗುತ್ತಿಲ್ಲ.

ಡಾ|| ಬಿ.ಆರ್. ಅಂಬೇಡ್ಕರರು ದೇಶದ ಸಂವಿಧಾನವನ್ನು ಸಿದ್ಧಪಡಿಸುವಾಗಲೇ ಹಲವೊಂದು ರಕ್ಷಣಾತ್ಮಕ ಅಂಶಗಳನ್ನು ಸೇರ್ಪಡೆ ಮಾಡಿದರು. ಸಂವಿಧಾನದ ಒತ್ತಾಸೆ ಇದ್ದಾಗಲಾದರೂ ಭಾರತದ ಆಳುವ ವರ್ಗ ಈ ಜಾತಿ ಮತ್ತು ವರ್ಗಗಳ ಹಿತವನ್ನು ಕಡ್ಡಾಯವಾಗಿ ಕಾಪಾಡೀತು ಎಂಬುದು ಅಂಬೇಡ್ಕರರ ನಿರೀಕ್ಷೆಯಾಗಿತ್ತು. ಆದರೆ ದೇಶದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿ ತುಂಬಿಕೊಂಡಿದ್ದ ಮನುವಾದಿ ದೃಷ್ಟಿಕೋನವು, ಸಂವಿಧಾನಬದ್ಧ ಹಕ್ಕುಗಳನ್ನೂ ಕೂಡ ಪ. ಜಾತಿ/ಪಂಗಡಗಳವರಿಂದ ಕಿತ್ತುಕೊಳ್ಳುವ ಹೀನ ನಡವಳಿಕೆ ತೋರುತ್ತದೆ ಎಂಬುದನ್ನು ಅವರಾದರೂ ಊಹಿಸಿರಲಿಕ್ಕಿಲ್ಲ.

ಮಾಹಿತಿ : ಜಿ. ಪಾಂಡು ನಾಯಕ್
ಬರಹ : ಮಂಗ್ಳೂರ್ ವಿಜಯ

ಮಾಡಬೇಕಾದುದೇನು?

ಇಂಥ ಕಠೋರ ಸತ್ಯವನ್ನು ಕಂಡ ಬಳಿಕ, ಭಾರತದ ಬಹುಸಂಖ್ಯಾತ ದುರ್ಬಲ ವರ್ಗಗಳವರು ಮಾಡಬೇಕಾದುದೇನು? ಅವಮಾನ, ದಮನ, ದೌರ್ಜನ್ಯ, ಶೋಷಣೆಯನ್ನು ಮೂಕರಾಗಿ ಸಹಿಸಿಕೊಂಡು ಬದುಕು ನಡೆಸುವುದೇ? ಅಥವಾ ನಮ್ಮ ವಿಮೋಚನೆಗೆ ಮಾರ್ಗವನ್ನು ಕಂಡುಕೊಳ್ಳುವ ಕಠಿಣ ಆದರೆ ಆತ್ಮಗೌರವದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವ ದಿಟ್ಟತನವನ್ನು ತೋರುವುದೇ? ಭಾರತದ ಸಮಾಜವು ಒಳಗೊಂಡಿರುವ ಕಟು ಸತ್ಯವನ್ನು ಸಮರ್ಪಕವಾಗಿ ಅರಿತ ಯಾರೂ ಮನುವಾದವನ್ನು ಮಾನ್ಯ ಮಾಡುವುದು ಸಾಧ್ಯವಿಲ್ಲ; ಬಹುಸಂಖ್ಯಾತರ ಹಿತವನ್ನು ಹತ್ತಿಕ್ಕಿದ ನೀತಿಯನ್ನು ಸಮರ್ಥಿಸಲು ಸಾಧ್ಯವಿಲ್ಲ. ಕೋಟಿ ಕೋಟಿ ಜನರನ್ನು ಪಶು-ಪಕ್ಷಿಗಳಿಗಿಂತಲೂ ಕಡೆಯಾಗಿ ಕಂಡ ಧರ್ಮವನ್ನು, ನಡವಳಿಕೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈ ನಿರ್ಧಾರ ತಾಳಿದ ಬಳಿಕ, ಭಾರತದ ಚರಿತ್ರೆಯಲ್ಲಿ ಕಾಣಬರುವ ಮಾನವೀಯ ಹೋರಾಟಗಳಿಂದ ಸ್ಫೂರ್ತಿ ಪಡೆದು, ಅಲ್ಲಿನ ಸೋಲುಗಳಿಂದ ಪಾಠ ಕಲಿತು, ಬಹುಸಂಖ್ಯಾತ ದುರ್ಬಲ ವರ್ಗಗಳನ್ನು ಒಗ್ಗೂಡಿಸಿ, ಮಾನವೀಯತೆಯನ್ನು ಸ್ಥಾಪಿಸುವ ಮಾರ್ಗವನ್ನು ಹಿಡಿಯಲೇಬೇಕಾಗುತ್ತದೆ. ಶತಮಾನಗಳ ಅನ್ಯಾಯದಿಂದ ಬಿಡುಗಡೆ ಪಡೆಯಲು ಶ್ರಮಿಸಲೇಬೇಕಾಗುತ್ತದೆ. ಇದಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯ, ಸಂವಿಧಾನದ, ಸಮೂಹ ಮಾಧ್ಯಮಗಳ ನೆರವನ್ನು ಪಡೆದುಕೊಳ್ಳುವುದು ವಿವೇಕದ ಮಾರ್ಗವಾಗುತ್ತದೆ. ನಮ್ಮ ಸಂವಿಧಾನವು ತಾಂತ್ರಿಕವಾಗಿಯಾದರೂ ಬಹುಸಂಖ್ಯೆಯನ್ನು ಮಾನ್ಯ ಮಾಡುವ ಮಾನದಂಡವನ್ನು ಹೊಂದಿರುವ ಹಿನ್ನೆಲೆಯನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡು, ಬಹುಸಂಖ್ಯಾತ ದುರ್ಬಲವರ್ಗಗಳನ್ನು ಒಗ್ಗೂಡಿಸುವ ಮಹಾನ್ ಧ್ಯೇಯವನ್ನು ಸಾಕಾರಗೊಳಿಸಲು ನಾವು ಮುಂದಾಗಬೇಕಾಗುತ್ತದೆ.

ದಲಿತ ಪರ ಅನುಚ್ಛೇದಗಳು

ಡಾ|| ಅಂಬೇಡ್ಕರರು ಸಿದ್ಧಪಡಿಸಿದ ಸಂವಿಧಾನದಲ್ಲಿ ದೇಶದ ದುರ್ಬಲ ವರ್ಗಗಳ ಪರವಾಗಿ ಹಲವಾರು ಅಂಶಗಳನ್ನು ಸೇರ್ಪಡೆ ಮಾಡಲಾಗಿದೆ. ದುರ್ಬಲ ವರ್ಗಗಳಲ್ಲೇ ಅತ್ಯಂತ ದುರ್ಬಲ ವರ್ಗಗಳೆನಿಸಿರುವ ಪರಿಶಿಷ್ಟ ಜಾತಿ/ಪಂಗಡಗಳವರ ಪರವಾಗಿಯೂ ಸಂವಿಧಾನವು ಹಲವಾರು ಅಂಶಗಳನ್ನು ಒಳಗೊಂಡಿದೆ. ದೇಶದಲ್ಲಿ ಸಾಮಾಜಿಕ ನ್ಯಾಯವನ್ನು ಸ್ಥಾಪನೆ ಮಾಡಬೇಕೆಂಬ ಹಂಬಲ ಹೊತ್ತಿರುವವರೆಲ್ಲ ಸಂವಿಧಾನದ ಈ ಅಂಶಗಳನ್ನು ಮನನ ಮಾಡಿಕೊಳ್ಳುವುದು ಅತ್ಯಗತ್ಯ.

ಸಂವಿಧಾನದ ಈ ಅಂಶಗಳನ್ನು ಬಹುಸಂಖ್ಯಾತ ದುರ್ಬಲ ವರ್ಗಗಳವರೆಗೆ ಕೊಂಡೊಯ್ಯುವುದೂ ಅತ್ಯಗತ್ಯ.

ಅನುಚ್ಛೇದ 15(4)

ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಜನಸಮುದಾಯಗಳ ಪ್ರಗತಿಗಾಗಿ ಸರ್ಕಾರವು ಯಾವುದೇ ವಿಶೇಷ ಯೋಜನೆಗಳನ್ನು ಜಾರಿಗೆ ತರಲು ಈ ಅನುಚ್ಛೇದ ಅವಕಾಶ ಒದಗಿಸುತ್ತದೆ.

ಈ ಹಿನ್ನೆಲ್ಲೆಯಲ್ಲಿ ಸ್ವತಂತ್ರ ಭಾರತದಲ್ಲಿ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ವಿಶೇಷ ಯೋಜನೆಗಳನ್ನು ಮಾಡಿದ್ದರೂ, ಅವುಗಳ ಪರಿಣಾಮಕಾರಿಯಾಗಿ ಜಾರಿಗೊಳಿಸಲ್ಪಡದ ಕಾರಣದಿಂದಾಗಿ, ದೇಶದ ಬಹುಸಂಖ್ಯಾತ ದುರ್ಬಲ ವರ್ಗಗಳು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಇನ್ನೂ ಹಿಂದುಳಿದಿವೆ.

ಅನುಚ್ಛೇದ 16(4)

ಸಮಾಜದ ಯಾವ್ಯಾವ ಸಮುದಾಯಗಳಿಗೆ ಸರ್ಕಾರಿ ಸೇವೆಯಲ್ಲಿ ಅಗತ್ಯ ಪ್ರಮಾಣದಲ್ಲಿ ಪ್ರಾತಿನಿಧ್ಯ ದೊರಕಿಲ್ಲವೊ, ಅಂತಹ ಸಮುದಾಯಗಳಿಗೆ ಸರ್ಕಾರಿ ಸೇವೆಯಲ್ಲಿ ಕಡ್ಡಾಯವಾಗಿ ಪ್ರಾತಿನಿಧ್ಯ ದೊರಕುವಂತೆ ಸರ್ಕಾರವು ಯಾವುದೇ ವಿಶೇಷ ಕಾಯ್ದೆ, ಯೋಜನೆಗಳನ್ನು ಮಾಡಲು ಈ ಅನುಚ್ಛೇದವು ಅವಕಾಶ ಒದಗಿಸುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಮೀಸಲಾತಿ ನೀತಿಯನ್ನು ಜಾರಿಗೆ ಆದೇಶ ಹೊರಡಿಸಿದ್ದರೂ, ಅವುಗಳು ಕಾಗದದ ಮೇಲಷ್ಟೇ ಉಳಿದು, ವಾಸ್ತವವಾಗಿ ಜಾರಿಗೊಳ್ಳದೇ ಬಹುಸಂಖ್ಯಾತ ದುರ್ಬಲ ವರ್ಗದವರ ಮೇಲೆ ಅನ್ಯಾಯ ಮುಂದುವರೆಯಲು ಕಾರಣವಾಗಿದೆ.

ಇಂದಿಗೂ ಕೂಡ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಎಲ್ಲಾ ಹಂತಗಳಲ್ಲಿ ಮೀಸಲಾತಿಯನ್ನು ಪರಿಪೂರ್ಣವಾಗಿ ಜಾರಿಗೊಳಿಸಿಲ್ಲ ಎಂಬ ನಗ್ನಸತ್ಯವೇ ಸರ್ಕಾರದ ಆಷಾಢ ಭೂತಿತನಕ್ಕೆ ಸಾಕ್ಷಿಯಾಗಿದೆ.

ಅನುಚ್ಛೇದ 16 (4-ಎ)

ಸರ್ಕಾರಿ ಸೇವೆಯಲ್ಲಿ ಅವಕಾಶ ಪಡೆದ ದಲಿತರಿಗೆ ಸೇವಾ ಮುಂಬಡ್ತಿ, ಮೀಸಲಾತಿ ಕಲ್ಪಿಸಲು ಸಂವಿಧಾನದ ಈ ಅನುಚ್ಛೇದ ಸರ್ಕಾರಕ್ಕೆ ಅವಕಾಶವನ್ನು ಒದಗಿಸುತ್ತದೆ.

ಆದರೆ ಮುಂಬಡ್ತಿ ಒದಗಿಸುವ ಹಂತದಲ್ಲಿ ಕಾರ್ಯಾಂಗ ಮತ್ತು ನ್ಯಾಯಾಂಗದಲ್ಲಿ ಮನುವಾದಿಗಳ ಕೈ ಮೇಲಾಗಿರುವ ಕಾರಣ, ಇಲ್ಲೂ ಕೂಡ ದಲಿತ ನೌಕರರಿಗೆ ನ್ಯಾಯ ದೊರಕಿಲ್ಲ.

ಅನುಚ್ಛೇದ 46

ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಅವಶ್ಯಕತೆಗಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಸರ್ಕಾರಗಳು ಯೋಜನೆಗಳನ್ನು ರೂಪಿಸಲು ಎಂದು ಈ ಅನುಚ್ಛೇದ ಸರ್ಕಾರಕ್ಕೆ ಅವಕಾಶ ಒದಗಿಸುತ್ತದೆ.

ಆದರೆ ಸ್ವತಂತ್ರ ಭಾರತದಲ್ಲಿ ಇದುವರೆಗೆ ರೂಪಿಸಲಾದ ಯಾವ ಯೋಜನೆಗಳಲ್ಲೂ, ಯಾವ ಕಾರ್ಯಕ್ರಮಗಳಲ್ಲೂ, ದುರ್ಬಲ ವರ್ಗಗಳ ಹಿತವನ್ನು ಕಾಪಾಡಲಾಗಿಲ್ಲ. ಬದಲಾಗಿ ಅವರ ಬದುಕುವ ಹಕ್ಕನ್ನು ಕಿತ್ತುಕೊಳ್ಳುವಂಥ ಯೋಜನೆಗಳು ಜಾರಿಯಾಗಿವೆ.

ಅನುಚ್ಛೇದ 335

ಸರ್ಕಾರಿ ಸೇವೆಗೆ ನೇಮಕಾತಿ ಮಾಡುವಾಗ, ಆಡಳಿತದಲ್ಲಿ ದಕ್ಷತೆಯನ್ನು ಕಾಪಾಡಿಕೊಳ್ಳುವತ್ತ ಗಮನ ನೀಡುವ ಜೊತೆಗೆ, ದಲಿತರಿಗೆ ಸೇವಾವಕಾಶವನ್ನು ಒದಗಿಸುವತ್ತಲೂ ಕೂಡ ಸರ್ಕಾರಗಳು ಗಮನ ನೀಡಬೇಕು ಎಂದು ಈ ಅನುಚ್ಛೇದದಲ್ಲಿ ನಿರ್ದೇಶಿಸಲಾಗಿದೆ.

ಶಾಸಕಾಂಗ

ಸಂವಿಧಾನ ಅನುಚ್ಛೇದ 330ರಂತೆ ಲೋಕಸಭೆಯಲ್ಲಿ ಹಾಗೂ ಅನುಚ್ಛೇದ 332ರಂತೆ ರಾಜ್ಯಗಳ ವಿಧಾನಸಭೆಗಳಲ್ಲಿ ದಲಿತ ವರ್ಗಗಳಿಗೆ ಅವರವರ ಜನಸಂಖ್ಯಾ ಪ್ರಮಾಣದಷ್ಟು ಪ್ರಾತಿನಿಧ್ಯವನ್ನು ಒದಗಿಸಲು ಮೀಸಲಾತಿ ಕಲ್ಪಿಸಲಾಗಿದೆ. ರಾಜ್ಯಸಭೆ ಮತ್ತು ರಾಜ್ಯಗಳ ವಿಧಾನ ಪರಿಷತ್ತುಗಳಲ್ಲಿ ಮೀಸಲಾತಿಯನ್ನು ನೀಡಿರುವುದಿಲ್ಲ. ಈ ರಾಜಕೀಯ ಮೀಸಲಾತಿ ಪ್ರತಿ ಹತ್ತು ವರ್ಷಗಳಿಗೊಮ್ಮೆ ಲೋಕಸಭೆಯಲ್ಲಿ ಹಾಗೂ ರಾಜ್ಯಗಳ ವಿಧಾನಸಭೆಗಳಲ್ಲಿ ವಿಸ್ತರಿಸುತ್ತಾ ಬರುತ್ತಿದೆ. ಅನುಚ್ಛೇದ 243 (ಡಿ) ರಂತೆ, ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತಿಗಳಲ್ಲಿ ಪಟ್ಟಣ ಮತ್ತು ನಗರ ಸಭೆಗಳಲ್ಲಿ ದಲಿತ ವರ್ಗಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ. ಆದರೆ ಈ ಎಲ್ಲಾ ರಾಜಕೀಯ ಸ್ಥಾನಗಳಿಗೆ ಚುನಾಯಿತರಾಗುವ ದಲಿತ ಪ್ರತಿನಿಧಿಗಳು ದಲಿತ ವರ್ಗಗಳ ಹಿತ ಕಾಪಾಡುವ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಬಹುಮಟ್ಟಿಗೆ ವಿಫಲರಾಗಿದ್ದಾರೆ. ಇದಕ್ಕೆ ಸಿಸ್ಟಂನಲ್ಲೇ ಇರುವ ಕೆಲವೊಂದು ನ್ಯೂನತೆಗಳೂ ಕಾರಣವಾಗಿವೆ.

ದೇಶದ ಶಾಸಕಾಂಗದ ಮೂಲಕ ದುರ್ಬಲ ವರ್ಗಗಳ ಪರವಾಗಿ ಹಲವಾರು ಕಾಯ್ದೆಗಳು ಪಾಸಾಗುತ್ತದೆ. ಶಾಸಕಾಂಗದ ನಿರ್ದೇಶನದ ಮೇರೆಗೆ ಅನೇಕಾನೇಕ ಯೋಜನೆಗಳು ರೂಪುಗೊಳ್ಳುತ್ತವೆ. ಸರ್ಕಾರಗಳು ಹೊಸ ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತರುವ ನಿರ್ಧಾರ ಪ್ರಕಟಿಸುತ್ತವೆ. ಆದರೆ, ಇವೆಲ್ಲವುಗಳು ವಾಸ್ತವವಾಗಿ ಜಾರಿಗೆ ಬರಬೇಕಾಗಿರುವುದು ಕಾರ್ಯಾಂಗದ ಮೂಲಕ. ಕಾರ್ಯಾಂಗದಲ್ಲಿ ದಲಿತ ಹಿತ ಪರವಾದ ನಿಷ್ಠೆಯಿಲ್ಲದೆ ಹೋದರೆ, ಶಾಸಕಾಂಗ ಮಾಡುವ ಎಲ್ಲಾ ಒಳ್ಳೆಯ ಕಾಯ್ದೆಗಳು, ರೂಪಿಸುವ ಎಲ್ಲಾ ಒಳ್ಳೆಯ ಯೋಜನೆಗಳು ಹಾಗೂ ನಿರ್ಧಾರಗೊಳ್ಳುವ ಎಲ್ಲಾ ಕಾರ್ಯಕ್ರಮಗಳು ಕಾಗದದ ಮೇಲೆ ಉಳಿಯುತ್ತವೆ. ಸರ್ಕಾರದ ಅನುದಾನ ಖರ್ಚಾಗುತ್ತದೆ. ಖಜಾನೆ ಬರಿದಾಗುತ್ತದೆ. ಆದರೆ ದಲಿತರ ಸ್ಥಿತಿಯಲ್ಲಿ ಮಾತ್ರ ಯಾವ ಬದಲಾವಣೆಯೂ ಆಗುವುದಿಲ್ಲ. ಸರ್ಕಾರದ ಕಾಯ್ದೆಗಳು, ಯೋಜನೆಗಳು, ಕಾರ್ಯಕ್ರಮಗಳು ಅವರನ್ನು ತಲುಪುವುದೇ ಇಲ್ಲ.

ಕಾರ್ಯಾಂಗ

ಸಂವಿದಾನದ ಆಶಯ, ಸರ್ಕಾರಗಳು ಮಾಡುವ ಕಾಯ್ದೆ, ಯೋಜನೆಗಳು, ಕಾರ್ಯಕ್ರಮಗಳು ದಲಿತರನ್ನು ತಲುಪದಂತೆ ವ್ಯವಸ್ಥಿತವಾಗಿ ಅಡ್ಡಿ ಉಂಟು ಮಾಡುತ್ತಿರುವ ಅಂಗ ಇದೇ. ಇಲ್ಲಿ ಉನ್ನತ ಹುದ್ದೆಗಳಲ್ಲಿ ನಿರ್ಣಯ ಸ್ವೀಕರಿಸುವ ಹಂತದಲ್ಲಿ ಮನುವಾದಿಗಳು ಪಟ್ಟು ಹಿಡಿದು ಕುಳಿತುಬಿಟ್ಟಿದ್ದಾರೆ. ಇವರಿಂದಾಗಿಯೇ ಸಂವಿಧಾನದ ಆಶಯ ಗಾಳಿಗೆ ಹಾರಿ ಹೋಗಿದೆ. ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಈ ಆಯಕಟ್ಟಿನ ಹುದ್ದೆಗಳ ಪೈಕಿ ಕೆಲವನ್ನಾದರೂ ದಲಿತ ವರ್ಗಗಳು ಕಬಳಿಸಿಯಾವು ಎಂಬ ಧೂರ್ತತನ ಕಾರ್ಯಾಂಗದ್ದು.

ಆದ್ದರಿಂದಲೇ ಸಂವಿಧಾನದ ಆಶಯವನ್ನು, ಶಾಸಕಾಂಗದ ನಿರ್ದೇಶನಗಳನ್ನು, ಪಾಸು ಮಾಡಿದ ಕಾಯ್ದೆಗಳನ್ನು ಕೊಲ್ಲುವ ನೀಚತನವನ್ನು ಕಾರ್ಯಾಂಗ ತೋರುತ್ತಾ ಬಂದಿದೆ. ಕಾರ್ಯಾಂಗ ನೀಡುವ ಪರೋಕ್ಷ ನಿರ್ದೇಶನ ರೂಪದ ಸಲಹೆಗಳನ್ನು ಶಾಸಕಾಂಗ ಚಾಚೂ ತಪ್ಪದೇ ಪಾಲಿಸಿಕೊಂಡು ಬಂದ ಅನೇಕ ಉದಾಹರಣೆಗಳು ಸಿಗುತ್ತವೆ. ಹಣಬಲ, ಜಾತಿಬಲ, ಇಂಗ್ಲೀಷ್ ಬಲದಿಂದ ಕಾರ್ಯಾಂಗವು ಕೊಬ್ಬಿದೆ; ಶಾಸಕಾಂಗವು ಕಾರ್ಯಾಂಗದ ಮುಂದೆ ನಿಸ್ತೇಜವಾಗುವುದೂ ಇದೇ ಕಾರಣಗಳಿಂದ.

ನ್ಯಾಯಾಂಗ

ಸಂವಿಧಾನದ ಆಶಯಗಳನ್ನು ಈಡೇರಿಸಲೆಂದು ಶಾಸಕಾಂಗವು ಪಾಸು ಮಾಡುವ ಕಾಯ್ದೆಗಳನ್ನು, ಯೋಜನೆಗಳನ್ನು, ಹಾಕಿಕೊಳ್ಳುವ ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಕರ್ತವ್ಯ ಕಾರ್ಯಾಂಗದ್ದು. ಈ ಕರ್ತವ್ಯದಲ್ಲಿ ಕಾರ್ಯಾಂಗ ವಿಫಲವಾದರೆ ಅದನ್ನು ತರಾಟೆಗೆ ತೆಗೆದುಕೊಳ್ಳುವ ಅಧಿಕಾರ ಕೂಡ ಶಾಸಕಾಂಗಕ್ಕಿದೆ. ಹೀಗಿದ್ದೂ ಸ್ವತಂತ್ರ ಭಾರತದಲ್ಲಿ ಅನೇಕ ಕಾಯ್ದೆಗಳು, ಯೋಜನೆಗಳು, ಕಾರ್ಯಕ್ರಮಗಳು ಇಲ್ಲಿನ ಬಹುಸಂಖ್ಯಾತ ಜನತೆಯನ್ನು ತಲುಪಿಲ್ಲವೆಂದರೆ, ಇದಕ್ಕೆ ಕಾರ್ಯಾಂಗ ಮತ್ತು ಶಾಸಕಾಂಗಗಳೇ ಹೊಣೆ.

ಕಾರ್ಯಾಂಗದ ಈ ಕರ್ತವ್ಯ ವೈಫಲ್ಯವನ್ನು ನ್ಯಾಯಾಂಗದ ಮುಂದೆ ಪ್ರಶ್ನಿಸಬಹುದಾಗಿದೆ. ಆದರೆ, ಸ್ವತಂತ್ರ ಭಾರತದಲ್ಲಿ ನ್ಯಾಯಾಂಗ ಹೊಂದಿರುವ ಸ್ವರೂಪವನ್ನು ಗಮನಿಸಿದರೆ, ಅದರ ಚರಿತ್ರೆಯನ್ನು, ಅವಲೋಕಿಸಿದರೆ, ನ್ಯಾಯಾಂಗದ ಮೇಲೆ ಸಂಪೂರ್ಣ ನಂಬಿಕೆಯನ್ನು ಇಡಲು ಸಾಧ್ಯವಿಲ್ಲ ಎಂಬ ಸತ್ಯ ಗೋಚರವಾಗುತ್ತದೆ. ನ್ಯಾಯಾಲಯಗಳು ಸಾಕ್ಷಿ, ಪುರಾವೆ, ಆಧಾರ, ನಿಯಮಗಳ ಹಗ್ಗವನ್ನು ಮೈತುಂಬಾ ಕಟ್ಟಿಕೊಂಡಿರುವ ಸಂಸ್ಥೆ. ಇಲ್ಲಿ ಸಹಜತೆ, ಸಹಜ ನ್ಯಾಯ, ಸಾಮಾನ್ಯ ತಿಳುವಳಿಕೆ ಮುಂತಾದವುಗಳನ್ನು ಕಾಣುವುದು ಬಹು ಅಪರೂಪ. ಸಮುದ್ರದ ಪಕ್ಕ, ಬೆಟ್ಟಗಳ ಬಳಿ, ಕಾಡುಗಳ ಸುತ್ತು ಹೆಣೆದುಕೊಂಡಿರುವ ಅನ್ಯಾಯ, ಅಕ್ರಮಗಳನ್ನು ರಾಜಧಾನಿಗಳಲ್ಲಿನ ನ್ಯಾಯಸ್ಥಾನಗಳಲ್ಲಿ ಕುಳಿತೇ ಬಗೆಹರಿಸುವ ವೈಖರಿ ನಮ್ಮ ನ್ಯಾಯಾಂಗದ್ದು.

ನ್ಯಾಯಾಂಗವು ಪ್ರಜಾಸತ್ತಾತ್ಮಕಗೊಂಡಿಲ್ಲ. ನ್ಯಾಯಾಂಗದ ರಚನೆಯೇ ಹಾಗಿದೆ. ಸಂವಿಧಾನದಲ್ಲಿ ಈ ಬಗ್ಗೆ ವಿಶೇಷವಾದ ಅವಕಾಶಗಳನ್ನು ಕಲ್ಪಿಸಿಲ್ಲ ಎಂಬುದು ನಿಜವಾದರೂ, ಇಂಥ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ತನ್ನನ್ನು ಒಳಪಡಿಸಿಕೊಳ್ಳಲು ಸ್ವತಂತ್ರ ಭಾರತದ ಐವತ್ತು ವರ್ಷಗಳಲ್ಲಿ ನ್ಯಾಯಾಂಗ ಮುಂದಾಗಿಲ್ಲ. ಪರಿಣಾಮವಾಗಿ ನ್ಯಾಯಾಂಗವು ಅಗತ್ಯಕ್ಕಿಂತ ಹೆಚ್ಚಾಗಿ ಪಾವಿತ್ರ್ಯವನ್ನು ತನಗೆ ಆರೋಪಿಸಿಕೊಂಡಿದೆ. ಅಲ್ಲದೇ, ಸಂವಿಧಾನದ ಆಶಯವನ್ನು, ಅನುಚ್ಛೇದಗಳ ಅರ್ಥವನ್ನು

ನ್ಯಾಯಪೀಠಗಳು ಒಂದೊಂದು ಘಟ್ಟದಲ್ಲಿ ಒಂದೊಂದು ರೀತಿ ವ್ಯಾಖ್ಯಾನಿಸಿರುವುದನ್ನು ಕಾಣಬಹುದಾಗಿದೆ.

ನಮ್ಮ ನ್ಯಾಯಾಂಗ ಕೂಡ ಸಾಮಾಜಿಕ ನ್ಯಾಯವನ್ನು ಪರಿಪಾಲಿಸುತ್ತಿದೆ ಎಂದು ಹೇಳಲು ಹಿಂಜರಿಕೆ ಉಂಟಾಗುತ್ತದೆ. ಇಲ್ಲಿಗೆ ಬರುವ ಮೊಕದ್ದಮೆಗಳ ವಿಲೇವಾರಿ ನಿಧಾನವಾಗುವುದಕ್ಕೆ, ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಾಗದುದಕ್ಕೆ, ಸಂವಿಧಾನದ ಆಶಯವು ಭಾರತೀಯ ಸಮಾಜದಲ್ಲಿ ಪ್ರತಿಫಲನಗೊಳ್ಳದುದಕ್ಕೆ ಹಲವು ಹತ್ತು ಕಾರಣಗಳಿರಬಹುದು. ಆದರೆ, ಸಂವಿಧಾನದ ಆಶಯವನ್ನು ಸಾಕ್ಷಾತ್ಕಾರಗೊಳಿಸುವಲ್ಲಿ ನ್ಯಾಯಾಂಗದ ಕಡೆಯಿಂದ ಕಂಡು ಬರುವ ಅನಾಸಕ್ತಿ, ಕಳವಳಕಾರಿಯಾದುದು. ಸಾಮಾನ್ಯ ಭಾರತೀಯರಿಗೆ-ವಿಶೇಷವಾಗಿ ದುರ್ಬಲ ವರ್ಗಗಳವರಿಗೆ-ನಮ್ಮ ನ್ಯಾಯಾಂಗದ ಬಗ್ಗೆ ಹೆಮ್ಮೆಪಟ್ಟುಕೊಳ್ಳುವಂಥದ್ದನ್ನು ಏನೂ ಕಂಡಿಲ್ಲ; ಏನೂ ಕೇಳಿಸಿಲ್ಲ; ಏನೂ ಅನುಭವಕ್ಕೆ ಬಂದಿಲ್ಲ. ಬದಲಾಗಿ, ನ್ಯಾಯಾಂಗವು ಹತ್ತಿರ ಹೋಗಬಾರದ ಗುಹೆ; ಇದನ್ನು ಸುತ್ತುವರೆದಿರುವ ಮಹಾನಗರವೆಂಬ ದಟ್ಟಾರಣ್ಯ ತಮ್ಮ ಪಾಲಿಗೆ ಗೊಂಡಾರಣ್ಯವೇ ಸೈ; ಇಲ್ಲಿ ಹೋಗಿ ನ್ಯಾಯವನ್ನು ನಿರೀಕ್ಷಿಸುವುದಕ್ಕಿಂತ ವಿಧಿಯನ್ನು ನಂಬಿಕೊಂಡು ಬಿಡುವುದೇ ಲೇಸು...ಇತ್ಯಾದಿ ನಂಬಿಕೆ ನಮ್ಮ ಜನರಲ್ಲಿ ಬೆಳೆದಿದೆ. ಇಂಥ ಭಾವನೆ ಬೆಳೆಯುವ ಹಿಂದೆ ನ್ಯಾಯಾಂಗದ ಪಾತ್ರ ಇನ್ನು ಹೇಗಿರಬಲ್ಲದು?

ನ್ಯಾಯಾಂಗದ ಅಸ್ತಿತ್ವ

ನ್ಯಾಯಾಂಗ ಸಂಸ್ಥೆ ಅಸ್ತಿತ್ವಕ್ಕೆ ಬರುವುದು ಹೇಗೆ? ಸಂವಿಧಾನದ ಅನುಚ್ಛೇದ 124ರಂತೆ ಹಾಲಿ ನ್ಯಾಯಾಧೀಶರೊಡನೆ ಚರ್ಚಿಸಿ, ಹೊಸ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರ ರಾಷ್ಟ್ರಪತಿಯವರಿಗಿದೆ. ಆದರೆ ವಾಡಿಕೆಯಲ್ಲಿ ಹೀಗಾಗುವುದಿಲ್ಲ. ಹಾಲಿ ನ್ಯಾಯಾಧೀಶರು ಹೊಸ ನ್ಯಾಯಾಧೀಶರಾಗಲು ಅರ್ಹರಾದವರ ಪಟ್ಟಿಯನ್ನು ರಾಷ್ಟ್ರಪತಿಯವರಿಗೆ ಕಳಿಸುತ್ತಾರೆ; ರಾಷ್ಟ್ರಪತಿಯವರು ಈ ಪಟ್ಟಿಯನ್ನು ಅನುಮೋದಿಸಿ ಕಳಿಸುತ್ತಾರೆ. ಈ ಕಾರಣದಿಂದಾಗಿಯೇ ಇಂದು ಭಾರತದ 26 ಜನ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಲ್ಲಿ, ಭಾರತದ ಸಮಗ್ರತೆಯನ್ನು ಕಾಣುವಂತಿಲ್ಲ; ಸರ್ವ ಸಮುದಾಯಗಳಿಗೆ ಇಲ್ಲಿ ಪ್ರಾತಿನಿಧ್ಯ ಇಲ್ಲ. ದೇಶದ ಸಮಸ್ತ ಜನಸಮುದಾಯಗಳಿಗೆ ಪ್ರಾತಿನಿಧ್ಯ ಇಲ್ಲದ ನ್ಯಾಯಾಂಗದಿಂದ ಈ ದೇಶದ ಸಮಸ್ತ ಜನಸಮುದಾಯಗಳಿಗೆ ನ್ಯಾಯವನ್ನು ನಿರೀಕ್ಷಿಸುವುದೇ ಅಸಹಜವಾಗುತ್ತದಲ್ಲವೇ?

ದಕ್ಷತೆ ಮತ್ತು ಪ್ರತಿಭೆ

ದೇಶದ ದಲಿತ ವರ್ಗಗಳಿಗೆ ಒದಗಿಸಲಾದ ಮೀಸಲಾತಿಯ ಸಿಂಧುತ್ವವನ್ನು ತನ್ನ ಮುಂದೆ ಪ್ರಶ್ನಿಸಿದ ಅರ್ಜಿಗಳನ್ನು ಪರಿಶೀಲಿಸುವಾಗ ಸುಪ್ರೀಂ ಕೋರ್ಟು, ಸಂವಿಧಾನದ ಅನುಚ್ಛೇದ 335ನ್ನು ಒತ್ತಾಸೆಯಾಗಿಟ್ಟುಕೊಂಡು, ಆಡಳಿತದಲ್ಲಿ ದಕ್ಷತೆಯನ್ನು ಕಾಪಾಡಿಕೊಳ್ಳುವ ಅಂಶವನ್ನು ಹಲವು ಬಾರಿ ಒತ್ತಿಹೇಳಿದೆ. ದಕ್ಷತೆ ಎಂದರೆ ದೇಶದ ಅಭಿವೃದ್ಧಿ; ಆದ್ದರಿಂದ ದಕ್ಷತೆಯನ್ನು ಮಾತ್ರ ಬಿಟ್ಟುಕೊಡಲಾಗದು ಎಂಬುದು ಸುಪ್ರೀಂ ಕೋರ್ಟಿನ ವಾದದ ಸಾರ. ಇಂಥ ವಾದವನ್ನು ಸಮರ್ಥವಾಗಿ ಹಾಗೂ ನಿರ್ಣಾಯಕವಾಗಿ ಮಂಡಿಸುತ್ತಾ ಬಂದಿರುವ ಸುಪ್ರೀಂ ಕೋರ್ಟು, ತನ್ನ ನ್ಯಾಯಾಧೀಶರನ್ನು ದಕ್ಷತೆಯ ಆಧಾರದಲ್ಲಿ ನೇಮಕ ಮಾಡಲಾಗುತ್ತದೆಯೇ ಎಂಬ ಪ್ರಶ್ನೆಯನ್ನು ಇದುವರೆಗೆ ಹಾಕಿಕೊಂಡಿಲ್ಲದಿರುವುದು ಚೋದ್ಯ. ದಕ್ಷತೆ ಮತ್ತು ಪ್ರತಿಭೆಯ ವಕಾಲತ್ತನ್ನು ಸದಾಕಾಲ ಮಾಡುವ ಸುಪ್ರೀಂ ಕೋರ್ಟು, ತನ್ನ ನ್ಯಾಯಾಧೀಶರ ನೇಮಕಾತಿ ವಿಚಾರ ಬಂದಾಗ ಮಾತ್ರ ದಕ್ಷತೆ ಮತ್ತು ಪ್ರತಿಭೆಗಳನ್ನು ಮೂಲೆಗುಂಪು ಮಾಡಿ, ಕೇವಲ ಸೇವಾ ಹಿರಿತನವನ್ನು ಆಶ್ರಯಿಸುವುದು ವಿಚಿತ್ರವೆಂಬಂತೆ ತೋರುತ್ತದೆ.

ತಳಹಂತದ ಹಾಗೂ ಉನ್ನತ ಹಂತದ ನ್ಯಾಯಾಲಯಗಳಲ್ಲಿ ಭಾರತದ ಸಮಗ್ರತೆಯು ಕಾಣುವಂತಾದರೆ, ಅಂದರೆ ಭಾರತದ ಎಲ್ಲಾ ಜನಸಮುದಾಯಗಳಿಗೆ ನ್ಯಾಯಾಂಗದಲ್ಲಿ ಸೂಕ್ತವಾದ ಪ್ರಾತಿನಿಧ್ಯ ದೊರಕುವಂತಾದರೆ, ಆ ಸಂಸ್ಥೆಯಿಂದ ಸಾಮಾಜಿಕ ನ್ಯಾಯವನ್ನು ನಿರೀಕ್ಷಿಸಬಹುದು. ಇದರ ಬದಲು, ನ್ಯಾಯಾಂಗವು ಒಂದು ವಿಚಾರಧಾರೆ, ಒಂದು ವರ್ಗ, ಒಂದು ವರ್ಣ, ಒಂದು ಜಾತಿಗೆ ಸೀಮಿತವಾಗಿ ಬಿಟ್ಟರೆ ಅಲ್ಲಿ "ವಿವಿಧತೆಯಲ್ಲಿ ಏಕತೆ"ಯನ್ನು "ವಿಭಿನ್ನ ಸಾಮಾಜಿಕ ನ್ಯಾಯ"ವನ್ನು ಕಾಣುವುದು ದುಸ್ತರವಾಗುತ್ತದೆ.

ಸಂವಿಧಾನದ ಅನುಚ್ಛೇದಗಳಿಗೆ ಅರ್ಥ ವಿವರಣೆಯನ್ನು ಒದಗಿಸುವ ತನ್ನ ವಿಶಿಷ್ಟ ವೈಖರಿಯ ಮೂಲಕ ನ್ಯಾಯಾಂಗ ಅನೇಕ ಬಾರಿ ಸಾಮಾಜಿಕ ನ್ಯಾಯವನ್ನು ಮೂಲೆ ಗುಂಪಾಗಿಸಿದೆ. ದೇಶದ ಬಹುಸಂಖ್ಯಾತ ಜನಸಮುದಾಯಗಳ ಹಿತದೃಷ್ಟಿಯಿಂದ ಮಾರಕವೆನಿಸುವಂಥ ಹಲವಾರು ತೀರ್ಪುಗಳು ಉನ್ನತ ಮಟ್ಟದ ನ್ಯಾಯಾಲಯಗಳಿಂದಲೇ ಹೊರಬಿದ್ದಿವೆ; ಕೆಲವೊಂದು ಉದಾಹರಣೆಗಳನ್ನು ನೋಡೋಣ.

ಉನ್ನತ ಶಿಕ್ಷಣದಲ್ಲಿ ಮೀಸಲಾತಿ: ಸಂವಿಧಾನ ತಿದ್ದುಪಡಿ

ದಲಿತ ಮಕ್ಕಳಿಗೆ ಉನ್ನತ ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ನೀಡಿರುವುದನ್ನು 1951ರಲ್ಲಿ ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸಲಾಯಿತು. (ಚಂಪಕಂ ದೊರೈರಾಜ್ ಪ್ರಕರಣ). ಪ್ರಕರಣವನ್ನು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟು, ದಲಿತರಿಗೆ ಮತ್ತು ಹಿಂದುಳಿದವರಿಗೆ ವೈದ್ಯಕೀಯ ಅಥವಾ ಇಂಜಿನಿಯರಿಂಗ್ ಮುಂತಾದ ಉನ್ನತ ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ನೀಡುವುದು ಕಾನೂನು ಬಾಹಿರ ಎಂದು ಘೋಷಿಸಿತು. ದಲಿತರಿಗೆ ಇಲ್ಲಿ ಪ್ರವೇಶ ಮೀಸಲಾತಿ ಒದಗಿಸಲು ಸಂವಿಧಾನಕ್ಕೆ ಮೊದಲನೇ ತಿದ್ದುಪಡಿಯನ್ನು ತರಲಾಯಿತು.

ಕರ್ನಾಟಕದಲ್ಲಿ ದಲಿತರು ಮತ್ತು ಹಿಂದುಳಿದವರು ಶೇಕಡಾ 85ರಷ್ಟು ಇದ್ದ ಕಾರಣ, ಅವರಿಗೆ ಶೇ. 70ರಷ್ಟು ಮೀಸಲಾತಿಯನ್ನು ಒದಗಿಸಲಾಗಿತ್ತು. ಇಷ್ಟು ಪ್ರಮಾಣದ ಮೀಸಲಾತಿ ತಪ್ಪು ಎಂದು ವಾದಿಸಿದ ಅರ್ಜಿಯು 1953ರಲ್ಲಿ ಸುಪ್ರೀಂ ಕೋರ್ಟಿನ ಮುಂದೆ ಬಂತು (ಬಾಲಾಜಿ ಪ್ರಕರಣ). ಇದನ್ನು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟು, ಮೀಸಲು ಪ್ರಮಾಣ ಶೇ. 50ರಷ್ಟನ್ನು ಮೀರಬಾರದೆಂಬುದಾಗಿ ತೀರ್ಪು ನೀಡಿತು.

ಉನ್ನತ ಶಿಕ್ಷಣ ಪ್ರವೇಶಕ್ಕೆ ಮೀಸಲಾತಿ ನೀಡುವುದರಿಂದ ದಕ್ಷತೆಗೆ ಧಕ್ಕೆ ಉಂಟಾಗುತ್ತದೆ ಎಂಬುದನ್ನು ಸಂವಿಧಾನದ ಅನುಚ್ಛೇದ 335ರ ನೆರವಿನಿಂದ ದಾಖಲಿಸಿ, ಸುಪ್ರೀಂ ಕೋರ್ಟು ನೀಡಿದ ತೀರ್ಪು (ನಿವೇದಿತಾ ಜೈನ್ ಪ್ರಕರಣ-1981), 1997ರಲ್ಲಿ ಅಜಯ್‌ಕುಮಾರ್‌ಸಿಂಗ್ ಹಾಗೂ ನರಸಿಂಹನ್ ಪ್ರಕರಣದಲ್ಲಿ, ಪ್ರವೇಶ ಪರೀಕ್ಷೆಯಲ್ಲಿ ಮೀಸಲಾತಿ ನೀಡುವುದರಿಂದ ದಕ್ಷತೆಗೇನೂ ಧಕ್ಕೆ ಉಂಟಾಗುವುದಿಲ್ಲ ಎಂಬ ತೀರ್ಪು ಬರುವವರೆಗೆ ಜಾರಿಯಲ್ಲಿತ್ತು. ಆದರೆ ಈ ತೀರ್ಪು ಮಾತ್ರ ಎರಡೇ ವರ್ಷಗಳಲ್ಲಿ ವಜಾ ಆಯಿತು. 1999ರಲ್ಲಿ ಪ್ರೀತಿ ಶ್ರೀವಾತ್ಸವ ಪ್ರಕರಣದಲ್ಲಿ ಬಂದ ತೀರ್ಪು, ಸ್ನಾತಕೋತ್ತರ ಹಂತದಲ್ಲಿ ಯಾವುದೇ ರೀತಿಯ ಮೀಸಲಾತಿ ಅಥವಾ ಸಡಲಿಕೆ ಇರಕೂಡದು ಎಂದು ತೀರ್ಮಾನಿಸಿತು.

ಸರ್ಕಾರಿ ಸೇವೆಯಲ್ಲಿ ಮೀಸಲಾತಿ

1964ರಲ್ಲಿ ದೇವದಾಸನ್ ಪ್ರಕರಣವನ್ನು ವಿಚಾರಣೆಗೆ ಎತ್ತಿಕೊಂಡು ಸುಪ್ರೀಂಕೋರ್ಟು, ಸರ್ಕಾರಿ ಸೇವೆಯಲ್ಲಿ ಶೇಕಡಾ 50ಕ್ಕಿಂತ ಹೆಚ್ಚು ಹುದ್ದೆಗಳನ್ನು ಮೀಸಲಾಗಿ ಇಡಬಾರದೆಂದು ತೀರ್ಪು ನೀಡಿತು. 1985ರಲ್ಲಿ ವಸಂತಕುಮಾರ್ ಪ್ರಕರಣದಲ್ಲಿ, ಮೀಸಲು ಅಭ್ಯರ್ಥಿಗಳಿಂದ ಭರ್ತಿ ಮಾಡಲಾದ ಹುದ್ದೆಗಳನ್ನು ಮುಂದಿನ ನೇಮಕಾತಿ ವರ್ಷಗಳಲ್ಲಿ ತುಂಬಲು ಸಾಧ್ಯವಾಗದಿದ್ದರೆ, ಆ ಹುದ್ದೆಗಳನ್ನು ಸಾಮಾನ್ಯ ಹುದ್ದೆಗಳೆಂದು ಪರಿಗಣಿಸಬೇಕು ಎಂಬ ತೀರ್ಪು ಬಂತು. 1989ರವರೆಗೆ ಹೀಗೆ ಮೀಸಲು ಗುಂಪಿನವರಿಗೆ ಲಕ್ಷಗಟ್ಟಲೇ ಹುದ್ದೆಗಳು ನಷ್ಟವಾದವು.

ಚುರುಕುಗೊಂಡ ಮೀಸಲು ವಿರೋಧಿ ನೀತಿ

ಶಾಸಕಾಂಗದ ಮುತುವರ್ಜಿಯಿಂದ ಕಾಲಕಾಲಕ್ಕೆ ಕೆಲವಾರು ಮಹತ್ವದ ಕಾಯ್ದೆಗಳು ಪಾಸಾಗಿವೆ. ಆಯಾ ಕಾಲಘಟ್ಟದಲ್ಲಿನ ಸಾಮಾಜಿಕ ಆಂದೋಲನಗಳು, ಶಾಸಕಾಂಗದಲ್ಲಿನ ಸಾಮಾಜಿಕ ನ್ಯಾಯಪರ ಒತ್ತಡ ಗುಂಪುಗಳು, ರಾಜಕೀಯ ಒತ್ತಡಗಳು ಇವುಗಳಿಗೆ ಕಾರಣ. ಆದಾಗ್ಯೂ ಇವುಗಳು ದಲಿತರನ್ನು ತಲುಪಿಲ್ಲ. ಇವುಗಳು ಬರೀ ಕಾಗದದ ಮೇಲೆ ಉಳಿಯುವಂತಾಗಲು ಕಾರ್ಯಾಂಗ ಮತ್ತು ನ್ಯಾಯಾಂಗ ಮಾಡಿಕೊಂಡ ಪರೋಕ್ಷ ಒಡಂಬಡಿಕೆಯೇ ಕಾರಣ.

ಇತರ ಹಿಂದುಳಿದ ವರ್ಗಗಳಿಗೆ ನೇಮಕಾತಿ ಮೀಸಲಾತಿಯನ್ನು ನೀಡಿದ ಸರ್ಕಾರದ ಕ್ರಮವನ್ನು 1992ರಲ್ಲಿ ಇಂದ್ರಾ ಸಾಹ್ನಿ ಪ್ರಕರಣದಲ್ಲಿ ಪುರಸ್ಕರಿಸಿದ ಸುಪ್ರೀಂಕೋರ್ಟು, ಅದೇ ತೀರ್ಪಿನಲ್ಲಿ ತನ್ನ ಮುಂದೆ ಬಾರದ ಪ್ರಶ್ನೆಯೊಂದನ್ನು ತಾನೇ ಕೈಗೆತ್ತಿಕೊಂಡು ವಿಚಾರಣೆ ನಡೆಸಿದ ಅಪರೂಪದ ಪ್ರಸಂಗ ನಡೆಯಿತು. ದಲಿತರಿಗೆ ಬಡ್ತಿಯಲ್ಲಿ ಮೀಸಲಾತಿ, ಅರ್ಹತೆಗಳನ್ನು ಸಡಲಿಕೆ, ರಿಯಾಯ್ತಿಗಳು ಇರತಕ್ಕದ್ದಲ್ಲ ಎಂದು ತೀರ್ಪು ನೀಡಲಾಯಿತಲ್ಲದೆ, ಎಲ್ಲಾ ರೀತಿಯ ಮೀಸಲಾತಿಯ ಪ್ರಮಾಣ ಶೇ. 50ನ್ನು ಮೀರತಕ್ಕದ್ದಲ್ಲ; ಉನ್ನತ ಹುದ್ದೆಗಳ ನೇಮಕಾತಿಯಲ್ಲಿ ಮೀಸಲಾತಿ ಇರತಕ್ಕದಲ್ಲ ಎಂದೂ ತೀರ್ಪು ಕೊಡಲಾಯಿತು.

ಈ ತೀರ್ಪನ್ನು ನೀಡಲಾಗಿದ್ದು 15-11-1992ರಲ್ಲಿ. ಮುಂದಿನ 5 ವರ್ಷಗಳವರೆಗೆ ಮಾತ್ರ ಈಗಾಗಲೇ ಜಾರಿಯಲ್ಲಿರುವ ಬಡ್ತಿ ಮೀಸಲಾತಿ ನೀತಿಯೇ ಮುಂದುವರೆಯುತ್ತದೆ ಎಂದು ತೀರ್ಪು ಹೇಳಿತ್ತು. ಆದರೆ 1996ರಲ್ಲಿ ಸುಪ್ರೀಂ ಕೋರ್ಟು, ಇಂದ್ರಾ ಸಾಹ್ನಿ

ಪ್ರಕರಣದಲ್ಲಿ ನೀಡಲಾದ 5 ವರ್ಷಗಳ ರಕ್ಷಣೆಯು ಬಡ್ತಿ ನೇಮಕಾತಿಯಲ್ಲಿ ಅರ್ಹತೆಗಳ ಸಡಿಲಿಕೆ/ರಿಯಾಯ್ತಿಗೆ ಅನ್ವಯಿಸುವುದಿಲ್ಲ ಎಂದು ವಿನೋದಕುಮಾರ್ ಪ್ರಕರಣದಲ್ಲಿ ತೀರ್ಪು ನೀಡಿತು. ರಿಯಾಯ್ತಿಗಳ ಮೂಲಕ ಉನ್ನತ ಹುದ್ದೆಗೆ ಬರುವ ದಲಿತ ನೌಕರರಿಂದ ಆಡಳಿತದಲ್ಲಿ ದಕ್ಷತೆ ಕಾಪಾಡಿಕೊಳ್ಳಲಾಗದು ಎಂದು ದಾಖಲಿಸಿತು.

1995ರ ಆರ್.ಕೆ. ಸಭರವಾಲ ಪ್ರಕರಣದಲ್ಲಿ ತೀರ್ಪು ನೀಡಿದ ಸುಪ್ರೀಂಕೋರ್ಟು, ಯಾವುದೇ ಶ್ರೇಣಿಗೆ ಬಡ್ತಿಯಲ್ಲಿ ಅಥವಾ ನೇಮಕಾತಿಯಲ್ಲಿ ಕನಿಷ್ಠ ಮೀಸಲಾತಿ ಪ್ರಮಾಣಕ್ಕೆ ಕೊರತೆ ಇರುವ ಪ್ರಮಾಣದಲ್ಲಿ ಮಾತ್ರ ಮೀಸಲಾತಿಯನ್ನು ಗುರುತಿಸಿ, ಭರ್ತಿ ಮಾಡತಕ್ಕದ್ದು ಎಂದು ಹೇಳಿತು. ಅಂದರೆ ಸರ್ಕಾರಿ ಸೇವೆಯಲ್ಲಿ ಯಾವುದೇ ಶ್ರೇಣಿಯಲ್ಲಿ ನಿಗದಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ದಲಿತರು ಪ್ರಾತಿನಿಧ್ಯ ಹೊಂದಲಾಗದು ಎಂದಂತಾಯಿತು.

ಇಂದ್ರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂಕೋರ್ಟು ನೀಡಿದ್ದ "ಒಟ್ಟು ಮೀಸಲಾತಿ ಶೇ. 50ನ್ನು ಮೀರಬಾರದು" ಎಂಬ ತೀರ್ಪನ್ನು ವಿರೋಧಿಸಿದ ದಲಿತ ಸಂಘಟನೆಗಳು, ರಾಜಕೀಯ ಪಕ್ಷಗಳು ದೇಶದಾದ್ಯಂತ ಹೋರಾಟ ನಡೆಸಿದ ಪರಿಣಾಮವಾಗಿ, 16 ಮೇ 2000ರಂದು ಸಂವಿಧಾನಕ್ಕೆ ತಿದ್ದುಪಡಿ ತರಲಾಯಿತು. ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಈ ತೀರ್ಪಿನ ಈ ಅಂಶವು ಅಡ್ಡಿಯಾಗುವುದಿಲ್ಲ ಎಂಬುದನ್ನು ಈ ತಿದ್ದುಪಡಿಯಲ್ಲಿ ಸ್ಪಷ್ಟಪಡಿಸಲಾಯಿತು. ಆದರೆ ಆ ಹೊತ್ತಿಗಾಗಲೇ ದೇಶದಾದ್ಯಂತ ಲಕ್ಷಾಂತರ ಹುದ್ದೆಗಳಿಂದ ದಲಿತರನ್ನು ವಂಚಿಸಲಾಗಿತ್ತು!

ಶೇ. 100 ಮೀಸಲಾತಿ ಸಲ್ಲ!

ಯಾವುದೇ ಶ್ರೇಣಿಯಲ್ಲಿ ಹುದ್ದೆ ಒಂದೇ ಇದ್ದರೆ, ಅಲ್ಲಿ ಮೀಸಲಾತಿಯನ್ನು ಅಳವಡಿಸಬೇಕೇ ಎಂಬ ಪ್ರಶ್ನೆಯನ್ನು 1998ರಲ್ಲಿ ವಿಚಾರಣೆಗೆ ಎತ್ತಿಕೊಂಡ ಸುಪ್ರೀಂಕೋರ್ಟು (ಫ್ಯಾಕಲ್ಟಿ ಅಸೋಸಿಯೇಷನ್ ಪ್ರಕರಣ), ಇರುವ ಒಂದೇ ಹುದ್ದೆಯನ್ನು ಮೀಸಲಾಗಿರಿಸಿದರೆ, ಶೇ. 100 ಮೀಸಲಾತಿಯಾಗುತ್ತದೆ. ಕಾರಣ, ಹುದ್ದೆ ಒಂದೇ ಇದ್ದರೆ ಅಲ್ಲಿ ಮೀಸಲಾತಿ ಅಳವಡಿಸತಕ್ಕದ್ದಲ್ಲ ಎಂದು ತೀರ್ಪು ನೀಡಿತು. ಎಷ್ಟೋ ಇಲಾಖೆಗಳಲ್ಲಿ ಮೇಲ್ದರ್ಜೆಯ ಹುದ್ದೆ ಒಂದೇ ಆಗಿರುತ್ತದೆ. ಅಲ್ಲೆಲ್ಲ ಮೀಸಲಾತಿ ಅನ್ವಯವಾಗುವುದಿಲ್ಲವೆಂದರೆ, ವ್ಯವಸ್ಥಿತವಾಗಿ ದಲಿತರನ್ನು ಈ ಮೇಲ್ದರ್ಜೆಯ ಹುದ್ದೆಗಳಿಂದ ವಂಚಿಸುವುದು ಎಂದೇ ಅರ್ಥವಲ್ಲವೇ?

ಸೇವಾ ಹಿರಿತನದಲ್ಲಿ ಹಸ್ತಕ್ಷೇಪ

ಅನುಚ್ಛೇದ 309ರ ಅಡಿಯಲ್ಲಿ ರಚಿಸಲಾಗುವ ಸೇವಾನಿಯಮಗಳಿಗೆ ಅನುಸಾರವಾಗಿ ಸರ್ಕಾರಿ ನೌಕರರ ಸೇವಾ ಹಿರಿತನವನ್ನು ನಿರ್ಧರಿಸಲಾಗುತ್ತದೆ. ಇದರ ಪ್ರಕಾರ, ಯಾವುದೇ ಸರ್ಕಾರಿ ನೌಕರರ ಸೇವಾ ಹಿರಿತನವು, ಅವರು ಆ ಹುದ್ದೆಗೆ ನೇಮಕಾತಿ ಅಥವಾ ಬಡ್ತಿ ಮೂಲಕ ಬಂದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ದಿನದಿಂದ ಲೆಕ್ಕಕ್ಕೆ ಬರುತ್ತಿತ್ತು. ಒಂದು ವೇಳೆ ಒಬ್ಬರಿಗಿಂತ ಹೆಚ್ಚು ಜನರು ಬಡ್ತಿ ಹೊಂದಿ, ಒಂದೇ ಶ್ರೇಣಿಯಲ್ಲಿ ಒಂದೇ ದಿನ ಕರ್ತವ್ಯಕ್ಕೆ ವರದಿ ಮಾಡಿಕೊಂಡರೆ, ಅವರ ಪೈಕಿ ಹಿಂದಿನ ಶ್ರೇಣಿಯಲ್ಲಿ ಯಾರು ಮೊದಲು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರೋ ಅವರು ಅಥವಾ ಯಾರು ಜನ್ಮ ದಿನಾಂಕದಲ್ಲಿ ಹಿರಿಯರೋ ಅವರು ಸೇವಾ ಹಿರಿತನ ಹೊಂದುತ್ತಿದ್ದರು. 1990ರಲ್ಲಿ ನೇರ ಭರ್ತಿ ಇಂಜಿನಿಯರುಗಳ ಪ್ರಕರಣದಲ್ಲಿ ಸುಪ್ರೀಂಕೋರ್ಟು ಕೂಡ ಈ ಅಂಶವನ್ನೇ ಎತ್ತಿ ಹಿಡಿದಿತ್ತು.

ಆದರೆ 1995ರಲ್ಲಿ ವೀರಪಾಲ್ ಸಿಂಗ್ ಪ್ರಕರಣದಲ್ಲಿ ಮತ್ತು 1996ರ ಅಜಿತ್‌ಸಿಂಗ್ ಪ್ರಕರಣದಲ್ಲಿ, ಸೇವಾ ಹಿರಿತನದ ನಿಯಮಾವಳಿಗಳನ್ನು ಪ್ರಶ್ನಿಸಲಾಗಿ, ಯಾವುದೇ ಒಂದು ಶ್ರೇಣಿಯ ಬಡ್ತಿಹುದ್ದೆಯಲ್ಲಿನ ಪ.ಜಾತಿ/ ಪಂಗಡದ ಅಭ್ಯರ್ಥಿಯ ಸೇವಾ ಹಿರಿತನವು, ಹಿಂದಿನ ಶ್ರೇಣಿಯಲ್ಲಿ ಅವರಿಗಿಂತ ಹಿರಿಯರಾಗಿದ್ದ ಸಾಮಾನ್ಯ ಅಭ್ಯರ್ಥಿ ಬಡ್ತಿ ಪಡೆದಾಗ, ಕಳೆದು ಹೋಗುತ್ತದೆ ಎಂದು ಸುಪ್ರೀಂಕೋರ್ಟು ತೀರ್ಪು ನೀಡಿತು (ಉದಾಹರಣೆಗೆ 1980ರಲ್ಲಿ ಮೀಸಲು ಅಭ್ಯರ್ಥಿ ಶ್ರೇಣಿ-1ರಲ್ಲಿ ನೇಮಕಗೊಂಡ, 1985ರಲ್ಲಿ ಶ್ರೇಣಿ-2ಕ್ಕೆ ಬಡ್ತಿ ಪಡೆಯುತ್ತಾರೆ. 1979ರಲ್ಲಿ ಶ್ರೇಣಿ-1ರಲ್ಲಿ ನೇಮಕಗೊಂಡ ಸಾಮಾನ್ಯ ಅಭ್ಯರ್ಥಿ 1990ರಲ್ಲಿ ಶ್ರೇಣಿ-2ಕ್ಕೆ ಬಡ್ತಿ ಪಡೆಯುತ್ತಾರೆ. ಆಗ, ಅಂದರೆ 1990ರಲ್ಲಿ, ಶ್ರೇಣಿ-2ರಲ್ಲಿ ಸೇವೆಯಲ್ಲಿ ಹಿರಿಯರಾಗುವವರು ಯಾರು? ಶ್ರೇಣಿ-2ಕ್ಕೆ 1985ರಲ್ಲಿ ಬಂದ ಮೀಸಲು ಅಭ್ಯರ್ಥಿಯೋ ಅಥವಾ ಶ್ರೇಣಿ-2ಕ್ಕೆ 1990ರಲ್ಲಿ ಬಂದ ಸಾಮಾನ್ಯ ಅಭ್ಯರ್ಥಿಯೋ? ಈ ಪ್ರಶ್ನೆಗೆ ಉತ್ತರವಾಗಿ ಸುಪ್ರೀಂ ಕೋರ್ಟು, ಶ್ರೇಣಿ 2ರಲ್ಲಿ ಸಾಮಾನ್ಯ ಅಭ್ಯರ್ಥಿಯೇ ಸೇವೆಯಲ್ಲಿ ಹಿರಿಯರಾಗುತ್ತಾರೆ ಎಂದು ತೀರ್ಪು ನೀಡಿತು.

ಮಾರನೇ ವರ್ಷ ಅಂದರೆ 1996ರಲ್ಲಿ ಅಖಿಲ ಭಾರತ ಶೋಷಿತ ಕರ್ಮಚಾರಿ ಸಂಘ ಪ್ರಕರಣ ಬಂದಾಗ, ಇದೇ ಸುಪ್ರೀಂ ಕೋರ್ಟು, ಒಂದು ವೇಳೆ ಸಾಮಾನ್ಯ ಅಭ್ಯರ್ಥಿ ಬಡ್ತಿ ಪಡೆಯುವ ಹೊತ್ತಿಗೆ, ಮೊದಲು ಬಡ್ತಿ ಪಡೆದಿದ್ದ ಮೀಸಲು ಅಭ್ಯರ್ಥಿ ಇನ್ನೊಂದು ಬಡ್ತಿ ಪಡೆದು ಮುಂದಿನ ಶ್ರೇಣಿಗೆ (ಅಂದರೆ ಶ್ರೇಣಿ-3ಕ್ಕೆ) ಹೋಗಿದ್ದರೆ, ವೀರ್‌ಪಾಲ್‌ಸಿಂಗ್ ಪ್ರಕರಣದಲ್ಲಿ ಮತ್ತು ಅಜಿತ್‌ಸಿಂಗ್ ಪ್ರಕರಣದಲ್ಲಿ ನೀಡಲಾದ ತೀರ್ಪುಗಳು ಅನ್ವಯವಾಗುವುದಿಲ್ಲ ಎಂದು ತೀರ್ಪು ನೀಡಿತು.

1997ರಲ್ಲಿ ಸುಪ್ರೀಂ ಕೋರ್ಟಿನ ಮುಂದೆ ಜಗದೀಶಲಾಲ್ ಪ್ರಕರಣ ಬಂದಾಗ ವೀರಪಾಲ್‌ಸಿಂಗ್ ಪ್ರಕರಣದಲ್ಲಿ ಮತ್ತು ಅಜಿತ್‌ಸಿಂಗ್ ಪ್ರಕರಣದಲ್ಲಿ ನೀಡಲಾದ ತೀರ್ಪುಗಳನ್ನು ವಜಾ ಮಾಡಿ, 1990ರಲ್ಲಿ ನೇರ ಭರ್ತಿ ಇಂಜಿನಿಯರ್ಸ್ ಪ್ರಕರಣದಲ್ಲಿ ನಿರ್ಧರಿಸಲಾದ ಸೇವಾ ನಿಯಮಗಳನ್ನು ಎತ್ತಿ ಹಿಡಿಯಲಾಗಿತ್ತು. ಸೇವಾ ಹಿರಿತನವು ನೇಮಕಾತಿ ಅಥವಾ ಬಡ್ತಿ ಮೂಲಕ ಹೊಸ ಶ್ರೇಣಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ದಿನದಿಂದ ನಿರ್ಧಾರವಾಗುತ್ತದೆ ಎಂದು ತೀರ್ಪು ನೀಡಲಾಯಿತು.

ಸುಪ್ರೀಂ ಕೋರ್ಟು ತದ್ವಿರುದ್ಧ ತೀರ್ಪುಗಳನ್ನು ನೀಡುವ ಸರಣಿ ಇಲ್ಲಿಗೇ ಮುಗಿಯಲಿಲ್ಲ. ಮಾರನೇ ವರ್ಷ 1999ರಲ್ಲಿ ಇನ್ನೊಂದು ಪ್ರಕರಣ ಬಂತು. ಅಜಿತ್‌ಸಿಂಗ್-2 ಪ್ರಕರಣದಲ್ಲಿ ಸುಪ್ರೀಂ ಕೋರ್ಟು, ನೇರ ಭರ್ತಿ ಇಂಜಿನಿಯರ್ಸ್ ಪ್ರಕರಣ ಮತ್ತು ಜಗದೀಶ್‌ಲಾಲ್ ಪ್ರಕರಣಗಳಲ್ಲಿ ನೀಡಲಾದ ತೀರ್ಪುಗಳು ಅಸಿಂಧು ಎಂದು ಹೇಳಿ, 1995 ಮತ್ತು 1996ರಲ್ಲಿ ವೀರಪಾಲ್‌ಸಿಂಗ್ ಮತ್ತು ಅಜಿತ್‌ಸಿಂಗ್ ಪ್ರಕರಣದಲ್ಲಿನ ತೀರ್ಪುಗಳು ಊರ್ಜಿತ ಎಂದು ಘೋಷಿಸಲಾಯಿತು.

1999ರಲ್ಲಿ ಈ ಪ್ರಕರಣದಲ್ಲಿ ದಲಿತ ವರ್ಗಗಳಿಗೆ ಮಾರಕವಾಗುವ ಅನೇಕ ನಿಯಮಗಳನ್ನು ಜಾರಿಗೊಳಿಸಲಾಯಿತು. ಅವುಗಳೆಂದರೆ, ಯಾವುದೇ ಲಿಖಿತ ಪರೀಕ್ಷೆ ಅಥವಾ ಸಂದರ್ಶನದ ಮೂಲಕ ಆಯ್ಕೆಯಾಗದ ಅಭ್ಯರ್ಥಿ ಮೀಸಲು ಅಭ್ಯರ್ಥಿ ಎಂದು ತೀರ್ಪು ನೀಡಿದ ಸುಪ್ರೀಂಕೋರ್ಟು, ಮೀಸಲು ಅಭ್ಯರ್ಥಿ ಕೂಡ ಲಿಖಿತ ಪರೀಕ್ಷೆ ಮತ್ತು ಸಂದರ್ಶನಗಳನ್ನು ಎದುರಿಸಿಯೇ ನೇಮಕಗೊಳ್ಳುತ್ತಾರೆ ಎಂಬ ಸತ್ಯಾಂಶವನ್ನು ಗಮನಿಸಲಿಲ್ಲ.

1987ರ ಜಗನ್ನಾಥನ್ ಪ್ರಕರಣದಲ್ಲಿ ಮತ್ತು 1997ರ ಕುಲದೀಪ್‌ಸಿಂಗ್ ಪ್ರಕರಣದಲ್ಲಿ ಸರ್ಕಾರಕ್ಕೆ ಸುಪ್ರೀಂಕೋರ್ಟು ಮೀಸಲಾತಿ ನೀತಿ ನಿಯಮಗಳನ್ನು ಸರ್ಕಾರವು ಜಾರಿಗೊಳಿಸಬೇಕೆಂಬ ಬಗ್ಗೆ ಆದೇಶ ನೀಡಬಹುದೆಂದು ತೀರ್ಮಾನಿಸಲಾಗಿತ್ತು. ಆದರೆ ಅಜಿತ್‌ಸಿಂಗ್-2 ಪ್ರಕರಣದಲ್ಲಿ, ಮೀಸಲಾತಿ ನೀತಿ ನಿಯಮಗಳನ್ನು ಜಾರಿಗೊಳಿಸಬೇಕೆಂಬ ಬಗ್ಗೆ ಸರ್ಕಾರಕ್ಕೆ ಸುಪ್ರೀಂಕೋರ್ಟು ಆದೇಶ ನೀಡುವಂತಿಲ್ಲ ಎಂದು ತೀರ್ಮಾನಿಸಲಾಯಿತು. ಸರ್ಕಾರ ಮೀಸಲಾತಿ ನೀತಿ ನಿಯಮಗಳನ್ನು ಜಾರಿಗೊಳಿಸದಿದ್ದರೆ ಅದನ್ನು ದಲಿತರು ಸುಪ್ರೀಂ ಕೋರ್ಟಿನ ಮುಂದೆ ಪ್ರಶ್ನಿಸಬಾರದೆಂಬುದು ಈ ತೀರ್ಮಾನದ ಅರ್ಥವೇ?

ಬಡ್ತಿ ಮೀಸಲಾತಿ

ಬಡ್ತಿಯಿಂದ ತುಂಬುವ ಹುದ್ದೆಗಳಲ್ಲಿ ದಲಿತರಿಗೆ ಮೀಸಲಾತಿ ಇರಬೇಕೇ, ಇರಬಾರದೇ ಎಂಬ ವಿಚಾರ ಕಳೆದ ಹತ್ತು ವರ್ಷಗಳಲ್ಲಿ ಭಾರಿ ವಿವಾದವನ್ನು ಎಬ್ಬಿಸಿದೆ. ಸಂವಿಧಾನದ ಅನುಚ್ಛೇದ 16(4)ರಲ್ಲಿ ಸೂಚಿಸಲಾಗಿರುವ ಸೇವಾ ಮೀಸಲಾತಿಯು ನೇರ ನೇಮಕಾತಿ ಮತ್ತು ಬಡ್ತಿ ಹುದ್ದೆಗಳೆರಡಕ್ಕೂ ಅನ್ವಯಿಸುತ್ತದೋ ಅಥವಾ ನೇರ ನೇಮಕಾತಿಗೆ ಮಾತ್ರ ಅನ್ವಯಿಸುತ್ತದೋ ಎಂಬ ವಿಚಾರವನ್ನು ಸುಪ್ರೀಂ ಕೋರ್ಟು ಪರಿಗಣಿಸಿ ತೀರ್ಪು ನೀಡಿದೆ.

ಬಡ್ತಿ ಹುದ್ದೆಯಲ್ಲಿ, ಮೀಸಲಾತಿಯ ಪ್ರಶ್ನೆಯನ್ನು 1962ರಷ್ಟು ಹಿಂದೆಯೇ ಸುಪ್ರೀಂ ಕೋರ್ಟು ರಂಗಾಚಾರಿ ಪ್ರಕರಣದಲ್ಲಿ ಕೈಗೆತ್ತಿಕೊಂಡಿತ್ತು. ಅದರಲ್ಲಿ, ಸಂವಿಧಾನದ ಅನುಚ್ಛೇದ 16(4)ರಲ್ಲಿ, ನೇರ ನೇಮಕಾತಿ ಮತ್ತು ಬಡ್ತಿ ನೇಮಕಾತಿ ಎರಡೂ ಸಂದರ್ಭಗಳಲ್ಲಿ ಮೀಸಲಾತಿ ಒದಗಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಕುರಿತು ಸರ್ಕಾರ ಕ್ರಮ ಕೈಗೊಳ್ಳುವ ಅಧಿಕಾರವನ್ನು ಹೊಂದಿದೆ ಎಂದು ತೀರ್ಮಾನಿಸಲಾಗಿತ್ತು.

1971ರಲ್ಲಿ ಹೀರಾಲಾಲ್, ಪ್ರಕರಣದಲ್ಲಿ ಈ ವಿಷಯ ಮತ್ತೊಮ್ಮೆ ಸುಪ್ರೀಂಕೋರ್ಟಿನ ಮುಂದೆ ಬಂತು. ಆಗ ಬಂದ ತೀರ್ಪು, ಬಡ್ತಿಯಲ್ಲಿ ಮೀಸಲಾತಿ ಒದಗಿಸುವುದು ಸಂವಿಧಾನಕ್ಕೆ ಅನುಗುಣವಾಗೇ ಇದೆ ಎಂದು ಸ್ಪಷ್ಟಪಡಿಸಿತು. ಬಡ್ತಿಗೆ ನಿಗದಿಪಡಿಸಲಾಗಿದ್ದ ಅರ್ಹತೆಗಳನ್ನು ಹೊಂದಿದ್ದ ಮೀಸಲು ಗುಂಪಿನ ಅಭ್ಯರ್ಥಿಗಳ ಕೊರತೆಯಿದೆ ಎಂಬ

ವಾಸ್ತವ ಈ ಹಂತದಲ್ಲಿ ಎದುರಾಯಿತು. ಆಗ ಉನ್ನತ ಹುದ್ದೆಗಳಲ್ಲಿ ಸಾಮಾಜಿಕ ನ್ಯಾಯ ಒದಗಿಸಲಿಕ್ಕಾಗಿ, ಬಡ್ತಿಗೆ ನಿಗದಿಪಡಿಸಲಾಗಿದ್ದ ಅರ್ಹತೆಗಳನ್ನು ಸಡಿಸಲಾಯಿತು. (ಕೆಲವೊಂದು ರಿಯಾಯ್ತಿಗಳನ್ನೂ ಒದಗಿಸಲಾಯಿತು). ಹೀಗಾಗಿ ಉನ್ನತ ಹುದ್ದೆಗಳಿಗೂ ದಲಿತರು ತಲುಪುವುದು ತಕ್ಕಮಟ್ಟಿಗೆ ಸಾಧ್ಯವಾಯಿತು.

1981ರಲ್ಲಿ, ಶೋಷಿತ ಕರ್ಮಚಾರಿ ಪ್ರಕರಣದಲ್ಲಿ ಬಡ್ತಿಗಾಗಿ ಅರ್ಹತೆಗಳನ್ನು ಸಡಿಸಲಾದದ್ದನ್ನು ಹಾಗೂ ಕೆಲವೊಂದು ರಿಯಾಯ್ತಿಗಳನ್ನು ಒದಗಿಸಿದ್ದನ್ನು ಪ್ರಶ್ನಿಸಿದಾಗ, ಈ ಸಡಿಲಿಕೆ/ರಿಯಾಯ್ತಿಗಳು ಸಮರ್ಥನೀಯ ಎಂದು ಸುಪ್ರೀಂಕೋರ್ಟು ತೀರ್ಪು ನೀಡಿತು. 1986ರಲ್ಲಿ ಜಗನ್ನಾಥನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟು, ನೇರ ನೇಮಕಾತಿ ಹಾಗೂ ಬಡ್ತಿಯಲ್ಲಿ ಮೀಸಲಾತಿ ಒದಗಿಸುವ ಸರ್ಕಾರಿ ನೀತಿಯನ್ನು ಎತ್ತಿಹಿಡಿಯಿತು.

ಇನ್ನೊಮ್ಮೆ ಸಂವಿಧಾನ ತಿದ್ದುಪಡಿ

1962ರಿಂದ ನಂತರದ ಮೂವತ್ತು ವರ್ಷಗಳವರೆಗೆ ಹಲವು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟು ತೀರ್ಮಾನಿಸಿದ್ದ ಈ ವಿಷಯವನ್ನು 1992ರಲ್ಲಿ ಇಂದ್ರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟು, ಹಿಂದಿನ 30 ವರ್ಷಗಳಲ್ಲಿ ಹಲವು ಪ್ರಕರಣಗಳಲ್ಲಿ ತಾನೇ ತೀರ್ಮಾನಿಸಿದಕ್ಕೆ ವಿರುದ್ಧವಾಗಿ ತೀರ್ಮಾನಿಸಿತು. ಸಂವಿಧಾನದ ಅನುಚ್ಛೇದ 16(4)ರ ಮೇರೆಗೆ ಒದಗಿಸಬಹುದಾದ ಮೀಸಲಾತಿ, ಅರ್ಹತೆಗಳಲ್ಲಿ ಸಡಿಲಿಕೆ ಹಾಗೂ ಈ ಸಂಬಂಧದಲ್ಲಿ ಒದಗಿಸಬಹುದಾದ ರಿಯಾಯ್ತಿಗಳು ನೇರ ನೇಮಕಾತಿಗಷ್ಟೇ ಸಿಂಧು ಎಂದೂ, ಬಡ್ತಿ ನೇಮಕಾತಿಗೆ ಸಿಂಧುವಲ್ಲ ಎಂದೂ ತೀರ್ಪು ನೀಡಿತು. ಈ ತೀರ್ಪಿನಿಂದ ದೇಶದ ಲಕ್ಷಾಂತರ ದಲಿತ ನೌಕರರಿಗೆ ಅನ್ಯಾಯವಾಯಿತು. ಇದನ್ನು ಸರಿಪಡಿಸಲು ಸಂವಿಧಾನದ ಅನುಚ್ಛೇದ 16(4)ಕ್ಕೆ ತಿದ್ದುಪಡಿ ತಂದು ಅನುಚ್ಛೇದ 16(4) (ಎ) ಸೇರ್ಪಡೆ ಮಾಡಬೇಕಾಯಿತು.

ಸಂವಿಧಾನ ತಿದ್ದುಪಡಿಯಾದ ಬಳಿಕ ಈ ಬಗ್ಗೆ ಅಗತ್ಯವಾಗಿ ಹೊರಡಿಸಬೇಕಾಗಿದ್ದ ಕಾರ್ಯಾಂಗದ ಆದೇಶ 1997ರಲ್ಲಿ ಹೊರಬಿತ್ತು. ವರ್ಷಗಳ ಕಾಲ ತಡವಾಗಿ ಬಂದ ಈ ಆದೇಶ ನ್ಯೂನತೆಗಳನ್ನು ಒಳಗೊಂಡಿತ್ತು. ಆ ಆದೇಶವು ಬಡ್ತಿಯಲ್ಲಿ ಮೀಸಲಾತಿ ಮುಂದುವರೆಯುತ್ತದೆ ಎಂದು ಸ್ಪಷ್ಟಪಡಿಸಿತಾದರೂ, ಬಡ್ತಿಗೆ ನಿಗದಿಪಡಿಸಲಾದ ಅರ್ಹತೆಗಳಲ್ಲಿ ದಲಿತ ನೌಕರರಿಗೆ ಸಡಿಲಿಕೆ/ರಿಯಾಯ್ತಿ ಒದಗಿಸುವ ಬಗ್ಗೆ ಮಾತಾಡಲೇ ಇಲ್ಲ. ಹೀಗಾಗಿ ಈ ಆದೇಶವು ಹೊರಬಂದೂ ದಲಿತ ನೌಕರರಿಗೆ ಹೆಚ್ಚಿನ ನ್ಯಾಯವನ್ನು ಒದಗಿಸಲಿಲ್ಲ.

ಮತ್ತೊಮ್ಮೆ ಸಂವಿಧಾನ ತಿದ್ದುಪಡಿ

ಈ ಅಂಶವನ್ನು ವಿರೋಧಿಸಿ ದೇಶಾದ್ಯಂತ ದಲಿತ ಸಂಘ-ಸಂಸ್ಥೆ-ಸಂಘಟನೆ ಪಕ್ಷಗಳು ದನಿ ಎತ್ತಿದವು. ಪ್ರಧಾನಿ-ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಯಿತು. ದಲಿತ ವಿರೋಧಿ ಸರ್ಕಾರದ ನೀತಿಯನ್ನು ಕಟುವಾಗಿ ಟೀಕಿಸಲಾಯಿತು. ಪರಿಣಾಮವಾಗಿ ಸಂವಿಧಾನದ ಅನುಚ್ಛೇದ 16(4)ಕ್ಕೆ ಮತ್ತೊಂದು ತಿದ್ದುಪಡಿ ತಂದು, 16(4) (ಬಿ) ಅನುಚ್ಛೇದವನ್ನು ಸೇರಿಸಲಾಯಿತು. ಅನಂತರ, 1997ಕ್ಕೂ ಪೂರ್ವದಲ್ಲಿ ಬಡ್ತಿ ನೇಮಕಾತಿಯಲ್ಲಿ ಅರ್ಹತೆಯಲ್ಲಿ ಸಡಿಲಿಕೆ-ರಿಯಾಯ್ತಿ ಮುಂದುವರೆಯುತ್ತವೆ ಎಂಬ ಕಾರ್ಯಾಂಗದ ಆದೇಶ ಹೊರಬಿತ್ತು.

ತರ್ಕರಹಿತ ತೀರ್ಮಾನ!

ಸುಪ್ರೀಂ ಕೋರ್ಟು ಹಲವು ಪ್ರಕರಣಗಳಲ್ಲಿ ತನ್ನ ತೀರ್ಪಿನ ಸಮರ್ಥನೆಗೆ ಬೆಂಬಲವಾಗಿ ಸಂವಿಧಾನದ ಅನುಚ್ಛೇದ 335ನ್ನು ಬಳಸಿಕೊಂಡಿದೆ. ಆದರೆ ಈ ಬಳಕೆಯಲ್ಲಿನ ಸುಪ್ರೀಂ ಕೋರ್ಟು ಏಕರೂಪದ ಅರ್ಥವನ್ನು ಈ ಅನುಚ್ಛೇದವನ್ನು ಪಡೆದಿಲ್ಲ. ಅನುಚ್ಛೇದ 16(4)ರಲ್ಲಿ "ಸರ್ಕಾರಿ ಸೇವೆಗೆ ನೇಮಕ ಮಾಡುವಲ್ಲಿ" ಎಂಬ ಪದಗಳಿವೆ. ಹಾಗೆಯೇ ಅನುಚ್ಛೇದ 335ರಲ್ಲೂ ಈ ಪದಗಳಿವೆ. ಈ ಪದಗಳು ನೇರ ನೇಮಕಾತಿ ಮತ್ತು ಬಡ್ತಿ ಎರಡಕ್ಕೂ ಅನ್ವಯವಾಗುತ್ತವೆಯೇ ಎಂಬ ಪ್ರಶ್ನೆ ಬಂದಾಗ ಸುಪ್ರೀಂ ಕೋರ್ಟು, ಅನುಚ್ಛೇದ 16(4)ನ್ನು ಉಲ್ಲೇಖಿಸಿ, ಈ ಪದಗಳು ನೇರ ನೇಮಕಾತಿಗೆ ಮಾತ್ರ ಅನ್ವಯವಾಗುತ್ತವೆ ಎಂದು ತೀರ್ಮಾನಿಸುತ್ತದೆ. ಆದರೆ ಇದೇ ಸುಪ್ರೀಂ ಕೋರ್ಟು ಇನ್ನೊಂದು ಸಂದರ್ಭದಲ್ಲಿ ಅನುಚ್ಛೇದ 335ನ್ನು ಉಲ್ಲೇಖಿಸಿ, ಈ ಪದಗಳು ನೇರ ನೇಮಕಾತಿ ಮತ್ತು ಬಡ್ತಿ ಎರಡಕ್ಕೂ ಅನ್ವಯವಾಗುತ್ತದೆ ಎಂದು ತೀರ್ಮಾನಿಸುತ್ತದೆ!

ಸರ್ಕಾರಿ ಸೇವೆಯ ಪ್ರತಿ ಹಂತದಲ್ಲಿ ದಲಿತರಿಗೆ ಕಡ್ಡಾಯ ಕನಿಷ್ಠ ಪ್ರಾತಿನಿಧ್ಯ ಒದಗಿಸಲು ಸರ್ಕಾರಕ್ಕೆ ಆದೇಶ ನೀಡುವಂತೆ ಕೋರಿದಾಗ ಸುಪ್ರೀಂಕೋರ್ಟು, ಕಡ್ಡಾಯ ಕನಿಷ್ಠ ಪ್ರಾತಿನಿಧ್ಯ ಒದಗಿಸುವಾಗ ಅಭ್ಯರ್ಥಿಗಳ ಪ್ರತಿಭೆ ಮತ್ತು ದಕ್ಷತೆಯನ್ನು ನೋಡಬೇಕಾಗುತ್ತದೆ ಎಂದು ಹೇಳುತ್ತದೆ. ಆದರೆ ಉನ್ನತ ಹುದ್ದೆಗಳಿಗೆ ನೇಮಕಾತಿ/ಬಡ್ತಿ ನೀಡುವಾಗ ಕೇವಲ ಸೇವಾ ಹಿರಿತನವೊಂದನ್ನೇ ಅಲ್ಲದೆ ಪ್ರತಿಭೆ ಮತ್ತು ದಕ್ಷತೆಗಳನ್ನೂ ಪರಿಗಣಿಸಬೇಕೆಂಬುದನ್ನು ಸುಪ್ರೀಂ ಕೋರ್ಟು ಮನಗಾಣುವುದಿಲ್ಲ. ಇದೊಂದು ತರ್ಕರಹಿತ ತೀರ್ಮಾನವಲ್ಲವೇ?

ಮೂಲಭೂತ ಕಾರಣಗಳೇನು?

ಸುಪ್ರೀಂ ಕೋರ್ಟಿನ ತೀರ್ಪುಗಳು ಸಾಮಾಜಿಕ ನ್ಯಾಯ ನೀಡುವಲ್ಲಿ ವಿಫಲವಾಗಿವೆ ಎಂಬುದು ಸ್ಥೂಲವಾಗಿ ಸಾಬೀತಾಗಿರುವ ಸಂಗತಿ. ಇದಕ್ಕೆ ಮೂಲಭೂತ ಕಾರಣಗಳೇನು?

ಸಂವಿಧಾನದ ಮೀಸಲಾತಿ ನೀತಿಯಿಂದ ನ್ಯಾಯಾಂಗವು ಹೊರತಾಗಿರುವ ಕಾರಣಕ್ಕೆ ನ್ಯಾಯಾಂಗದಲ್ಲೇ ಸಾಮಾಜಿಕ ನ್ಯಾಯ ಶೂನ್ಯವಾಗಿದೆ. ಭಾರತದ ಬಹುಜನ ಸಮುದಾಯಗಳಿಗೆ ನ್ಯಾಯಾಂಗದಲ್ಲಿ-ವಿಶೇಷವಾಗಿ ಹೈಕೋರ್ಟು, ಸುಪ್ರೀಂಕೋರ್ಟುಗಳಲ್ಲಿ-ಪ್ರಾತಿನಿಧ್ಯವೇ ದೊರಕಿಲ್ಲ. ಸ್ವತಂತ್ರ ಭಾರತದಲ್ಲಿ 50 ವರ್ಷಗಳ ನ್ಯಾಯಾಂಗದ ಚರಿತ್ರೆಯಲ್ಲಿ ಕೇವಲ ಇಬ್ಬರು ದಲಿತರು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಹೊತ್ತಿನಲ್ಲಿ ಸುಪ್ರೀಂಕೋರ್ಟಿನಲ್ಲಿ ಒಟ್ಟು 26 ಮಂದಿ ನ್ಯಾಯಾಧೀಶರಿದ್ದು, ಈ ಪೈಕಿ ಇಬ್ಬರು ಮಾತ್ರ ದಲಿತ ವರ್ಗದವರಾಗಿದ್ದಾರೆ.

ಸಲ್ಲದ ವಿವಾದ

ನ್ಯಾಯಾಂಗದಲ್ಲಿ ಸಾಮಾಜಿಕ ನ್ಯಾಯವನ್ನು ಅಳವಡಿಸುವುದು ಸಮುಚಿತ. ಇದರಿಂದ ಭಾರತದ ಬಹುಸಂಖ್ಯಾತ ದುರ್ಬಲ ವರ್ಗಗಳವರಿಗೆ ನ್ಯಾಯಾಂಗದ ಮೇಲೆ ಭರವಸೆಯೂ ಉಳಿಯುತ್ತದೆ. ಭಾರತದ ಎಲ್ಲಾ ಜನಸಮುದಾಯಗಳಿಗೆ ಪ್ರಾತಿನಿಧ್ಯ ದೊರೆತು ನ್ಯಾಯಾಂಗದಿಂದ ಜನಪರ ನ್ಯಾಯದಾನ ನಡೆದಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲಿನ ನಂಬಿಕೆ ಹೆಚ್ಚುತ್ತದೆ.

ಈ ಹಿನ್ನೆಲೆಯಲ್ಲಿಯೇ 1999ರಲ್ಲಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರ ಚಿಂತನೆ ಸಾರ್ವಜನಿಕ ಗೊಂಡಾಗ, ಅದಕ್ಕೆ ಥರಾವರಿ ಬಣ್ಣಗಳನ್ನು ನೀಡಲಾಯಿತು. ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹರಾದವರ ಹೆಸರುಗಳಿದ್ದ ಪಟ್ಟಿಯು ತಮ್ಮ ಅನುಮೋದನೆಗಾಗಿ ಬಂದಾಗ, ರಾಷ್ಟ್ರಪತಿ ನಾರಾಯಣನ್ ಅವರು, ಇಂಥ ನೇಮಕಾತಿ ಸಂದರ್ಭಗಳಲ್ಲಿ ಸಾಮಾಜಿಕ ನ್ಯಾಯವನ್ನು ಪರಿಗಣಿಸಲು ಸೂಚಿಸಿದರು. ಇದು ಯಾವ ರೀತಿಯಲ್ಲೂ ಸಮರ್ಥನೀಯವಾಗಿತ್ತು. ಆದರೂ ಈ ಬಗ್ಗೆ ಸಲ್ಲದ ವಿವಾದ ಸೃಷ್ಟಿಸಲಾಯ್ತು.

ನ್ಯಾಯಾಂಗದ ತಥಾಕಥಿತ "ಪರಮ ಪವಿತ್ರ" ಹಣೆಪಟ್ಟಿಯನ್ನು ಇತ್ತೀಚಿನ ಸಂಸದೀಯ ಸಮಿತಿಯೊಂದು ಹಿಗ್ಗಾಮುಗ್ಗಾ ಹರಿದು ಹಾಕಿದೆ. "ನ್ಯಾಯಾಧೀಶರ ನೇಮಕಾತಿ" ವಿಷಯ ಕುರಿತು ವ್ಯಾಪಕ ಅಧ್ಯಯನ ನಡೆಸಿದ ಈ ಸಮಿತಿ, ನ್ಯಾಯಾಂಗ ವ್ಯವಸ್ಥೆಯಲ್ಲಿರುವ ಜಾತೀಯತೆಯನ್ನು ಜಾಲಾಡಿಸಿದೆ. ದಶಕಗಳಿಂದ ದಲಿತರನ್ನು ಹಾಗೂ ಶೂದ್ರರನ್ನು ನ್ಯಾಯಾಂಗದಿಂದ ದೂರ ಇಡುವ ಮೂಲಕ ನ್ಯಾಯಾಂಗ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆ/ ಜಾತೀಯತೆಯನ್ನು ಆಚರಿಸಿಕೊಂಡು ಬರಲಾಗಿದೆ ಎಂದು ಈ ಸಮಿತಿ ಕಟುವಾಗಿ ಟೀಕಿಸಿದೆ.

"ಪರಮ ಪವಿತ್ರ"!

ನ್ಯಾಯಾಂಗ ಒಂದು ಹಂತದವರೆಗಷ್ಟೇ ಪವಿತ್ರ. ಅದು "ಪರಮ ಪವಿತ್ರ" ಸಂಸ್ಥೆಯಾಗಬೇಕಿಲ್ಲ. ಭಾರತೀಯರ ಹಿತಕ್ಕಾಗಿ ರೂಪುಗೊಂಡಿರುವ ಹಲವು ಮುಖ್ಯ ಸಂಸ್ಥೆಗಳಲ್ಲಿ ಅದೂ ಒಂದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಚಿತವಾಗಿರುವ ಎಲ್ಲಾ ಸಂಸ್ಥೆಗಳಲ್ಲಿ ಶಾಸಕಾಂಗವೇ ಸರ್ವೋಚ್ಚ ಎಂಬುದು ಮಸುಕಾಗಕೂಡದು.

ಈ ಹಿನ್ನೆಲೆಯಲ್ಲಿ ಭಾರತದ ಬಹುಸಂಸ್ಕೃತಿಗಳ ಲೇಶ ಮಾತ್ರ ಸ್ವರೂಪವನ್ನಾದರೂ ಹೊಂದಿರುವ ಸಂಸ್ಥೆಯಾಗಿ ನಾವು ಶಾಸಕಾಂಗವನ್ನೇ ಉದಾಹರಿಸಬೇಕಾಗುತ್ತದೆ. ನ್ಯಾಯ-ಅನ್ಯಾಯ, ದಕ್ಷತೆ-ಅದಕ್ಷತೆ, ಪ್ರತಿಭೆ-ಮೊದ್ದುತನ ಮುಂತಾದವುಗಳ ನಿಖರ ಅರ್ಥ ವಿಸ್ತಾರವನ್ನು ಮಾಡಲು ಶಾಸಕಾಂಗವೇ ಸರ್ವೋಚ್ಚ ಸ್ಥಾನವಾಗುವುದು ಸೂಕ್ತ.

ಅಸ್ತಿತ್ವ ಸಾರ್ಥಕ

ಭಾರತಕ್ಕೆ ಬೇಕಿರುವುದು ಜನಹಿತ ಕಾಪಾಡುವಂಥ ಇಚ್ಛಾಶಕ್ತಿಯನ್ನು ಹೊಂದಿರುವ ನ್ಯಾಯಾಂಗ. ಇಂದಿನ ನಮ್ಮ ನ್ಯಾಯಾಂಗ ಇಂಥ' ಇಚ್ಛಾಶಕ್ತಿಯನ್ನು ಮೈಗೂಡಿಸಿಕೊಂಡು, ಸಮಸ್ತ ಶೋಷಿತ ಭಾರತೀಯರ ಹೃದಯವನ್ನು ತಟ್ಟಿದಾಗಲೇ ಅದರ ಅಸ್ತಿತ್ವ ಸಾರ್ಥಕವಾಗುತ್ತದೆ. ●

"ಜಾಗತೀಕರಣದಿಂದ" - ದಲಿತರ ವಿಮೋಚನೆ

ಜಾಗತೀಕರಣದ ವಿರುದ್ಧ ಮಾತನಾಡದೆ ಇರುವ ದಲಿತರು ಈ ದೇಶದಲ್ಲೆ ಇಲ್ಲ. ಜಾಗತೀಕರಣವನ್ನು ಅರ್ಥಮಾಡಿಕೊಳ್ಳದಿರುವುದು ನಮ್ಮ ಮಿತಿ ಅನ್ನಿಸುತ್ತದೆ. ನಾನು ಜಾಗತೀಕರಣವನ್ನು ಬೇರೆಯ ದೃಷ್ಟಿಕೋನದಲ್ಲಿ ನೋಡಿ ಇದರಿಂದ ಮಾತ್ರ ನಮ್ಮ ವಿಮೋಚನೆ ಸಾಧ್ಯ ಎನ್ನುತ್ತಿದ್ದೇನೆ.

'ಜಾಗತೀಕರಣ ಎಂದರೆ ಏನು? ವಿಶ್ವ ವ್ಯಾಪಾರದಲ್ಲಿ ಪ್ರತಿ ದೇಶವು ಭಾಗವಹಿಸುವುದು. ಬೇರೆ ದೇಶದಲ್ಲಿ ವ್ಯಾಪಾರ ಮಾಡುವುದು ಈ ರೀತಿ ವ್ಯಾಪಾರದಲ್ಲಿ ಮೋಸವಾಗದ ಹಾಗೇ ಎಲ್ಲ ದೇಶಗಳು ಸೇರಿ ಒಂದು ಒಪ್ಪಂದವನ್ನು ಮಾಡಿಕೊಂಡಿವೆ. ಬೇರೆ ದೇಶದಲ್ಲಿ ಹೋಗಿ ಬಂಡವಾಳ ಹೂಡಿ ವ್ಯಾಪಾರ-ಕಾರ್ಖಾನೆ ನಡೆಸುವುದು ಈ ಜಾಗತೀಕರಣ. ಜಾಗತೀಕರಣ ಸುಮ್ಮನೆ ಬರಲಿಲ್ಲ. ವಿಶ್ವಸಂಸ್ಥೆಯಲ್ಲಿರುವ 180 ರಾಷ್ಟ್ರಗಳು ಚರ್ಚಿಸಿ, ಮಧ್ಯೆ ವಿಶ್ವ ರಾಷ್ಟ್ರ ಸ್ಥಾಪನೆಯತ್ತ ನಡೆಯಲು, ವಿಶ್ವದ ಬಿಡುಗಡೆಗೆ ಈ ಜಾಗತೀಕರಣದಲ್ಲಿ ಪಾಲ್ಗೊಂಡಿವೆ. ಭಾರತ ಒಂದೇ ಜಾಗತೀಕರಣಗೊಳ್ಳುತ್ತಿಲ್ಲ. ಹಾಗೇ ನೋಡಿದರೆ ನಾವೇ ತಡವಾಗಿ ಜಾಗತೀಕರಣಗೊಳ್ಳುತ್ತಿರುವುದು.

ಪ್ರಬಲ ಕಮ್ಯುನಿಷ್ಟ್ ರಾಷ್ಟ್ರವಾದ ಚೀನಾದಲ್ಲಿ ಬೇರೆ ಯಾವುದೇ ರಾಷ್ಟ್ರದಲ್ಲಿ ಇಲ್ಲದಷ್ಟು ಹೆಚ್ಚು ಜಾಗತೀಕರಣಗೊಂಡಿದೆ. ಸುಮಾರು 60 ಸಾವಿರ ಕೋಟಿ ಹಣ ಬಂಡವಾಳ ಹೂಡಲಾಗಿದೆ. ಪ್ರಜಾಪ್ರಭುತ್ವ ಭಾರತದಲ್ಲಿ ಕೇವಲ ಹತ್ತು ಸಾವಿರ ಕೋಟಿ ದಾಟಿಲ್ಲ.

ನಮ್ಮ ಸ್ವಾತಂತ್ರ್ಯದ ಸಮಯ 1947ರಲ್ಲಿ ನಮಗಿಂತ ಹಿಂದುಳಿದಿದ್ದ ರಾಷ್ಟ್ರಗಳಾದ ಸಿಂಗಾಪೂರ್, ದಕ್ಷಿಣ ಕೊರಿಯಾ, ಹಾಂಕಾಂಗ್ ಮುಂತಾದ ರಾಷ್ಟ್ರಗಳು ಇಂದು ಮುದುವರೆದ ರಾಷ್ಟ್ರಗಳಾಗಿವೆ. ಭಾರತ ಇನ್ನೂ ಮುಂದುವರೆಯುತ್ತಿರುವ ರಾಷ್ಟ್ರ. ಕಾರಣ ಆ ದೇಶಗಳಲ್ಲಿ ಇತರ ದೇಶಗಳು ಹೋಗಿ ಹಣವನ್ನು ಹೂಡಿ ಕೈಗಾರಿಕೆಗಳನ್ನು ಸ್ಥಾಪಿಸಿವೆ. ನಾವು 1991 ರಿಂದ ಈಚೆಗೆ ವಿಶ್ವ ಬಂಡವಾಳ ಹೂಡಿಕೆಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿರುವುದು. ಅಲ್ಲಿ ಬೇಗ ಜಾಗತೀಕರಣದಿಂದ ಜನತೆ ಮುಂದುವರೆಯಲು ಸಾಧ್ಯವಾಯಿತು. ಇವುಗಳ ಉದಾಹರಣೆಯಿಂದಲೇ ಭಾರತವು ಜಾಗತೀಕರಣಕ್ಕೆ ಮುಂದಾಯಿತು. ಮತ್ತೆ ನಮಗೆ ಬೇರೆ ದಾರಿಯೇ ಇರಲಿಲ್ಲ ಮುಂದುವರೆಯಲು.

ಸುಳ್ಳು ಜಾತಿ ಪತ್ರ ಪಡೆದು ನೌಕರಿಯನ್ನು ಎಷ್ಟು ಜನ ಪಡೆದಿಲ್ಲ. ಅದನ್ನ ನಾವು ನಿಲ್ಲಿಸಿದ್ದೇವೆಯೇ. ಸರಿಯಾದ ಮೀಸಲಾತಿ ನಡೆಯುತ್ತಿದೆಯೇ. ಅದನ್ನ ನಾವು ಕೇಳಿದ್ದೇವೆಯೇ? ಮೀಸಲಾತಿ ನಮ್ಮ ವಿಮೋಚನೆಗೆ ಒಂದು ಅಸ್ತ್ರ ಅಷ್ಟೆ. ಅದರಿಂದಲೇ ಎಲ್ಲ ಸಾಧ್ಯವಿಲ್ಲ. ಮೀಸಲಾತಿಯಿಂದ ನಮ್ಮ ಜನಾಂಗಕ್ಕೆ ಅಷ್ಟೆ ದುಷ್ಪರಿಣಾಮಗಳಿವೆ ಎಂಬುದನ್ನು ಮರೆಯಬಾರದು. ಅದು ನಮ್ಮ ಸ್ಪರ್ಧಾತ್ಮಕ ಜೀವನಕ್ಕೆ ಕೊಡಲಿ ಪೆಟ್ಟು, ಈಗಿನ ಸಮಾಜವೇ ಸ್ಪರ್ಧಾತ್ಮಕ ಜೀವನ. ಅಲ್ಲಿ ಭಾಗಿಗಳಾಗಿದ್ದರೆ ನಾವು ಮತ್ತೆ 'ಭಿಕ್ಷುಕ'ರಾಗೇ ಇರಬೇಕಾಗುತ್ತದೆ. ನಮ್ಮ ಜನಾಂಗವನ್ನು ಸ್ಪರ್ಧಾತ್ಮಕ ಮಾಡಿ ಮುಖ್ಯ ವಾಹಿನಿಗೆ ಬಂದಾಗಲೇ ನಮ್ಮ ವಿಮೋಚನೆ ಅಲ್ಲಿಯವರೆಗೆ ಏನು ಸಾಧ್ಯವಿಲ್ಲ. ಈ ದಿಕ್ಕಿನಲ್ಲಿ ಜನಾಂಗ ಯೋಚಿಸಲಿ.

ದಲಿತರ ವಿಮೋಚನೆಯಾಗುವುದು ಮೇಲ್ಜಾತಿಯವರು ವಿಮೋಚನೆ ಪಡೆಯುವುದರಿಂದ, ಮೇಲ್ಜಾತಿಯವರು ವಿಶ್ವ ಮಾನವ ಗುಣಗಳನ್ನು ಬೆಳೆಸಿಕೊಂಡು ಅವರು ಪಾಶ್ಚಾತ್ಯೀಕರಣಗೊಂಡು, ಮಾನವ ಧರ್ಮದತ್ತ ಅವರು ನೋಡುವವರೆಗೆ ನಮ್ಮ ವಿಮೋಚನೆ ಎಲ್ಲಿ? ಹಾಗಾದರೆ ಮೇಲ್ಜಾತಿಯ ವಿಮೋಚನೆ ಹೇಗೆ ಸಾಧ್ಯ, ನಮ್ಮ ದೇಶದ ಸುತ್ತ ಗೋಡೆ ಕಟ್ಟಿ ಯಾರೂ ಇಲ್ಲಿ ಬರುವುದು ಬೇಡ ಎಂದರೆ ಇತರ ದೇಶಗಳಂತೆ ನಾವು ಆಗುವುದು ಯಾವಾಗ. ಅದಕ್ಕೆ ಬೇಕು ಜಾಗತೀಕರಣದಂತಹ ಮಾರ್ಗ.

ಭಾರತದಲ್ಲಿ ಯಥೇಚ್ಛ ಮಾನವ ಶಕ್ತಿಯೊಂದಿದೆ. ಬೇರೆ ಕಡೆಗಿಂತ ಬಹಳ ಕಡಿಮೆ ದರದಲ್ಲಿ ಮಾನವ ಶಕ್ತಿ ಲಭ್ಯವಿದೆ. ನೈಸರ್ಗಿಕ ಸಂಪತ್ತಿಗೂ ಕಡಿಮೆ ಇಲ್ಲ. ಜೊತೆಗೆ, ನಮ್ಮಲ್ಲಿರುವ ಶಕ್ತಿಯು ಅನವಶ್ಯಕವಾಗಿ ದುರ್ಬಳಕೆ ಮತ್ತು ನಷ್ಟವಾಗುತ್ತಿದೆ.

ಇನ್ನು ಹಳೇಕಾಲದ ನೇಗಿಲಿನ ಹಿಂದೆ ಬಿದ್ದು ನಮ್ಮ ದೇಶದ ಶೇಕಡ 70 ಜನ ಕೃಷಿಯಲ್ಲಿ ತಮ್ಮ ಜೀವನ ತಳ್ಳುತ್ತಾರೆ. ಅಮೇರಿಕಾ-ಜಪಾನ್-ಫ್ರಾನ್ಸ್ ಯಾವುದೇ ಮುಂದುವರೆದ ರಾಷ್ಟ್ರದಲ್ಲಿ ಶೇಕಡಾ ಮೂರರಷ್ಟು ಮಾತ್ರ ಜನ ಕೃಷಿಯಲ್ಲಿ ತೊಡಗಿ, ಬೇರೆ ದೇಶಗಳಿಗೂ ಆಹಾರವನ್ನು ದಾನವಾಗಿ ಕೊಡುವಷ್ಟು ಬೆಳೆಯುತ್ತಾರೆ, ನಾವು!

ಜಾಗತೀಕರಣದಿಂದ ಮೇಲ್ಜಾತಿಯವರು ಉದ್ಯೋಗ ಪಡೆದು, ಬೇರೆ ದೇಶಕ್ಕೆ ಹೋಗಿ ಸ್ಪರ್ಧಾತ್ಮಕ ಜೀವನಕ್ಕೆ ಹೋಗಿ ಅವರು ಸಾಹುಕಾರರಾದರೆ ಸ್ವಾಭಾವಿಕವಾಗಿ ಪಾಶ್ಚಿಮಾತ್ಯೀಕರಣಕ್ಕೆ ಒಳಗಾಗುವುದರಿಂದ ಅವರಲ್ಲಿ ವಿಮೋಚನೆ ಸಾಧ್ಯವಿದೆ. ಜಾಗತೀಕರಣದಿಂದ ಸಾಹುಕಾರ ಹೆಚ್ಚು ಸಾಹುಕಾರನಾದರೂ ಅವನು ಪಾಶ್ಚಿಮಾತ್ಯೀಕರಣಕ್ಕೆ ಒಳಗಾಗುತ್ತಾನೆ. ಅಂದರೆ ಹಿಂದೂ-ಜಾತಿ ಪದ್ಧತಿಯಿಂದ ದೂರ ಹೋಗುತ್ತಾನೆ ಎಂತಲೇ ಅರ್ಥ.

'ಜಾಗತೀಕರಣದಿಂದ ರಾಷ್ಟ್ರಗಳ ನಡುವಿನ ಅಂತರ ಕಡಿಮೆಯಾಗಿ-ಮಾನವ ಧರ್ಮ-ವಿಶ್ವ ಸರ್ಕಾರ ಸ್ಥಾಪನೆಯತ್ತ ಒಂದು ಹೆಜ್ಜೆ. ದಲಿತರದಲ್ಲಿ ಹೆಚ್ಚು ವಿದ್ಯಾಭ್ಯಾಸ-ಬಂಡವಾಳ ಇಲ್ಲದೇ ಇರುವುದರಿಂದ ನಾವು ಹೆಚ್ಚು ಭಾಗಿಗಳಾಗಲು ಸಾಧ್ಯವಿಲ್ಲ ನಿಜ. ಆದರೆ ನಮ್ಮ ಮೇಲಿರುವವರ ಭಾಗಿಗಳಾಗಿ ಮುಂದೆ ಹೋದರೆ ಆ ಜಾಗಕ್ಕೆ ಮುಂದೆ ಬರುವುದೇ ನಾವು. ಅವರು ಅಲ್ಲೆ ಇದ್ದರೆ ನಾವು ಮುಂದೆ ಬರುವುದು ಹೇಗೆ.

ಆರ್ಥಿಕ ಪ್ರಗತಿಯೊಂದಿಗೆ, ಸಾಮಾಜಿಕ ಬದಲಾವಣೆ- ಎಲ್ಲರ ವಿಮೋಚನೆ ಅಡಗಿದೆ. ಇಲ್ಲದಿದ್ದರೆ ಏನೂ ಸಾಧ್ಯವಿಲ್ಲ. ಆರ್.ಎಸ್.ಎಸ್.ನವರು ಏನೇ ಮಾಡಲಿ ಅವರ ಬ್ರಾಹ್ಮಣ ರಾಷ್ಟ್ರ ಸ್ಥಾಪನೆ ಸಾಧ್ಯವಿಲ್ಲ. ಈ ದೇಶದಲ್ಲಿರುವ ಎಷ್ಟು ಜನ ಬ್ರಾಹ್ಮಣರು ಆರ್.ಎಸ್.ಎಸ್. ಜತೆ ಇದ್ದಾರೆ, ಬ್ರಾಹ್ಮಣರಲ್ಲಿ ಆರ್ಥಿಕ ಪ್ರಗತಿಯಾದರೆ ಅವರು ಪಾಶ್ಚಿಮಾತ್ಯೀಕರಣಗೊಂಡು ಅಸಂಸ್ಕೃತಿಯತ್ತವಾಲಿ ವಿದೇಶಿಗಳಿಗೆ ಹೋಗಿ ನೆಲೆಸಲು ಇಷ್ಟಪಡುತ್ತಾರೆ. ಇವತ್ತು ಬೆಂಗಳೂರಿನಲ್ಲಿರುವ ಯಾವುದಾದರೂ ಬ್ರಾಹ್ಮಣರನ್ನು ವಿಚಾರಿಸಿ. ನನ್ನ ಮಗನೋ-ಮಗಳೋ ಆ ದೇಶದಲ್ಲಿ ಇದ್ದಾನೆ ಅನ್ನುತ್ತಾರೆ. ಇದು ಸ್ವಾಭಾವಿಕ ಪ್ರಗತಿ.

ನೀವು ನಮ್ಮಲ್ಲಿರುವ ಮುಂದುವರೆದ ದಲಿತರ ಮಕ್ಕಳನ್ನೆ ತೆಗೆದುಕೊಳ್ಳಿ. ಇವತ್ತು ಸದಾಶಿವನಗರದಲ್ಲಿರುವ ದಲಿತರ ಮಕ್ಕಳಿಗಾರಿಗೂ ದಲಿತರು ಯಾರು-ಅವರ ಸಮಸ್ಯೆ ಏನು ಎನ್ನುವುದೇ ಗೊತ್ತಿಲ್ಲ. ಅಷ್ಟೆ ಯಾಕೆ ಸರಿಯಾಗಿ ಕನ್ನಡವೇ ಬರಲ್ಲ. ಇವರೆಲ್ಲರ ಆಸೆ ಯಾವುದೇ ಅಂತರರಾಷ್ಟ್ರೀಯ ಕಂಪನಿಯಲ್ಲಿ ಸೇರಿ ಕೆಲಸ ಮಾಡಬೇಕು ಇಲ್ಲ ವಿದೇಶಕ್ಕೆ ಹೋಗಬೇಕು ಎನ್ನುತ್ತಾರೆ. ಮೀಸಲಾತಿಯಿಂದ ಬಲಿತ ದಲಿತ ಮಕ್ಕಳಲ್ಲಿ ಒಬ್ಬರನ್ನಾದರೂ ದಲಿತರ ಸಮಸ್ಯೆಗೆ ಸ್ಪಂದಿಸುವವರಿದ್ದರೆ ಒಬ್ಬರನ್ನಾದರೂ ಹೆಸರಿಸಿ. ಅದಕ್ಕೆ ಕಾರಣ, ಆರ್ಥಿಕ ಅಭಿವೃದ್ಧಿಯಿಂದ ಅವರಲ್ಲಿ ಆದ ಸ್ವಾಭಾವಿಕ ಪರಿವರ್ತನೆ.

ಇವತ್ತು ದಲಿತರ ಸಮಸ್ಯೆಗಳಿಗೆ ಸ್ಪಂದಿಸುವವರು ಬಡತನದಲ್ಲಿ ಇರುವವರೇ. ನಾವೆಲ್ಲ ಏಣಿ ಹತ್ತಲು ಪ್ರಯತ್ನಿಸುತ್ತಾ ನಮ್ಮೊಂದಿಗೆ ಇತರರನ್ನು ಕರೆದುಕೊಂಡು ಹೋಗಲು ಪ್ರಯತ್ನಿಸುತ್ತಿದ್ದೇವೆ. ಬಲಿತ ದಲಿತರ ಮಕ್ಕಳಲ್ಲಿ ಆ ಭಾವನೆ ಸ್ವಾಭಾವಿಕವಾಗಿ ಬರಲ್ಲ. ಮತ್ತು ಇವರಿಂದಲೇ ದಲಿತರ ಶೋಷಣೆಯ ಉದಾಹರಣೆ ಸಿಗುತ್ತವೆಯೇ ಹೊರತು, ದಲಿತರಿಗಾಗಿ ದುಡಿದ ಉದಾಹರಣೆಗಳಿಲ್ಲ. ಎಲ್ಲಾ ಐ.ಎ.ಎಸ್., ಐ.ಪಿ.ಎಸ್., ಅಧಿಕಾರಿಗಳು ಹಾಗೂ ಮಂತ್ರಿಗಳ ಮಕ್ಕಳು ಏನು ಮಾಡುತ್ತಿದ್ದಾರೆ ಎಂದು ಒಮ್ಮೆ ವಿಚಾರಿಸಿ.

ಅಂಬೇಡ್ಕರ್ ಅವರನ್ನು ಅರ್ಥಮಾಡಿಕೊಂಡು ತರ್ಕಬದ್ಧವಾಗಿ ಯೋಚಿಸುವ ದಾರಿ ಹಿಡಿದರೆ ಮಾತ್ರ ದಲಿತರ ಉದ್ಧಾರ ಸಾಧ್ಯ. ಈ ಕೆಲಸವನ್ನು ನಮ್ಮ ನಾಯಕರುಗಳು ಮಾಡಬೇಕಾಗಿದೆ.

ಇದು ಸತ್ಯ ಎನ್ನಿಸಿದರೆ ಜಾಗತೀಕರಣದ ಜೊತೆಗೆ ಹೋಗುವುದನ್ನು ದಲಿತರು ಕಲಿಯಬೇಕಾಗುತ್ತದೆ, ಜಾಗತೀಕರಣ ನಮ್ಮ ವಿರುದ್ಧವಿದೆ ಅಂದರೂ ಅದನ್ನು ತಡೆದು ನಿಲ್ಲಿಸುವ ಶಕ್ತಿ ನಮ್ಮಲ್ಲಿ ಇಲ್ಲ.

ಜಾಗತೀಕರಣದಿಂದ ಮೇಲ್ಜಾತಿಯವರ ವಿಮೋಚನೆ. ಆಮೇಲೆ ನಮ್ಮದು ಎನ್ನುವುದೇ ನನ್ನ ಅಭಿಪ್ರಾಯ. ಈ ನಿಟ್ಟಿನಲ್ಲಿ ಜಾಗತೀಕರಣವನ್ನು, ವಿರೋಧಿಸದೆ ಇದರ ಜೊತೆ ಹೆಜ್ಜೆಹಾಕುವುದೇ ಸೂಕ್ತ.

○ ಡಾ॥ ಎಂ. ಶಿವಲಿಂಗಯ್ಯ

○ ಡಾ॥ ಕೆ. ಮರುಳಸಿದ್ದಪ್ಪ

> ಗುಜರಾತ್‌ನಲ್ಲಿ ನಡೆದ ಭೀಕರ ನರಮೇಧ ಇಡೀ ಜಗತ್ತನ್ನೆ ನಡುಗಿಸಿದೆ. ಮತಾಂಧ ಶಕ್ತಿಗಳ ದಬ್ಬಾಳಿಕೆಗೆ ಬಲಿಯಾಗುತ್ತಿದ್ದ ದಲಿತರು, ವಿಶೇಷವಾಗಿ ಆದಿವಾಸಿಗಳು ಈ ನರಮೇಧದಲ್ಲಿ ಭಾಗವಹಿಸಿದ್ದರು ಎಂಬುದು ಎಲ್ಲಾ ಮಾನವತಾವಾದಿಗಳನ್ನು ಚಿಂತೆಗೀಡು ಮಾಡಿದೆ. ಈ ಕುರಿತು ನಾಡಿನ ಚಿಂತಕರಿಂದ ಸಂವಾದ ಏರ್ಪಡಿಸಬೇಕೆಂಬುದು 'ಸಂವಾದ'ದ ಹಂಬಲ. ಅದಕ್ಕಾಗಿ ಪ್ರಶ್ನಾವಳಿ ರಚಿಸಿ ಕೆಲವು ಚಿಂತಕರಿಗೆ ಕಳುಹಿಸಿಕೊಡಲಾಗಿತ್ತು. ಉತ್ತರ ಬಂದ ಎರಡು ಸಂವಾದಗಳನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಮುಂದಿನ ಸಂಚಿಕೆಗಳಲ್ಲಿ ಉಳಿದವುಗಳನ್ನು ಪ್ರಕಟಿಸುತ್ತೇವೆ. ಓದುಗರೂ ಈ ಸಂವಾದದಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

(ಅ) ಗುಜರಾತ್ ಕೋಮು ಗಲಭೆಯಲ್ಲಿ ದಲಿತರು ಹಿಂಸಾಕಾಂಡದಲ್ಲಿ ಮುಂಚೂಣಿಯಲ್ಲಿದ್ದರು ಎನ್ನುವ ಬಗ್ಗೆ ತಾವು ಏನು ಹೇಳುತ್ತೀರಿ?

(ಆ) ಇಂಥ ಸ್ಥಿತಿ ನಿರ್ಮಾಣವಾಗಲು ಕಾರಣವಾದ ಅಂಶಗಳಾವುವು?

(ಇ) 80ರ ದಶಕದಲ್ಲಿ ನಡೆದ ಮೀಸಲಾತಿ ವಿರೋಧಿ ಗಲಭೆಯಲ್ಲಿ ಮತೀಯ ಹಿಂದೂಗಳಿಂದ ಧಾಳಿಗೆ ತುತ್ತಾದ ದಲಿತರು ಪ್ರಸ್ತುತ ಅದೇ ಮತೀಯ ಹಿಂದೂಗಳ ದಾಳವಾಗಿ ಬದಲಾಗಿರುವುದರ ಮರ್ಮವೇನು?

(ಋ) ದಲಿತರ ಜಾಗೃತಿ ಹಿಂದೂ ಮತೀಯವಾದಿಗಳ ಕುತಂತ್ರಕ್ಕೆ ಬಲಿಯಾಗಿದೆಯೆ?

(ಎ) ದಲಿತ ಚಳುವಳಿ-ರಾಜಕಾರಣ ಈ ಹೊತ್ತಿನಲ್ಲಿ ಏನು ಮಾಡಬೇಕು?

❒ ಗುಜರಾತ್ ಕೋಮು ಗಲಭೆಯಲ್ಲಿ ಹಿಂಸಾಕಾಂಡದಲ್ಲಿ ದಲಿತರೂ ಭಾಗವಹಿಸಿದ್ದರೆಂದು ಹೇಳಬಹುದೇ ಹೊರತು, ಅವರು ಮುಂಚೂಣಿಯಲ್ಲಿದ್ದರೆಂದು ಹೇಳಲಾಗುವುದಿಲ್ಲ. ಗುಜರಾತ್ ವಿದ್ಯಮಾನಗಳ ಪ್ರತ್ಯಕ್ಷದರ್ಶಿಗಳು, ಇಂಗ್ಲಿಷ್ ವೃತ್ತ ಪತ್ರಿಕೆಗಳು, ಪ್ರಸಿದ್ಧ ದೂರದರ್ಶನ ಕೇಂದ್ರಗಳು ಒದಗಿಸಿದ ಮಾಹಿತಿಯಂತೆ. ಮುಸ್ಲಿಮ್ ಜನಾಂಗದವರ ಕೊಲೆ, ಅತ್ಯಾಚಾರದಂತಹ ಬರ್ಬರ ಕೃತ್ಯಗಳಲ್ಲಿ ಸಂಘ ಪರಿವಾರ ಮತ್ತು ಮೇಲುಜಾತಿ ಮಧ್ಯಮ ವರ್ಗದವರೇ ಪ್ರಮುಖ ಪಾತ್ರವಹಿಸಿದ್ದವರು. ಸಾವಿರಾರು ಮನೆಗಳಿಗೆ ಬೆಂಕಿ ಹಚ್ಚಿದವರೂ ಸಂಘ ಪರಿವಾರದ ಅನುಯಾಯಿಗಳೇ ಎಂಬುದು ಖಚಿತವಾಗಿದೆ. ಆಗ ಸಂಭವಿಸಿದ ಲೂಟಿ ಹಾಗೂ ಮನೆಗಳಲ್ಲಿದ್ದ ವಸ್ತುಗಳನ್ನು ದೋಚಿಕೊಂಡು ಹೋಗುವುದರಲ್ಲಿ ದಲಿತರು-ಮುಖ್ಯವಾಗಿ ಗುಜರಾತ್‌ನ ಆದಿವಾಸಿಗಳು ಭಾಗವಹಿಸಿದ್ದರು. ಆಗಲೂ ಅವರು ಬೆಂಕಿ ಬಿದ್ದ ಮನೆಗಳಿಂದ ಆದಿವಾಸಿಗಳು ಆಹಾರ ಪದಾರ್ಥಗಳನ್ನು, ಉಪ್ಪು, ಮೆಣಸಿಕಾಯಿ ಮುಂತಾದವನ್ನು ಸಾಗಿಸಿದರೆಂದೂ ಮಧ್ಯಮ ವರ್ಗದ ವಿದ್ಯಾವಂತ ಮೇಲುಜಾತಿ ಜನಗಳೂ ಟಿ.ವಿ. ರೇಡಿಯೋ-ಮುಂತಾದ ಬೆಲೆ ಬಾಳುವ ವಸ್ತುಗಳನ್ನು ಸಾಗಿಸುತ್ತಿದ್ದರೆಂದೂ ವರದಿಯಾಗಿದೆ.

❒ ಹಿಂದುತ್ವವಾದಿಗಳು ಈ ಗಲಭೆಯಲ್ಲಿ ವಹಿಸಿದ ಪಾತ್ರಕ್ಕೆ ಜಾತಿ ದ್ವೇಷ ಮುಖ್ಯ ಕಾರಣವಾಗಿದ್ದರೆ, ದಲಿತರಿಗೆ ಬಡತನವೇ ಮುಖ್ಯ ಕಾರಣವಾಗಿತ್ತು. ಅಧಿಕಾರದಲ್ಲಿರುವ ಸಂಘ ಪರಿವಾರದವರೊಡನೆ ಸ್ನೇಹ ಬೆಳೆಸುವುದು ಬಡ ದಲಿತರಿಗೆ ಅನಿವಾರ್ಯವಾಗಿತ್ತು. ಗುಜರಾತ್‌ನಲ್ಲಿ ದಲಿತರ ಜನ ಸಂಖ್ಯೆ ಒಂದು ಅಂದಾಜಿನ ಪ್ರಕಾರ ಕೇವಲ 7% ಇದೆ. ಕಿತ್ತು ತಿನ್ನುವ ಬಡತನ, ನಿರುದ್ಯೋಗ, ಇವೆಲ್ಲವೂ ಸೇರಿ ಅವರು ಬಲಾಢ್ಯರೂ ಅಧಿಕಾದಲ್ಲಿದ್ದವರೂ ಆದ ಜಾತಿವಾದಿಗಳ ಜೊತೆ ಸೇರಲು ಅವರ ಆರ್ಥಿಕ ಅಸಹಾಯಕತೆಯೇ ಕಾರಣ. ಮತ್ತೊಂದು ವಿಶೇಷ ಕಾರಣವೆಂದರೆ, ಲೇವಾದೇವಿ ಉದ್ಯೋಗ ಮಾಡುತ್ತಿದ್ದ ಅನೇಕ ಮುಸ್ಲಿಂ ವ್ಯಾಪಾರಸ್ಥರಿಂದ ದಲಿತರು ಸಾಲಪಡೆದವರಾಗಿದ್ದರು. ಈ ಸಂದರ್ಭ ಶ್ರೀಮಂತ ವ್ಯಾಪಾರಸ್ಥರ ಮೇಲೆ ಸೇಡು ತೀರಿಸಿಕೊಳ್ಳಲು ಅವರಿಗೆ ಒಂದು ಸದವಕಾಶವಾಗಿ ಬಿಟ್ಟಿತು. ಹಿಂದೂ ಮೇಲುಜಾತಿಯ ಶ್ರೀಮಂತರ ಮೇಲೆ ಸೇಡು ತೀರಿಸಿಕೊಳ್ಳಲು ಸಾಧ್ಯವಿಲ್ಲ ಏಕೆಂದರೆ, ಅವರಿಗೆ ಅಧಿಕಾರದ ಬಲವಿದೆ. ಆದರೆ ಅಲ್ಪ ಸಂಖ್ಯಾತ ಮುಸ್ಲಿಮರಿಗೆ ಅಧಿಕಾರವಿಲ್ಲ. ಎರಡೂ ಧರ್ಮದಲ್ಲಿರುವ ಶ್ರೀಮಂತರ ಮೇಲೂ ದಲಿತರಿಗೆ ಕೋಪವಿದ್ದರೂ ಅಧಿಕಾರದಲ್ಲಿದ್ದವರ ತಂಟೆಗೆ ಹೋಗಲು ಧೈರ್ಯವಿಲ್ಲ. ಇದು ವಾಸ್ತವ ಸ್ಥಿತಿ. ಸಂಘ ಪರಿವಾರದವರು ವಾಸ್ತವಾಂಶಗಳನ್ನು ತಿರುಚಿ ಇಡೀ ಗಲಭೆಯ ಮುಂಚೂಣಿಯಲ್ಲಿ ದಲಿತರೂ ಇದ್ದರೆಂದು ಅಲ್ಲಲ್ಲಿ ಪ್ರಚಾರ ಮಾಡಿದ್ದಾರೆ. ಗುಜರಾತ್‌ನ ವಿಚಾರವಾದಿ ಮುಸ್ಲಿಂ ಸಮುದಾಯದ ಮುಖಂಡರಾದ ಪ್ರೊ. ಬಂದೂಕುವಾಲಾರವರು ಬೆಂಗಳೂರಿನಲ್ಲಿ ಇತ್ತೀಚೆಗೆ ಮಾತನಾಡಿದಾಗ ಈ ವಿವರಗಳನ್ನು ನಮಗೆ ತಿಳಿಸಿದರು.

❒ ಎಂಬತ್ತರ ದಶಕದಲ್ಲಿ ನಡೆದ ಮೀಸಲಾತಿ ವಿರೋಧಿ ಗಲಭೆಯಲ್ಲಿ ಗುಜರಾತ್‌ನಲ್ಲಿ ಹಿಂದೂಗಳ ಧಾಳಿಗೆ ದಲಿತರು ತುತ್ತಾಗಿದ್ದರು. ಈಗ ಅದೇ ದಲಿತರನ್ನು ಮೇಲು ಜಾತಿಯವರು ದಾಳವಾಗಿ ಬಳಸಿಕೊಂಡು ಮುಸ್ಲಿಂ ದ್ವೇಷ ಬಿತ್ತುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿದ್ದಾರೆ. ಇದು ದುರಂತಕಾರಿ ವಿಚಾರ. ಇತ್ತೀಚಿನ ಒಂದು ಅಭಿಪ್ರಾಯ ಸಮೀಕ್ಷೆಯಂತೆ ಮುಂದೆ ಮೇಲುಜಾತಿಗಳ ಗುರಿ ದಲಿತರಿಗೇ ತಕ್ಕ ಪಾಠ ಕಲಿಸುವುದಾಗಿದೆಯಂತೆ. ಗುಜರಾತಿನಲ್ಲಿ ದಲಿತರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿ ಇಲ್ಲವಾದುದರಿಂದ ಇಂತಹ ದಾಳಿ ನಡೆದರೆ, ದಲಿತರಿಗೆ ತೀವ್ರ ಹಾನಿಯಾಗುತ್ತದೆ. ಅಂತಹ ಸಂದರ್ಭದಲ್ಲಿ ಅಲ್ಪ ಸಂಖ್ಯಾತರೂ ಸಹಜವಾಗಿ ದಲಿತರ ನೆರವಿಗೆ ಬರುವುದಿಲ್ಲ. ಎಲ್ಲ ಜಾತಿಗಳಿಗೆ ಸೇರಿದ ಉದಾರವಾದಿಗಳೂ ಆಗ ತಟಸ್ಥರಾಗಿ ಬಿಟ್ಟರೆ ಮೇಲು ಜಾತಿ ಉಗ್ರವಾದಿಗಳಿಗೆ ಸುವರ್ಣಾವಕಾಶ ದೊರೆತಂತಾಗುತ್ತದೆ.

❒ ದಲಿತರ ಜಾಗೃತಿ ಹಿಂದೂ ಮತೀಯವಾದಿಗಳ ಕುತಂತ್ರಕ್ಕೆ ಬಲಿಯಾಗಿದೆಯೇ? ಎಂಬ ಪ್ರಶ್ನೆಗೆ ದಕ್ಷಿಣ ಭಾರತದ ಮಟ್ಟಿಗೆ, ಇಲ್ಲವೆನ್ನಬಹುದು. ಆದರೆ ಉತ್ತರ ಭಾರತದಲ್ಲಿ ವಿಶೇಷವಾಗಿ ಉತ್ತರ ಪ್ರದೇಶದ ಇತ್ತೀಚಿನ ರಾಜಕೀಯ ವಿದ್ಯಮಾನಗಳನ್ನು ಗಮನಿಸಿದರೆ, ಖಂಡಿತವಾಗಿ 'ಹೌದು' ಎಂದೇ ಒಪ್ಪಿಕೊಳ್ಳಬೇಕು. ಅಲ್ಲಿ 'ಅಂಬೇಡ್ಕರ್‌ವಾದಿ'ಗಳು 'ಮನುವಾದಿ'ಗಳೊಂದಿಗೆ ಭಾವೈಕ್ಯ ಸಾಧಿಸಿರುವುದು, ಮತ್ತು 'ಲೋಹಿಯಾವಾದಿ'ಗಳೂ, 'ಅಂಬೇಡ್ಕರ್‌ವಾದಿ'ಗಳೂ ಪರಸ್ಪರ ವೈರಿಗಳಂತೆ ನಡೆದುಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ದೇಶದ ರಾಜಕೀಯ ಎತ್ತ ಸಾಗುತ್ತಿದೆ ಎಂಬುದೇ ಗೊತ್ತಾಗದಂತಹ ಪರಿಸ್ಥಿತಿ ಏರ್ಪಟ್ಟಿದೆ. ಇದರೊಂದಿಗೆ ತಮಿಳುನಾಡಿನ ದ್ರಾವಿಡ ಚಳುವಳಿಯ ಮೂಲದಿಂದಲೇ ಹುಟ್ಟಿದ ಎ.ಐ.ಡಿ.ಎಂ.ಕೆ. ಪಕ್ಷ ಪುರೋಹಿತಶಾಹಿಯ ಪಾದಪೂಜೆಯ ಕೈಂಕರ್ಯ ನಡೆಸುತ್ತಿರುವುದನ್ನು ಸೇರಿಸಿಕೊಂಡರೆ ಸದ್ಯಕ್ಕೆ ಸಂಘ ಪರಿವಾರ ಸಂಭ್ರಮಿಸಬಹುದಾದ ವಾತಾವರಣವಿದೆ. ಇದಕ್ಕೆ ಪೂರಕವಾಗಿ ಸಂಘ ಪರಿವಾರದ

ಸಾಮಾಜಿಕ ನೀತಿಯ ಪ್ರಯೋಗಶಾಲೆ ಎಂದೇ ಹೇಳಲಾಗುತ್ತಿದ್ದ ಗುಜರಾತ್ ಚುನಾವಣೆಯಲ್ಲಿ ಅವರು ಗೆದ್ದು ಬಂದಿರುವುದರಿಂದ ಇತಿಹಾಸ ಚಕ್ರ ಪ್ರಗತಿ ವಿರೋಧಿ ದಿಕ್ಕಿನಲ್ಲಿ ಒಂದು ಸುತ್ತು ಸಂಪೂರ್ಣ ಹಿಂದಕ್ಕೆ ಸುತ್ತಿದಂತಾಗಿದೆ.

❒ ದೇಶವು ಸಾಮಾಜಿಕ ಹಾಗೂ ರಾಜಕೀಯವಾಗಿ ಇಂತಹ ಸಂಕಷ್ಟದ ದಿನಗಳಲ್ಲಿರುವಾಗ, ದಲಿತ ಚಳುವಳಿಯೂ ಸೇರಿದಂತೆ ಎಲ್ಲ ಪ್ರಗತಿಪರ ಸಂಘಟನೆಗಳೂ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾದ ಕಾಲ ಬಂದಿದೆ. ರಾಜಕೀಯ ಅಧಿಕಾರವೊಂದನ್ನೇ ಗುರಿಯಾಗಿಟ್ಟುಕೊಂಡಿರುವ ಪಕ್ಷ ಅಥವಾ ಸಂಘಟನೆಗಳಿಂದ ಮುಂದೆ ಯಾವುದೇ ನ್ಯಾಯವನ್ನು ದಲಿತರಾಗಲೀ ಅಲ್ಪ ಸಂಖ್ಯಾತರಾಗಲೀ ನಿರೀಕ್ಷಿಸುವಂತಿಲ್ಲ. ಎಲ್ಲ ಜಾತಿಯ ಪ್ರಗತಿಪರರು, ಉದಾರವಾದಿಗಳು ಸೇರಿದ ಸಂಘಟನೆಯೊಂದನ್ನು ಹುಟ್ಟು ಹಾಕಲು ದಲಿತ ಚಳುವಳಿ ಮುಂದಾಗಬೇಕು. ಸರಕಾರಿ ನೌಕರಿಗಳಲ್ಲಿ ಹಾಗೂ ಬಡ್ತಿಗಳಲ್ಲಿ ಮೀಸಲಾತಿ ಪಡೆಯುವುದು, ಸಾಧ್ಯವಾದರೆ ರಾಜಕೀಯ ಅಧಿಕಾರ ಸ್ಥಾನಗಳನ್ನು ಕಬಳಿಸುವುದೇ ದಲಿತ ಚಳುವಳಿಯ ಪ್ರಧಾನ ಗುರಿಯಾಗಿರುವಾಗ ಇಂತಹ ಗುರುತರ ಹೊಣೆಗಾರಿಕೆಯನ್ನು ನಿರ್ವಹಿಸುವ ನೈತಿಕ ಸ್ಥೈರ್ಯ ಅವರಿಗಿದೆ ಎಂದು ನಾನು ನಂಬಿಲ್ಲ.

ಅತ್ಯಂತ ಸಂಕಷ್ಟದ ದಿನಗಳಲ್ಲಿಯೂ ಇದ್ದಕ್ಕಿದ್ದಂತೆ, ಒಂದು ಚಳುವಳಿ ಹುಟ್ಟಿಕೊಂಡು ದೇಶವನ್ನು ರಕ್ಷಿಸುವ ಉದಾಹರಣೆಗಳು ಕಳೆದ ಐವತ್ತು ವರ್ಷಗಳ ಸ್ವತಂತ್ರ ಭಾರತದ ಚರಿತ್ರೆಯಲ್ಲಿ ನಮಗೆ ಕಾಣಿಸುತ್ತವೆ. ಅಂತಹ ನಿರೀಕ್ಷೆಯೊಂದನ್ನು ಇರಿಸಿಕೊಂಡು ಮುಂದುವರಿಯುವ ಅನಿವಾರ್ಯ ಪ್ರಸಂಗ ನಮ್ಮ ಮುಂದಿದೆ. ಇತಿಹಾಸ ಪಥದಲ್ಲಿ ಐದು ಅಥವಾ ಹತ್ತು ವರ್ಷಗಳು ಕೇವಲ ಒಂದು ಚುಕ್ಕೆ ಮಾತ್ರವಾಗಿದ್ದು ಸಂಘ ಪರಿವಾರದ ಸಧ್ಯದ ಗೆಲುವು ಮುಂದಿನ ಸೋಲಿಗೂ ನಾಂದಿಯಾಗುವುದರಲ್ಲಿ ನನಗೆ ಸಂದೇಹವೇನೂ ಉಳಿದಿಲ್ಲ. ●

ಹಿಂದೂ ಮತೀಯ ವಾದಕ್ಕೆ ಬಲಿ

○ ಜೆ. ಲಿಂಗಯ್ಯ ಕೋಂಡಹಳ್ಳಿ

❒ **ಗು**ಜರಾತ್ ಕೋಮು ಗಲಭೆಯಲ್ಲಿ ದಲಿತರು ಹಿಂಸಾಕಾಂಡದಲ್ಲಿ ಮುಂಚೂಣಿಯಲ್ಲಿದ್ದರು ಎನ್ನುವ ಬಗ್ಗೆ. ನನಗೆ ತುಂಬಾ ಅನುಮಾನವಿದೆ. ಕಾರಣ ದಲಿತರು ಮುಗ್ಧರು. ಬಲಿತವರ ಬಲಿ ಪಶುಗಳಾಗಿ, ರಾಜಕಾರಣಿಗಳ ಕೈಗೊಂಬೆಗಳಾಗಿ, ಬಂಡವಾಳಶಾಹಿಗಳ ಅಡಿಯಾಳುಗಳಾಗಿ ಬಾಳು ಸಾಗಿಸಿಕೊಂಡು ಬಂದಂತವರು. ಸತ್ಯ, ನ್ಯಾಯ, ನೀತಿ, ಧರ್ಮಗಳನ್ನ ಪರಿಪಾಲಿಸಿಕೊಂಡು ಬರೀ ಕಷ್ಟಗಳನ್ನೇ ಉಂಡುಕೊಂಡು ಬಂದಿರುವುದರಿಂದ. ಇಂಥ ಹಿಂಸಾಕಾಂಡದಲ್ಲಿ ಮುಂಚೂಣಿಯಲ್ಲಿದ್ದರು ಎಂಬುದಕ್ಕೆ ಪುರಾವೆಗಳೇನು? ಅಕಸ್ಮಾತ್ ಅವರಿದ್ದರೂ ಅದು ಬಲಿತ ಜನರ ಪ್ರಚೋದನೆಯಿರಬಹುದು.

❒ ಹಿಂಸಾಕಾಂಡ ಸ್ಥಿತಿ ನಿರ್ಮಾಣವಾಗಲು ಕಾರಣವಾದ ಅಂಶಗಳಾಗವುವು ಎಂದರೆ, ದೀನ ದಲಿತರನ್ನು ಶತ ಶತಮಾನಗಳಿಂದ ಈ ಸಮಾಜ ನಡೆಸಿಕೊಂಡು ಬಂದ ರೀತಿ ನೀತಿ ನೆನೆಸಿಕೊಂಡು ಇಂದಿನ ಯುವ ದಲಿತರು ರೊಚ್ಚಿಗೇಳುವ ಕೆಚ್ಚನ್ನು ಗಳಿಸಿಕೊಂಡಿದ್ದಾರೆ. ಸಹೋದರರಾದ ಬಲಹೀನರಾದ, ಬಡವರಾದ ದಲಿತರನ್ನು ಅಸ್ಪೃಶ್ಯರೆಂದು ಕರೆದು ಪಶು ಪಕ್ಷಿಗಳಿಗಿಂತ ಕೀಳಾಗಿ ಕಂಡು ಊರ ಹೊರಗೆ ಇರಿಸಿ, ಇಲ್ಲದ ಆಪಾದನೆಗಳನ್ನು ಹೊರಿಸಿ ಒಂದಲ್ಲ ಒಂದು ತಪ್ಪು ಹುಡುಕಿ ದಲಿತರನ್ನು ಇಕ್ಕಟ್ಟಿಗೆ ಸಿಕ್ಕಿಸುವ ಸವರ್ಣೀಯರೆನಿಸಿಕೊಂಡವರಿಗೆ ಬುದ್ಧಿ ಕಲಿಸಲು ಸಿಡಿದೆದ್ದ ಸ್ಥಿತಿ ನಿರ್ಮಾಣವಾಗಿರಬಹುದು ಅಥವಾ ದಲಿತರಿಗೆ ಒಳಗೊಳಗೆ ಹಿಂಸೆ ನೀಡಿದವರ ಸದೆ ಬಡಿಯಲು ಸಮಯವನ್ನು ಉಪಯೋಗಿಸಿಕೊಂಡಿರಬಹುದು.

❒ 80ರ ದಶಕದಲ್ಲಿ ನಡೆದ ಮೀಸಲಾತಿ ವಿರೋಧಿ ಗಲಭೆಯಲ್ಲಿ ಮತೀಯ ಹಿಂದೂಗಳಿಂದ ಧಾಳಿಗೆ ತುತ್ತಾದ ದಲಿತರು ಪ್ರಸ್ತುತ ಅದೇ ಮತಿಯ ಹಿಂದೂಗಳ ದಾಳವಾಗಿ ಬದಲಾಗಿರುವುದರ ಮರ್ಮ ಇಷ್ಟೆ. ಮುಯ್ಯಿಗೆ ಮುಯ್ಯಿ, ರಕ್ತಕ್ಕೆ ರಕ್ತ ಕೊಡುವಷ್ಟು ದಲಿತರು. ರಾಜಕೀಯ, ಸಾಮಾಜಿಕ, ಆರ್ಥಿಕ, ಬೌದ್ಧಿಕ ಕ್ಷೇತ್ರಗಳಲ್ಲಿ ಸಬಲರಾಗಿಲ್ಲ. ಬೇರೆಯವರನ್ನೇ ಆಶ್ರಯ ಮಾಡಬೇಕಿದೆ, ಪಂಚಾಯಿತಿ ತಾಲೂಕ್, ಜಿಲ್ಲಾ ಸದಸ್ಯ, ಎಂ.ಎಲ್.ಎ. ಅಥವಾ ಎಂ.ಪಿ. ಆಗಬೇಕಾದರೆ ಬೇರೆಯವರ ಮತಗಳು ಅಗತ್ಯ. ಹಾಗೇ ಒಂದು ಪಾಳ್ಯ, ಹಳ್ಳಿ, ಗ್ರಾಮ, ಊರು ಕೇರಿ, ಪಟ್ಟಣ, ನಗರಗಳಲ್ಲಿ ದಲಿತರು ಬದುಕಿ ಬಾಳಬೇಕಾದರೆ ಹಿಂದುಗಳೆನಿಸಿಕೊಂಡ ಅನ್ಯರ ಆಶ್ರಯಬೇಕಾಗಿರುವಾಗ ಅವರ ದಾಳಕ್ಕೆ ಸರಾಗವಾಗಿ ಬದಲಾಗಬಹುದಲ್ಲವೆ?

❒ ದಲಿತರ ಜಾಗೃತಿ ಹಿಂದೂ ಮತೀಯವಾದಿಗಳ ಕುತಂತ್ರಕ್ಕೆ ಬಲಿಯಾಗಿದೆಯೆ ಎಂದು ಪ್ರಶ್ನೆ ಹಾಕಿಕೊಂಡರೆ ನಿಜವೆನಿಸುತ್ತದೆ. ಏಕೆಂದರೆ ದಲಿತರು ಇನ್ನೂ ಅನೇಕಾನೇಕ ಮೂಢ ನಂಬಿಕೆಗಳನ್ನು ನಂಬಿಕೊಂಡು, ಹೊರಬರದೆ ನರಳುತ್ತಿದ್ದಾರೆ. ಕುಲ, ಗೋತ್ರ, ಬೆಡಗು, ಆ ಕೈ, ಈ ಕೈ, ಆಕಡೆಯವರು, ಈಕಡೆಯವರು ಎಂಬ ಭಿನ್ನಭಾವಗಳು, ಜಲಗಾರರ ಮನೆ ಸಂಬಂಧ ಮಾದಿಗರು ಮಾಡಲ್ಲ, ಮಾದಿಗರ ಸಂಬಂಧ ಹೊಲೇರು ಮಾಡಲ್ಲ. ಹೊಲೇರ ಸಂಬಂಧ ಕೊರಮ, ಕೊರಚರು ಮಾಡಲ್ಲ. ಕೊರಮ ಕೊರಚರ ಸಂಬಂಧ ಲಮಾಣಿ ಲಂಬಾಣಿಗಳು ಮಾಡಲ್ಲ. ಲಮಾಣಿ, ಬಂಜಾರರ ಸಂಬಂಧ ಭೋವಿಗಳು ಮಾಡಲ್ಲ ಹೀಗೆ ಜಾತಿ ವಿಜಾತಿಗಳ ಜೇಡರ ಬಲೆಯಲ್ಲಿ ಸಿಕ್ಕಿಕೊಂಡಿರುವ ದಲಿತರಲ್ಲಿ ಸಾಮರಸ್ಯವಿಲ್ಲ. ಒಗ್ಗಟ್ಟುಇಲ್ಲ. ಭಾರತರತ್ನ ಡಾ|| ಬಾಬಾ ಸಾಹೇಬ, ಬಿ.ಆರ್. ಅಂಬೇಡ್ಕರ್ ಹೇಳಿರುವ ಓದು ಬರಹ, ಒಗ್ಗಟ್ಟು, ಹೋರಾಟ ಈ ಮೂರು ಮಹಾಸೂತ್ರಗಳನ್ನು ಚೆನ್ನಾಗಿ ಅರಿತುಕೊಂಡಾಗ ಮಾತ್ರ ಯಾರ ಕುತಂತ್ರಕ್ಕೂ ಬಲಿಯಾಗದೆ ಪ್ರಗತಿಯನ್ನು ದಲಿತರು ಕಾಣಬಹುದಾಗಿದೆ. ದಲಿತರು ಹಿಂದೂ ಮತೀಯವಾದಿಗಳು ಹುಟ್ಟುಹಾಕಿದ ದೇವ್ರು, ದಿಂಡ್ರು, ದೆವ್ವ, ಭೂತ, ಯಂತ್ರ, ಮಂತ್ರ, ಮಾಟ, ಜಾತಿ ಜಂಜಾಟಗಳನ್ನು ನಂಬಿರುವುದರಿಂದ ನಯವಾಗಿ ಹಿಂದುಗಳು ದಲಿತರನ್ನು ಬಲಿ ಮಾಡಿಕೊಳ್ಳುವುದರಲ್ಲಿ ಸಂಶಯವಿಲ್ಲ.

❒ ರಾಜಕಾರಣ ಈ ಹೊತ್ತಿನಲ್ಲಿ ಏನು ಮಾಡಬೇಕು ಅಂದ್ರೆ, ದಲಿತರೆಲ್ಲರೂ ಒಂದಾಗಿ ಧಂಗೆ ಎದ್ದರೆ ಕೋಮುವಾದಿಗಳನ್ನಾಗಲಿ, ಹಿಂದೂ ಮತೀಯವಾದಿಗಳನ್ನಾಗಲಿ ಬಗ್ಗು ಬಡಿಯಬಹುದು. ಹಿಂದಿನ ದಲಿತ ಚಳವಳಿಯ ಕಾವು ಇಂದು ಇಲ್ಲ. ಕಾವು ತಣ್ಣಗಾಗಿ ಕವಲುಗಳಾಗಿ, ಭಿನ್ನಭಾವಗಳಿಂದ ಕೂಡಿ ಒಡಕಲು ಮಡಿಕೆಗಳಾಗಿವೆ ಎಂದರೇನು ತಪ್ಪಾಗಲಾರದು. ಒಡಕಲು ಮಡಿಕೆಗಳನ್ನು ಬಿಸಾಡಿ, ಹೊಸ ಮಡಿಕೆ ಮಾಡಿ ನೀರು ತುಂಬಿ ಕುಡಿಯಬೇಕಾಗಿದೆ. ಭಿನ್ನಭಾವಗಳ ಬಿಟ್ಟು, ಬಾಬಾ ಸಾಹೇಬ, ಡಾ|| ಅಂಬೇಡ್ಕರ್‌ರವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು, ಜಾತಿಯ ಜಳ್ಳನ್ನು ಜಗತ್ತಿಗೆ ಎತ್ತಿ ತೋರಿಸಬೇಕಾಗಿದೆ. ಈ ನಿಟ್ಟಿನಲ್ಲಿ ದಲಿತ ನಾಯಕರೆನಿಸಿಕೊಂಡವರೆಲ್ಲಾ ಒಂದೇ ಚಾವಡಿಯಲ್ಲಿ ಕೂತು ಚರ್ಚಿಸಿ, ದಲಿತರ ವಿಮುಕ್ತಿಗೆ ಕಾರ್ಯತಂತ್ರ ರೂಪಿಸಿ, ಹಿಂದೂ ಮತೀಯವಾದಿಗಳಿಗೆ ಮಾನವರೆಲ್ಲಾ ಒಂದೇ ಎಂದೇಳುವ ತತ್ವದ ಬಗ್ಗೆ ತಿಳಿವಳಿಕೆ ಕೊಡಬೇಕಾಗಿದೆ. ●

ಮಾಲ - ಮಾದಿಗ ವಿವಾದ:

ಪರಿಶಿಷ್ಟ ಜಾತಿಯವರಿಗೊಂದು ಮನವಿ

ಪರಿಶಿಷ್ಟ ಜಾತಿಗಳೊಳಗಿನ ಮೀಸಲಾತಿಯನ್ನು ಜಾತಿಗಳ ಜನಸಂಖ್ಯೆ ಆಧಾರದ ಮೇಲೆ ಹಂಚಬೇಕೆನ್ನುವ ಕೂಗು ಕರ್ನಾಟಕದಲ್ಲೀಗ ಪರಾಕಾಷ್ಠೆ ಮುಟ್ಟಿದೆ. ಈ ಕೂಗಿಗೆ ಕೆಲವು ವರ್ಷಗಳ ಹಿಂದೆ ಆಂಧ್ರದಲ್ಲಿ ನಡೆದ ಇದೇ ರೀತಿಯ ಹೋರಾಟ ಮತ್ತು ನಂತರ ಸರ್ಕಾರ ಕೈಗೊಂಡ ನಿರ್ಧಾರವೇ ಸ್ಫೂರ್ತಿ. ಆಂಧ್ರ ಪ್ರದೇಶದಲ್ಲಿ ಈ ಬೆಳವಣಿಗೆಗಳು ನಡೆದಾಗ ಅಲ್ಲಿನ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಲೇಖಕರು ತಾವು ಕಂಡು ಅನುಭವಿಸಿದ ಈ ವಿವಾದ ಕುರಿತಂತೆ ಇಲ್ಲಿ ಬರೆದಿದ್ದಾರೆ.

○ ಎಸ್.ಆರ್. ಶಂಕರ್, ಐ.ಎ.ಎಸ್. (ನಿ.)

ಇತ್ತೀಚಿನ ದಿನಗಳಲ್ಲಿ ಮಾಲ-ಮಾದಿಗ ಸಮುದಾಯದಲ್ಲಿನ ಬೆಳವಣಿಗೆ ಕುರಿತಂತೆ ವ್ಯಾಪಕವಾದ ಚರ್ಚೆ ನಡೆಯುತ್ತಿದೆ. ಆಂಧ್ರಪ್ರದೇಶದ ಪರಿಶಿಷ್ಟ ಜಾತಿಗಳಲ್ಲಿ ಮಾಲ-ಮಾದಿಗ ಜಾತಿಯವರು ಬಹಳ ಸಂಖ್ಯೆಯಲ್ಲಿದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವಕಾಶದ ಮೇಲೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಪರಿಶಿಷ್ಟ ಜಾತಿಗಳಿಗೆ ಲಭ್ಯವಿರುವ ಒಟ್ಟು ಮೀಸಲಾತಿಯನ್ನು ಜಾತಿಗನುಸಾರವಾಗಿ ನಿರ್ದಿಷ್ಟವಾಗಿ ಮಾಲ-ಮಾದಿಗ ಜಾತಿಯ ನಡುವೆ ವಿಂಗಡಿಸಬೇಕೆಂಬುದು ಹೋರಾಟದ ಮುಖ್ಯ ಬೇಡಿಕೆಯಾಗಿದೆ.

ಬೇಡಿಕೆಗೆ ಸ್ಪಂದಿಸಿದ ಆಂಧ್ರಪ್ರದೇಶದ ಸರ್ಕಾರವು ನಿವೃತ್ತ ನ್ಯಾಯಾಧೀಶ ರಾಮಚಂದ್ರರಾಜು ಅವರನ್ನುಳ್ಳ ಏಕವ್ಯಕ್ತಿ ವಿಚಾರಣ ಸಮಿತಿಯನ್ನು ನೇಮಿಸಿತು. ಆ ಸಮಿತಿಯು 1997 ಮೇನಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಆಧಾರದ ಮೇಲೆ ಆಂಧ್ರಪ್ರದೇಶ ಸರ್ಕಾರವು, 1997 ಜೂನ್ ಮೊದಲ ವಾರದಲ್ಲಿ ಆದೇಶ ಹೊರಡಿಸಿತು. ಈ ಆದೇಶವು ಪರಿಶಿಷ್ಟ ಜಾತಿಗಳ ವಿಂಗಡನೆಗೆ ಅನುವು ಮಾಡಿ, ಸೇವಾಕ್ಷೇತ್ರದಲ್ಲಿ ಹಾಗು ಶೈಕ್ಷಣಿಕ ಸಂಸ್ಥೆಗಳಲ್ಲಿನ ಪ್ರವೇಶಕ್ಕಿರುವ ಶೇ. 15 ಮೀಸಲಾತಿಯನ್ನು ರೆಲ್ಲಿಸ್, ಮಾದಿಗ ಮತ್ತದರ ಸಂಬಂಧಿತ ಸಮುದಾಯ, ಮಾಲ ಮತ್ತದರ ಸಂಬಧಿತ ಸಮುದಾಯ ಮತ್ತು ಆದಿ ಆಂಧ್ರರ ಜನಸಂಖ್ಯೆಗನುಗುಣವಾಗಿ ವರ್ಗೀಕರಿಸಿತು. ಈ ಆದೇಶವನ್ನು ಆಂಧ್ರಪ್ರದೇಶದ ಹೈಕೋರ್ಟಿನಲ್ಲಿ ಪ್ರಶ್ನಿಸಿದ್ದನ್ನು ದಿನಾಂಕ 18-9-1997ರಂದು ತಳ್ಳಿಹಾಕಲಾಯಿತು. ಕಾರಣ ಸಂವಿಧಾನವು ನೇಮಿಸಿರುವ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಆಯೋಗದೊಂದಿಗೆ ವಿಷಯವನ್ನು ಸಮಾಲೋಚಿಸಿರಲಿಲ್ಲ. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿನಲ್ಲಿ ಮನವಿ ಮಾಡಿಕೊಳ್ಳುವ ಪ್ರಯತ್ನಗಳಾಗಿವೆ. ಈ ಸಂದರ್ಭದಲ್ಲಿ ಆದೇಶ ಕುರಿತು ಅಥವಾ ಅದರಲ್ಲಿನ ಕಾನೂನಿನ ವಿಷಯ ಕುರಿತು ಪ್ರತಿಕ್ರಿಯಿಸುವುದು ಸೂಕ್ತವಲ್ಲ.

ಮೂರು ವರ್ಷಗಳ ಹಿಂದೆ ಪ್ರಾರಂಭವಾದ ಮಾದಿಗ ದಂಡೋರ ಮತ್ತು ಮಾದಿಗ ಮೀಸಲಾತಿ ಹೋರಾಟ ಸಮಿತಿ ಚಳುವಳಿ ಹಾಗು ಇತ್ತೀಚಿನ ದಿನಗಳಲ್ಲಿ ಪ್ರಾರಂಭವಾದ ಮಾಲಾ ಮಹಾನಾಡುವಿನೊಂದಿಗೆ ಎರಡು ಸಮುದಾಯಗಳನ್ನು ವ್ಯವಸ್ಥಿತವಾಗಿ ಸಂಘಟಿಸುವ ಪ್ರಯತ್ನಗಳಾಗಿವೆ. ಸಂಘಟಿಸುವ ಪ್ರಯತ್ನದಲ್ಲಿ





ಒಬ್ಬರನ್ನೊಬ್ಬರು ಎತ್ತಿ ಕಟ್ಟುವ, ಪರಸ್ಪರ ಆರೋಪಿಸುವ, ನಿಂದಿಸುವಂತಹ ವಾತಾವರಣವು ಏರ್ಪಟ್ಟಿವೆ. ರಾಜ್ಯದ ಕೆಲವು ಹಳ್ಳಿಗಳಲ್ಲಿ ಎರಡೂ ಸಮುದಾಯಗಳ ನಡುವೆ ತಿಕ್ಕಾಟವಾಗಿ ಮನಸ್ತಾಪಕ್ಕೆ, ಕಹಿ ಭಾವನೆಗೆ ಕಾರಣವಾಗಿದೆ. ಈ ತಿಕ್ಕಾಟದಲ್ಲಿ ಮತ್ತು ಹೈದ್ರಾಬಾದ್‌ನಲ್ಲಿ ಸೇರಿದ್ದ ಮಾಲಾಮಹಾನಾಡು ಸಭೆಯಲ್ಲಿ ಪೋಲಿಸ್ ಕಾರ್ಯಾಚರಣೆ ನಡೆದು ಜೀವಹಾನಿಯೂ ಆಗಿರುವುದು ದುರದೃಷ್ಟಕರ. ಚಳುವಳಿಯ ಭಾಗವಾಗಿರುವವರಿಗೂ ಸಹ ವಿಷಯವನ್ನು ಕುರಿತಂತೆ ಸರಿಯಾದ ತಿಳುವಳಿಕೆ ನೀಡಿಲ್ಲವೆಂಬುದು ಕಂಡುಬರುತ್ತವೆ. ವೈಯಕ್ತಿಕ ಆಲೋಚನೆ, ಅನುಮಾನ, ಪೂರ್ವಾಗ್ರಹ, ಮಹತ್ವಾಕಾಂಕ್ಷೆ ಮೇಲುಗೈ ಪಡೆದುಕೊಂಡು ಸತ್ಯಾಂಶಗಳನ್ನು ಕಡೆಗಣಿಸಲಾಗಿದೆ ತಿರುಚಲಾಗಿದೆ. ಹಾಗಾಗಿ ವಿಷಯವನ್ನು ಸ್ಪಷ್ಟ ದೃಷ್ಟಿಕೋನದಿಂದ ನೋಡಿದಾಗ ಮಾತ್ರ ಸಮಸ್ಯೆಗೆ ಪ್ರಜಾಸತ್ತಾತ್ಮಕವಾದ ಪರಿಹಾರ ಕಾಣಲು ಸಾಧ್ಯ.

ಮೊತ್ತ ಮೊದಲಿಗೆ (ಅನುಸೂಚಿತ) ಪರಿಶಿಷ್ಟಜಾತಿ ಎಂಬ ಪದದ ಮೂಲವನ್ನೆ ಪರಿಶೀಲಿಸಬೇಕು. 1935 ಭಾರತ ಸರ್ಕಾರ ಕಾಯ್ದೆಗೆ ಮುನ್ನ ಅಸ್ಪೃಶ್ಯತೆಯ ಕಳಂಕಕ್ಕೆ ಒಳಗಾದ ಸಮುದಾಯಗಳನ್ನು ಅಸ್ಪೃಶ್ಯರೆಂದು, ಕೆಳಜಾತಿಗಳೆಂದು ವಂಚಿತರಾದವರೆಂದು, ಪಂಚಮರೆಂದು, ಅಗೌರದ ಹೆಸರುಳ್ಳ ಜಾತಿಗಳೆಂದು ಪರಿಗಣಿಸಲಾಗಿತ್ತು. 1936ರಲ್ಲಿ ಜನಗಣತಿಯ ಸೂಪರಿಡೆಂಟ್‌ರವರು ಕೆಳಜಾತಿಯ ಬದಲಾಗಿ ವಂಚಿತವರ್ಗವೆಂದು ಕರೆದರು. 1935ರಲ್ಲಿ ಜಾರಿಗೊಳಿಸಲಾದ ಸಾಮಾಜಿಕ, ರಾಜಕೀಯ ಬದಲಾವಣೆಯ ಭಾಗವಾಗಿ ಸಾಮಾಜಿಕ ತಾರತಮ್ಯಕ್ಕೊಳಗಾದ ಹಲವಾರು ಜಾತಿಗಳನ್ನು ಪಟ್ಟಿಮಾಡಲಾಯಿತು. ಅಂದಿನಿಂದ 'ಪರಿಶಿಷ್ಟ ಜಾತಿಗಳು' ಎಂಬುದು ಜಾರಿಗೆ ಬಂದಿತು. ಈ ಪದವು ಅರ್ಥವನ್ನು ಸ್ಪಷ್ಟಪಡಿಸಲಿಲ್ಲ. ಜಾತಿ ಎಂಬುದು ಒಟ್ಟಾರೆ ಅಸ್ಪೃಶ್ಯತೆಯ ತಾರತಮ್ಯಕ್ಕೊಳಗಾಗಿರುವ ಹಲವಾರು ಸಮುದಾಯ

ಗಳನ್ನೊಳಗೊಳ್ಳುತ್ತದೆ. ಸ್ವಾತಂತ್ರ್ಯಾ ನಂತರ 1950ರಲ್ಲಿ ಸಂವಿಧಾನವು ಜಾರಿಗೆ ಬಂದ ಮೇಲೆ ರಾಷ್ಟ್ರಪತಿಗಳು ಆರ್ಟಿಕಲ್ 341ರನುಗುಣವಾಗಿ ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ಅದಿಸೂಚನೆಗೊಳಪಡಿಸಿದರು. ಆದ್ದರಿಂದ ಪರಿಶಿಷ್ಟ ಜಾತಿ ಎಂದರೆ ಸಂವಿಧಾನವು ಘೋಷಿಸಿರುವ ಸಾಂಪ್ರದಾಯಿಕವಾಗಿ ಆಚರಣೆಯಲ್ಲಿರುವ ಅಸ್ಪೃಶ್ಯತೆಯಿಂದ ತೊಂದರೆಯನ್ನನುಭವಿಸುತ್ತಿರುವ ಜಾತಿಗಳ ಸಮೂಹ, ಸಮುದಾಯ ಪ್ರತಿಯೊಂದು ರಾಜ್ಯ ಹಾಗು ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಪರಿಶಿಷ್ಟ ಜಾತಿಗಳನ್ನು ಸೂಚಿಸುವ ಸೌಲಭ್ಯವನ್ನು ಆರ್ಟಿಕಲ್ 341 ನೀಡುತ್ತದೆ.

1991ರ ಜನಗಣತಿಯ ಪ್ರಕಾರ ಭಾರತದಲ್ಲಿ ಪರಿಶಿಷ್ಟ ಜಾತಿ ಜನರ ಸಂಖ್ಯೆ 13.82 ಕೋಟಿ ಅಂದರೆ ಒಟ್ಟು ಜನಸಂಖ್ಯೆಯ ಶೇ. 16.48ರಷ್ಟು. ಎಂಟು ರಾಜ್ಯಗಳಾದ ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ್, ತಮಿಳುನಾಡು, ಆಂಧ್ರಪ್ರದೇಶ, ಮಧ್ಯಪ್ರದೇಶ, ರಾಜಾಸ್ತಾನ, ಕರ್ನಾಟಕದಲ್ಲಿ ದೇಶದ ಒಟ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆಯಲ್ಲಿನ ಶೇ. 15ಕ್ಕಿಂತ ಹೆಚ್ಚಿನದು. ಬಹುಪಾಲು ಪರಿಶಿಷ್ಟ ಜಾತಿಯ ಜನರು ಗ್ರಾಮೀಣ ಪ್ರದೇಶದಲ್ಲಿದ್ದರೆ, ನಗರ ಪ್ರದೇಶದಲ್ಲಿರುವವರ ಸಂಖ್ಯೆ ಕೇವಲ 14%. ದೇಶದೆಲ್ಲೆಡೆ ಹಂಚಿ ಹೋಗಿರುವ ಪರಿಶಿಷ್ಟ ಜಾತಿಗಳವರು ಸಾಮಾನ್ಯವಾಗಿ ಜೀವಿಸುವುದು ಹಳ್ಳಿಗಳ ಅಂಚಿನಲ್ಲಿ. ಕೆಲವೇ ಕೆಲವರು ಸಣ್ಣ ಅಥವಾ ಮಧ್ಯಮ ರೈತರಾದರೆ ಬಹುಪಾಲು ಪರಿಶಿಷ್ಟ ಕುಟುಂಬಗಳು ಕೃಷಿ ಕೂಲಿಗಳಾಗಿ ಬದುಕುತ್ತಿದ್ದಾರೆ. ಚರ್ಮ ಕೈಗಾರಿಕೆಯಲ್ಲಿ ಮೂಲ ಹಂತದಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲಿ ಬಹು ಪಾಲು ಮಂದಿ ಪರಿಶಿಷ್ಟ ಜಾತಿಯವರಾಗಿದ್ದಾರೆ. ದೇಶದ ಪೂರ್ವವಲಯದಲ್ಲಿನ ಕೆಲವು ಮೀನುಗಾರರು ಪರಿಶಿಷ್ಟ ಜಾತಿಗೆ ಸೇರಿದವರು. ಪಶ್ಚಿಮ ಭಾರತದ ಬಹುಪಾಲು ನೇಕಾರರು ಪರಿಶಿಷ್ಟ ಜಾತಿಗೆ ಸೇರಿದವರು. ರಿಕ್ಷಾ ಎಳೆಯುವುದು, ನೈರ್ಮಲ್ಯದ ಕೆಲಸ ಸೇರಿದಂತೆ ಅಸಂಘಟಿತ ಕ್ಷೇತ್ರದಲ್ಲಿರುವ ಬಹುಪಾಲು ಕಾರ್ಮಿಕರು ಪರಿಶಿಷ್ಟ ಜಾತಿಗೆ ಸೇರಿದವರು. ಪರಿಶಿಷ್ಟ ಜಾತಿಗಳಲ್ಲಿ ಹೆಚ್ಚಿನ ತಾರತಮ್ಯಕೊಳ್ಳಗಾದವರೆಂದರೆ ಅಮಾನವೀಯ ಅಸ್ಪೃಶ್ಯತೆಯ ಆಚರಣೆಯಲ್ಲಿ ಅತ್ಯಂತ ಶೋಷಿತರಾದವರು ಪರಿಶಿಷ್ಟ ಜಾತಿಗಳವರು. ಅಸ್ಪೃಶ್ಯತೆಯ ಹೀನಾಯ ಸಾಮಾಜಿಕ ಅನ್ಯಾಯವಾಗಿದೆ. ಈ ಆಚರಣೆಯಿಂದಾಗಿ ಪರಿಶಿಷ್ಟ ಜಾತಿಯ ಜನಗಳು ಮಾನವ ಹಕ್ಕುಗಳಿಂದ, ಮನುಷ್ಯ ಘನತೆಯಿಂದ ವಂಚಿತರಾಗಿದ್ದಾರೆ. ಬಹಳಷ್ಟು ಬಡವರು ಪರಿಶಿಷ್ಟ ಜಾತಿಗೆ ಸೇರಿದವರು. ದಾರಿದ್ರ್ಯ ರೇಖೆಗಿಂತ ಕೆಳಗಿರುವ ಅವರು ಅತ್ಯಂತ ದರಿದ್ರರು. ನಮ್ಮ ದೇಶದಲ್ಲಿನ 2/3 ಭಾಗದಷ್ಟು ಜೀತಗಾರರು ಪರಿಶಿಷ್ಟ ಜಾತಿ / ಪಂಗಡಗಳಿಂದ ಬಂದವರೆಂದು ಗುರುತಿಸಲಾಗಿದೆ.

' ಒಂದರ್ಥದಲ್ಲಿ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಬರುವ ಪ್ರತಿಯೊಂದು ಸಮುದಾಯವೂ ಪ್ರತ್ಯೇಕ ಜಾತಿಯಾಗಿದ್ದರೂ ಸಹ ಅಸ್ಪೃಶ್ಯತೆಯ ಆಚರಣೆಯಿಂದಾಗಿ ಅವೆಲ್ಲವೂ ಒಂದೇ ಆಗಿವೆ. ಇತರೆ Heterogenious ಗುಣಗಳಿರುವ ಹಿಂದುಳಿದ ವರ್ಗಗಳಿಗಿಂತಲ್ಲದೆ ಅಸ್ಪೃಶ್ಯತೆ ಎಂಬ ಸಾಮಾನ್ಯ ಗುಣದಿಂದಾಗಿ ಪರಿಶಿಷ್ಟ ಜಾತಿಗಳು ಸಜಾತಿಯ (homogenious) ಗುಣ ಪಡೆದುಕೊಂಡಿವೆ. ಇಡೀ ದೇಶದಲ್ಲಿ ಸುಮಾರು 700ಕ್ಕಿಂತ ಹೆಚ್ಚಿನ ಸಮುದಾಯಗಳು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿವೆ. ಇವುಗಳಲ್ಲಿ ಹಲವಾರು ಸಮುದಾಯಗಳು ಒಂದಕ್ಕಿಂತ ಹೆಚ್ಚಿನ ರಾಜ್ಯಗಳಲ್ಲಿವೆ. ಆಂಧ್ರಪ್ರದೇಶದ ಪರಿಶಿಷ್ಟ ಜಾತಿಗಳ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸುಮಾರು 59 ಸಮುದಾಯಗಳಿದ್ದು, 1999ರಲ್ಲಿ ಲೋಕಸಭೆ ಕಾಯ್ದೆ (Partliment enactment)ಯಿಂದಾಗಿ ನವಬೌದ್ಧರನ್ನು ಪಟ್ಟಿಯಲ್ಲಿ ಸೇರಿಸಿದ್ದರಿಂದ ಒಟ್ಟು ಸಮುದಾಯಗಳ ಸಂಖ್ಯೆ 60 ಆಗಿದೆ.

ಆಂಧ್ರ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗಳು ಎರಡು ಮುಖ್ಯ ಸಮುದಾಯಗಳಾದ ಮಾಲ-ಮಾದಿಗ ಗುಂಪಿನಡಿ ಬರುತ್ತವೆ. ಮಾಲ-ಮಾದಿಗ ಎರಡೂ ಸಮುದಾಯಗಳು ಹಿಂದೆ ತಿಳಿಸಿದಂತೆ ಕೆಳ ಜಾತಿ, ವಂಚಿತವರ್ಗವೆಂದು ಮುಂದೆ ಪರಿಶಿಷ್ಟ ಜಾತಿ ಎಂದು ಪರಿಗಣಿಸಲ್ಪಟ್ಟ ಅಸ್ಪೃಶ್ಯ ಸಮುದಾಯದಡಿ ಬರುತ್ತವೆ. ಎರಡೂ ಸಮುದಾಯಗಳು ಅಸ್ಪೃಶ್ಯತೆಯ ಆಚರಣೆಯಿಂದ ಶೋಷಣೆಗೊಳಗಾದವೆ. ಅಸ್ಪೃಶ್ಯತೆ ಎಂಬುದರ ಅರ್ಥ ಮುಟ್ಟಿದರೆ ಮೈಲಿಗೆ ಎಂಬುದಕ್ಕಷ್ಟೇ ಸೀಮಿತವಾಗಿಲ್ಲ. ಅದೊಂದು ಮೇಲ್ಜಾತಿಗಳ ಧೋರಣೆ, ದೃಷ್ಟಿಕೋನ, ಚಿಂತನೆಯ ಕ್ರಮವಾಗಿದೆ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಸಂವಿಧಾನದ ಆರ್ಟಿಕಲ್ 17ರನ್ವಯ ಹಾಗು ನಾಗರೀಕ ಕಾಯ್ದೆ 1955 (ಹಿಂದೆ ಅಸ್ಪೃಶ್ಯತೆ ಅಪರಾಧಗಳ ಕಾಯ್ದೆ)ಯನ್ವಯ ಅಸ್ಪೃಶ್ಯತೆಯನ್ನು, ಅದರ ಆಚರಣೆಯನ್ನು ನಿಷೇಧಿಸಲಾಗಿದ್ದರೂ ಇನ್ನೂ ಸಹ ಅದು ಜಾರಿಯಲ್ಲಿದೆ. ಪರಿಶಿಷ್ಟ ಜಾತಿಗಳು ಸಾಮಾಜಿಕ ಗುಂಪಾಗಿ ಹಲವಾರು ರೀತಿಯಲ್ಲಿ ಅತೀವ ತಾರತಮ್ಯಕ್ಕೆ, ಶೋಷಣೆಗೆ ಒಳಗಾಗಿದ್ದಾರೆ. ನಿಧಾನವಾಗಿಯಾದರೂ ಸ್ವಲ್ಪಮಟ್ಟಿನ ಬದಲಾವಣೆಯನ್ನು ನಾವು ಕಾಣಬಹುದಾದರೂ ಅವರ ಮೇಲಿನ ಸಾಮಾಜಿಕ-ಆರ್ಥಿಕ ತುಳಿತವಿನ್ನೂ ಜಾರಿಯಲ್ಲಿದೆ. ಪರಿಶಿಷ್ಟ ಜಾತಿಗಳ ಪರಿಸ್ಥಿತಿಯನ್ನು ಮನಗಂಡೆ ಪರಿಶಿಷ್ಟ ಜಾತಿ/ ಪಂಗಡ (ಅಪರಾಧ ತಡೆ) ಕಾಯ್ದೆ 1989ಯನ್ನು ಜಾರಿಗೊಳಿಸಲಾಗಿದೆ. ಯಾವುದೇ ಹಳ್ಳಿಯತ್ತ ಕಣ್ಣು ಹಾಯಿಸಿದರೂ ಅವರ ಸಾಮಾಜಿಕ ಪರಿಸ್ಥಿತಿ ಅರಿವಾಗುತ್ತದೆ. ಬಹು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಮಾಲಾಗಳಾಗಲಿ ಮಾದಿಗರಾಗಲಿ ಇಬ್ಬರೂ ಸಮಾನರಾಗಿ ಶೋಷಿತರು. ಅಸ್ಪೃಷ್ಯತೆ, ಸಾಮಾಜಿಕ ಪೂರ್ವಾಗ್ರಹ, ತಾರತಮ್ಯ ತಿರಸ್ಕಾರಕ್ಕೆ ಬಲಿಪಶುಗಳಾದವರು, ಅವರು ಅನುಭವಿಸುವ ಸಮಾನ ಸಂಕಟಗಳೇ ಅವರನ್ನು ಬಂಧಿಸುವ ಸಮಾನ ಅಂಶವಾಗಿದೆ.

ಈ ಹಂತದಲ್ಲಿ ಉಲ್ಲೇಖಿಸಬೇಕಾದ ಸಣ್ಣ ಆದರೆ ಬಹು ಮುಖ್ಯವಾದ ಅಂಶವೆಂದರೆ ಪಟ್ಟಿಯಲ್ಲಿ ಸೇರಿಸಿರುವ ಆದಿ ಆಂಧ್ರ ಸಮುದಾಯ. ಆದಿ ಆಂಧ್ರ ಎಂಬ ಪದವು ಸಾಮಾನ್ಯ ಪದವಾಗಿದ್ದು, ಮಾಲ ಮಾದಿಗ ಎರಡೂ ಸಮುದಾಯಗಳನ್ನೂ ಒಳಗೊಳ್ಳುತ್ತದೆ. ಈ ಪದವು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಹುಟ್ಟಿಕೊಂಡಿತು. 1922ರಲ್ಲಿ ಮದ್ರಾಸ್ ಸಂಸ್ಥಾನದ ಶಾಸಕಾಂಗ ಸಮಿತಿಯು ಒಂದು ನಿರ್ಣಯವನ್ನು ಜಾರಿಗೊಳಿಸಿ, ದಕ್ಷಿಣ ಭಾರತದಲ್ಲಿ ದ್ರಾವಿಡ ಸಮುದಾಯವನ್ನು ಉದ್ದೇಶಿಸಿ ಬಳಸಲಾಗುವ ಪಂಚಮ ಅಥವಾ ಪರಯಾ ಪದಗಳನ್ನು ಸರ್ಕಾರಿ ದಾಖಲೆ ಹಾಗು ಇತರೆಡೆಯಿಂದ ತೆಗೆದು ಹಾಕಬೇಕೆಂದು ತಿಳಿಸಿತು. ಬದಲಿಗೆ ತಮಿಳು ರಾಜ್ಯಗಳಲ್ಲಿರುವ ಆದಿ ದ್ರಾವಿಡ, ತೆಲುಗು, ರಾಜ್ಯಗಳಲ್ಲಿರುವ ಆದಿ-ಆಂಧ್ರ ಪದಗಳನ್ನು ಬಳಸಬಹುದು. ಸರ್ಕಾರವು ಒಂದು Undertaking ನೀಡಿ ಪರಿಶಿಷ್ಟರ ಸಮುದಾಯವನ್ನು ತಮಿಳುನಾಡಿನಲ್ಲಿ ಆದಿ ದ್ರಾವಿಡ ಎಂದು, ತೆಲುಗು ರಾಜ್ಯಗಳಲ್ಲಿ ಆದಿ ಆಂಧ್ರ ಎಂದು, ಆ ಸಮುದಾಯದ ನಿರ್ದಿಷ್ಟ ವ್ಯಕ್ತಿಯೆಂದು ತಿಳಿಸಲಾಯಿತು. ಈ ಕುರಿತು ಸರ್ಕಾರಿ ಆದೇಶವನ್ನೂ ಹೊರಡಿಸಲಾಯಿತು. ಆದಿ ಆಂಧ್ರ ಎಂಬ ಪದವು ಆದಿ ದ್ರಾವಿಡ, ಆದಿ ಹಿಂದು, ಆದಿ ಕರ್ನಾಟಕ ಅಥವಾ ಪಂಜಾಬಿನ ಆದಿ ಧರ್ಮಿ ಎಂಬ ಪದಗಳಿಗೆ ಸಮನಾದುದು. ಆದರೂ ಆಂಧ್ರದ ಕರಾವಳಿ ರಾಜ್ಯಗಳಲ್ಲಿರುವ ಆದಿ ಆಂಧ್ರ ಸಮುದಾಯವು ಮಾಲಾ ಸಮುದಾಯವನ್ನೊಳಗೊಂಡಿದೆ.

ಕೆಲವು ಅಪಾರ್ಥಗಳನ್ನು, ತಪ್ಪು ಗ್ರಹಿಕೆಗಳನ್ನು ಸರಿಪಡಿಸಿಕೊಳ್ಳಲು ವಾಸ್ತವಾಂಶಗಳನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಮೊದಲನೆಯದಾಗಿ ಮಾಲ, ಮಾದಿಗ ಜನಸಂಖ್ಯೆ 1981ರ ಜನಗಣತಿಯ ಪ್ರಕಾರ ಆಂಧ್ರಪ್ರದೇಶದಲ್ಲಿರುವ ಪರಿಶಿಷ್ಟ ಜಾತಿಗಳ ಒಟ್ಟು ಜನ ಸಂಖ್ಯೆ 79.62 ಲಕ್ಷಗಳು. ಅಂದರೆ ರಾಜ್ಯದ ಒಟ್ಟು ಜನಸಂಖ್ಯೆಯ ಶೇ. 14.86ರಷ್ಟು. ಈ ಒಟ್ಟು ಜನಸಂಖ್ಯೆಯಲ್ಲಿ ಮಾಲ, 'ಮಾಲ ಸಂಬಂಧಿ ಸಮುದಾಯಗಳು, ಆದಿ ಆಂಧ್ರದ ಭಾಗವಾಗಿರುವ ಮಾಲ ಸಮುದಾಯದ ಒಟ್ಟು ಜನಸಂಖ್ಯೆ ಸುಮಾರು 38 ರಿಂದ 39. ಮಾದಿಗ ಮತ್ತು ಮಾದಿಗ ಸಂಬಂಧಿ ಸಮುದಾಯಗಳು ಹಾಗೂ ಆದಿ ಆಂಧ್ರದ ಭಾಗವಾಗಿರುವ ಮಾದಿಗರ ಒಟ್ಟು ಜನಸಂಖ್ಯೆಯೂ ಸಹ 38 ರಿಂದ 39 ಲಕ್ಷದಷ್ಟು. ಇವೆರಡು ಸಮುದಾಯಗಳಲ್ಲದೆ ವರ್ಗೀಕರಣವಾಗದ ಪರಿಶಿಷ್ಟ ಜಾತಿಗಳಲ್ಲದೆ, 1.34 ಲಕ್ಷದಷ್ಟಿರುವ ರೆಲ್ಲಿಸ್ ಸಮುದಾಯವೂ ಇದೆ. ಇವರ್‍ಯಾರು ಮಾಲ ಅಥವಾ ಮಾದಿಗ ಸಮುದಾಯಕ್ಕೆ ಸೇರದವರು. ಇದನ್ನು ಗಮನಿಸಿದಾಗ ಮಾಲ ಮತ್ತು ಮಾದಿಗ ಸಮುದಾಯದ ಜನಸಂಖ್ಯೆ ಸಮನಾಗಿದೆ ಎಂದು ತಿಳಿಯುತ್ತದೆ. ಕೆಲವು ಪ್ರದೇಶ, ಜಿಲ್ಲೆಗಳಲ್ಲಿ ಐತಿಹಾಸಿಕ ಕಾರಣಗಳಿಂದಾಗಿ ವ್ಯತ್ಯಾಸಗಳಿರಬಹುದು. ಇದೇ ಪ್ರಮಾಣವು 1991ರ ಜನಗಣತಿಯಲ್ಲೂ ಮುಂದುವರೆದಿದೆ. 91ರ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿಗಳ ಒಟ್ಟು ಜನಸಂಖ್ಯೆ 105.92 ಲಕ್ಷ. ಅಂದರೆ ಒಟ್ಟು ಜನ ಸಂಖ್ಯೆಯ ಶೇ. 15.9ರಷ್ಟು ಮೂಲ ಅಥವಾ ಮಾದಿಗರು ಹೇಳುವಂತೆ ಶೇ. 70 ಅಥವಾ ಒಟ್ಟು ಜನಸಂಖ್ಯೆಯಲ್ಲಿ ಹೆಚ್ಚಿನದು ಎಂದು ಹೇಳುವುದು ಉತ್ಪ್ರೇಕ್ಷೆ ಎರಡೂ ಸಮುದಾಯಗಳ ಜನಸಂಖ್ಯೆ ಸಮನಾದುದು ಎಂಬುದು ಅವಿವಾದಿತ ಅಂಶ. ಈ ಅಂಶ ಆಂಧ್ರದ ಯಾವ ಗ್ರಾಮೀಣ ಪ್ರದೇಶವನ್ನು ಗಮನಿಸಿದರೂ ಅರಿವಾಗುತ್ತದೆ. ಪರಿಶಿಷ್ಟ ಸಮುದಾಯವೂ ಸೇರಿದಂತೆ

ಆಂಧ್ರದ ಜನಸಂಖ್ಯೆಯ ಒಂದು ದಶಕದಲ್ಲಿ ಸಹಜವಾಗೇ ಏರಿರುವುದನ್ನು ಕಾಣಬಹುದು. ಒಂದು ದೇಶದ ಅವಧಿಯಲ್ಲಿ ಎಲ್ಲಾ ಜಾತಿಗಳ ಜನಸಂಖ್ಯೆಯೂ ಹೆಚ್ಚಿದೆ. ಹಾಗಾಗಿ 1971, 1981 ಅಥವಾ 1991 ಹೀಗೆ ಯಾವುದೇ ದಶಕದ ಜನಗಣತಿಯನ್ನು ತೆಗೆದುಕೊಂಡರೂ ಪರಿಶಿಷ್ಟ ಜಾತಿಗಳ ಒಟ್ಟು ಜನಸಂಖ್ಯೆಯಲ್ಲಿ ಮಾಲ, ಮಾದಿಗರ ಪ್ರಮಾಣ ಅಥವಾ ಯಾವುದೇ ಬೇರೆ ಸಮುದಾಯಗಳ ಶೇಕಡವಾರು ಜನಸಂಖ್ಯೆಯು ಹೆಚ್ಚು ಕಡಿಮೆ ಒಂದೇ ಆಗಿದೆ. ಒಟ್ಟು ಜನಸಂಖ್ಯೆಗನುಗುಣವಾಗಿ ಪರಿಶಿಷ್ಟ ಜಾತಿಗಳ ಜನಸಂಖ್ಯೆ ಹೆಚ್ಚಿರುವುದನ್ನು ಪರಿಗಣಿಸಬೇಕು. ಕೆಲವರು 1981 ಜನಗಣತಿಯನ್ನು ಆಧರಿಸಿ ಸಮುದಾಯದ ಜನಸಂಖ್ಯಾಶಕ್ತಿಯನ್ನು ಅಂದಾಜು ಮಾಡುವುದು ತಪ್ಪೆಂದು ವಾದಿಸುವುದು ತಪ್ಪು ಗ್ರಹಿಕೆ.

ವಾದ ಮಾಡಲು ಬಳಸುವ ಆಧಾರವೂ ತಪ್ಪು ಗ್ರಹಿಕೆಯಿಂದ ಕೂಡಿದೆ ಎಂಬುದು ವಿಪರ್ಯಾಸ. ಮೇಲ್ಜಾತಿಯವರು ಸಾಮಾಜಿಕ ಆರ್ಥಿಕ ಶೋಷಣೆಗೊಳಪಡಿಸಿ, ದೂರವಿರಿಸಿ, ಅಸ್ಪೃಶ್ಯತೆಯನ್ನು ಆಚರಿಸುವ ಮೂಲಕ ಪರಿಶಿಷ್ಟ ಜಾತಿಗಳಿಗೆ ವಂಚಿಸಿರುವುದು ಐತಿಹಾಸಿಕ ಸತ್ಯ. ಶಾಲೆಗಳು, ದೇವಸ್ಥಾನಗಳು, ಕುಡಿಯುವ ನೀರಿನ ಮೂಲಗಳು, ಸಾರ್ವಜನಿಕ ಸ್ಥಳಗಳು, ಕಛೇರಿಗಳಿಂದ ಪರಿಶಿಷ್ಟ ಜಾತಿಗಳವರನ್ನು ದೂರವಿಟ್ಟಿದ್ದರು. ಆದರೆ ಮಾಲ ಮತ್ತು ಮಾದಿಗರ ನಡುವೆ ಸಾಮಾಜಿಕ ಅಂತರವಿದ್ದಿರಬಹುದಾದರೂ ಮಾಲಗಳು ಮಾದಿಗರನ್ನು ಶೋಷಿಸುತ್ತಾರೆ ಎಂಬುದು ಸರಿಯಲ್ಲ. ಎರಡೂ ಸಮುದಾಯಗಳೂ ಶೋಷಣೆಗೊಳಗಾದಂತಹವು ಮತ್ತು ಅನ್ಯಾಯಕ್ಕೊಳಗಾದ ಮಾನವ ಜನಾಂಗಕ್ಕೆ ಸೇರಿದವರು. ಪ್ರತಿಯೊಂದು ಸಮುದಾಯಕ್ಕೂ ತಮ್ಮದೇ ನಿರ್ದಿಷ್ಟ ಸಾಂಪ್ರದಾಯಿಕ ಕಸುಬುಗಳಿದ್ದರೂ ಎರಡೂ ಸಮುದಾಯಗಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ಹೊಟ್ಟೆಪಾಡಿಗಾಗಿ ಕೃಷಿಯಲ್ಲಿ, ಇತರ ಕ್ಷೇತ್ರದಲ್ಲಿ ಕೂಲಿ ಕೆಲಸ ಮಾಡುವವರೇ. ಲೈಂಗಿಕ ಅತ್ಯಾಚಾರಕ್ಕೆ, ದೌರ್ಜನ್ಯಕ್ಕೆ ಒಳಗಾದವರೇ. ಚಿತ್ತೂರು ಜಿಲ್ಲೆಯ ಪದಿರಿ ಕುಪ್ಪಂ, ಪ್ರಕಾಶಂನ ಕರಮ್‌ಚೇಡು ಗುಂಟೂರಿನ ನೀರುಕೊಂಡ, ಚುಂಡೂರ್, ಮೇದಕ್‌ನ ಔದತ್‌ಪುರದಲ್ಲಿ ಪರಿಶಿಷ್ಟ ಸಮುದಾಯಗಳ ಮೇಲೆ ನಡೆದ ದೌರ್ಜನ್ಯ ಎಲ್ಲರಿಗೂ ಗೊತ್ತಿರುವ ವಿಷಯ. ಕರಮ್ ಚೇಡುವಿನಲ್ಲಿ ಮಾದಿಗರು ಬಲಿಪಶುಗಳಾದರೆ, ಚುಂಡೂರು ಘಟನೆಯಲ್ಲಿ ಮಾಲಾಗಳು ಬಲಿಪಶುಗಳಾಗಿದ್ದಾರೆ. ಆಕ್ರಮಣ ಮಾಡುವವರು ಮಾಲ, ಮಾದಿಗರೆಂಬ ವ್ಯತ್ಯಾಸ ನೋಡುವುದಿಲ್ಲ. ಇಬ್ಬರ ಮೇಲೂ ನಡೆದ ದೌರ್ಜನ್ಯ ಒಂದೇ ರೀತಿಯದು. ಈ ಎಲ್ಲಾ ದೌರ್ಜನ್ಯ ಪ್ರಕರಣಗಳಲ್ಲಿ ಪರಿಶಿಷ್ಟರ ಸಮುದಾಯವು ಒಂದಾಗಿ ನಿಂತಿವೆ.

ನಗರ ಹಾಗೂ ಪಟ್ಟಣಗಳಲ್ಲಿ ಸಾರ್ವಜನಿಕ ಉದ್ಯೋಗ ಅಥವಾ ಸರ್ಕಾರಿ ನೌಕರಿಗಳಲ್ಲಿರುವ ಪರಿಶಿಷ್ಟ ಜಾತಿಯ ಕೆಲವು ಕುಟುಂಬಗಳು ಆರ್ಥಿಕವಾಗಿ ಕೊಂಚ ಉತ್ತಮವಾಗಿದ್ದಾರೆಂಬುದು ಸತ್ಯ. ಕೆಲವೆ ಕೆಲವರನ್ನು ಬಿಟ್ಟರೆ ಬಹಳಷ್ಟು ಮಂದಿ ಅಟೆಂಡರ್ ಮತ್ತು ಇತರೆ

ಪರಿಶಿಷ್ಟ ಜಾತಿಗಳ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಬಗ್ಗೆ ಕಾಳಜಿ ಇರುವ, ಕಳೆದ ನಾಲ್ಕು ದಶಕಗಳಿಂದ ಅವರ ಹೋರಾಟವನ್ನು ಹತ್ತಿರದಿಂದ ಗುರುತಿಸಿಕೊಂಡ ನಮ್ಮಂತಹವರಿಗೆ ಈಗಿನ ಪರಸ್ಪರ ದೋಷಾರೋಪದ ಪರಿಸ್ಥಿತಿಯು ಅತ್ಯಂತ ವೇದನೆಯ ವಿಷಯವಾಗಿದೆ. ಎರಡೂ ಸಮುದಾಯಗಳಿಗೆ ನಾನು ದೃಢವಾಗಿ, ಮನಃಪೂರ್ವಕವಾಗಿ ಮಾಡಿಕೊಳ್ಳುವ ಮನವಿ ಎಂದರೆ ಇಬ್ಬರೂ ಒಂದಾಗಬೇಕು ಈ ಹುಚ್ಚು ಆವೇಶವನ್ನು ವಿಶೇಷವಾಗಿ ಹಳ್ಳಿಗಳಿಗೆ ಹಬ್ಬಿಸಬಾರದು, ಮಾಲಗಳು ಕೇವಲಮಾಲಗಳ ಹಿತಾಸಕ್ತಿ ಕಾಪಾಡಿ ಕೊಳ್ಳುವಂತಾಗಬಾರದು. ಎರಡೂ ಸಮುದಾಯದಲ್ಲಿನ ಸದಸ್ಯರು, ನಾಯಕರು, ಕಾರ್ಯಕರ್ತರು ಒಗ್ಗಟ್ಟಿನಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಹೊರಗಿನ ಪಟ್ಟಭದ್ರ ಹಿತಾಸಕ್ತಿಗಳ ಬಗ್ಗೆ ಜಾಗರೂಕರಾಗಿರಬೇಕು. ಆರೋಪ ಪ್ರತ್ಯಾರೋಪಗಳಿಲ್ಲದ ದಿನಗಳೇ ಇಲ್ಲದಂತಾಗಿದೆ. ಪರಸ್ಪರ ಸೌಹಾರ್ದತೆ ಸಾಧಿಸಿಕೊಳ್ಳಬೇಕಾದ ಸಂದರ್ಭ ಬಂದಿದೆ.

ಕೆಳ ದರ್ಜೆಯ ನೌಕರಿಗಳಲ್ಲಿ ಕೆಲಸ ಮಾಡುತ್ತಿದ್ದು ಸಾಮಾಜಿಕ ಅಸಮಾನತೆಗೊಳಗಾಗಿದ್ದಾರೆ. ಇತ್ತೀಚಿನ ದಶಕಗಳಲ್ಲಿ ಮೀಸಲಾತಿಯಿಂದಾಗಿ ವಕೀಲರು, ವೈದ್ಯರು, ಇಂಜಿನಿಯರುಗಳಂತಹ ವೃತ್ತಿಪರ ಗುಂಪು ಪರಿಶಿಷ್ಟರ ಸಮುದಾಯದಿಂದ ಬಂದಿದ್ದಾರೆ. ಇವು ಕೆಲವು ಉತ್ತಮ ಬೆಳವಣಿಗೆಗಳು.

ಆಂಧ್ರಪ್ರದೇಶದಲ್ಲಿ ಮಾಲಗಳಿಗಿಂತ ಮಾದಿಗರು ಕೊಂಚ ಹಿಂದುಳಿದಿದ್ದಾರೆ. ಉನ್ನತ ಶಿಕ್ಷಣ, ಸಾರ್ವಜನಿಕ ಸೇವಾ ಕ್ಷೇತ್ರ ಹಾಗು ಇತರೆ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಗಮನಿಸಿದಾಗ ಕಂಡು ಬರುವ ಅಂಶವಿದು. ಆದರೆ ಮಾದಿಗರಿಗೆ ಯಾವುದೇ ಸೌಲಭ್ಯಗಳು ದೊರೆತೇ ಇಲ್ಲ ಎಂಬಂತೇನೂ ಇಲ್ಲ. ಅಥವಾ ಮಾಲಾಗಳೇ ಎಲ್ಲವನ್ನೂ ಕಬಳಿಸಿಕೊಂಡು ಮಾದಿಗರನ್ನು ವಂಚಿಸಿದ್ದಾರೆಂಬುದು ಸರಿಯಲ್ಲ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ವರದಿಗಳನ್ನು ಆದರಿಸಿ ರಾಮಚಂದ್ರರಾಜು ಆಯೋಗವು ನೀಡಿದ ವರದಿಯು, ಪರಿಶಿಷ್ಟರಿಗೆಂದು ಮೀಸಲಿಟ್ಟು ಸಾರ್ವಜನಿಕ ಉದ್ಯೋಗ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಸೀಟುಗಳಲ್ಲಿರುವ, ಮಾಲ-ಮಾದಿಗರ ಪ್ರಮಾಣವು ಸಮನಾಗಿಲ್ಲ ಎಂದು ತಿಳಿಸಿದೆ. ಎರಡೂ ಸಮುದಾಯದ ಜನಸಂಖ್ಯೆಯು ಸಮನಾಗಿರುವುದರಿಂದ ಮಾಲರಿಗಿಂತ ಮಾದಿಗರಿಗೆ ಕಡಿಮೆ ಪಾಲು ಸಿಕ್ಕಿದೆ ಎಂಬುದು ಕಂಡು ಬರುತ್ತದೆ. ಇಂತಹ ಸ್ಥಿತಿ ನಿರ್ಮಾಣವಾಗಿರುವುದಕ್ಕೆ ಹಲವಾರು ಐತಿಹಾಸಿಕ ಕಾರಣಗಳಿವೆ. ಆಂಧ್ರದ ಕರಾವಳಿ ರಾಜ್ಯಗಳಲ್ಲಿನ ಉತ್ತಮ ಬೆಳವಣಿಗೆಗೆ ಶಿಕ್ಷಣ ಅವಕಾಶಗಳು, ಪರಿಣಾಮಕಾರಿ ಶಿಕ್ಷಣ ಪ್ರಸಾರ, ಮಿಶನರಿ ಚಟುವಟಿಕೆಗಳು, ಮೊದಲ ತಲೆಮಾರಿಗೆ ಸಿಕ್ಕ ಉದ್ಯೋಗಾವಕಾಶ, ಇತರೆ ಕಾರಣಗಳಿವೆ. ಸದ್ಯದ ಪರಿಸ್ಥಿತಿಯು ಅಸಮತೋಲನವನ್ನು ಸೂಚಿಸುವುದರಿಂದ ಅದನ್ನು ಸರಿಪಡಿಸುವ ಸೂಕ್ತ ಅಗತ್ಯವಿದೆ. ಜನಸಂಖ್ಯೆಗನುಗುಣವಾಗಿ ಲಭ್ಯವಿರುವ ಉದ್ಯೋಗಾವಕಾಶಗಳನ್ನು ಪಡೆದುಕೊಳ್ಳುವ ಮೂಲಕ ಕೊರತೆ ನೀಗಿಸಿ ಅಸಮತೋಲನವನ್ನು ಸರಿಪಡಿಸಬಹುದು.

ಸಾರ್ವಜನಿಕ ಕ್ಷೇತ್ರದಲ್ಲಿ ನೌಕರಿ ಮಾಡುವವರ ಸಂಖ್ಯೆಯು ಒಟ್ಟು ಜನಸಂಖ್ಯೆಯಲ್ಲಿನ ಶೇ. 4ರಷ್ಟು ಮಾತ್ರ. ಅವರಲ್ಲಿ, ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಜಾತಿಗಳವರು ಕಣ್ಣಿಗೆ ಕಾಣುವಂತಿದ್ದು ತಮ್ಮನ್ನು ಪ್ರತಿಪಾದಿಸಿಕೊಳ್ಳುವ ಸಮರ್ಥರು. ಇದೊಂದು ಕಡೆಗಣಿಸುವಂತದ್ದಲ್ಲವಾದರೂ ಸಣ್ಣ ಗುಂಪಷ್ಟೆ. ಉದಾರೀಕರಣದ ಪ್ರಭಾವ ಹಾಗು ಸಾರ್ವಜನಿಕ ಉದ್ದಿಮೆಗಳು ಇಳಿಮುಖವಾಗುತ್ತಿರುವ ಸಂದರ್ಭವನ್ನು ನೋಡಿದಾಗ ಮುಂದೆ ಉದ್ಯೋಗಾವಕಾಶಗಳು ಇನ್ನೂ ಕಡಿಮೆಯಾಗಲಿದೆ. ರಾಜ್ಯ ಸರ್ಕಾರವು ಆದೇಶ ನೀಡಿರುವ ವರ್ಗೀಕರಣವನ್ನು ಕೋರ್ಟು ಎತ್ತಿ ಹಿಡಿದರೂ ಅದು ಸಾರ್ವಜನಿಕ ಕ್ಷೇತ್ರದಲ್ಲಿನ ಕೇಂದ್ರ ಸರ್ಕಾರಿ ಅಥವಾ ಕೇಂದ್ರದ ಉದ್ದಿಮೆಗಳಿಗೆ ಅನ್ವಯಿಸುವುದಿಲ್ಲ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ರಾಜ್ಯ ಸರ್ಕಾರದ ಉದ್ಯೋಗಗಳಲ್ಲಿ ಹೆಚ್ಚಿನದು ಗುಮಾಸ್ತರ ಅಥವಾ ಅದಕ್ಕಿಂತ ಕೆಳಮಟ್ಟದ ಹುದ್ದೆಗಳು. ಈ ಯಾವ ಹುದ್ದೆಗಳು ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸವು. ಸಾರ್ವಜನಿಕ ಕ್ಷೇತ್ರ ಹಾಗು ಅದರೊಂದಿಗಿರುವ ಮೀಸಲಾತಿ ಸೌಲಭ್ಯದ ಪ್ರಾಮುಖ್ಯತೆಯನ್ನು ಕಡೆಗಣಿಸುವಂತಿಲ್ಲ. ಆದರೂ ಮುಂಬರುವ ವರ್ಷಗಳಲ್ಲಿ ಸಾರ್ವಜನಿಕ ಕ್ಷೇತ್ರಗಳಲ್ಲಿನ ಉದ್ಯೋಗಗಳು ಕಡಿಮೆಯಾಗಲಿವೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಸರ್ಕಾರಿ ಕೆಲಸಗಳಿಗಾಗಿ ಹೊಡೆದಾಡುವುದು ವ್ಯರ್ಥ. ಸಮಸ್ಯೆ ಪ್ರಾರಂಭವಾಗಿರುವುದೇ ಮೀಸಲಾತಿ ನೀತಿಯಿಂದಾಗಿ ಪರಿಶಿಷ್ಟ ಜಾತಿಯ ಜನರು ಪಡೆದುಕೊಂಡಿರುವ ಲಾಭದಿಂದ. ಮೀಸಲಾತಿಯೇ ಇಲ್ಲದಾಗ ಅಥವಾ ಸೇವಾ ಕ್ಷೇತ್ರದಲ್ಲಿ ತೀರಾ ನಗಣ್ಯವೆನಿಸುವಂತಹ ಅವಕಾಶವಿರುವಂತಹ ಸಂದರ್ಭದಲ್ಲಿ ಜಗಳಕಾಯುವ, ಹಂಚಿಕೊಳ್ಳುವ ಪ್ರಮೇಯವೇ ಬರುವುದಿಲ್ಲ. ಆದರೆ ಹಲವಾರು ದಶಕಗಳಿಂದ ಹೋರಾಡಿ ಪಡೆದುಕೊಂಡಿರುವುದರ ಹಂಚಿಕೆಯೂ ವಿವಾದಕ್ಕೆ ಕಾರಣವಾಗಿದೆ. ಇಂತಹ ಪರಿಸ್ಥಿತಿಯೇ ಬರಬಾರದಾಗಿತ್ತು. ನಮ್ಮಂತಹ ವಿಭಜಿತ ಸಮಾಜದಲ್ಲಿ ಈ ರೀತಿಯ ತಿಕ್ಕಾಟ ಬರುವುದು ಸಾಮಾನ್ಯ. ಕೋರ್ಟಿನ ತೀರ್ಮಾನ ಏನೇ ಆಗಬಹುದು. ಪರಿಹಾರ ಹುಡುಕುವ ಜವಾಬ್ದಾರಿ ಒಟ್ಟು ಸಮಾಜದ ಮೇಲಿದೆ. ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿಗಳ ಸಮುದಾಯದ ಮೇಲಿದೆ.

ಒತ್ತು ನೀಡಬೇಕಾದ ಮತ್ತೊಂದು ಅಂಶವೆಂದರೆ, ಶಾಸನ ನೀಡಿರುವ ಸೌಲಭ್ಯಗಳಾದ ಉದ್ಯೋಗಾವಕಾಶ, ವೈದ್ಯಕೀಯ, ಇಂಜಿನಿಯರಿಂಗ್‌ನಂತಹ ತಾಂತ್ರಿಕ ಕೋರ್ಸುಗಳಿಗೆ ಪ್ರವೇಶಾವಕಾಶವಲ್ಲದೆ ಇತರೆ ಸೌಲಭ್ಯ ಮತ್ತು ವ್ಯವಸ್ಥೆಗಳಾದ ಹಾಸ್ಟೆಲುಗಳು, ಸ್ಕಾಲರ್‌ಶಿಪ್ ಹಾಗೂ ಇತರೆ ಶೈಕ್ಷಣಿಕ ಸೌಲಭ್ಯಗಳು ಕುಡಿವ ನೀರಿನ ವ್ಯವಸ್ಥೆ, ವಸತಿಯಂತಹವು ಬೇಕಾದಷ್ಟಿದೆ. ಇವ್ಯಾವು ವಿವಾದಸ್ಪದವಾಗಬಾರದು. ರಾಜಕೀಯ ಪ್ರತಿನಿಧಿತ್ವ ಕುರಿತಂತೆ ಸಮತೋಲನವುಳ್ಳ ರಾಜಕೀಯ ಶಕ್ತಿಗಳು ತೀರ್ಮಾನಿಸುತ್ತವೆಯೆ ಹೊರತು ಯಾವ ಸರ್ಕಾರಿ ಆದೇಶಗಳು ತೀರ್ಮಾನಿಸಲಾರವು.

ಅತ್ಯಂತ ದುರದೃಷ್ಟಕರ ಬೆಳವಣಿಗೆ ಎಂದರೆ ಚರ್ಚೆಯನ್ನು ಪರಸ್ಪರ ಆರೋಪಿಸುವ, ಎತ್ತಿಕಟ್ಟುವ, ನಿಂದಿಸುವ ದಾರಿಯಲ್ಲಿ ನಡೆಸುತ್ತಿರುವುದು. ಸರಿಯಾದ ಮಾಹಿತಿ ಇಲ್ಲದ ಗುಂಪುಗಳು ಕೆಣುಕುವಂತಹ ಘೋಷಣೆಗಳನ್ನು, ಹೇಳಿಕೆಗಳನ್ನು ನೀಡುತ್ತಿರುವುದು ಮಾಲಾ vs ಮಾದಿಗ ಎಂದು ಎರಡೂ ಸಮುದಾಯಗಳು ಯಾವಾಗಲೂ ಪರಸ್ಪರ ವಿರುದ್ಧವಾಗಿದ್ದವೆಂಬಂತೆ ಬಿಂಬಿಸುತ್ತದೆ. ಪರಿಶಿಷ್ಟರ ಪಟ್ಟಿಯಿಂದ ಮಾಲಗಳನ್ನು ತೆಗೆದುಹಾಕಬೇಕೆಂಬ ಅತಿರೇಕದ ಬೇಡಿಕೆಗಳು ಹಾಸ್ಯಾಸ್ಪದವಾಗಿದೆ. ಹಾಗೆಯೇ ಜಾತಿಯಾಧಾರಿತ ಕಸುಬಿನಿಂದಾಗಿ ಅಥವಾ ಶಿಕ್ಷಣವಿಲ್ಲದ ಕಾರಣ ಮಾದಿಗರಿಗೆ ಉದ್ಯೋಗಾವಕಾಶಗಳು ಸಿಗುತ್ತಿಲ್ಲವೆಂಬ ಹೇಳಿಕೆಗಳು ಮೀಸಲಾತಿ ತತ್ವದ ಹಿಂದಿರುವ ಉದ್ದೇಶವನ್ನು ಕಡೆಗಣಿಸುತ್ತವೆ. ಕೆಳಗಿರುವವರನ್ನು ಮೇಲೆತ್ತುವುದೇ ಮೀಸಲಾತಿಯ ಉದ್ದೇಶವಾಗಿದೆ.

ತಮ್ಮನ್ನು ಪ್ರತಿಪಾದಿಸಿಕೊಳ್ಳುವ ಮಾಲಗಳು ಮತ್ತವರ ನಾಯಕತ್ವವು ಮಾದಿಗರು ಕೆಲವು ಹೆಜ್ಜೆ ಹಿಂದೆ ಬಿದ್ದಿದ್ದಾರೆ ಅವರಿಗೆ ವಿಶೇಷ ಬೆಂಬಲದ ಅಗತ್ಯವಿದೆ ಎಂಬುದನ್ನು ಅರಿತುಕೊಳ್ಳಬೇಕು. ಮಾದಿಗ ಸಮುದಾಯವು ತಾವು ಕಡಿಮೆ ಅಭಿವೃದ್ಧಿ ಹೊಂದಿದ್ದರೆ ಅದಕ್ಕೆ ಮಾಲಗಳಲ್ಲ ಕಾರಣ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅವರಿಬ್ಬರ ಕಿತ್ತಾಟ ಪರಸ್ಪರ ನಿಂದನೆಗಳು ಇಡೀ ಪರಿಶಿಷ್ಟ ಜಾತಿಗಳ ಸಮುದಾಯಕ್ಕೆ ವಿಶೇಷವಾಗಿ ಒಟ್ಟಿಗೆ ವಾಸಿಸುವ, ಕೆಲಸ ಮಾಡುವ ಹಳ್ಳಿಗಳಲ್ಲಿ ಮಾರಕ ಪರಿಣಾಮ ಬೀರುತ್ತದೆ ಎಂಬುದನ್ನು ಅರಿಯಬೇಕಾಗಿದೆ. ಸಾಮರ್ಥ್ಯ ಮತ್ತು ಒಗ್ಗಟ್ಟಿಗೆ ಧಕ್ಕೆಯಾದರೆ ಅದು ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಣಾಮಗಳಿಗೆ ಕಾರಣವಾಗುತ್ತವೆ. ಎರಡೂ ಸಮುದಾಯಗಳು ತಮ್ಮ ನಡುವೆ ಹಾಗು ಒಟ್ಟು ಸಮಾಜದಲ್ಲಿ ಸಮಾನತೆ ಸಾಧಿಸಿಕೊಳ್ಳಬೇಕಾಗಿರುವ ಅಗತ್ಯವನ್ನು ಮನಗಾಣಬೇಕಾಗಿದೆ. ಉದ್ಯೋಗ ಮತ್ತು ಸೀಟುಗಳನ್ನು ಹಂಚಿಕೊಳ್ಳುವುದು ಒಗ್ಗಟ್ಟನ್ನು ಬಲಪಡಿಸುವ ಪ್ರಕ್ರಿಯೆಯ ಭಾಗವಾಗಬೇಕು. ದುಡಿಯುವ ವರ್ಗದ ಸಮುದಾಯವು ಒಗ್ಗಟ್ಟಾಗಿರಬೇಕಾದುದರ ಅಗತ್ಯವನ್ನು ಅರಿತು, ಒಟ್ಟಿಗೆ ಕೂತು ಒಪ್ಪಂದಕ್ಕೆ ಬರಬೇಕು. ಪರಸ್ಪರ ದೂಷಿಸಿಕೊಂಡು ದೂರಾಗುವುದು ದುರದೃಷ್ಟಕರ.

ವಿಷಯವನ್ನು ಮಾಲ vs ಮಾದಿಗ ಎಂದು ನೋಡುವುದು ಸರಿಯಲ್ಲ. ಒಂದು ನಿರ್ದಿಷ್ಟ ಐತಿಹಾಸಿಕ ಸಂದರ್ಭದಲ್ಲಿ ಮತ್ತು ಅಸಮತೋಲನವನ್ನು ಕಡಿಮೆ ಮಾಡುವ ಪ್ರಯತ್ನವಾಗಬೇಕಾದ ಸಮಯದಲ್ಲಿ ಎರಡೂ ಸಮುದಾಯಗಳಲ್ಲಿ ಬೆಳವಣಿಗೆಯ ಮಟ್ಟದಲ್ಲಿನ ವ್ಯತ್ಯಾಸದಿಂದಾಗಿ ಉದ್ಭವವಾಗಿರುವ ವಿಷಯವಾಗಿ ನೋಡಬೇಕಿದೆ. ವಿರೋಧಾಭಾಸವುಂಟಾಗಿ ಘರ್ಷಣೆಗೆ ಕಾರಣವಾಗಿರುವುದರಲ್ಲಿ ಅನುಮಾನವಿಲ್ಲ. ಇದು ಪರಸ್ಪರ ಅರ್ಥಮಾಡಿಕೊಂಡು, ಬಗೆ ಹರಿಸಿಕೊಳ್ಳಲಾಗದಂತಹ, ಶತೃತ್ವದ ವೈರುಧ್ಯವೇನಲ್ಲ. ಎರಡೂ ಸಮುದಾಯಗಳು, ತಾವಿಬ್ಬರೂ ಅಸ್ಪೃಶ್ಯತೆಯ ಹಿಡುಗಿನಿಂದ ಸಮಾನ ತೊಂದರೆಗೆ ಒಳಗಾದವರು, ಅದೇ ಅವರನ್ನು ಒಟ್ಟಾಗಿಟ್ಟಿರುವುದಕ್ಕೂ ಕಾರಣವಾಗಿದೆ ಎಂಬುದನ್ನು ಅರಿತುಕೊಳ್ಳಬೇಕಿದೆ. ಇಬ್ಬರೂ ಒಟ್ಟಿಗೆ ಹೋರಾಡಬೇಕಿದೆ ಅಥವಾ ತೊಂದರೆಯನುಭವಿಸಬೇಕಿದೆ. ಪರಿಶಿಷ್ಟ ಜಾತಿಗಳು ಎಣೆಯಿಲ್ಲದ ಯಾತನೆಯನ್ನು ಅನುಭವಿಸಿವೆ. ಅವರು ಸಾಮುದಾಯಿಕ ಪ್ರಜ್ಞೆಯನ್ನು, ಸಮಾನ ಪರಂಪರೆಯನ್ನು ಹಂಚಿಕೊಂಡು ಬದುಕಿದವರು. ಅವರದ್ದೆಲ್ಲ ಒಂದೇ ಹಣೆ ಬರಹ.

ಪರಿಶಿಷ್ಟ ಜಾತಿಗಳ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಬಗ್ಗೆ ಕಾಳಜಿ ಇರುವ, ಕಳೆದ ನಾಲ್ಕು ದಶಕಗಳಿಂದ ಅವರ ಹೋರಾಟವನ್ನು ಹತ್ತಿರದಿಂದ ಗುರುತಿಸಿಕೊಂಡ ನಮ್ಮಂತಹವರಿಗೆ ಈಗಿನ ಪರಸ್ಪರ ದೋಷಾರೋಪದ ಪರಿಸ್ಥಿತಿಯು ಅತ್ಯಂತ ವೇದನೆಯ ವಿಷಯವಾಗಿದೆ. ಎರಡೂ ಸಮುದಾಯಗಳಿಗೆ ನಾನು ದೃಢವಾಗಿ, ಮನಃಪೂರ್ವಕವಾಗಿ ಮಾಡಿಕೊಳ್ಳುವ ಮನವಿ ಎಂದರೆ ಇಬ್ಬರೂ ಒಂದಾಗಬೇಕು ಈ ಹುಚ್ಚು ಆವೇಶವನ್ನು ವಿಶೇಷವಾಗಿ ಹಳ್ಳಿಗಳಿಗೆ ಹಬ್ಬಿಸಬಾರದು, ಮಾಲಗಳು ಕೇವಲಮಾಲಗಳ ಹಿತಾಸಕ್ತಿ ಕಾಪಾಡಿಕೊಳ್ಳುವಂತಾಗಬಾರದು. ಎರಡೂ ಸಮುದಾಯದಲ್ಲಿನ ಸದಸ್ಯರು, ನಾಯಕರು, ಕಾರ್ಯಕರ್ತರು ಒಗ್ಗಟ್ಟಿನಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಹೊರಗಿನ ಪಟ್ಟಭದ್ರ ಹಿತಾಸಕ್ತಿಗಳ ಬಗ್ಗೆ ಜಾಗರೂಕರಾಗಿರಬೇಕು.

1985ರ ಜುಲೈನಲ್ಲಿ ಕರೆಮಚೇಡ ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ನಡೆದ ದೌರ್ಜನ್ಯದ ಸಂದರ್ಭದಲ್ಲಿ ಎಲ್ಲರೂ ಒಗ್ಗಟ್ಟಾಗಿ ನಿಂತಿದ್ದಕ್ಕೆ ನಾನು ಸಾಕ್ಷಿಯಾಗಿದ್ದೆ. ಆ ಒಗ್ಗಟ್ಟನ್ನು ಮರಳಿ ಪಡೆಯಬೇಕಾಗಿದೆ. ●

ಗಂಡಭೇರುಂಡ ಪಕ್ಷಿಯ ಕಥೆ

ಎಲ್ಲೋ, ಒಂದು ಓದಿದ ಕತೆಯ ಗಂಢಬೇರುಂಡ ಪಕ್ಷಿಯು ನನ್ನ ತಲೆಯಲ್ಲಿ ಆಗಾಗ ಹಾರಾಡುತ್ತಿರುತ್ತದೆ. ಆ ಗಂಡ ಭೇರುಂಡ ಪಕ್ಷಿ ಹಾರುತ್ತಾ ವಿಹರಿಸಿಕೊಂಡು ಬಂದು ಒಂದು ನದೀ ದಡದಲ್ಲಿ ಕೂತು, ಅದರ ಒಂದು ತಲೆ ಒಂದು ಕಡೆ, ಇನ್ನೊಂದು ತಲೆ ಇನ್ನೊಂದು ಕಡೆ ನೋಡುತ್ತಾ ಆನಂದಿಸುತಿಹುದು. ಅಷ್ಟರಲ್ಲಿ ಆ ಹರಿಯೋ ನದೀಲಿ ತೇಲುತ್ತಾ ಒಂದು ಫಲವು ಆ ಪಕ್ಷಿ ನೋಡಿಯೋ ಎಂಬಂತೆ ದಡದಲ್ಲಿ ಬಂದು ನಿಂತಿತು. ಇದ ಕಂಡ ಆ ಪಕ್ಷಿಯ ಒಂದು ತಲೆಯು ಇನ್ನೇನು ಆ ಫಲವನ್ನು ಕುಕ್ಕಿ ತಿನ್ನಬೇಕು ಅನ್ನುವಷ್ಟರಲ್ಲಿ ಆ ಪಕ್ಷಿಯ ಇನ್ನೊಂದು ತಲೆ "ನಿಲ್ಲಿಸು ತಿನ್ನಬೇಡ" ಎಂದಿತು. ತೊಗಟೆಗೆ ಕೊಕ್ಕು ಸಿಕ್ಕಿಸಿದ್ದ ತಲೆಯು ಸುರಿಯುವ ಜೊಲ್ಲು ಉಗಿತು "ಯಾಕೆ ತಿನ್ನಬಾರದು?" ಎಂದು ಕಿಡಿಕಿಡಿಯಾಗಿ ಕೇಳಿತು.

ಇನ್ನೊಂದು ತಲೆಯು ಇನ್ನಷ್ಟು ಕಿಡಿಯಾಗಿ

"ಯಾಕೆ ಅಂದರೆ? ನಾನು ತಿನ್ನಬಾರದೆ?"

"ಮೊದಲು ನೋಡಿದ್ದು ನಾನಲ್ಲವೆ?

"ನಮ್ಮ ದೇಹ ಒಂದೇ ಅಲ್ಲವೇ?

ದೇಹ ಒಂದೇ ಆದರೂ ತಿನ್ನುವ ಬಾಯಿ ಬೇರೆ ಬೇರೆ ಅಲ್ಲವೆ?-ಹೀಗೆ ವಾಗ್ವಾದ ನಡೆದು ಮೊದಲು ಹಣ್ಣು ಕಂಡ ತಲೆಯೆ ಪೂರ್ತಾ ಹಣ್ಣು ತಿಂದಿತು. ತಿನ್ನದ ತಲೆ ಕಣ್ಣು ಮುಚ್ಚಿಕೊಂಡು ಕಣ್ಣು ತೆರೆದರೆ ಕಂಡದ್ದೇನು? ಇನ್ನೊಂದು ಫಲವು ನದೀಲಿ ತೇಲಿಕೊಂಡು ಬರುತಲಿದೆ. ಮೊದಲ ಹಣ್ಣು ತಿನ್ನದಿದ್ದ ತಲೆಯು ಇನ್ನೇನು ತಿನ್ನಬೇಕು ಅಷ್ಟರಲ್ಲಿ ಇನ್ನೊಂದು ತಲೆಯು ಗಾಬರಿಯಿಂದ "ಅಯ್ಯಯ್ಯೋ, ವಿಷದ ಫಲ" ತಿನ್ನಬೇಡ ಎಂದಿತು. ಇದರಿಂದ ಮೊದಲ ತಲೆಗೆ ಸಂತೋಷವೇ ಆಗಿ "ನನ್ನ ತಲೆ, ನಾನು ತಿಂತೇನೆ ನಿಂಗೇನು?" ಎಂದಾಗ, ಇನ್ನೊಂದು ತಲೆಯು "ನೀನೇ ತಿಂದರೂ ನಮ್ಮ ದೇಹ ಒಂದೇ ಅಲ್ಲವೇ?" ಅಂದುದಕ್ಕೆ ಈ ತಲೆಯು ದೇಹ ಒಂದಾದರೂ ತಿನ್ನುವ ಬಾಯಿ ಬೇರೆ ಬೇರೆ ಅಲ್ಲವೆ? ಎಂದು ಆ ಹಣ್ಣನನ್ನು ತಿಂದೇ ತಿಂದಿತು- ಹೀಗೆ ತಿಂದಾದ ಮೇಲೆ ಇಡೀ ದೇಹಕ್ಕೆ ಬೆಂಕಿ ಕೆಂಡವ ಸುರಿದಂತಾಗಿ ಆ ಉರಿಗೆ ದೇಹವಿಡೀ ವಿಲಿವಿಲಿ ಒದ್ದಾಡಿ ಮತ್ತು ಕೊನೆಯದಾಗಿ ಆ ಪಕ್ಷಿಯು ಸತ್ತಿತು.

ಪ್ರೀತಿಯ ಸ್ನೇಹಿತರೇ ಕೇಳಿ, ಅಸ್ಪೃಶ್ಯರಿಗೆ ದೇಹ ಒಂದೇ ಆದರೂ ತಲೆ ನೂರೆಂಟು- ಎಡಗೈ, ಬಲಗೈ, ಎಡಗೈ ಹೆಬ್ಬೆರಳು, ಕಿರುಬೆರಳು, ಬಲಗೈ ಹೆಬ್ಬೆರಳು, ಕಿರುಬೆರಳು-ಹೀಗೆ ನೂರೆಂಟು. ನರಿನಾಯಿಗಳಂತಿರುವ ದಲಿತ ರಾಜಕಾರಣಿಗಳೂ ತಮ್ಮ ಉಳಿವಿಗಾಗಿ ಅಸ್ಪೃಶ್ಯರೊಳಗಿನ ಭಿನ್ನತೆಯನ್ನು ಹೆಚ್ಚಿಸುತ್ತಿರುವರು. ಆದರೆ ನೆನಪಿರಲಿ ಗಂಡಭೇರುಂಡ ಪಕ್ಷಿಯಂತೆ ಸಾಯುವವರು ಒಟ್ಟಿಗೆ ದೇಹವಾದ ನಾವೂ, ನಮ್ಮ ಸಾವಿಗೆ ಸ್ವಲ್ಪ ಕಾಲಾವಕಾಶವಿರುವಾಗಲೇ ಅಸ್ಪೃಶ್ಯ ಮತ್ತಿತರ ಸಣ್ಣ ಪುಟ್ಟ ಜಾತಿಗಳೊಳಗಿನ ಭಿನ್ನತೆಯನ್ನು ಮೊದಲು ಕಿತ್ತೆಸೆದರೆ ಮಾತ್ರ ನಮ್ಮ ಉಳಿವು. ಈಗ ಗಂಡಭೇರುಂಡ ಕತೆಯು ನಿಮ್ಮ ತಲೆಯೊಳಗೆ ಹಾರಾಡಲಿ.

❍ ದೇವನೂರ ಮಹದೇವ

ಬೋಧಿ ವೃಕ್ಷ

ಕುಶಿನಾರದ ಸಾಲ ವೃಕ್ಷಗಳ ನೆರಳಲ್ಲಿ

ಇದು ಸುಮಾರು ಎರಡು ಸಾವಿರದ ಐನೂರ ವರ್ಷಗಳ ಹಿಂದೆ ನಡೆದ ಮಾತು. ಮಗಧದ ರಾಜಧಾನಿ ರಾಜಗೃಹದಲ್ಲಿ ಮಹಾಪುರುಷನೊಬ್ಬ ಹುಟ್ಟು-ಸಾವುಗಳ ಭವಚಕ್ರದಿಂದ ಪಾರಾಗುವ ನಿರ್ವಾಣದ ದಾರಿಯ ಬಗ್ಗೆ ಪ್ರತಿ ದಿನವೂ ಪ್ರವಚನ ನೀಡುತ್ತಿದ್ದ.

ವ್ಯಾಪಾರಕ್ಕೆಂದು ರಾಜಗೃಹಕ್ಕೆ ಬಂದಿದ್ದ ವೇಸಾಲ ಪಟ್ಟಣದ ವರ್ತಕನೊಬ್ಬ ಮನುಷ್ಯ ಸಹಜ ಕುತೂಹಲದಿಂದ ಆ ಪ್ರವಚನಗಳನ್ನು ಕೇಳಲು ಹೋದ. ವ್ಯಾಪಾರಿಗೆ ಆ ಮಹಾಪುರುಷನ ಮಾತುಗಳು ಹಿಡಿಸಿದವು. ಅವುಗಳಲ್ಲಿ ಸತ್ಯವಿದೆ ಎಂದು ತೋರಿತು. ಆದರೆ ಎಷ್ಟಾದರೂ ಆತ ವ್ಯಾಪಾರಿ. ಒಬ್ಬ ವ್ಯಾಪಾರಿಗೆ ಸಹಜವಾದ ಅನುಮಾನಗಳು ಅವನನ್ನು ಕಾಡಲು ಪ್ರಾರಂಭಿಸಿದವು.

ಒಂದು ದಿನ ಬೆಳಿಗ್ಗೆ ಆತ ಆ ಮಹಾಪುರುಷನನ್ನು ಕಾಣಲು ಹೋದ. ಆ ಮಹಾಪುರುಷನಿಗೆ ವಂದಿಸಿ ಹೇಳಿದ, 'ಭಗವಾನರು ನನ್ನನ್ನು ಮನ್ನಿಸಬೇಕು. ನಾನು ಪ್ರತಿ ದಿನ

○ ಕೆ.ಎಂ. ಶಂಕರಪ್ಪ

ತಮ್ಮ ಪ್ರವಚನ ಕೇಳಲು ಬರುವವರಲ್ಲಿ ಒಬ್ಬ. ತಾವು ಹೇಳುವುದೆಲ್ಲಾ ನೂರಕ್ಕೆ ನೂರರಷ್ಟು ಸತ್ಯ ಎಂದು ನನಗನ್ನಿಸಿದೆ. ಆದರೂ ನನ್ನದೇ ಆದ ಕೆಲವು ಅನುಮಾನಗಳು ನನ್ನನ್ನು ಕಾಡುತ್ತಿವೆ. ಅದನ್ನು ಕೇಳಿ ಪರಿಹರಿಸಿಕೊಳ್ಳಲೆಂದು ಭಗವಾನರಲ್ಲಿ ಬಂದೆ'.

'ಯಾವ ಅನುಮಾನಗಳು ಹೇಳಿ ಬಂಧು?' ಭಗವಾನರು ಕೇಳಿದರು. ಆತ ಹೇಳಿದ, 'ತಾವು ಪ್ರತಿ ದಿನ ಪ್ರಚವನ ನೀಡುತ್ತೀರಿ, ನೂರಾರೂ ಜನ ಬಂದು ಕೇಳಿ ಹೋಗುತ್ತಾರೆ. ಇವರೆಲ್ಲರೂ ನಿರ್ವಾಣ ಪಡೆಯುತ್ತಾರೆಂದು ನಿಮಗನ್ನಿಸಿದೆಯೆ?'

ಆ ಮಹಾಪುರುಷ ಕೊಟ್ಟ ಉತ್ತರ ಹೀಗಿತ್ತು. 'ಹೋಗುವುದು ಬಿಡುವುದು ಅವರವರ ಸಂಕಲ್ಪಕ್ಕೆ ಬಿಟ್ಟಿದ್ದು'.

ವ್ಯಾಪಾರಿ ಮರು ಪ್ರಶ್ನೆ ಹಾಕಿದ. 'ಒಂದು ವೇಳೆ ಇವರಲ್ಲಿ ಯಾರೂ ನಿರ್ವಾಣ ಪದ ಪಡೆಯದಿದ್ದರೆ, ಭಗವಾನರ ಮಾಡುತ್ತಿರುವ ಪ್ರವಚನವೆಲ್ಲಾ ವ್ಯರ್ಥವಾಗುವುದಿಲ್ಲವೇ?' ಮುಗುಳ್ನಗೆ ಭಗವಾನರ ಉತ್ತರವಾಗಿತ್ತು. ಸ್ವಲ್ಪ ತಡೆದು ಭಗವಾನರು ಕೇಳಿದರು, 'ನೀನೊಬ್ಬ ವ್ಯಾಪಾರಿಯಂತೆ ಕಾಣುತ್ತೀ ಬಂಧು, ನೀನು ಯಾವ ಊರಿನವನು?'

ವ್ಯಾಪಾರಿ ಉತ್ತರಿಸಿದ. 'ಹೌದು ನಾನೊಬ್ಬ ವಣಿಜ. ನನ್ನ ಊರು ವೇಸಾಲಿ'.

ಭಗವಾನರು ಹೇಳಿದರು. 'ವೇಸಾಲಿ ತುಂಬಾ ಸುಂದರ ನಗರ ಎಂದು ಕೇಳಿ ಬಲ್ಲೆ, ಹೌದೆ ಬಂಧು'.

ವ್ಯಾಪಾರಿ ಎದೆಯುಬ್ಬಿಸಿ ಹೇಳಿದ. 'ಹೌದು, ಅಂತಹ ಸುಂದರ ನಗರ ಈ ಜಂಬೂ ದ್ವೀಪದಲ್ಲೇ ಬೇರೊಂದಿಲ್ಲ'.

ಭಗವಾನರು ಕೇಳಿದರು. 'ಹಾಗಿದ್ದಲ್ಲಿ ಜನರಿಗೆಲ್ಲ ಆ ಸುಂದರ ನಗರವನ್ನು ಒಮ್ಮೆಯಾದರೂ ಹೋಗಿ ನೋಡಿ ಬರಬೇಕೆನಿಸುವುದು ಸಹಜವಲ್ಲವೆ?'.

ವ್ಯಾಪಾರಿ ಹೇಳಿದ 'ಹೌದು, ಆದರೆ ಅಲ್ಲಿಗೆ ತಲುಪಲು ಹತ್ತಾರು ಮಾರ್ಗಗಳನ್ನು ಕ್ರಮಿಸಬೇಕಾಗುತ್ತದೆ. ನದಿಗಳನ್ನು ದಾಟಬೇಕಾಗುತ್ತದೆ'.

ಭಗವಾನರು ಕೇಳಿದರು. 'ಸುಂದರ ನಗರ ವೇಸಾಲಿಯನ್ನು ನೋಡಲು ಕುತೂಹಲವುಳ್ಳ ಜನರು ಆ ನಗರದವನೇ ಆದ ನಿನ್ನನ್ನು ವೇಸಾಲಿ ನಗರಕ್ಕೆ ದಾರಿಯನ್ನು ಕೇಳಿದಾಗ ನೀನು ಏನು ಮಾಡುತ್ತೀ'

ವ್ಯಾಪಾರಿ, 'ತಪ್ಪದೆ ದಾರಿಯನ್ನು ತಿಳಿಸಿಕೊಡುತ್ತೇನೆ' ಎಂದ.

ಭಗವಾನರು ಮಂದಹಾಸದಿಂದ ಹೇಳಿದರು. 'ನಿನ್ನಿಂದ ಕೇಳಿ ದಾರಿ ತಿಳಿದುಕೊಂಡವರೆಲ್ಲಾ ವೇಸಾಲಿಗೆ ಹೋಗಿ ಬರುತ್ತಾರೋ?'

ವ್ಯಾಪಾರಿ ಹೇಳಿದ. 'ಇಲ್ಲ ಭಗವಾನ್, ಎಲ್ಲೋ ನೂರರಲ್ಲಿ ಒಬ್ಬ ಹೋಗಿ ಬಂದರೆ ಹೆಚ್ಚು'.

ಭಗವಾನರು ಕೇಳಿದರು. 'ಆದರೂ ಜನ ಕೇಳಿದರೆ, ನೀನು ವೇಸಾಲಿಯ ದಾರಿಯನ್ನು ತಿಳಿಸುತ್ತೀಯಾ ಅಲ್ಲವೆ?'

ವ್ಯಾಪಾರಿ ಹೇಳಿದ. 'ಹೌದು ಭಗವಾನ್, ಎಷ್ಟೇ ಆದರೂ ವೇಸಾಲಿ ನನ್ನ ಊರು'.

ಆಗ ಭಗವಾನರು ಹೇಳಿದರು. 'ನೀನು ಮಾಡುವಂತೆಯೇ ನಾನೂ ಮಾಡುತ್ತೇನೆ ಬಂಧು. ನಿರ್ವಾಣ ನಾನು ಕಂಡುಕೊಂಡ ನನ್ನ ಸುಂದರ ನಗರ. ಅಲ್ಲಿಗೆ ಹೋಗ ಬಯಸುವ ಜನರಿಗೆ ಮಾರ್ಗಕ್ರಮಣ ಮಾಡಲು ದಾರಿ ತಿಳಿಸಿಕೊಡುತ್ತೇನೆ. ಹೋಗುವುದು ಬಿಡುವುದು ಅವರ ಸಂಕಲ್ಪಕ್ಕೆ ಬಿಟ್ಟದ್ದು'.

ಹೀಗೆ ಹೇಳಿದ ಮಹಾಪುರುಷನೇ ಭಗವಾನ್ ಬುದ್ಧ.

ಹುಲ್ಲು, ಗಿಡ ಮೊದಲಾದ ವನಸ್ಪತಿಗಳಲ್ಲಿ ಬೇರೆ ಬೇರೆ ಜಾತಿಗಳು ದೊರೆಯುತ್ತವೆ. ಅದರಂತೆ ಹುಳು, ಇರುವೆ ಮೊದಲಾದ ಕ್ಷುದ್ರ ಜೀವಿಗಳಲ್ಲಿಯೂ ದೊರೆಯುತ್ತವೆ. ಸರ್ಪಗಳಲ್ಲಿ, ಶ್ವಾಪದಗಳಲ್ಲಿ, ನೀರಿನಲ್ಲಿರುವ ಮತ್ಸ್ಯಗಳಲ್ಲಿ ಮತ್ತು ಆಕಾಶದಲ್ಲಿ ಹಾರುವ ಪಕ್ಷಿಗಳಲ್ಲಿ ಕೂಡ ಅನೇಕ ಜಾತಿಗಳಿವೆ, ಅವುಗಳ ಭಿನ್ನತ್ವದ ಚಿಹ್ನೆಗಳು ಆಯಾ ಪ್ರಾಣಿ ಸಮುದಾಯದಲ್ಲಿ ಸ್ಪಷ್ಟವಾಗಿ ಕಂಡು ಬರುವುವು. ಆದರೆ ಮನುಷ್ಯರಲ್ಲಿ ಭಿನ್ನತ್ವದ ಚಿಹ್ನೆಗಳು ಕಾಣುವುದಿಲ್ಲ. ಕೂದಲು, ಕಿವಿ, ಕಣ್ಣು, ಬಾಯಿ, ಮೂಗು, ತುಟಿ, ಹುಬ್ಬು, ಕತ್ತು, ಹೊಟ್ಟೆ, ಬೆನ್ನು, ಕೈ ಕಾಲೂ ಮೊದಲಾದ ಅವಯವಗಳಿಂದ ಒಬ್ಬ ಮನುಷ್ಯನು ಇನ್ನೊಬ್ಬನಿಗಿಂತ ತೀರ ಬೇರೆಯಾಗುವುದು ಶಕ್ಯವಿಲ್ಲ. ಅರ್ಥಾತ್ ಪಶುಪಕ್ಷಿ ಮೊದಲಾದವುಗಳಲ್ಲಿ ಆಕಾರಾದಿಗಳಿಂದ ಭಿನ್ನ ಭಿನ್ನ ಜಾತಿಗಳು ದೊರೆಯುವಂತೆ

ಮನುಷ್ಯರಲ್ಲಿ ದೊರೆಯುವುದಿಲ್ಲ. ಎಲ್ಲ ಮನುಷ್ಯರ ಅವಯವಗಳೂ ಒಂದೇ ರೀತಿ ಇರುವುದರಿಂದ ಮನುಷ್ಯರಲ್ಲಿ ಜಾತಿ ಭೇದವನ್ನು ನಿಶ್ಚಿತಗೊಳಿಸಲು ಬರುವುದಿಲ್ಲ. ಆದರೆ ಕರ್ಮದಿಂದ ಮನುಷ್ಯನ ಜಾತಿಯನ್ನು ಗೊತ್ತು ಮಾಡುವುದು ಶಕ್ಯವಿದೆ.

'ಯಾವನೆ ಬ್ರಾಹ್ಮಣನು ಪಸುವನ್ನಿಟ್ಟುಕೊಂಡು ನಿರ್ವಾಹವನ್ನು ನಡೆಸುತ್ತಿದ್ದರೆ ಅವನನ್ನು ಹಾಲಿನವ(ಗವಳಿ) ಎನ್ನಬೇಕು. ಬ್ರಾಹ್ಮಣ ಎಂದಲ್ಲ. ಶಿಲ್ಪ ಕಲೆಯಿಂದ ಉಪ ಜೀವಿಕೆಯನ್ನು ನಡೆಸುವ ಶಿಲ್ಪಿಗ, ವ್ಯಾಪಾರವನ್ನು ಮಾಡುವವ ವ್ಯಾಪಾರಿ, ದೂತನ ಕೆಲಸವನ್ನು ಮಾಡುವವ ದೂತ, ಕಳವಿನಿಂದ ಉಪ ಜೀವಿಕೆಯನ್ನು ನಡೆಸುವವ ಕಳ್ಳ, ಯುದ್ಧ ಕಲೆಯಿಂದ ಉಪ ಜೀವಿಕೆಯನ್ನು ಮಾಡಿಕೊಳ್ಳುವವ ಯೋಧ್ಧಾ, ಯಜ್ಞ ಯಾಗಗಳಿಂದ ನಿರ್ವಾಹ ನಡೆಸುವವ ಯಾಜಕ ಮತ್ತು ರಾಷ್ಟ್ರದ ಮೇಲೆ ಉಪ ಜೀವಿಸುವವ ರಾಜನಾಗುತ್ತಾನೆ. ಆದರೆ ಇವರೊಳಗೆ ಯಾವನನ್ನೂ ಜನ್ಮದಿಂದ ಬ್ರಾಹ್ಮಣ ಎನ್ನಲುಬಾರದು'.

'ಎಲ್ಲ ಸಂಸಾರ ಬಂಧನಗಳನ್ನು ಕಡಿದೊಗೆದು ಯಾವ ಪ್ರಾಪಂಚಿಕ ದುಃಖಕ್ಕೂ ಹೆದರದವನನ್ನು, ಯಾವ ವಿಷಯದ ಬಗ್ಗೆ ಆಸಕ್ತಿ ಇಲ್ಲದವನನ್ನು, ಇನ್ನೊಬ್ಬರು ಆಡಿದ ಅಪಶಬ್ದಗಳನ್ನೂ ವಿಧಿಸಿದ ವಧುಬಂಧಗಳನ್ನೂ ಸಹಿಸಿಕೊಳ್ಳುವವನನ್ನು, ಕ್ಷಮೆಯ ಬಲವಾಗಿ ಉಳ್ಳವನನ್ನು, ಕಮಲಪತ್ರದ ಮೇಲಿನ ಜಲಬಿಂದುವಿನಂತೆ ಇಹಲೋಕದ ವಿಷಯ ಸುಖದಿಂದ ಅಲಿಪ್ತನಾಗಿರುವವನನ್ನು ನಾನು ಬ್ರಾಹ್ಮಣ ಎನ್ನುತ್ತೇನೆ'.

'ಜನ್ಮದಿಂದ (ಯಾರೂ) ಬ್ರಾಹ್ಮಣನಾಗುವುದಿಲ್ಲ; ಅಬ್ರಾಹ್ಮಣನಾಗುವುದಿಲ್ಲ. ಕರ್ಮದಿಂದಲೇ ಬ್ರಾಹ್ಮಣನಾಗುತ್ತಾನೆ ಮತ್ತು ಕರ್ಮದಿಂದಲೇ ಅಬ್ರಾಹ್ಮಣನಾಗುತ್ತಾನೆ. ಕರ್ಮದಿಂದ ರೈತನು ಆಗುವನು, ಕರ್ಮದಿಂದ ಶಿಲ್ಪಕಾರನಾಗುವನು, ಕರ್ಮದಿಂದ ಯಾಜಕನಾಗುವನು ಮತ್ತು ರಾಜನು ಕೂಡ ಕರ್ಮದಿಂದಲೇ ಆಗುವನು. ಈ ಇಡಿಯ ಜಗತ್ತು ಕರ್ಮದಿಂದಲೇ ನಡೆದಿವೆ. ಅಚ್ಚನ್ನು ಅವಲಂಬಿಸಿ ರಥವು ನಡೆವಂತೆ ಎಲ್ಲ ಪ್ರಾಣಿಗಳೂ ತಮ್ಮ ಕರ್ತವ್ಯವನ್ನು ಅವಲಂಬಿಸಿ ಬಾಳುತ್ತೇವೆ'.

-ಹೀಗೆ ನುಡಿದು ನಡೆದ ಮಹಾಪುರುಷನೇ ಭಗವಾನ್ ಬುದ್ಧ.

ನೇಪಾಳ ಮತ್ತು ಬಿಹಾರದ ನಡುವಿನಲ್ಲಿದ್ದ ಅನೇಕ ಕೃಷಿ ಪ್ರದಾನ ಗಣಕುಲಗಳಲ್ಲಿ ಶಾಕ್ಯ ಬುಡಕಟ್ಟೂ ಒಂದು. ಈ ಶಾಕ್ಯ ಬುಡಕಟ್ಟಿನ ಅನುಕೂಲಸ್ಥ ರೈತನಾದ ಶುದ್ಧೋದನ ಮತ್ತು ಮಾಯಾದೇವಿಯವರಿಗೆ ಮಗನಾಗಿ ವೈಶಾಖ ಶುದ್ಧ ಪೂರ್ಣಿಮೆಯಂದು (ಕ್ರಿ.ಪೂ. 563) ಗೌತಮ ಹುಟ್ಟಿದ. ಹುಟ್ಟಿದ ಕೆಲವೇ ದಿನಗಳಲ್ಲಿ ಈತನ ತಾಯಿ ಮಾಯಾದೇವಿ ತೀರಿಕೊಂಡಳು. ಅನಂತರ ಶುದ್ಧೋದನನು ಮಗುವಿನ ಪಾಲನೆಗಾಗಿ ಮಾಯಾದೇವಿಯ ತಂಗಿಯಾದ ಗೌತಮಿಯನ್ನು ಮದುವೆಯಾದ. ಗೌತಮ ಅನುಕೂಲಸ್ಥ ರೈತನ ಮಗನಾಗಿದ್ದುದರಿಂದ ಕಪಿಲ ವಸ್ತುವಿನ ಸುತ್ತಿನಲ್ಲೇ ಇದ್ದ. ಬರಂಡುಕಾಲಾಮ ಗುರುಗಳ ಬಳಿ ಶಿಷ್ಯನಾಗಿ ವಿದ್ಯೆ ಕಲಿತ. ಜೊತೆಗೆ ಕುಲ ಕಸುಬುಗಳಾದ ವ್ಯವಸಾಯ, ಬೇಟೆ ಮುಂತಾದವುಗಳನ್ನೂ ಕಲಿತ. ಭೋಗ ವಿಲಾಸಗಳ ಮಧ್ಯೆ ಇದ್ದಾಗಲೂ ಗೌತಮನಿಗೆ ಮನಸ್ಸು ಜೀವನದ ಅರ್ಥವನ್ನು ಹುಡುಕಲು ತುಯ್ಯುತ್ತಿತ್ತು.

ಮುಂದೆ ಗೌತಮನಿಗೆ ಅವರ ನೆರೆಯ ಕೋಲಿಯ ಬುಡಕಟ್ಟಿನ ಸುಂದರ ಕನ್ಯೆ ಯಶೋಧರೆಯೊಂದಿಗೆ ವಿವಾಹವಾಯಿತು. ತನ್ನ ಇಪ್ಪತ್ತೆಂಟು-ಇಪ್ಪತ್ತೊಂಬತ್ತನೆ ವಯಸ್ಸಿನಲ್ಲಿ ಗೌತಮ, ರಾಹುಲನ ತಂದೆಯೂ ಆದ. ಈ ಬುಡಕಟ್ಟುಗಳ ನಡುವೆ ಸಣ್ಣ ಪುಟ್ಟ ವಿಚಾರಗಳಿಗೆಲ್ಲಾ ಆಗಾಗ್ಗೆ ವೈಷಮ್ಯ ತಲೆದೋರುತ್ತಿತ್ತು. ಗೌತಮ ಇವನ್ನೆಲ್ಲವನ್ನೂ ವಿಷಣ್ಣನಾಗಿ ನೋಡುತ್ತಿದ್ದ.

ಒಮ್ಮೆ ಕೋಲಿಯಾ ಬುಡಕಟ್ಟಿನವರಿಗೂ, ಗೌತಮನ ಶಾಕ್ಯ ಬುಡಕಟ್ಟಿನವರಿಗೂ, ನದಿ ನೀರಿನ ಮಾತಿಗಾಗಿ ಜಗಳವಾಯಿತು. ಈ ಜಗಳವನ್ನು ಕಂಡ ಗೌತಮ, ರಾಗದ್ವೇಷಗಳಿಂದ ಪ್ರೇರಿತನಾಗುವ ಮನುಷ್ಯನನ್ನೂ, ಅವನ ಮನಸ್ಸಿನ ಎಲ್ಲ ಸಣ್ಣತನಗಳನ್ನೂ, ಕ್ರೌರ್ಯಗಳನ್ನು ಕಣ್ಣಾರೆ ಕಂಡು ವ್ಯಾಕುಲಗೊಂಡ. ಅವನಿಗೆ ಶಸ್ತ್ರವನ್ನು ಹಿಡಿಯುವುದು ಭಯಾನಕವೆನಿಸಿತು. ಮನುಷ್ಯ ತನ್ನ ಸ್ವಾರ್ಥ ಸಾಧನೆಗಾಗಿ ಏನೆಲ್ಲಾ ಮಾಡುತ್ತಾನೆ ಎಂದು ನೊಂದ. ಇಂತಹ ಕ್ಷುಲ್ಲಕ ವಿಚಾರಗಳಿಗಾಗಿ ಹೋರಾಟ ಮಾಡುವ ಮನುಷ್ಯನನ್ನು ಕಂಡು ಕಂಪಿಸಿದ. ಇದೆಲ್ಲವೂ ಅವನಿಗೆ ಅರ್ಥವಿಲ್ಲದವು ಅನಿಸಿತು. ಮನುಷ್ಯನ ಹೋರಾಟ ಇದಲ್ಲವೆಂದು ತಿಳಿದು, ಹುಟ್ಟು-ಸಾವು, ಮುಪ್ಪು, ರೋಗ, ರುಜಿನ ಮುಂತಾದವುಗಳಿಗೆ ಅರ್ಥ ಹುಡುಕುವುದೇ ನಿಜವಾದ ಹೋರಾಟ ಎಂದು ತಿಳಿದ. ಈ ಮನಸ್ಥಿತಿ ತೀವ್ರಗತಿಯನ್ನು ಮುಟ್ಟಿದಾಗ ಶ್ರಮಣನಾಗಲು ನಿರ್ಧರಿಸಿದ. ಗೌತಮನ ನಿರ್ಧಾರವನ್ನು ಕೇಳಿ, ಅವನ ತಂದೆ-ತಾಯಿಗಳು, ಹೆಂಡತಿ, ಬಂಧು ಬಳಗದವರು ಕಣ್ಣೀರು ಸುರಿಸುತ್ತಾ ಅವನ ನಿರ್ಧಾರಕ್ಕೆ ಅಡ್ಡ ಬಂದರು. ಗೌತಮ ಇದಾವುದರಿಂದಲೂ ವಿಚಲಿತನಾಗಲಿಲ್ಲ.

ಜೀವನದ ಅರ್ಥವನ್ನು ಹುಡುಕಲು, ತನ್ನ ಇಪ್ಪತ್ತೊಂಬತ್ತನೆ ವಯಸ್ಸಿನಲ್ಲಿ ಪರಿವ್ರಾಜಕನಾಗಿ ಎಲ್ಲವನ್ನು ಪರಿತ್ಯಾಗ ಮಾಡಿ ಹೊರಟ.

ಹೀಗೆ ಜೀವನದ ಕ್ಲೇಶಗಳಿಗೆ ಅರ್ಥಗಳನ್ನು ಅರಸುತ್ತಾ ಹೊರಟ ಗೌತಮ, ಕಾಡು ಮೇಡುಗಳಲ್ಲಿ ಅಲೆದ. ಅಲ್ಲೇ ಆತ ಅಲಾರ ಕಾಲಾಮ ಎಂಬ ಗುರುವಿನ ಶಿಷ್ಯನಾಗಿ ಅವರಿಂದ ಅನೇಕ ವಿದ್ಯೆಗಳನ್ನು ಕಲಿತ. ಆದರೆ ಇದರಿಂದ ಅವನಿಗೆ ಸರಿಯೆನಿಸುವ ಉತ್ತರ ದೊರಕಲಿಲ್ಲ. ಅಲ್ಲಿಂದ ಮುಂದೆ ಉದ್ದಾಲಕ ರಾಮಪುತ್ತಾ ಎನ್ನುವ ಮತ್ತೊಬ್ಬ ಗುರುವಿನ ಶಿಷ್ಯನಾಗಿ ಅವರಲ್ಲಿಯೂ ಕಲಿತ. ಅವರು ಜೀವನದ ಅರ್ಥದ ಬಗ್ಗೆ ತಾವು ಕಂಡುಕೊಂಡ ಸತ್ಯವನ್ನು ಗೌತಮನಿಗೆ ತಿಳಿ ಹೇಳಿದರು. ಆದರೆ ಇದಾವುದೂ ಗೌತಮನಿಗೆ ಅಂತಿಮ ಸತ್ಯವಾಗಿ ತೋರಲಿಲ್ಲ.

ನಿರಾಶನಾಗದ ಗೌತಮ, ನಾಡಿನ ಉದ್ದಗಲಕ್ಕೂ ಅಲೆದ. ಹೀಗೆ ನಡೆದವನು ಮಗಧ ರಾಜಧಾನಿಗೆ ಬಂದ. ಆರ್ಯಾವರ್ತದಲ್ಲಿ ರಾಜಸತ್ತೆಗಳು ಆಗತಾನೆ ಪ್ರಬಲವಾಗಿ ರೂಪುಗೊಳ್ಳುತ್ತಿದ್ದವು. ಮಗಧ ಒಂದು ಪ್ರಬಲ ರಾಜಸತ್ತೆಯಾಗಿ ನಿರ್ಮಾಣಗೊಳ್ಳುತ್ತಿತ್ತು. ಬಿಂದುಸಾರ ಅದರ ರಾಜನಾಗಿದ್ದ. ಬೇರೆ ಬೇರೆ ಬುಡಕಟ್ಟಿನ ಜನರನ್ನು ತನ್ನ ರಾಜ್ಯದ ಅಧೀನಕ್ಕೆ ಒಳಪಡಿಸಿಕೊಳ್ಳುತ್ತಿದ್ದ. ಗೌತಮನನ್ನು ಕಂಡ ಬಿಂದುಸಾರ, ತನ್ನ ಸೈನ್ಯದಲ್ಲಿ ಅವನಿಗೆ ಉನ್ನತ ಪದವಿಯನ್ನು ನೀಡುವ ಬಯಕೆಯನ್ನು ವ್ಯಕ್ತಪಡಿಸಿದ. ಗೌತಮನು ಬಿಂದುಸಾರನ ಬಯಕೆಯನ್ನು ನಿರಾಕರಿಸಿ ನಾನು ಜೀವನದ ಕ್ಲೇಶಗಳಿಗೆ ಅರ್ಥಗಳನ್ನು ಹುಡುಕುತ್ತಾ ಹೊರಟವನು, ನನಗೆ ಇದರ ಗೊಡವೆ ಬೇಡ ಎಂದು ತನ್ನ ಪ್ರಶ್ನೆಗಳಿಗೆ ಏಕಾಂಗಿಯಾಗಿ ಉತ್ತರ ಹುಡುಕುತ್ತಾ ಹೊರಟ.

ಹೀಗೆ ಯಾವ ಗುರುವಿನಿಂದಲೂ ಜೀವನದ ಕ್ಲೇಶಗಳಿಗೆ ಉತ್ತರಗಳನ್ನು ಕಂಡುಕೊಳ್ಳಲಾಗದ ಗೌತಮ, ಕೊನೆಗೆ ಏಕಾಂಗಿಯಾಗಿ ಕಠಿಣವಾದ ತಪಶ್ಚರ್ಯೆಗಳ ಮೂಲಕ ಸತ್ಯವನ್ನು ಕಂಡುಕೊಳ್ಳಲು ನಡೆದ.

ಮುಂದೆ ಸುಂದರ ಗ್ರಾಮವಾದ ಉರುವೇಲಕ್ಕೆ ಬಂದ. ಅಲ್ಲಿ ನಿರ್ಮಲವಾಗಿ ಹರಿಯುತ್ತಿದ್ದ ತೊರೆ, ಹಸಿರು ಮರಗಿಡಗಳು ಅವುಗಳಿಂದ ಉಂಟಾಗಿದ್ದ ಪ್ರಶಾಂತತೆ, ಗೌತಮನ ಮನಸ್ಸಿಗೆ ಹಿಡಿಸಿತು. ತನ್ನ ಗುರಿ ಸಾಧನೆಗೆ ಇದೇ ತಕ್ಕ ಸ್ಥಳವೆಂದು ನಿರ್ಧರಿಸಿ, ಆ ಕಾಲದಲ್ಲಿದ್ದ ಎಲ್ಲ ಪಂಥಗಳ ಕಟು ಸಾಧನೆಗಳಿಗೆ ತನ್ನ ಮೈಮನಗಳನ್ನು ಒಡ್ಡಿದ. ಭಯವನ್ನು ಗೆಲ್ಲಲು ಅಮಾವಾಸ್ಯೆಯ ಕಗ್ಗತ್ತಲಲ್ಲಿ ಭಯಾನಕ ಕಾಡುಗಳಲ್ಲಿ ಅಲೆದ. ದಿನಗಟ್ಟಲೆ, ವಾರಗಟ್ಟಲೆ ಬರಿ ಹಿಮ್ಮಡಿಯ ಮೇಲೆ ನಿಂತುಕೊಂಡೇ ತಪಸ್ಸು ಮಾಡುತ್ತಿದ್ದ. ಶರೀರದ ಮೇಲೆ ಹಿಡಿತ ಸಾಧಿಸಲು ಆಹಾರ ಸೇವನೆಯನ್ನು ಮಿತಗೊಳಿಸುತ್ತಾ ಬಂದ. ದಿನಕ್ಕೊಮ್ಮೆಯಂತೆ, ಎರಡು ದಿನಕ್ಕೊಮ್ಮೆಯಂತೆ, ಮೂರು ದಿನ, ಏಳು ದಿನ, ಹದಿನೈದು ದಿನಕ್ಕೊಮ್ಮೆಯಂತೆ ಆಹಾರ ಸೇವಿಸುವುದನ್ನು ರೂಢಿಸಿಕೊಂಡ. ನೀರಿನ ಸೇವನೆಯನ್ನು ಕ್ರಮೇಣ ತೊರೆದು ತನ್ನ ದೇಹ ದಂಡನೆಯನ್ನು ಮುಂದುವರೆಸಿದ. ಶರೀರ ದುರ್ಬಲವಾಯಿತು. ಮನೋಬಲದಿಂದ ಜೀವ ಹಿಡಿದಿದ್ದ. ಇದರಿಂದ ಅವನ ದೇಹ ಕ್ರಿಮಿಕೀಟಗಳ ಆಗರವಾಯಿತು. ದೈಹಿಕ ತೇಜಸ್ಸು ಕ್ಷೀಣಿಸಿತು. ಅವನು ನಿಶಕ್ತನಾದ. ಅವನ ಮೈಮೇಲಿನ ರೋಮಗಳು ಉದುರಿದವು. ಮೈ ಚರ್ಮ ಸುಕ್ಕುಗಟ್ಟಿ ಜೋಲಾಡಿತು. ತಲೆಗೂದಲು ಬೋಳಾಯಿತು. ಕಣ್ಣುಗಳು ಕಂದಕದಂತೆ ಗುಳಿಬಿದ್ದವು. ಇದರಿಂದ ಗೌತಮ ಒಣ ಮರದ ತೊಗಟೆಯಂತಾದ.

ಗೌತಮನ ಈ ರೀತಿಯ ದೇಹ ದಂಡನೆಯ ಸಾಧನೆಗಳನ್ನು ನೋಡಿ ಐದು ಜನ ಶ್ರವಣರು ಅವನ ಶಿಷ್ಯರಾದರು.

ಗೌತಮ ಇಂಥ ಕಠಿಣವಾದ ತಪಶ್ಚರ್ಯೆಗಳನ್ನೂ, ದೇಹದಂಡನೆಯನ್ನೂ, ನಿರಂತರವಾಗಿ ಏಳು ವರ್ಷ ನಡೆಸಿದರೂ, ಆದ ಲಾಭ ಭಯವನ್ನು ಗೆದ್ದದ್ದು, ಮಾಂಸಲ ಶರೀರದ ಕಾಮನೆಗಳನ್ನು ಹತ್ತಿಕ್ಕಿದ್ದು, ಬುದ್ಧಿ ಬಲದ ಮೇಲೆ ಪ್ರಭುತ್ವ ಸಾಧಿಸಿದ್ದು, ಇದಿಷ್ಟು ಮಾತ್ರ. ಆದರೇನು ಅರಿವು ದಕ್ಕಲಿಲ್ಲ. ಇದಾವುದರಿಂದಲೂ ಏನೂ ಉಪಯೋಗವಿಲ್ಲವೆಂದುಕೊಂಡ. ಭೋಗ ಮಾರ್ಗದಂತೆಯೇ ನಿಗ್ರಹ ಮಾರ್ಗವು ಮನುಷ್ಯನಿಗೆ ಸತ್ಯದ ದಾರಿಯನ್ನು ತೋರಿಸುವುದಿಲ್ಲ ಎಂಬುದನ್ನು ಅರಿತು, ನಿಧಾನವಾಗಿ ಸಾಮಾನ್ಯ ಮನುಷ್ಯರಂತೆ ಆಹಾರವನ್ನು ಸೇವಿಸುತ್ತಾ ಮನುಷ್ಯರಂತೆ ವರ್ತಿಸತೊಡಗಿದ.

ತದನಂತರ, ಅವನಲ್ಲಾದ ಬದಲಾವಣೆಯನ್ನು ಕಂಡ ಅವನ ಶಿಷ್ಯರು, ಗೌತಮನು ಸಾಮಾನ್ಯ ಮನುಷ್ಯರಂತೆ

ಭೋಗ ಜೀವನಕ್ಕೆ ಬಿದ್ದ, ಇನ್ನು ಅವನ ಕತೆ ಮುಗಿದಂತೆಯೇ ಎಂದು ಭಾವಿಸಿ ಅವನಿಂದ ದೂರವಾದರು. ಅರಿವಿಗಾಗಿ ಹುಡುಕಾಟ ಮತ್ತೆ ಹೊಸದಾಗಿ ಪ್ರಾರಂಭವಾಯಿತು ಮುಂದುವರೆಯುತ್ತ ನಡೆದ ಗೌತಮ ಗಯೆಗೆ ಬಂದ. ಅಲ್ಲಿನ ನೈರಂಜನ ನದಿಯ ಹತ್ತಿರದ ಆಲದ ಮರದ ಕೆಳಗೆ ಕುಳಿತ. ಆ ಊರಿನ ಗೌಡನ ಮಗಳಾದ ಸುಜಾತೆಯು, ತನಗೆ ಗಂಡು ಮಗುವಾಗಿದ್ದರ ಕಾರಣಕ್ಕಾಗಿ ವೃಕ್ಷ ದೇವತೆಗೆ ಹರಕೆ ಸಲ್ಲಿಸಲು ಪಾಯಸ ತಂದಿದ್ದಳು. ಆಗ ಅಲ್ಲಿಯೇ ಕುಳಿತಿದ್ದ ಗೌತಮನಿಗೆ ನೀಡಿದಳು.

ಈ ಬಾರಿಯ ಹುಡುಕಾಟದಲ್ಲಿ ಕಟು ಸಾಧನೆಗಳ ಅತಿ ವಿಪರೀತತೆಯನ್ನು ಕೈಬಿಡಲಾಗಿತ್ತು. ದೇಹ ಧಾರಣೆಗೆ ಬೇಕಾಗುವಷ್ಟು ಆಹಾರೋಪಚಾರಗಳನ್ನು ಉಳಿಸಿಕೊಳ್ಳಲಾಗಿತ್ತು. ಈ ರೀತಿ ಆರೋಗ್ಯಕರ ಮೈ ಮನಸ್ಸುಗಳನ್ನು ಗಳಿಸಿಕೊಂಡು ಗೌತಮ ಅರಳೀಮರವೊಂದರ ಬುಡದಲ್ಲಿ ಕುಳಿತು, ನಿರಾಳ ಮನಸ್ಸಿನ ವೈಚಾರಿಕ ನೆಲೆಗಟ್ಟಿನ ಮೇಲೆ ಧ್ಯಾನ ಮುಂದುವರೆಸಿದ. ಪ್ರಪಂಚದ ಎಲ್ಲ ಕಾಮನೆಗಳೂ ಗೌತಮನ ಮುಂದೆ ಸುಳಿದು ಆತನ ಮನಸ್ಸನ್ನು ಸೆಳೆಯಲು ಪ್ರಯತ್ನಿಸಿದವು. ಗೌತಮ ವಿಚಲಿತನಾಗಲಿಲ್ಲ. ದೃಢ ಚಿತ್ತನಾಗಿ ಧ್ಯಾನವನ್ನು ಮುಂದುವರೆಸಿದ. ಮನಸ್ಸಿನಲ್ಲಿ ಕತ್ತಲೆ ಹರಿದು ಪ್ರಕಾಶ ಮೈದೋರಿತು. ಅರಿವು ಮೂಡಿ ಬಂತು.

ವೈಶಾಖ ಶುದ್ಧ ಪೂರ್ಣಿಮೆಯಂದು ಗೌತಮನಿಗೆ ಚಿತ್ತದಲ್ಲಿ ಅರಿವು ಸಿದ್ಧಿಸಿ, ಗೌತಮನಾಗಿದ್ದವನು ಬೋಧಿಯನ್ನು ಪಡೆದು ಬುದ್ಧನಾಗಿ ಕಂಗೊಳಿಸಿದ.

ಬುದ್ಧನಾದ ಮೇಲೆ ಶ್ರೇಷ್ಠವಾದ ನಾಲ್ಕು ಆರ್ಯಸತ್ಯಗಳು ಮತ್ತು ಅಷ್ಟಾಂಗ ಮಾರ್ಗಗಳನ್ನು ಕಂಡುಕೊಂಡ. ಆಗ ಅವನ ಮುಂದೆ, ಮನುಷ್ಯರನ್ನು ಕಾಡುವ ಪ್ರಲೋಭನೆಗಳ, ಕಾಮನೆಗಳ, ಕ್ಲೇಶಗಳ ರೂಪವಾದ ಮಾರನು ಬಂದು, ಇನ್ನು ಬುದ್ಧನಾಗಿರುವ ನೀನು ನಿರ್ವಾಣಕ್ಕೆ ಹೋಗಬಹುದು ಎಂದು ಹೇಳಿದ. ಬುದ್ಧನು ಮಾನರ ಮಾತನ್ನು ತಳ್ಳಿಹಾಕಿ, ಜಗತ್ತಿನ ಜೀವರಾಶಿಗಳೆಲ್ಲಾ ಬುದ್ಧನಾಗುವ ದಾರಿಯಲ್ಲಿ ಸಾಗಬೇಕು ಎಂದು ಹೇಳಿದ. ನಿರ್ವಾಣದ ಸುಂದರ ನಗರಕ್ಕೆ ಪ್ರವೇಶ ದೊರಕಿಸಿಕೊಂಡು ಬುದ್ಧನಾದ ಗೌತಮ ಅಲ್ಲಿಯೆ ಉಳಿದುಬಿಡಲಿಲ್ಲ. ತಾನು ಕಂಡ ಆ ಸುಂದರ ಪಟ್ಟಣಕ್ಕೆ ಬೇರೆಯವರನ್ನು ಕೊಂಡೊಯ್ಯುವ ಮನಸ್ಸು ಮಾಡಿದ. ಕ್ಲೇಶಗಳ ಧೂಳಿನಿಂದ ಮಸುಕಾಗಿರುವ ಜಗತ್ತಿನ ಜೀವರಾಶಿಗಳ ಕಣ್ಣನ್ನು ಸ್ವಚ್ಛಗೊಳಿಸಿ, ಅವು ಬುದ್ಧನ ಕಣ್ಣನ್ನು ಪಡೆದುಕೊಳ್ಳುವ ದಾರಿಯನ್ನು ತೋರಿಸಲು ಮುಂದಾದ.

ಇದಕ್ಕಾಗಿ ಬಿಕ್ಕು ಬಿಕ್ಕುನಿಯರ ಸಂಘವನ್ನು ಸ್ಥಾಪಿಸಲು ನಿಶ್ಚಯಿಸಿದ. ಅರಿವು ಮೈದೋರಿದ ಸಂದರ್ಭದಲ್ಲಿ ಭಗವಾನ್ ಬುದ್ಧ ಕಂಡುಕೊಂಡ ನಾಲ್ಕು ಪರಮ ಸತ್ಯಗಳು ಇವು.

ಮೊದಲನೆಯ ಪರಮ ಸತ್ಯ : ಬದುಕು ದುಃಖದಿಂದ ಕೂಡಿದೆ ಎಂಬುದು. ಹುಟ್ಟು, ಸಾವು, ಮುಪ್ಪು, ರೋಗರುಜಿನಗಳು ಬದುಕನ್ನು ಯಾತನಾಮಯ ವನ್ನಾಗಿಸಿವೆ. ಬೇಡವಾದುದರ ಸಂಬಂಧ, ಬೇಕೆನಿಸುವುದರಿಂದ ವಿಯೋಗ ಎಲ್ಲವೂ ಬದುಕನ್ನು ದುಃಖಮಯವನ್ನಾಗಿಸಿವೆ. ನಾವು ಯಾವುದನ್ನು ಬದುಕಿನಲ್ಲಿ ಸುಖಮಯ ಕ್ಷಣಗಳೆಂದು ಪರಿಗಣಿಸುತ್ತೇವೋ ಆ ಕ್ಷಣಕ್ಕಾಗಿ ಕಾತರಿಸುವುದು ಮತ್ತೆ ಮತ್ತೆ ದುಃಖವೇ ಆಗಿರುತ್ತದೆ. ಪ್ರತಿ ಕ್ಷಣವೂ ಎಲ್ಲವೂ ಬದಲಾವಣೆಯಾಗುತ್ತಿರುವ ಈ ಪ್ರಪಂಚದಲ್ಲಿ ಸುಖವೆಂಬುದು ಶಾಶ್ವತ ನೆಲೆಯಲ್ಲ. ಅದೂ ಕೂಡ ಬದುಕನ್ನು ದುಃಖದತ್ತ ಕೊಂಡೊಯ್ಯುವ ತತ್‌ಕ್ಷಣದ ಅವಸ್ಥೆ ಮಾತ್ರ. ಅಂದರೆ ಬದುಕನ್ನು ಬದುಕಿನಿಂದ ಹೊರಗೆ ನಿಂತು ನೋಡಿದಾಗ ಕಾಣುವ ಸ್ಥಿರ ಸತ್ಯ ಬದುಕು ದುಃಖದಿಂದ ಕೂಡಿದೆ ಎಂಬುದು.

ಎರಡನೆಯ ಪರಮ ಸತ್ಯ : ಜೀವಿಯ ಬಯಕೆಗಳೇ, ದುಃಖದ ಉದಯಕ್ಕೆ ಕಾರಣವಾಗುತ್ತವೆ ಎಂಬುದು. ಜೀವಿಯ ಬಯಕೆಗಳು ಹಲವಾರು. ಇಂದ್ರಿಯ ಭೋಗಗಳು, ಶಕ್ತಿ, ಸಂಪತ್ತು ಅಧಿಕಾರಗಳ ಅಭಿಲಾಷೆ ಇತ್ಯಾದಿ. ಇದಿಷ್ಟೇ ಅಲ್ಲ, ಕಲ್ಪನೆಗಳಿಗೆ ಭಾವನೆಗಳಿಗೆ ಅಭಿಪ್ರಾಯಗಳಿಗೆ, ಸಿದ್ಧಾಂತಗಳಿಗೆ, ನಂಬಿಕೆಗಳಿಗೆ ಅಂಟಿಕೊಂಡಿರುವುದು ಬಯಕೆಯ ಇನ್ನೊಂದು ಮುಖವೇ ಆಗಿರುತ್ತದೆ. ಅರ್ಥಾತ್, ವ್ಯಕ್ತಿಯ ಯಾವುದೇ ಸ್ವಾರ್ಥಪರ ಆಸೆ-ಆಕಾಂಕ್ಷೆಗಳು ಅಂತಿಮವಾಗಿ ದುಃಖದ ಉದಯಕ್ಕೆ ಫಲವತ್ತಾದ ನೆಲೆಗಳಾಗಿಯೇ ಕಾರ್ಯನಿರ್ವಹಿಸುತ್ತವೆ.

ಮೂರನೆಯ ಪರಮ ಸತ್ಯ : ದುಃಖ ನಿವಾರಣೆಗೆ ಸಂಬಂಧಿಸಿದುದು ಜೀವಿ ತನ್ನ ಆಶೆ, ಬಯಕೆ ಅಥವಾ ತೃಷ್ಣೆಗಳನ್ನು ಇಲ್ಲವಾಗಿಸಿಕೊಂಡಲ್ಲಿ, ಜೀವನದಲ್ಲಿ ಪಡೆದುಕೊಳ್ಳಲು ಏನೂ ಇಲ್ಲವಾದುದರಿಂದಾಗಿ ಯಾವ ಸಂಕಷ್ಟಗಳಿಗೂ ಅವನು ಸಿಕ್ಕಿಕೊಳ್ಳುವುದಿಲ್ಲ. ಅತೃಪ್ತಿ, ಆಶೆ, ಬಯಕೆಗಳನ್ನುಳಿಸಿಕೊಂಡ ಜೀವ, ಒಂದು ಜೀವಮಾನದಲ್ಲಿ ಅವು ಈಡೇರದಿದ್ದರೆ, ಆ ಬಯಕೆಗಳ ಪೂರೈಕೆಗಾಗಿ ಮತ್ತೊಂದು ಜನ್ಮವೆತ್ತಬೇಕಾಗಿ ಬರುತ್ತದೆ. ಆ ಜನ್ಮ ಎತ್ತಿದಾಗ ಮತ್ತೆ ಹೊಸ ಹೊಸ ಆಶೆ-ಬಯಕೆಗಳು ಚಿಗುರುತ್ತವೆ. ಹೊಸ ಬಯಕೆಗಳ ಪೂರೈಕೆಗಾಗಿ ಜೀವ ಮರುಹುಟ್ಟು ಪಡೆಯುವತ್ತ ಧಾವಿಸುತ್ತದೆ. ಹೀಗೆ ಜೀವಿ ಹುಟ್ಟು ಸಾವುಗಳ ಭವ ಚಕ್ರದಲ್ಲಿ ಸಿಲುಕಬೇಕಾಗುತ್ತದೆ.

ನಾಲ್ಕನೇ ಪರಮ ಸತ್ಯ : ಬೋಧಿಯನ್ನು ಪಡೆದು ಈ ಭವಚಕ್ರಗಳಿಂದ ಪಾರಾಗಲು ಇರುವ ಏಕೈಕ ಉಪಾಯ, ಬಯಕೆಗಳನ್ನು ಇಲ್ಲವಾಗಿಸಿಕೊಳ್ಳುವುದು. ಆಶೆ-ಬಯಕೆಗಳನ್ನು ಇಲ್ಲವಾಗಿಸಿಕೊಂಡು, ಹುಟ್ಟು-ಸಾವುಗಳ ಭವಚಕ್ರದಿಂದ ಪಾರಾಗಬೇಕಾದರೆ, ಜೀವಿ ಅನುಸರಿಸಬೇಕಾದ ಮಾರ್ಗವೆ ಈ ಸತ್ಯ. ಇದನ್ನು ಆರ್ಯ ಅಷ್ಟಾಂಗಿಕ ಮಾರ್ಗವೆಂದು ಕರೆಯಲಾಗಿದೆ.

ಆರ್ಯ ಅಷ್ಟಾಂಗಿಕ ಮಾರ್ಗಗಳು

ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್, ಸಮ್ಯಕ್ ಕರ್ಮಾಂತ, ಸಮ್ಯಕ್ ಅಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ, ಸಮ್ಯಕ್ ಸಮಾಧಿ

ಸಮ್ಯಕ್ ದೃಷ್ಟಿ ಎಂದರೆ, ಜೀವನದ ಅರ್ಥವನ್ನು ಬುದ್ಧ ಭಗವಾನರು ಹೇಳಿದ ಪರಮಸತ್ಯಗಳ ಆಧಾರದ ಮೇಲೆ ಸಮಗ್ರವಾಗಿ ಗ್ರಹಿಸುವುದು, ಸಮಾಹಿತ ಚಿತ್ತದಿಂದ ಜೀವನದ ಅರ್ಥವನ್ನು ಗ್ರಹಿಸಿ ಅದಕ್ಕನುಗುಣವಾಗಿ ತನ್ನ ದೈನಂದಿನ ಜೀವನವನ್ನು ರೂಪಿಸಿಕೊಳ್ಳುವುದು.

ಸಮ್ಯಕ್ ಸಂಕಲ್ಪ ಎಂದರೆ, ವ್ಯಕ್ತಿತ್ವದ ಅರ್ಥವನ್ನು ಸಮಗ್ರ ಪರಿಶೀಲನೆಯ ದೃಷ್ಟಿಯಲ್ಲಿ ನೋಡಿ ಅರಿತುಕೊಳ್ಳುವುದು ಮತ್ತು ಇತರರಿಗೆ ತಿಳಿಸಿಕೊಡುವುದು.

ಸಮ್ಯಕ್ ವಾಕ್ ಎಂದರೆ, ಧರ್ಮದ ವಚನವನ್ನು ನುಡಿಯುವುದು ಎಂದರ್ಥ. ಬುದ್ಧ ಭಗವಾನರು ತಿಳಿಸಿಕೊಟ್ಟ ಧರ್ಮವನ್ನೇ ಸರಿಯಾಗಿ ಅರ್ಥಮಾಡಿಕೊಂಡು ಅದನ್ನೇ ಇತರರೊಡನೆ ನುಡಿಯುವುದು.

ಸಮ್ಯಕ್ ಕರ್ಮಾಂತ ಎಂದರೆ, ತಾನು ಮಾಡುವ ಕ್ರಿಯೆಗಳೆಲ್ಲಾ ಧರ್ಮದ ನೆಲೆಗಟ್ಟಿನ ಮೇಲೆ ಇರಬೇಕೆನ್ನುವ ನಿರ್ಧಾರ. ಇದರಿಂದಾಗಿ ವ್ಯಕ್ತಿ ಅಕುಶಲ ಕರ್ಮಗಳನ್ನು ಒಟ್ಟಾರೆ ತೊರೆದು, ಕುಶಲ ಕರ್ಮಗಳನ್ನು ಮಾತ್ರ ಮಾಡುತ್ತಾನೆ. ಇದು ವ್ಯಕ್ತಿಯನ್ನು ಉನ್ನತ ಹಾದಿಯಲ್ಲಿ ನಡೆಸುತ್ತದೆ.

ಸಮ್ಯಕ್ ಅಜೀವ ಎಂದರೆ ವ್ಯಕ್ತಿ ಪರಿಶುದ್ಧ ಜೀವನವನ್ನು ನಡೆಸುವುದೇ ಆಗಿದೆ. ಅರ್ಥಾತ್ ವ್ಯಕ್ತಿ ಕಾಯಾ, ವಾಚಾ, ಮನಸಾ ಪರಿಶುದ್ಧನಾಗಿದ್ದು, ತನ್ನ ಜೀವನವನ್ನು ನಡೆಸುವುದು.

ಸಮ್ಯಕ್ ವ್ಯಾಯಾಮವೆಂದರೆ, ಕುಶಲ ಚಿತ್ತವನ್ನು ಬೆಳೆಸಿಕೊಳ್ಳುವಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದೇ ಆಗಿದೆ. ಅಕುಶಲ ವಿಚಾರಗಳನ್ನು ತನ್ನ ಚಿತ್ತದಿಂದ ಪ್ರತಿಕ್ಷಣವೂ ತೊಡೆದು ಹಾಕುತ್ತಾ ವ್ಯಕ್ತಿ ಧರ್ಮದ ಕುಶಲ ವಿಚಾರಗಳಲ್ಲಿ ತನ್ನ ಮನಸ್ಸನ್ನು ನಿಲ್ಲಿಸಿ ಸಮಾಧಾನ ಚಿತ್ತವನ್ನು ಅವಶ್ಯ.

ಸಮ್ಯಕ್ ಸ್ಮೃತಿ ಎಂದರೆ, ಸಮಾಧಾನ ಚಿತ್ತದಿಂದ ಇರುವುದು. ಪರಮ ಸತ್ಯಗಳನ್ನು ಸಮಗ್ರವಾಗಿ ಅರ್ಥಮಾಡಿಕೊಂಡು ಅವುಗಳೊಂದಿಗೆ ತಾದಾತ್ಮ್ಯ ಭಾವವನ್ನು ಪಡೆದು, ಚಿತ್ತ-ವಿಸ್ಮೃತಿಗಳಿಂದ ದೂರನಾಗಿ ಪೂರ್ಣಪ್ರಜ್ಞನಾಗಿ ವ್ಯಕ್ತಿ ಸಮಾಧಾನ ಚಿತ್ತದಿಂದ ಇರುವುದು.

ಸಮ್ಯಕ್ ಸಮಾಧಿ ಎಂದರೆ, ವ್ಯಕ್ತಿ ಸ್ಥಿರ ಚಿತ್ತತೆಯನ್ನು ಸಂಪಾದಿಸಿಕೊಂಡು ಸಮಗ್ರ ಶಾಂತಿಯ ನೆಲೆಯಲ್ಲಿ ಅಚಲನಾಗಿ ನಿಂತು ತನ್ನನ್ನು ತಾನು ಇಲ್ಲವಾಗಿಸಿಕೊಳ್ಳುತ್ತಾ ಹುಟ್ಟು-ಸಾವುಗಳೆಂಬ ಭವಚಕ್ರದಿಂದ ವಿಮುಕ್ತಿ ಪಡೆಯುವ ಹಾದಿಯ ಪಯಣ.

ಈ ನಾಲ್ಕು ಪರಮ ಸತ್ಯಗಳು ಹಾಗೂ ಆರ್ಯ ಅಷ್ಟಾಂಗಿಕ ಮಾರ್ಗವೇ ಮನುಷ್ಯನು ಹುಟ್ಟು-ಸಾವುಗಳ ಭವಚಕ್ರದಿಂದ ಪಾರಾಗಿ ನಿರ್ವಾಣಪದ ಪಡೆಯಲು ನಡೆಯಬೇಕಾಗಿರುವ ದಾರಿ.

ಇದೇ ಬುದ್ಧ ತೋರಿಸಿದ ದಾರಿ. ತನ್ನ ಮೂವತ್ತಾರನೆ ವಯಸ್ಸಿನಲ್ಲಿ ಬೋಧಿಯನ್ನು ಪಡೆದು ಬುದ್ಧನಾಗಿ ಕಂಗೊಳಿಸುತ್ತಿದ್ದ ಗೌತಮ, ಧರ್ಮ ಪ್ರಸಾರಕ್ಕಾಗಿ ಸಂಘದ ಸ್ಥಾಪನೆಗಾಗಿ ನಿಶ್ಚಯಿಸಿದ. ನೀತಿ-ನಿಯಮಾವಳಿಗಳ ಆಧಾರದ ಮೇಲೆ ಸಂಘ ನಿರ್ಮಾಣದ ಕಲ್ಪನೆಯನ್ನು ಮೊದಲು ತೋರಿಸಿದವನು ಬುದ್ಧ.

ಅಲ್ಲಿಂದ ಕಾಶಿಯ ಇಸಿ ಪಟ್ಟಣಕ್ಕೆ ಬಂದು ಮೊದಲು ತನ್ನೊಂದಿಗೆ ಇದ್ದು, ತೊರೆದು ಹೋಗಿದ್ದ ಐದು ಜನ ಶಿಷ್ಯರನ್ನು ಕಂಡು ಹೊಸ ತೇಜಸ್ಸಿನಿಂದ ಬಂದ ಬುದ್ಧನನ್ನು ಕಂಡ ಕೂಡಲೇ ಆ ಐದೂ ಜನರು ನಮಸ್ಕರಿಸಿದರು. ನಂತರ ಬುದ್ಧ ಬೋಧಿ ಸಂಘವನ್ನು ಪಡೆದುಕೊಂಡ. ಆರ್ಯಸತ್ಯವನ್ನೂ, ಅಷ್ಟಾಂಗ ಮಾರ್ಗಗಳನ್ನೂ ಅವರಿಗೆ ತಿಳಿಯ ಹೇಳಿದ. ಅದನ್ನು ಕೇಳಿದ ಅವರು ಬುದ್ಧನ

ಮೊದಲ ಶಿಷ್ಯರಾಗಿ ಸಂಘವನ್ನು ಸೇರಿದರು. ಇದು ಬುದ್ಧನು ಮಾಡಿದ ಮೊದಲ ಧರ್ಮ ಪ್ರಸಾರ. ಅದನ್ನೇ ಧರ್ಮಚಕ್ರ ಪ್ರವರ್ತನವೆಂದು ಕರೆಯಲಾಗಿದೆ.

ಬುದ್ಧನು ಕಟ್ಟಿದ ಸಂಘ, ಜಾತಿ-ಮತ ಮತ್ತು ಕುಲಗಳ ಭೇದಗಳಿಗೆ ಮನ್ನಣೆ ಕೊಡುತ್ತಿರಲಿಲ್ಲ. ಮನುಷ್ಯ-ಮನುಷ್ಯರಲ್ಲಿ ಬೇಧವನ್ನು ಒಪ್ಪುತ್ತಿರಲಿಲ್ಲ. ಸಂಘದ ಆಸ್ತಿವಾರವನ್ನು ಜನತಂತ್ರದ ಆಧಾರದ ಮೇಲೆ ರೂಪಿಸಿದ್ದ. ಮೊದಲು ಸಂಘವನ್ನು ಸ್ಥಾಪಿಸಿ ಅನಂತರ ಭಿಕ್ಕುಗಳ ಚರ್ಯೆಯನ್ನು ಗಮನಿಸಿ, ಅದಕ್ಕೆ ತಕ್ಕಂತಹ ನಿಯಮಗಳನ್ನು ರಚಿಸುತ್ತಿದ್ದ. ತಪ್ಪಿದಾಗ ಅದನ್ನು ತಿದ್ದುತ್ತಿದ್ದ. ಹಾಗೆಯೇ ಎಲ್ಲರೂ ಸುಲಭವಾಗಿ ಸಂಘವನ್ನು ಸೇರುವಂತಿರಲಿಲ್ಲ. ಯಾರು ಎಲ್ಲವನ್ನೂ ಪರಿತ್ಯಾಗ ಮಾಡಿ ನಿರ್ಮಾಣದ ದಾರಿಯಲ್ಲಿ ನಡೆಯಲು ಇಚ್ಛಿಸುತ್ತಾರೋ ಅಂಥವರು ಮೊದಲು ಸಂಘದ ಹಿರಿಯ ಭಿಕ್ಕುವಿನ ಪರಿವೀಕ್ಷಣೆಯಲ್ಲಿ ನಾಲ್ಕು ತಿಂಗಳು ಇರಬೇಕಾಗುತ್ತಿತ್ತು. ನಂತರ ಅವರಿಗೆ ಒಪ್ಪಿತವಾದಲ್ಲಿ ಮಾತ್ರ, ಆ ಶ್ರಮಣನಿಗೆ ಭಿಕ್ಕುವಾಗಿ ಪೂರ್ಣ ದೀಕ್ಷೆ ನೀಡಿ, ಸಂಘಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು. ಹಾಗೆಯೇ ಸಂಘದ ನಿಯಮವನ್ನು ಪಾಲಿಸದವನು ಸಂಘವನ್ನು ತೊರೆಯಬೇಕಾಗುತ್ತಿತ್ತು.

ಸಂಘದ ಭಿಕ್ಕುಗಳಾದವರಿಗೆ ಬುದ್ಧ ಹಲವಾರು ನಿಯಮಗಳನ್ನು ವಿಧಿಸಿದ. ಭಿಕ್ಕುವಾದವನಿಗೆ ಖಾಸಗಿ ಆಸ್ತಿ ಇರಬಾರದು. ಕೇವಲ ಭಿಕ್ಷಾನ್ನದ ಮೂಲಕವೇ ಜೀವಿಸಬೇಕು. ತಾವು ಬೇಡಿ ಪಡೆದ ಆಹಾರವು ಮಾಂಸಾಹಾರವಾಗಿದ್ದರೂ ಸೇವಿಸಬಹುದು. ಆದರೆ ಭಿಕ್ಕುವಿನ ಆಹಾರಕ್ಕಾಗಿಯೇ ಒಂದು ಪ್ರಾಣಿಯನ್ನು ಕೊಲ್ಲುವುದಾದರೆ ಅದನ್ನು ತಡೆಯಬೇಕು. ತನ್ನ ಮೂಲಭೂತ ಅವಶ್ಯಕತೆಗಿಂತ ಹೆಚ್ಚಾದ ವಸ್ತುಗಳನ್ನು ಇತರರಿಗೆ ಹಂಚಬೇಕು. ಯಾವುದೇ ಊರಿನಲ್ಲಿ ಮೂರು ದಿನಗಳಿಗಿಂತ ಹೆಚ್ಚಾಗಿ ತಂಗಿರಬಾರದು. ಯಾರಿಗೂ ಬಲವಂತದಿಂದ ಧರ್ಮವನ್ನು ಉಪದೇಶಿಸಬಾರದು. ಕೇಳಿದರೆ ಮಾತ್ರ ಉಪದೇಶ ಮಾಡಬಹುದು. ತಿಂಗಳಿನ ನಿಗದಿತ ದಿನದಂದು ಭಿಕ್ಕುಗಳು ಸಭೆ ಸೇರಬೇಕು. ಅಂಥ ಸಭೆಗಳಲ್ಲಿ ಭಿಕ್ಕು ತಾನು ಮಾಡಿದ ತಪ್ಪುಗಳನ್ನು ಸಭೆಯ ಮುಂದಿಡಬೇಕು. (ಸಂಘದ ಭಿಕ್ಕುಗಳು ಪಾಲಿಸಬೇಕಾದ ನಿಯಮಗಳನ್ನು ವಿನಯ ಪಿಟಕದಲ್ಲಿ ವಿವರಿಸಲಾಗಿದೆ)

ಬುದ್ಧನ ತತ್ವಗಳನ್ನು ತಿಳಿಸುತ್ತಿದ್ದ ಸಂಘಕ್ಕೆ ಬೇರೆ ಬೇರೆ ಪಂಥದ ಶ್ರಮಣರು ಆಕರ್ಷಿತರಾಗಿ ಸಂಘವನ್ನು ಕ್ರಮೇಣ ಸೇರತೊಡಗಿದರು. ಇದರಿಂದಾಗಿ ಭಿಕ್ಕುಗಳ ಸಂಘ ಆರಂಭವಾಯಿತು. ಸಾರಿಪುತ್ರ, ಮೌದ್ಗಲ್ಯಾಯನ, ಪೂರಣಕಸ್ಯಪ ಮತ್ತು ಆನಂದ ಬುದ್ಧನ ಶಿಷ್ಯರಲ್ಲಿ ಉಲ್ಲೇಖಾರ್ಹರು. ಬುದ್ಧನ ತತ್ವಗಳಿಂದ ಆಕರ್ಷಿತರಾಗಿ ಅನೇಕ ಶ್ರೀಮಂತ ವರ್ಗದವರೂ, ರಾಜರುಗಳೂ ಬುದ್ಧನ ಶಿಷ್ಯರಾದರು. ಇವರುಗಳಲ್ಲಿ ಮಗಧದ ಬಿಂದುಸಾರ ಮತ್ತು ಕೋಸಲದ ಪ್ರಸೇನಜಿತರಾಜರುಗಳೂ ಇದ್ದರು. ಹಾಗೆಯೇ ಮಹಿಳೆಯರೂ ಬುದ್ಧನ ಶಿಷ್ಯೆಯರಾಗಿ ಭಿಕ್ಕುನಿಯರ ಸಂಘವನ್ನು ಸೇರಿದರು. ಹೀಗೆ ಸೇರಿದವರಲ್ಲಿ ಬುದ್ಧನ ಸಾಕು ತಾಯಿಯಾದ ಗೌತಮಿ, ಹೆಂಡತಿಯಾದ ಯಶೋಧರೆಯೂ ಇದ್ದರು. ಮಗನಾದ ರಾಹುಲನೂ ಬಿಕ್ಕು ಸಂಘವನ್ನು ಸೇರಿದ.

ಸಂಘದ ಭಿಕ್ಕುಗಳು ಮತ್ತು ಭಿಕ್ಕುನಿಯರು ವರ್ಷದ ಎಂಟು ತಿಂಗಳ ಕಾಲ ಊರಿನಿಂದ ಊರಿಗೆ ಅಲೆಯುತ್ತಾ ಬುದ್ಧನ ತತ್ವವನ್ನು ಪ್ರಸಾರ ಮಾಡುತ್ತಿದ್ದರು. ಸ್ವತಃ ಬುದ್ಧನೂ ಅವರೊಂದಿಗೆ ಸೇರಿ ಧರ್ಮ ಪ್ರಸಾರ ಮಾಡುತ್ತಿದ್ದ. ಇನ್ನುಳಿದ ವರ್ಷಾಕಾಲದಲ್ಲಿ ಅವರೆಲ್ಲರೂ ಸಂಘಕ್ಕಾಗಿ ಶ್ರೀಮಂತರುಗಳು ಕಟ್ಟಿಸಿ ದಾನ ನೀಡಿದ್ದ ಆರಾಮಗಳಲ್ಲಿ ತಂಗುತ್ತಿದ್ದರು. ಈ ದಿನಗಳಲ್ಲಿ ಪರಸ್ಪರ ವಿಚಾರ ವಿನಿಮಯ, ಧ್ಯಾನಗಳಲ್ಲಿ ತೊಡಗಿರುತ್ತಿದ್ದರು.

ಆ ಕಾಲಕ್ಕೆ ಬುದ್ಧನ ಧರ್ಮ ಪ್ರಸಾರದ ಹಾದಿ ಸುಗಮವಾಗಿರಲಿಲ್ಲ. ಆವೊತ್ತಿನ ಬೇರೆ ಬೇರೆ ಧರ್ಮದ ಶ್ರಮಣ ಪಂಥದವರಿಂದ ಬುದ್ಧನ ಬಗ್ಗೆ ಅನೇಕ ಅಪಪ್ರಚಾರಗಳು ನಡೆಯುತ್ತಿದ್ದವು. ಭಿಕ್ಕುಗಳು ಮತ್ತು ಭಿಕ್ಕುನಿಯರಿಗೆ ದೈಹಿಕ ಹಿಂಸೆ ಕೊಡುವುದು ಸಾಮಾನ್ಯವಾಗಿತ್ತು. ಆದರೂ ಭಿಕ್ಕುಗಳು ಧೃತಿಗೆಡದೆ ಧರ್ಮ ಪ್ರಸಾರ ಮಾಡುತ್ತಿದ್ದರು. ಇಂಥದ್ದೇ ಸನ್ನಿವೇಶಗಳ ನಡುವೆ, ಭಿಕ್ಷುಗಳ ಸಂಘದಲ್ಲಿದ್ದ ದೇವದತ್ತನು, ಬುದ್ಧನು ಬದುಕಿದ್ದಾಗಲೇ ಸಂಘದ ಅಧಿಪತ್ಯಕ್ಕಾಗಿ ರಾಜ ಅಜಾತ ಶತ್ರುವಿನ ಜೊತೆ ಸೇರಿ ಸಂಚು ನಡೆಸಿ ಬುದ್ಧನನ್ನು ಕೊಲ್ಲಿಸಲು ಪ್ರಯತ್ನಿಸಿ ವಿಫಲನಾದನು. ಬುದ್ಧ ಇವೆಲ್ಲವನ್ನೂ ಸಂಭಾಳಿಸಿಕೊಂಡು ಸಂಘವನ್ನು ಮುನ್ನಡೆಸಿದ, ಧರ್ಮಪ್ರಸಾರ ಮಾಡಿದ.

ಹೀಗೆ ಸುಮಾರು ನಲವತ್ಮೂರು ವರ್ಷಗಳವರೆಗೆ ಇಡೀ ಆರ್ಯಾಪರ್ವತದಲ್ಲೆಲ್ಲಾ ಬುದ್ಧನು ಸ್ವತಃ ಧರ್ಮಪ್ರಸಾರ ಮಾಡಿದ. ಇದರಿಂದಾಗಿ ಸಂಘ ಬೆಳೆಯಿತು.

ಬುದ್ಧನ ಖ್ಯಾತಿ ಹರಡಿತು

ಧರ್ಮದ ಪ್ರಸರಣವಾಯಿತು

ಮಾಲುಂಕ್ಯಪುತ್ತಾ ಎನ್ನುವ ಭಿಕ್ಕು ಬುದ್ಧನ ಬಳಿಗೆ ಬಂದು 'ಜೀವ ಎಂದರೇನು? ಶರೀರವೇ ಅಥವಾ ಮತ್ತೊಂದೆ? ಜಗತ್ತು ಶಾಶ್ವತವೇ ಅಥವಾ ಅಶಾಶ್ವತವೇ? ಜಗತ್ತು ಕೊನೆಯಿಲ್ಲದ್ದೇ ಅಥವಾ ಮೊದಲಿಲ್ಲದ್ದೇ? ತಥಾಗತನು (ಬುದ್ಧ) ಸಾವನ್ನು ಮೀರಿದವನೆ ಅಥವಾ ಸಾವಿನ ಮಿತಿಯಲ್ಲಿರುವವನೇ? ಈ ಪ್ರಶ್ನೆಗಳು ನನ್ನನ್ನು ಕಾಡುತ್ತಿವೆ. ಇವುಗಳಿಗೆ ತಥಾಗತನು ಸತ್ಯವನ್ನು ತಿಳಿಸಿದ್ದೇ ಆದರೆ ನಾನು ಸಂಘದಲ್ಲಿ ಉಳಿಯುತ್ತೇನೆ. ತಥಾಗತನು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ತಿಳಿಸದಿದ್ದರೆ ನಾನು ಸಂಘವನ್ನು ತೊರೆದು ಪ್ರಾಪಂಚಿಕ ಜೀವನಕ್ಕೆ ಹೋಗುತ್ತೇನೆ' ಎಂದು ಹೇಳಿದ.

ಬುದ್ಧ ಹೇಳಿದ, 'ಸಂಘವನ್ನು ಸೇರಿದವರಿಗೆ ಇಂತಹ ವಿಚಾರಗಳನ್ನು ತಿಳಿಸಿ ಹೇಳುತ್ತೇನೆಂದು, ಎಂದಾದರೂ ನಾನು ಹೇಳಿದ್ದೇನೆಯೇ?'

'ಇಲ್ಲ' ಎಂದನು ಮಾಲುಂಕ್ಯಪುತ್ತಾ.

ಆಮೇಲೆ ಬುದ್ಧ ಹೇಳಿದ. 'ಅಯ್ಯಾ, ಒಬ್ಬನಿಗೆ ಒಂದು ವಿಷದ ಬಾಣ ನಾಟಿದೆ. ಅವನ ಬಂಧು-ಮಿತ್ರರು ಅವನನ್ನು ವೈದ್ಯನ ಬಳಿಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಆ ಬಾಣಕ್ಕೆ ತುತ್ತಾದವನು ನನಗೆ ಬಾಣವನ್ನು ಬಿಟ್ಟವನ ಹೆಸರೇನು? ಅವನ ಜಾತಿ ಯಾವುದು? ಅವನು ಕಪ್ಪು ಬಣ್ಣದವನೆ ಅಥವಾ ಬಿಳಿಯ ಬಣ್ಣದವನೆ? ಎತ್ತರಕ್ಕಿದ್ದನೆ ಅಥವಾ ಗಿಡ್ಡಕ್ಕಿದ್ದನೆ? ಯಾವ ಬಗೆಯ ಬಿಲ್ಲಿನಿಂದ ಬಾಣಬಿಟ್ಟ? ಆ ಬಿಲ್ಲು ಡೊಂಕಾಗಿತ್ತೇ? ಉದ್ದವಾಗಿತ್ತೇ? ಅದನ್ನು ಯಾವ ಜಾತಿಯ ಮರದಿಂದ ತಯಾರಿಸಲಾಗಿತ್ತು? ಅವನು ಹೂಡಿದ ಬಾಣದ ಮೊನೆಗೆ ಯಾವ ವಿಷಯವನ್ನು ಲೇಪಿಸಿದ್ದರು? ಅದರ ಬಾಣದ ಗರಿಗಳು ಯಾವ ಪಕ್ಷಿಯದು? ಇದನ್ನು ತಿಳಿಸುವವರೆಗೂ ನಾನು ನನ್ನ ಶರೀರದಿಂದ ಬಾಣವನ್ನು ಹೊರತೆಗೆಯಲು ಬಿಡುವುದಿಲ್ಲ ಎಂದು ಹೇಳಿದರೆ, ಬಾಣ ನಾಟಿದವನು ಸಾಯಬಹುದೇ ಹೊರತು ಅವನ ಪ್ರಶ್ನೆಗಳಿಗೆ ಉತ್ತರ ದೊರಕುವುದಿಲ್ಲ.

ಈ ದ್ವಂದ್ವ, ಬುದ್ಧಿವಂತಿಕೆಗಳ ಮೇಲೆಯೇ ಜೀವನ ನಿಲ್ಲುವುದಾದರೆ ಅದು ಧರ್ಮದ ದಾರಿ ಅಲ್ಲ. ನಾನು ಹೇಳುವುದನ್ನು ಕೇಳು, ಪ್ರಪಂಚ ಶಾಶ್ವತವೊ, ಅಶಾಶ್ವತವೊ, ಆದರೆ ಹುಟ್ಟಂತೂ ಇದೆ. ಆದ್ದರಿಂದ ದುಃಖವೂ ಇದೆ. ಇದನ್ನು ಇಲ್ಲದಂತೆ ಮಾಡಿಕೊಳ್ಳುವ ದಾರಿಯನ್ನು ನಾನು ಹೇಳುತ್ತೇನೆ.

ನಾನು ಯಾವುದನ್ನು ಹೇಳಬಯಸುತ್ತೇನೆಯೊ ಅದನ್ನು ಮಾತ್ರ ಹೇಳುತ್ತೇನೆ. ನಾನು ಯಾವುದನ್ನು ಹೇಳಬಯಸುವುದಿಲ್ಲವೋ ಅದನ್ನು ನಾನು ಹೇಳುವುದಿಲ್ಲ. ಈ ವಿಚಾರ ಲಾಭದಾಯಕವಲ್ಲ; ಧರ್ಮದ ದಾರಿಗೆ ಸಂಬಂಧಪಟ್ಟಿಲ್ಲ. ಅದು ನಿರ್ವಾಣದ ದಾರಿಗೆ ಅಡ್ಡ ಬರುವಂಥದ್ದು ಆದ್ದರಿಂದ ನಾನು ಹೇಳಿಲ್ಲ.

ನಾನು ಹೇಳಿರುವುದು, ಇದು ದುಃಖ. ದುಃಖವು ಈ ರೀತಿಯಾಗಿ ಉತ್ಪನ್ನವಾಗುತ್ತದೆ. ದುಃಖವನ್ನು ಈ ರೀತಿ ಶಮನಮಾಡಬಹುದು, ಈ ದಾರಿಯಿಂದ ನಡೆದರೆ ದುಃಖವು ಇಲ್ಲವಾಗುತ್ತದೆ. ಇದು ಧರ್ಮದ ದಾರಿ. ಇದೇ ಬೋಧಿಯನ್ನು ಪಡೆಯಲು ದಾರಿ ಮಾಡಿಕೊಡುತ್ತದೆ. ಇದೇ ನಿರ್ವಾಣದ ದಾರಿ, ಇದನ್ನೇ ನಾನು ಹೇಳಿರುವುದು'.

ಇದು ತಥಾಗಥನು ಹೇಳಿದ ದರ್ಮದ ದಾರಿ.

ವಿಭಿನ್ನ ಪಂಥದ, ವಿಭಿನ್ನ ಧರ್ಮದ, ವಿಭಿನ್ನ ಅಭಿಪ್ರಾಯಗಳ ಶ್ರಮಣ-ಬ್ರಾಹ್ಮಣರು ಭಿಕ್ಷೆಗಾಗಿ ಶ್ರಾವಸ್ಥಿಗೆ ಬರುತ್ತಿದ್ದರು. ಹೀಗೆ ಭಿಕ್ಷೆಗೆ ಬಂದವರು ತಮ್ಮನ್ನೇ ಜ್ಞಾನಿಗಳು ಎಂದು ಭ್ರಮಿಸಿ ತಮ್ಮ ತಮ್ಮ ನಿಲುವಿಗೆ ತಕ್ಕಂತೆ ವಾದ-ವಿವಾದಗಳನ್ನು ಮಾಡುತ್ತಾ, ಸಮರ್ಥನೆ-ಖಂಡನೆಗಳಲ್ಲಿ ಮುಳುಗಿ ಪರಸ್ಪರ ವ್ಯರ್ಥ

ಜಿಜ್ಞಾಸೆಯಲ್ಲಿ ತೊಡಗಿದ್ದರು. ಇದನ್ನು ಕಂಡ ಭಿಕ್ಕುಗಳು ಈ ವಿಚಾರವನ್ನು ಬುದ್ಧನಿಗೆ ತಿಳಿಸಿದರು.

ಅವರಿಗೆ ಬುದ್ಧ ಹೇಳಿದ, 'ಇವರು ತಮ್ಮ ಅಲ್ಪ ಜ್ಞಾನವನ್ನೇ, ಪೂರ್ಣ ಜ್ಞಾನ ಎಂದು ಭ್ರಮಿಸಿರುವರು. ಸತ್ಯದ ಒಂದು ಮಗ್ಗುಲಲ್ಲೇ ನೋಡಿ, ಅದೇ ಪೂರ್ಣ ಸತ್ಯ ಎಂದು ತಿಳಿದಿರುವರು. ಇವರು ಸತ್ಯ ಮತ್ತು ಮಿಥ್ಯೆಗಳ ನಡುವಿನ ಭೇದವನ್ನು ಅರಿಯದವರು. ಅಜ್ಞಾನದ ನೆಲೆಯಲ್ಲಿ ನಿಂತು ಸತ್ಯವನ್ನು ಹುಡುಕುತ್ತಿರುವವರು' ಎಂದು ಹೇಳಿ, ಅವರ ಅಜ್ಞಾನವು ಯಾವ ರೀತಿಯದು ಎಂಬುದನ್ನು ತಿಳಿಸಲು ಒಂದು ನೀತಿ ಕಥೆ ಹೇಳಿದ.

'ಶ್ರಾವಸ್ಥಿಯ ರಾಜನೊಬ್ಬ, ತನ್ನ ಮಂತ್ರಿಗೆ, ಶ್ರಾವಸ್ಥಿಯಲ್ಲಿರುವ ಅಂಧರನ್ನೆಲ್ಲಾ ಒಂದು ಕಡೆ ಕಲೆ ಹಾಕು ಎಂದು ಹೇಳಿದ. ಮಂತ್ರಿಯು ರಾಜನು ಹೇಳಿದ ಹಾಗೆಯೇ ಅಂಧರನ್ನೆಲ್ಲಾ ಕಲೆ ಹಾಕಿದ. ಆಗ ರಾಜನು ಆ ಅಂಧರಿಗೆಲ್ಲಾ ಆನೆಯನ್ನು ತೋರಿಸು ಎಂದು ಹೇಳಿದ. ಅದರಂತೆಯೇ ಮಂತ್ರಿಯು ಅಂಧರನ್ನು ಕರೆದೊಯ್ದು. ಒಬ್ಬನಿಗೆ ಆನೆಯ ತಲೆಯನ್ನು ಮುಟ್ಟಿಸಿ ಇದೇ ಆನೆ ಎಂದು ಹೇಳಿದ. ಇನ್ನೊಬ್ಬನಿಗೆ ಅದರ ಕಾಲನ್ನು ಮುಟ್ಟಿಸಿ ಇದೇ ಆನೆ ಎಂದು ಹೇಳಿದ. ಇದೇ ರೀತಿ ಬಾಲ, ಸೊಂಡಲು, ಆನೆಯ ಹಿಂಭಾಗ, ದಂತ, ಹೊಟ್ಟೆ, ಬಾಲದ ತುದಿಗಳನ್ನು ಒಬ್ಬೊಬ್ಬರಿಗೂ ಮುಟ್ಟಿಸಿ ಇದೇ ಆನೆ ಎಂದು ಅವರಿಗೆ ಹೇಳಿದ. ಬಳಿಕ ಬಂದು ರಾಜನಿಗೆ ವರದಿ ಮಾಡಿದ.

ನಂತರ ರಾಜನು ಎಲ್ಲ ಅಂಧರನ್ನು ಕರೆದು, ನೀವು ಕಂಡುಕೊಂಡ ಆನೆಯನ್ನು ವರ್ಣಿಸಿ ಎಂದು ಹೇಳಿದ. ಆಗ ಆನೆಯ ತಲೆಯನ್ನು ಮುಟ್ಟಿದವನು ಬಂದು, ಆನೆಯು ಮಡಕೆಯಂತಿದೆ ಎಂದು ಹೇಳಿದ. ಹೊಟ್ಟೆಯನ್ನು ಮುಟ್ಟಿದವನು ಬಂದು, ಆನೆಯು ವಾಡೆಯಂತಿದೆ ಎಂದು ಹೇಳಿದ. ಅದೇ ರೀತಿ ಹಿಂಭಾಗವನ್ನು ಮುಟ್ಟಿದವನು ಗೋಡೆಯಂತಿದೆ ಎಂದರೆ, ಸೊಂಡಿಲನ್ನು ಮುಟ್ಟಿದವನು ನೇಗಿಲಿನಂತಿದೆ ಎಂದು ಹೇಳಿದ. ದಂತವನ್ನು ಮುಟ್ಟಿದವನು ಗುಳದಂತಿದೆ ಎಂದು, ಬಾಲವನ್ನು ಮುಟ್ಟಿದವನು ಹಗ್ಗದಂತಿದೆ ಎಂದು, ಬಾಲದ ತುದಿಯನ್ನು ಮುಟ್ಟಿದವನು ಪೊರಕೆಯಂತಿದೆ ಎಂದು, ಕಾಲನ್ನು ಮುಟ್ಟಿದವನು ಕಂಬದಂತಿದೆ ಎಂದು ಹೇಳತೊಡಗಿದರು. ಹೀಗೆ ತಾವು ಹೇಳುವುದೇ ಸತ್ಯವೆಂದು ಅವರು ಜಗಳವಾಡತೊಡಗಿದರು.

ಹೀಗೆಯೇ ಸತ್ಯ-ಅಸತ್ಯಗಳ ಬೇಧವನ್ನು ಅರಿಯದ ಈ ಜನರೂ ಕೂಡ ತಾವು ಹೇಳುವುದೇ ಸತ್ಯವೆಂದು ಜಗಳವಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಶ್ರಮಣ-ಬ್ರಾಹ್ಮಣರೂ ಕೂಡ ಸತ್ಯದ ಕಣ್ಣಿಲ್ಲದ ಅಂಧರು. ಸತ್ಯವೇನೆಂಬುದನ್ನು ಅರಿಯರು. ಅವರ ಬಗ್ಗೆ ವಿಚಾರ ಮಾಡುತ್ತಾ, ನೀವು ನಿಮ್ಮ ಕಾಲವನ್ನು ವ್ಯರ್ಥ ಮಾಡಬೇಡಿ ಎಂದು ಹೇಳಿದ.

ಹೀಗೆ ಭಗವಾನ್ ಬುದ್ಧನು ತನ್ನ ಐದುನೂರು ಜನ ಶಿಷ್ಯರೊಂದಿಗೆ ಇಡೀ ಆರ್ಯಾವರ್ತದಲ್ಲೆಲ್ಲಾ ನಲವತ್ತೂರು ವರ್ಷಗಳ ಕಾಲ ನಿರಂತರವಾಗಿ ಧರ್ಮ ಪ್ರಸಾರ ಮಾಡಿ, ತನ್ನ ಜೀವಿತ ಕೊನೆಯ ದಿನಗಳ ಹತ್ತಿರ ಬಂದ. ಆಗ ಎಂಭತ್ತು ವರ್ಷದವನಾಗಿದ್ದ ಬುದ್ಧ, ತನ್ನ ದೇಹವೆಂಬ ಬಂಡಿಯು ಜೀರ್ಣಾವಸ್ಥೆಯಲ್ಲಿದೆ ಎಂಬುದನ್ನು ತಿಳದವನಾಗಿದ್ದ. ಈ ದಿನಗಳಲ್ಲಿ ಬುದ್ಧನು ಕೊನೆಯ ಬಾರಿಗೆ ಸುಂದರ ನಗರವಾದ ವೇಸಾಲಿಯನ್ನು ನೋಡಿಕೊಂಡು ತನ್ನ ಪ್ರಿಯಶಿಷ್ಯನಾದ ಆನಂದನೊಡನೆ ಮಲ್ಲರಾಜ್ಯದ ಪಾವಾಕ್ಕೆ ಬಂದು ತಂಗಿದ.

ಭಗವಾನ್ ಬುದ್ಧನು ಪಾವಾ ಗ್ರಾಮದಲ್ಲಿರುವ ಮಾವಿನ ಮರದ ತೋಪಿನಲ್ಲಿ ತಂಗಿರುವ ವಿಷಯವನ್ನು ತಿಳಿದ ಚುಂದ ಎನ್ನುವ ಕಮ್ಮಾರನು ಸಂತೋಷಗೊಂಡು, ಬುದ್ಧನನ್ನು ಆ ದಿನದ ಊಟಕ್ಕಾಗಿ ತನ್ನ ಮನೆಗೆ ಆಹ್ವಾನಿಸಿದ. ಬುದ್ಧನು ಚುಂದನ ಆಹ್ವಾನವನ್ನು ಒಪ್ಪಿ ಅವನ ಮನೆಗೆ ಊಟಕ್ಕೆ ಹೋದ. ಚುಂದನು ತಾನು ತಯಾರಿಸಿದ್ದ ಹಂದಿಯ ಮಾಂಸದ ಆಹಾರವನ್ನು ಬುದ್ಧನಿಗೆ ಪ್ರೀತಿಯಿಂದ ಬಡಿಸಿದ. ಬುದ್ಧ ಚುಂದನು ನೀಡಿದ ಆಹಾರವನ್ನು ಸೇವಿಸಿದ ಕೂಡಲೇ, ಆ ಆಹಾರವು ವಿಷಮಯವಾಗಿರುವುದನ್ನು ತಿಳಿದು ಇದು ತನ್ನ ದೇಹಕ್ಕೆ ತೀವ್ರವಾದ ಘಾಸಿಯನ್ನು ಉಂಟು ಮಾಡುತ್ತದೆ ಎನ್ನುವುದನ್ನು ಅರಿತುಕೊಂಡ. ಬುದ್ಧನು ಚುಂದನನ್ನು ಹತ್ತಿರಕ್ಕೆ ಕರೆದು, 'ಅಯ್ಯಾ, ತಥಾಗತನಲ್ಲದೆ ಜಗತ್ತಿನ ಇನ್ನಾವ ಜೀವರಾಶಿಯೂ ನೀನು ನೀಡಿದ ಆಹಾರವನ್ನು ಜೀರ್ಣಿಸಿಕೊಳ್ಳಲಾರದು. ಆದ್ದರಿಂದ ಈ ಆಹಾರವನ್ನು ತೆಗೆದುಕೊಂಡು ಹೋಗಿ ನೆಲದಲ್ಲಿ ಹೂತುಬಿಡು' ಎಂದು ತಿಳಿಸಿದ. ಅನಂತರ ಚುಂದನಿಗೆ ಧರ್ಮೋಪದೇಶ ಮಾಡಿದ.

ಚುಂದನು ನೀಡಿದ ಆಹಾರದಿಂದ ಬುದ್ಧನ ದೇಹ ತೀವ್ರವಾದ ಭೇದಿ-ಜ್ವರ-ನೋವುಗಳಿಗೆ ಒಳಗಾಯಿತು. ಇದರಿಂದ ಬಹಳ ಕಾಲ ಈ ದೇಹದಲ್ಲಿರುವುದು ಸಾಧ್ಯವಿಲ್ಲ ಎಂದು ತಥಾಗತನು ತಿಳಿದು, ಈ ಹುಟ್ಟು-ಸಾವುಗಳ ಭವಚಕ್ರದಿಂದ ಬಿಡುಗಡೆ ಹೊಂದಿ ಮಹಾ ನಿರ್ವಾಣವನ್ನು ಹೊಂದುವ ಕಾಲ ಸಮೀಪಿಸಿತು ಎಂದು ತಿಳಿದು, ತನ್ನನ್ನು ಕುಶಿನಾರಕ್ಕೆ ಕರೆದುಕೊಂಡು ಹೋಗಿ, ಅಲ್ಲಿನ ಸಾಲವೃಕ್ಷಗಳ ಕೆಳಗೆ ಮಲಗಿಸಬೇಕೆಂದು ಆನಂದನಿಗೆ ಹೇಳಿದ. 'ಸುಜಾತೆ ನೀಡಿದ ಊಟದ ಭಿಕ್ಷೆ ಬೋಧಿ ಪಡೆಯಲು ಹೇಗೆ ಕಾರಣವಾಯಿತೋ ಹಾಗೆಯೇ ಹುಟ್ಟು ಸಾವುಗಳ ಭವಚಕ್ರದಿಂದ ಬಿಡುಗಡೆ ಹೊಂದಿ ಮಹಾ ನಿರ್ವಾಣ ಹೊಂದಲು ಚುಂದನು ನೀಡಿದ ಆಹಾರವು ಕಾರಣವಾಗಿದೆ. ಆದ್ದರಿಂದ ಸುಜಾತೆ ನೀಡಿದ ಆಹಾರದ ಭಿಕ್ಷೆಯಷ್ಟೇ ಚುಂದನು ನೀಡಿದ ಆಹಾರದ ಭಿಕ್ಷೆಯೂ ಶ್ರೇಷ್ಠವಾದದ್ದು. ತಥಾಗಥನು ತನ್ನ ಜೀವಿತದ ಕೊನೆಯ ಊಟವನ್ನು ಚುಂದನಲ್ಲಿ ಮಾಡಿದ್ದಾನೆ. ಆದ್ದರಿಂದ ಯಾರು ಚುಂದನು ಪಶ್ಚಾತ್ತಾಪ ಪಡುವಂತೆ ಯಾರೂ ನಡೆದುಕೊಳ್ಳಬೇಡಿ' ಎಂದು ಮಹಾ ಕರುಣೆಯಿಂದ ಆನಂದನಿಗೆ ತಿಳಿಸಿದ.

ಭಗವಾನ್ ಬುದ್ಧನು ಕುಶಿನಾರದಲ್ಲಿ ಮಹಾ ನಿರ್ವಾಣ ಹೊಂದುವ ಸುದ್ದಿಯನ್ನು ಶ್ರಮಣರಿಂದ ಕೇಳಿದ ಸಬದ್ಧ ಎನ್ನುವ ಶ್ರಮಣನು, ಇನ್ನು ಈ ಜಗತ್ತಿನಲ್ಲಿ ಬುದ್ಧನು ಇಲ್ಲವಾಗುತ್ತಾನಲ್ಲ ಎಂದು ತಿಳಿದು, ಬುದ್ಧನಿಂದಲೇ ಧರ್ಮವನ್ನು ಪಡೆಯಬೇಕು ಮತ್ತು ತನ್ನಲ್ಲಿದ್ದ ಅನುಮಾನಗಳನ್ನು ಬುದ್ಧನಿಂದಲೇ ಪರಿಹರಿಸಿಕೊಳ್ಳಬೇಕು ಎಂದು ಬುದ್ಧನ ಬಳಿ ಬಂದ.

ತೀವ್ರವಾದ ಭೇದಿ-ಜ್ವರ, ನೋವುಗಳಿಂದ ನಿಶಕ್ತನಾಗಿ ಮಲಗಿದ್ದ ಬುದ್ಧನನ್ನು ಕಾಣಲು ಬಂದ ಸುಬದ್ಧನಿಗೆ ಆನಂದನು ಅವಕಾಶ ನೀಡಲಿಲ್ಲ. ಇವರಿಬ್ಬರ ಸಂವಾದವನ್ನು ಕೇಳಿದ ಬುದ್ಧ, ಅವನನ್ನು ತಡೆಯಬೇಡ, ಅವನು ಇಲ್ಲಿಗೆ ಬಂದಿರುವುದು ನನಗೆ ತೊಂದರೆ ಕೊಡಲು ಅಲ್ಲ, ಧರ್ಮವನ್ನು ಅರಿಯಲು, ಆದ್ದರಿಂದ ಅವನನ್ನು ನನ್ನ ಬಳಿಗೆ ಕಳುಹಿಸು ಎಂದು ಆನಂದನಿಗೆ ಹೇಳಿದ.

ಬುದ್ಧನನ್ನು ಕಂಡು ನಮಸ್ಕರಿಸಿದ ಸುಬದ್ಧ, ಬೇರೆ ಬೇರೆ ಸಾಧಕರ ಸಾಧನೆಗಳ ಬಗ್ಗೆ ಬುದ್ಧನಲ್ಲಿ ಪ್ರಶ್ನೆ ಕೇಳಿದ. ಅವನ ಪ್ರಶ್ನೆಗಳಿಗೆ ಬುದ್ಧ ಹೇಳಿದ, ಅಯ್ಯಾ, ಅನಿತ್ಯವಾದವುಗಳನ್ನೆಲ್ಲಾ ವೃಥಾ ಮನಸ್ಸಲ್ಲಿ ಇಟ್ಟುಕೊಳ್ಳಬೇಡ. ನಾನು ಹೇಳುವ ಮಾತನ್ನು ಮನಸಿಟ್ಟು ಕೇಳು, ನಾನು ಹೇಳುವ ನಿಜವಾದ ಧರ್ಮ ಯಾವುದೆಂದು ತಿಳಿ. ಯಾವ ಧರ್ಮದಲ್ಲಿ ನಾಲ್ಕು ಆರ್ಯ ಸತ್ಯಗಳು ಮತ್ತು ಆರ್ಯ ಅಷ್ಟಾಂಗ ಮಾರ್ಗವು ಇರುವುದಿಲ್ಲವೋ, ಆ ಧರ್ಮದವನು ನಾಲ್ಕನೇ ದರ್ಜೆಯ ಶ್ರಮಣನಾಗಿರುತ್ತಾನೆ ಮತ್ತು ಯಾರು ಶ್ರೇಷ್ಠನಾದ ಅಷ್ಟಾಂಗ ಮಾರ್ಗವನ್ನು ಅನುಸರಿಸಿ ನಿರ್ವಾಣವನ್ನು ಪಡೆಯುತ್ತಾರೋ ಅವರು ಅರ್ಹಂತರಾಗುತ್ತಾರೆ. ಎಲ್ಲಿಯವರೆಗೆ ಅಷ್ಟಾಂಗ ಮಾರ್ಗವನ್ನು ಅನುಸರಿಸುವವರು ಇರುತ್ತಾರೋ ಅಲ್ಲಿನವರೆಗೆ ಅರ್ಹಂತರಿರುತ್ತಾರೆ' ಎಂದು ಸುಬದ್ಧನಿಗೆ ಧರ್ಮೋಪದೇಶ ಮಾಡಿದ.

ಕುಶಿನಾರದ ಸಾಲವೃಕ್ಷಗಳ ಕೆಳಗೆ ಮಲಗಿದ್ದ ಬುದ್ಧನನ್ನು ಕಂಡ ಆನಂದನು, ಇನ್ನು ಜಗತ್ತಿನಲ್ಲಿ ಬುದ್ಧನು ಇಲ್ಲವಾಗುತ್ತಾನಲ್ಲ ಎಂದು ತಿಳಿದವನಾಗಿ, ತಾಯನ್ನಗಲುವ ಮಗು ಅಳುವಂತೆ ದುಃಖತಪ್ತನಾಗುತ್ತಾನೆ. ಆಗ ಬುದ್ಧ ಆನಂದನನ್ನು ಕುರಿತು ಹೇಳಿದ ಮಾತುಗಳು, ಬುದ್ಧನ ಕೊನೆಯ ವಾಕ್ಯಗಳು ಎಂದು ಪ್ರಸಿದ್ಧಿ ಪಡೆದು ಶ್ರೇಷ್ಠವಾಗಿವೆ. ಬುದ್ಧ ಆನಂದನಿಗೆ ಹೇಳುತ್ತಾನೆ.

'ತಥಾಗತನು ಹೇಳಿದ ಜ್ಞಾನ ದೃಷ್ಟಿಯನ್ನು ನೀನು ಕಾಣಬೇಕೆ ಹೊರತು, ತಥಾಗತನ ಶರೀರದ ಬಗ್ಗೆ ಇಟ್ಟಿರುವ ವ್ಯಾಮೋಹವನ್ನು ತೊರೆದುಬಿಡು'.

'ನಾನು ಇಲ್ಲದಿರುವಾಗ ನಾನು ಹೇಳಿದ ಧರ್ಮ ಮತ್ತು ವಿನಯ ನಿಮಗೆ ದಾರಿದೀಪವಾಗುತ್ತದೆ, ಗುರುವಾಗುತ್ತದೆ'.

ಕೊನೆಯದಾಗಿ ತನ್ನ ಎಲ್ಲ ಬಿಕ್ಕುಗಳನ್ನು ಕರೆಸಿ, "ನಿಮ್ಮಲ್ಲಿ ಏನಾದರೂ ಪ್ರಶ್ನೆಗಳಿವೆಯೆ! ಇದ್ದರೆ ಸ್ನೇಹಿತರಂತೆ ಕೇಳಿ" ಎಂದು ಹೇಳಿದ. ಯಾವ ಭಿಕ್ಷುವೂ ಪ್ರಶ್ನೆಯನ್ನು ಕೇಳಲಿಲ್ಲ. ಬುದ್ಧ ತನ್ನ ಕೊನೆಯ ವಾಕ್ಯವನ್ನು ನುಡಿದ.

ಹುಟ್ಟಿದ್ದೆಲ್ಲಾ ನಾಶವಾಗಲೇಬೇಕು
ಇದು ಲೋಕ ನಿಯಮ
ನೀವೆಲ್ಲ ಈ ಹುಟ್ಟು ಸಾವುಗಳ ಭವಚಕ್ರದಿಂದ
ಪಾರಾಗಲು ಧರ್ಮದ ದಾರಿಯಲ್ಲಿ ನಡೆಯಿರಿ
ಧರ್ಮದ ದಾರಿಯಲ್ಲಿ ನಡೆದು ನಿರ್ವಾಣ ಪಡೆಯಿರಿ

ಕುಶಿನಾರದ ಸಾಲವೃಕ್ಷಗಳ ನೆರಳಲ್ಲಿ ವೈಶಾಖ ಶುದ್ಧ ಪೂರ್ಣಿಮೆಯಂದು ಬುದ್ಧ ದೇಹವನ್ನು ತ್ಯಜಿಸಿ ಮಹಾ ನಿರ್ವಾಣ ಪಡೆದ.

ಭಗವಾನ್ ಬುದ್ಧನ ಜೀವಿತದಲ್ಲಿ ವೈಶಾಖ ಶುದ್ಧ ಪೂರ್ಣಿಮೆ ಅತ್ಯಂತ ಘನವಾದದ್ದು. ಗೌತಮ ಜನ್ಮತಾಳಿದ್ದು, ಗೌತಮನಾಗಿದ್ದವನು ಬುದ್ಧನಾಗಿದ್ದು ಮತ್ತು ಬುದ್ಧನು ದೇಹವನ್ನು ತ್ಯಜಿಸಿ ಮಹಾ ನಿರ್ವಾಣವನ್ನು ಪಡೆದದ್ದು ವೈಶಾಖ ಶುದ್ಧ ಪೂರ್ಣಿಮೆಯಂದೇ. ಇಂದಿಗೂ ನಾಡಿನ ಜನಪದಕ್ಕೆ ವೈಶಾಖ ಶುದ್ಧ ಪೂರ್ಣಿಮೆಯ ಪವಿತ್ರವಾದ ದಿನವಾಗಿದೆ. ●

ಗಾಂಧಿ ಮತ್ತು ಕೋಮುವಾದ

ನಾವಿಂದು ಅತ್ಯಂತ ಆತಂಕದ ಸ್ಥಿತಿಯಲ್ಲಿದ್ದೇವೆ. ಮನುಷ್ಯನ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಕುರಿತು ಮಾಡಬೇಕಾದ ಚಿಂತನೆಗೆ ಬೇಕಾದ ಸಮಯವನ್ನೆಲ್ಲ ಕೋಮುವಾದದ ವಿರುದ್ಧ ಹೋರಾಡಲು ಬಳಸುವ ಪರಿಸ್ಥಿತಿ ಬಂದೊದಗಿದೆ. ಸಮಾಜದಲ್ಲಿ ಕೋಮುಸೌಹಾರ್ದವು ಸಹಜವಾಗಿ ಇರುವಂಥ ವಾತಾವರಣವಿದ್ದಾಗ ಮಾತ್ರ ಮಾನವ ಅಭಿವೃದ್ಧಿ ಪಥದಲ್ಲಿ ಮುಂದುವರಿಯಲು ಸಾಧ್ಯ; ಇಲ್ಲದಿದ್ದರೆ ಜೀವಂತವಾಗಿರುವುದೊಂದೇ ಅವನ ಗುರಿಯಾಗುತ್ತದೆ. ಕೋಮುವಾದವು ಮನುಷ್ಯನ ಎಲ್ಲ ಒಳ್ಳೆಯತನದ ಮೇಲೆ ಕ್ಯಾಕರಿಸಿ ಉಗುಳುತ್ತದೆ. ಎಲ್ಲ ಸೂಕ್ಷ್ಮ ಭಾವನೆಗಳನ್ನು ಹಾಳು ಮಾಡುತ್ತದೆ. ಮನುಷ್ಯ ಮನುಷ್ಯನನ್ನು ಅರಿಯುವ ಸಂದರ್ಭದಲ್ಲಿ ಅಡ್ಡಗೋಡೆಯಾಗಿ ನಿಲ್ಲುತ್ತದೆ. ಈ ಸಂದರ್ಭದಲ್ಲಿ ಗಾಂಧೀಜಿಯವರು ಕೋಮು ಸೌಹಾರ್ದಕ್ಕಾಗಿ ಮತ್ತು ಮನುಷ್ಯನ ಸದ್ಭಾವನೆಗಳನ್ನು ರಕ್ಷಿಸುವುದಕ್ಕಾಗಿ ಮಾಡಿದ ಪ್ರಯತ್ನಗಳು ನಮ್ಮ ದೇಶಕ್ಕೆ ದಾರಿದೀಪಗಳಾಗಿವೆ. ದೇಶ ಯಾವ ರೀತಿ ಮುಂದುವರಿಯಬೇಕೆಂಬುದನ್ನು ಸೂಚಿಸುತ್ತದೆ.

ಗಾಂಧೀಜಿಯವರು ಮಾನವೀಯತೆಗೆ ಬದ್ಧವಾಗಿದ್ದಂಥ ಒಬ್ಬ 'ಬಂಡುಕೋರ' ಸನಾತನವಾದಿಗಳಾಗಿದ್ದರು. ಅವರ ಸನಾತನವಾದವು ಪರಿಶುದ್ಧವಾಗಿದೆ; ಇಡೀ ಲೋಕದ ಹಿತವನ್ನು ಕಾಪಾಡುವುದಾಗಿದೆ. ಅಂತೆಯೆ ಗಾಂಧೀಜಿಯವರು ವ್ಯಾಖ್ಯಾನಿಸುವ ಹಿಂದೂ ಧರ್ಮವು ಇಡೀ ವಿಶ್ವಕ್ಕೇ ಆದರ್ಶಪ್ರಾಯವಾಗಿದೆ. ಅವರ ಹಿಂದೂ ಧರ್ಮದಲ್ಲಿ ಕ್ರೈಸ್ತರು, ಮುಸ್ಲಿಮರು, ಬೌದ್ಧರು, ಹೀಗೆ ಎಲ್ಲರೂ ಮಾನವ ಘನತೆಯನ್ನು ಪಡೆಯುತ್ತಾರೆ. ಪರಿಶುದ್ಧರಾದ ಹಿಂದೂಗಳು, ಮುಸ್ಲಿಮರು, ಸಿಖ್ಖರು, ಕ್ರೈಸ್ತರು ಎಲ್ಲರೂ ಗಾಂಧೀಜಿಯವರ ಕಣ್ಣಲ್ಲಿ ಒಂದೇ ಆಗುತ್ತಾರೆ. ಹೀಗಾಗಿ ನಿಜವಾದ ಆಚರಣೆಯಲ್ಲಿ ಅವರಿಗೆ ಧರ್ಮಗಳ ಮಧ್ಯೆ ವ್ಯತ್ಯಾಸವೇ ಕಾಣುವುದಿಲ್ಲ. ಈ ಮನಸ್ಥಿತಿಯೇ ಕೋಮುವಾದವೆಂಬ ರೋಗಕ್ಕೆ ಮದ್ದಾಗಿದೆ.

"ಮುಹಮ್ಮದ್, ಝುರತುಷ್ಟ್ರ ಮತ್ತು ಮೋಸೆಸರಿಗೆ ಇರುವಂತೆಯೇ ಏಸುವಿಗೂ ಹಿಂದೂ ಧರ್ಮದಲ್ಲಿ ಸಾಕಷ್ಟು ಸ್ಥಾನವಿದೆ. ವಿವಿಧ ಧರ್ಮಗಳು ನನಗೆ ಒಂದೇ ತೋಟದ ಸುಂದರ ಪುಷ್ಪಗಳು ಅಥವಾ ಅವು ಒಂದೇ ಮಹಾವೃಕ್ಷದ ಕೊಂಬೆಗಳು" ಎಂದು ಗಾಂಧೀಜಿಯವರು ಹೇಳಿದ್ದು ಕೋಮುವಾದಕ್ಕೊಂದು ಪ್ರಬಲ ಉತ್ತರವಾಗಿದೆ. ಎಲ್ಲ ಮತಗಳು ಸತ್ಯ ಮಾತ್ರವಲ್ಲ ಸಮಾನ ಕೂಡ ಎಂದು ಗಾಂಧೀಜಿಯವರು ನಂಬಿದ್ದರು. ಎಲ್ಲಾ ಪ್ರವಾದಿಗಳೂ ಸಮಾನರು ಎಂದು ಅವರು ಹೇಳುತ್ತಿದ್ದರು. ಭಾರತದಂಥ ಬಹುಸಾಂಸ್ಕೃತಿಕ ಮತ್ತು ಬಹು ಧಾರ್ಮಿಕ ದೇಶದಲ್ಲಿ ಗಾಂಧೀಜಿಯವರ ಸಂಯಮ ಮತ್ತು ಮನುಷ್ಯಪ್ರೇಮ ಮಾತ್ರ ಜನಸಮುದಾಯಕ್ಕೆ ಉದ್ವಿಗ್ನವಿಲ್ಲದ ವಾತಾವರಣವನ್ನು ಸೃಷ್ಟಿಸಬಲ್ಲುದು.

"ಹಿಂದೂ ಧರ್ಮ ಪಟ್ಟು ಬಿಡದ ಸತ್ಯಾನ್ವೇಷಣೆ" ಎಂಬುದರಲ್ಲಿ ಅವರಿಗೆ ಅಚಲವಾದ ನಂಬಿಕೆ ಇತ್ತು.



> 'ನಾನೊಬ್ಬ ಸನಾತನಿ ಹಿಂದೂ' ಎಂದು ಗಾಂಧೀಜಿಯವರು ಹೇಳಿಕೊಂಡರೂ ತಮ್ಮದೇ ಆದ ಮಾನವೀಯ ಮೌಲ್ಯಗಳ ಬೆಳಕಿನ ಮೂಲಕವೇ ಹಿಂದೂ ಧರ್ಮವನ್ನು ಗುರುತಿಸುತ್ತಾರೆ. ವಿಶಾಲ ಕಲ್ಪನೆಗೆ ಅವಕಾಶವಿಲ್ಲದ ಹಿಂದೂ ಧರ್ಮ, ಕೋಮು ಭಾವನೆಗಳನ್ನು ಕೆರಳಿಸುವ ಹಿಂದೂಧರ್ಮ, ಜಾತೀಯತೆ ಮತ್ತು ಅಸ್ಪೃಶ್ಯತೆ ಆಚರಿಸುವ ಹಿಂದೂ ಧರ್ಮ, 'ಗರ್ವದಿಂದ ಹೇಳಿರಿ ನಾವು ಹಿಂದೂಗಳು' ಎಂದು ಹೇಳುವವರ ಹಿಂದೂ ಧರ್ಮ, ಅವರ ಹಿಂದೂ ಧರ್ಮವಾಗಿರಲಿಲ್ಲ.
>
> ○ ರಂಜಾನ್ ದರ್ಗಾ

ಧರ್ಮಗ್ರಂಥವಾದ ಭಗವದ್ಗೀತೆ ಅವರಿಗೆ ಬಾಹ್ಯ ಪ್ರಪಂಚದ ಗ್ರಂಥವಾಗಿದ್ದಿಲ್ಲ. ಮನುಷ್ಯನ ಆಂತರಿಕ ಜಗತ್ತು ಮತ್ತು ಅಲ್ಲಿರುವ ಕುರುಕ್ಷೇತ್ರಕ್ಕೆ ಸಂಬಂಧಿಸಿದುದಾಗಿತ್ತು.

"ದುರ್ಯೋಧನ ಮತ್ತು ಅವನ ಪಕ್ಷದವರನ್ನು ನಾನು ಮಾನವನಲ್ಲಿರುವ ಅಧಮ ಪ್ರವೃತ್ತಿಗಳೆಂದೂ ಅರ್ಜುನ ಮತ್ತು ಅವನ ಪಕ್ಷದವರನ್ನು ಉತ್ತಮ ಪ್ರವೃತ್ತಿಗಳೆಂದೂ ಪರಿಗಣಿಸುತ್ತೇನೆ. ನಮ್ಮ ಸ್ವಂತ ದೇಹವೇ ಯುದ್ಧರಂಗ. ಈ ಎರಡೂ ಪಕ್ಷಗಳಲ್ಲಿ ಶಾಶ್ವತವಾದ ಯುದ್ಧ ನಡೆಯುತ್ತಿದೆ. ಕವಿಋಷಿ ಅದನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ಶುದ್ಧ ಹೃದಯದಲ್ಲಿ ಸದಾ ಪಿಸುನುಡಿ ನುಡಿಯುತ್ತಿರುವ ಅಂತರ್ಯಾಮಿ ಕೃಷ್ಣ. ಗಡಿಯಾರದಂತೆ ಹೃದಯಕ್ಕೆ ಶುದ್ಧತೆಯ ಕೀಲು ಕೊಡುವುದು ಅವಶ್ಯಕ. ಇಲ್ಲದಿದ್ದರೆ ಅಂತರ್ಯಾಮಿ ಮಾತನಾಡುವುದನ್ನು ನಿಲ್ಲಿಸುತ್ತಾನೆ" ಎಂದು ಗಾಂಧೀಜಿ ನಮಗೆ ಕಿವಿಮಾತು ಹೇಳಿದ್ದಾರೆ.

'ನಾನೊಬ್ಬ ಸನಾತನಿ ಹಿಂದೂ' ಎಂದು ಗಾಂಧೀಜಿಯವರು ಹೇಳಿಕೊಂಡರೂ ತಮ್ಮದೇ ಆದ ಮಾನವೀಯ ಮೌಲ್ಯಗಳ ಬೆಳಕಿನ ಮೂಲಕವೇ ಹಿಂದೂ ಧರ್ಮವನ್ನು ಗುರುತಿಸುತ್ತಾರೆ. ವಿಶಾಲ ಕಲ್ಪನೆಗೆ ಅವಕಾಶವಿಲ್ಲದ ಹಿಂದೂ ಧರ್ಮ, ಕೋಮು ಭಾವನೆಗಳನ್ನು ಕೆರಳಿಸುವ ಹಿಂದೂಧರ್ಮ, ಜಾತೀಯತೆ ಮತ್ತು ಅಸ್ಪೃಶ್ಯತೆ ಆಚರಿಸುವ ಹಿಂದೂ ಧರ್ಮ, 'ಗರ್ವದಿಂದ ಹೇಳಿರಿ ನಾವು ಹಿಂದೂಗಳು' ಎಂದು ಹೇಳುವವರ ಹಿಂದೂ ಧರ್ಮ, ಅವರ ಹಿಂದೂ ಧರ್ಮವಾಗಿರಲಿಲ್ಲ.

ಅನುವಂಶಿಕತೆಯ ಪ್ರಭಾವದಲ್ಲಿ ನಾನು ನಂಬಿರುವುದರಿಂದ, ಹಿಂದೂ ಕುಟುಂಬವೊಂದರಲ್ಲಿ ಹುಟ್ಟಿರುವುದರಿಂದ, ನಾನು ಒಬ್ಬ ಹಿಂದೂ ಆಗಿ ಉಳಿದಿದ್ದೇನೆ. ನನ್ನ ನೈತಿಕ ಪ್ರಜ್ಞೆಗೆ ಅಥವಾ ಆಧ್ಯಾತ್ಮಿಕ ಬೆಳವಣಿಗೆಗೆ ಅದು ಅಸಂಗತವೆಂದು ಕಂಡುಬಂದಲ್ಲಿ ನಾನು ಅದನ್ನು ತ್ಯಜಿಸುತ್ತೇನೆ ಎಂದು ಗಾಂಧೀಜಿಯವರು ಪ್ರಕಟಿಸಿದ್ದಾರೆ.

ಸತ್ಯ, ಪ್ರೇಮ ಮತ್ತು ಅಹಿಂಸೆಗಳು ಅವರು ಪ್ರತಿಪಾದಿಸುತ್ತಿದ್ದ ಹಿಂದೂ ಧರ್ಮದ ಮೂಲಾಧಾರಗಳಾಗಿವೆ. ಆ ಮೂಲಕವೇ ಅವರು ಎಲ್ಲ ಧರ್ಮಗಳನ್ನು ನೋಡುತ್ತಿದ್ದರು ಮತ್ತು ಗೌರವಿಸುತ್ತಿದ್ದರು. "ಅಹಿಂಸೆ ಎಲ್ಲ ಧರ್ಮಗಳಿಗೂ ಸಮಾನವಾಗಿದೆ. ಹಿಂದೂ ಧರ್ಮವು ಕೇವಲ ಮಾನವ ಜೀವನದ ಏಕತೆಯಲ್ಲಿ ಮಾತ್ರ ನಂಬಿಕೆ ಇಡದೆ, ಜೀವಂತವಾಗಿ ಇರುವ ಎಲ್ಲದರ ಏಕತೆಯಲ್ಲಿ ನಂಬಿಕೆ ಇಡುತ್ತದೆ" ಎಂದು ಗಾಂಧೀಜಿ ಹೇಳಿದ್ದಾರೆ. ಈ ಹೇಳಿಕೆಯಲ್ಲಿ ಬದುಕಿನ ಒಳ್ಳೆಯದೆಲ್ಲವನ್ನೂ ಗೌರವಿಸುವ ಮನೋಭಾವವಿದೆ. ಇಂಥ ಮನಸ್ಥಿತಿಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ಖ ಎಂಬ ಭೇದಭಾವ ಎಂದಿಗೂ ಬರದು. ಕೋಮುಭಾವನೆ ಎಂದೂ ಕೆರಳದು. ಇಂಥ ಮನಸ್ಥಿತಿಯಲ್ಲಿ ಮಾತ್ರ ಇಡೀ ಮಾನವ ಕುಲವನ್ನು ಮತ್ತು ಎಲ್ಲ ಜೀವರಾಶಿಗಳನ್ನು ಅಂತಃಕರಣದಿಂದ ನೋಡಲು ಸಾಧ್ಯ. ಎಲ್ಲಾ ಒಳ್ಳೆಯದರ ಬಗ್ಗೆ ಗೌರವ ಮೂಡಲು ಸಾಧ್ಯ.

"ವೇದಗಳು ಮಾತ್ರವೇ ದೈವೀಕವಾದುವು ಎಂಬುದನ್ನು ನಾನು ನಂಬುವುದಿಲ್ಲ. ಬೈಬಲ್, ಕುರಾನ್ ಮತ್ತು ಜೆಂದಾ ಅವೆಸ್ತಾ ಸಹ ವೇದಗಳಷ್ಟೇ ದೈವಿಕವಾಗಿ ಪ್ರೇರಿತವಾದುವು ಎಂಬುದು ನನ್ನ ನಂಬಿಕೆ" ಎಂದು ಗಾಂಧೀಜಿಯವರು ಹೇಳುವಾಗ ಕೋಮುವಾದ ಬೇರು ಸಹಿತ ಕಿತ್ತು ಹೋಗುತ್ತದೆ.

ಚರಕ ಧರ್ಮ

ಕಾಯಕ ಮತ್ತು ಧರ್ಮವನ್ನು ಅಭೇದ್ಯವಾಗಿ ನೋಡುವ ಗಾಂಧೀಜಿಯವರ ಕ್ರಮವು 12ನೇ ಶತಮಾನದ ಶರಣರನ್ನು ನೆನಪಿಗೆ ತರುತ್ತದೆ. ಚರಕವು ಅವರಿಗೆ ಉತ್ಪಾದನೆಯ ಒಂದು ಮಹತ್ತ್ವದ ಸಾಧನವಾಗಿತ್ತು. ಬ್ರಿಟಿಷರ ಜವಳಿ ಗಿರಣಿಗಳನ್ನು ಬಂದ್ ಮಾಡುವ ಶಕ್ತಿ ಅದಕ್ಕಿತ್ತು. ಆ ಮೂಲಕ ಭಾರತೀಯರ ಶೋಷಣೆ ಕಡಿಮೆಗೊಳಿಸುವಲ್ಲಿ ಮತ್ತು ಸ್ವಾತಂತ್ರ್ಯದ ಪ್ರಜ್ಞೆಯನ್ನು ಬೆಳೆಸುವಲ್ಲಿ ಚರಕವು ಮಹತ್ತರ ಪಾತ್ರವನ್ನು ವಹಿಸಿದೆ. ಆದರೆ ಗಾಂಧೀಜಿಯವರಿಗೆ ಚರಕವೆಂಬುದು ಧರ್ಮವಾಗಿತ್ತು. ಎಲ್ಲ ಧರ್ಮಗಳನ್ನು ಒಂದು ಗೂಡಿಸುವ ಸಾಧನವಾಗಿತ್ತು. ಕಾಯಕದ ಪಾವಿತ್ರ್ಯದ ಸಂಕೇತವಾಗಿತ್ತು.

ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಅಸ್ತ್ರವಾಗಿತ್ತು; ಸತ್ಯಾಗ್ರಹವಾಗಿತ್ತು; ಸ್ವಾತಂತ್ರ್ಯದ ಪಥವಾಗಿತ್ತು; ಆತ್ಮ ಗೌರವದ ಮತ್ತು ರಾಷ್ಟ್ರಗೌರವದ ಸಂಕೇತವಾಗಿತ್ತು; ಮನುಷ್ಯರನ್ನು ನಿಜ ಮನುಷ್ಯರನ್ನಾಗಿ ಮಾಡುವ ಮಂತ್ರದಂಡವಾಗಿತ್ತು. ಅಂತೆಯೆ ಗಾಂಧೀಜಿಯವರು ಹೀಗೆ ಹೇಳಿದರು:

"ನಾನು ಎಲ್ಲೆಲ್ಲಿಯೂ ಚರಕವನ್ನು ನೋಡಲು ಇಚ್ಛಿಸುತ್ತೇನೆ; ಏಕೆಂದರೆ ನಾನು ಎಲ್ಲೆಲ್ಲಿಯೂ ದಿವಾಳಿತನವನ್ನು ನೋಡುತ್ತಿದ್ದೇನೆ. ಅಸ್ಥಿಪಂಜರಗಳಂತಿರುವ ಭಾರತದ ಜನರಿಗೆ ಉಣಲು ಮತ್ತು ಹೊದೆಯಲು ದೊರೆಯಬೇಕು. ಅಲ್ಲಿಯವರೆಗೆ ಅವರಿಗೆ ಧರ್ಮದ ಅರ್ಥವಿಲ್ಲ. ಇಂದು ಅವರು ಪಶುಗಳಂತೆ ಬಾಳುತ್ತಿರುವುದಕ್ಕೆ ನಾವು ಜವಾಬ್ದಾರರಾಗಿದ್ದೇವೆ. ಆದ್ದರಿಂದ ಚರಕ ನಮಗೊಂದು ಪ್ರಾಯಶ್ಚಿತ್ತ. ಅಸಹಾಯಕರ ಸೇವೆಯೇ ಧರ್ಮ. ದೇವರು ಅಸಹಾಯಕರ ಮತ್ತು ದುಃಖಾರ್ತರ ರೂಪದಲ್ಲಿ ನಮಗೆ ಕಾಣುತ್ತಾನೆ. ಆದರೆ ನಾವು ಹಣೆಯ ಮೇಲೆ ಲಾಂಛನಗಳನ್ನು ಧರಿಸಿದ್ದರೂ ಅವನನ್ನು ಎಂದರೆ ದೇವರನ್ನು ಗಮನಿಸುವುದಿಲ್ಲ. ದೇವರು ವೇದಗಳಲ್ಲಿ ಇದ್ದಾನೆ ಹಾಗೂ ಇಲ್ಲ. ವೇದಗಳ ಭಾವವನ್ನು ಗ್ರಹಿಸುವವನು ಅವುಗಳಲ್ಲಿ ದೇವರನ್ನು ಕಾಣುತ್ತಾನೆ. ವೇದಗಳ ಅಕ್ಷರಕ್ಕೆ ಜೋತು ಬೀಳುವವನು ಒಬ್ಬ ವೇದೀಯ, ಒಬ್ಬ ಅಕ್ಷರನಿಷ್ಠ.

ವೇದಗಳ ಬರಿಯ ಜ್ಞಾನ ಮತ್ತು ಬ್ರಾಹ್ಮಣರನ್ನು ಆಧ್ಯಾತ್ಮಿಕ ಗುರುಗಳನ್ನಾಗಿ ಮಾಡಲಾರದು. ಹಾಗೆ ಮಾಡಿದ್ದಲ್ಲಿ, ಮ್ಯಾಕ್ಸ್ ಮುಲ್ಲರ್ ಒಬ್ಬ ಬ್ರಾಹ್ಮಣನಾಗುತ್ತಿದ್ದ. ಇಂದಿನ ಧರ್ಮವನ್ನು ಅರ್ಥ ಮಾಡಿಕೊಂಡಿರುವ ಬ್ರಾಹ್ಮಣನು ಖಂಡಿತವಾಗಿಯೂ ವೇದಾಧ್ಯಾಯನಕ್ಕೆ ಎರಡನೆಯ ಸ್ಥಾನ ಕೊಡುತ್ತಾನೆ, ಚರಕದ ಧರ್ಮವನ್ನು ಪ್ರಸಾರ ಮಾಡುತ್ತಾನೆ ಮತ್ತು ಉಪವಾಸದಿಂದಿರುವ ತನ್ನ ಲಕ್ಷಾಂತರ ದೇಶಬಾಂಧವರ ಹಸಿವನ್ನು ಹಿಂಗಿಸುತ್ತಾನೆ.

ನೂಲುವುದನ್ನು ನಾನು ಖಂಡಿತವಾಗಿಯೂ ಧಾರ್ಮಿಕ ಪಂಥಗಳ ಆಚರಣೆಗಿಂತಲೂ ಉತ್ತಮವಾದುದೆಂದು ಪರಿಗಣಿಸಿದ್ದೇನೆ. ಆದರೆ ಇದರ ಅರ್ಥ ಈ ಆಚರಣೆಯನ್ನು ಬಿಟ್ಟುಬಿಡಬೇಕು ಎಂದಲ್ಲ. ಎಲ್ಲಾ ಧರ್ಮಗಳ ಅನುಯಾಯಿಗಳೂ ಅನುಸರಿಸಬೇಕಾಗಿರುವ ಧರ್ಮವು ಆ ಧರ್ಮಗಳನ್ನು ಮೀರುತ್ತದೆ ಎಂದಷ್ಟೇ ನನ್ನ ಅರ್ಥ. ಆದ್ದರಿಂದ ಸೇವಾಭಾವದಿಂದ ಚರಕ ತಿರುಗಿಸಿದರೆ ಬ್ರಾಹ್ಮಣ ಉತ್ತಮ ಬ್ರಾಹ್ಮಣನಾಗುತ್ತಾನೆ. ಮುಸಲ್ಮಾನ ಉತ್ತಮ ಮುಸಲ್ಮಾನನಾಗುತ್ತಾನೆ. ವೈಷ್ಣವ ಉತ್ತಮ ವೈಷ್ಣವನಾಗುತ್ತಾನೆ ಎಂದು ನಾನು ಹೇಳುತ್ತೇನೆ.

ನಾನು ಹಾಸಿಗೆಯಲ್ಲಿ ಮಲಗಿರುವಾಗ ಚರಕ ತಿರುಗಿಸುವುದು ನನಗೆ ಸಾಧ್ಯವಾದಲ್ಲಿ ಮತ್ತು ಅದು ದೇವರ ಮೇಲೆ ನನ್ನ ಮನಸ್ಸನ್ನು ಕೇಂದ್ರೀಕರಿಸಲು ಸಹಾಯ ಮಾಡುತ್ತದೆ ಎಂದು ನನಗೆ ಅನಿಸಿದಲ್ಲಿ, ನಾನು ಖಂಡಿತವಾಗಿಯೂ ಜಪಸರವನ್ನು ಬದಿಗಿಟ್ಟು ಚರಕ ತಿರುಗಿಸುತ್ತೇನೆ. ಚರಕ ತಿರುಗಿಸಲು ನನಗೆ ಶಕ್ತಿಯಿದ್ದು, ಮಣಿಗಳನ್ನು ಎಣಿಸುವುದು ಅಥವಾ ಚರಕ ತಿರುಗಿಸುವುದು ಇವುಗಳ ನಡುವೆ ಆಯ್ಕೆ ಮಾಡಬೇಕಾದಲ್ಲಿ ನಾನು ಬಡತನ ಹಾಗೂ ಉಪವಾಸ ದೇಶವನ್ನು ಗುಪ್ತವಾಗಿ ಚೆನ್ನಟ್ಟಿರುವುದನ್ನು ಕಾಣುತ್ತಿರುವವರೆಗೆ ಖಂಡಿತವಾಗಿಯೂ ಚರಕದ ಪರವಾಗಿ ತೀರ್ಮಾನಿಸುತ್ತೇನೆ ಮತ್ತು ಅದನ್ನೇ ನಾನು ನನ್ನ ಜಪಸರವನ್ನಾಗಿ ಮಾಡಿಕೊಳ್ಳುತ್ತೇನೆ. ರಾಮನಾಮದ ಜಪ ಕೂಡ ಒಂದು ಅಡ್ಡಿಯಾಗುವಂಥ ಕಾಲವನ್ನು ನಾನು ಎದುರುನೋಡುತ್ತೇನೆ. ರಾಮನು ಮಾತಿಗೂ ಮೀರಿದವನೆಂದು ನಾನು ಅರಿತಾಗ ಆ ಹೆಸರನ್ನು ಜಪ ಮಾಡುವ ಅಗತ್ಯ ನನಗೆ ಇರುವುದಿಲ್ಲ. ಚರಕ, ಜಪಸರ ಮತ್ತು ರಾಮನಾಮ ನನಗೆ ಎಲ್ಲವೂ ಒಂದೇ ಗುರಿಗೆ ಸಾಧಕವಾಗಿವೆ. ಅವು ನನಗೆ ಸೇವಾಧರ್ಮವನ್ನು ಬೋಧಿಸುತ್ತವೆ. ಸೇವಾಧರ್ಮವನ್ನು ಆಚರಿಸದೆ ನಾನು ಅಹಿಂಸೆಯನ್ನು ಪಾಲಿಸಲಾರೆ. ಅಹಿಂಸಾಧರ್ಮವನ್ನು ಆಚರಿಸಿದೆ ನಾನು ಸತ್ಯವನ್ನು ಕಾಣಲಾರೆ. ಸತ್ಯಕ್ಕಿಂತ ಬೇರೆ ಧರ್ಮವಿಲ್ಲ. ಸತ್ಯವೇ ರಾಮ, ನಾರಾಯಣ, ಈಶ್ವರ, ಖುದಾ, ಅಲ್ಲಾ, ಗಾಡ್".

ಗಾಂಧೀಜಿಯವರ ಇಂಥ ಆಲೋಚನಾ ಕ್ರಮಗಳಿಂದಾಗಿಯೇ ಹಿಂದೂ ಧರ್ಮಕ್ಕೆ ಒಂದು ಹೊಸ ರೂಪ ಬಂದಿತು. ಆದರೆ ದುರ್ದೈವದ ಸಂಗತಿ ಎಂದರೆ ವಿಶ್ವಮಾನ್ಯವಾದ ಗಾಂಧೀಜಿಯವರ ಮನೋಲೋಕದ ಈ ಹಿಂದೂ ಧರ್ಮದ ಬಗ್ಗೆ ಭಾರತೀಯ ಅಕ್ಷರಸ್ಥರು ತಲೆಕೆಡಿಸಿಕೊಳ್ಳಲಿಲ್ಲ. ಹೀಗಾಗಿ ಗಾಂಧೀಜಿಯವರನ್ನು ಕೊಲೆ ಮಾಡಿದ ನಾಥೂರಾಂ ಗೋಡ್ಸೆಯಂಥವರ ಪರಿಕಲ್ಪನೆಯ ಹಿಂದೂ ಧರ್ಮವೇ ಇಂದಿನ ಸಂದರ್ಭದಲ್ಲಿ ಪ್ರಾಧಾನ್ಯ ಪಡೆಯುತ್ತಿದೆ.

"ಹಿಂದೂ ಧರ್ಮದ ಸ್ವಾರಸ್ಯ ಅದರ ವ್ಯಾಪಕವಾದ ಸರ್ವಗ್ರಾಹಿತ್ವದಲ್ಲಿ ಅಡಗಿದೆ. ಪ್ರತಿಯೊಬ್ಬನು ತನ್ನ ಸ್ವಂತ ಮತ ಅಥವಾ ಧರ್ಮಕ್ಕೆ ಅನುಸಾರವಾಗಿ ದೇವರನ್ನು ಪೂಜಿಸುವಂತೆ ಹಿಂದೂಧರ್ಮ ಹೇಳುತ್ತದೆ. ಆದ್ದರಿಂದ ಅದು ಎಲ್ಲಾ ಧರ್ಮಗಳ ಜೊತೆ ಶಾಂತಿ ಸ್ನೇಹದಿಂದ ಬಾಳುತ್ತದೆ. ಅಧಿಕೃತ ಸಿದ್ಧಾಂತದಿಂದ ಮುಕ್ತವಾಗಿರುವ ಅದು ನನಗೆ ಹಿಡಿಸುತ್ತದೆ" ಎಂದು ಗಾಂಧೀಜಿಯವರು ಹೇಳಿದ್ದು ಸರ್ವಕಾಲಕ್ಕೂ ಪ್ರಸ್ತುತವಾಗಿದೆ.

"ಧರ್ಮದ ಹೆಸರಿನಲ್ಲಿ ನಾವು ಹಿಂದೂಗಳು ಬಾಹ್ಯಾಚರಣೆಗಳನ್ನು ಅಂಧಶ್ರದ್ಧೆಯ ಒಂದು ವಿಷಯವನ್ನಾಗಿ ಮಾಡಿದ್ದೇವೆ ಮತ್ತು ಧರ್ಮಗಳನ್ನು ಕೇವಲ ತಿನ್ನುವ, ಕುಡಿಯುವ ವಿಷಯವನ್ನಾಗಿ ಅದನ್ನು ಕೆಳದರ್ಜೆಗೆ ಇಳಿಸಿದ್ದೇವೆ" ಎಂದು ಗಾಂಧೀಜಿಯವರು ವಿಷಾದಿಸಿದ್ದಾರೆ. ಈ ವಿಷಾದ ನನಗೆ ಅರ್ಥವಾಗದ್ದರಿಂದ ನಮ್ಮ ಸಮಾಜದಲ್ಲಿ ಗ್ರಾಹಂ ಸ್ಟೇನ್ಸ್‌ರಂಥ ಮಾನವತಾವಾದಿಗಳನ್ನು ಜೀವಂತ ಸುಡುವ ದಾರಾಸಿಂಗ್‌ಗಳು ಹುಟ್ಟುತ್ತಿದ್ದಾರೆ.

"ನಿಜವಾದ ಶುದ್ಧ ಚಳವಳಿಯು ಪ್ರತಿಯೊಬ್ಬನೂ ತನ್ನ ಸ್ವಂತ ಧರ್ಮದಲ್ಲಿ ಪರಿಪೂರ್ಣತೆ ತಲುಪಲು ಮಾಡುವ ಪ್ರಯತ್ನವನ್ನು ಒಳಗೊಂಡಿರಬೇಕು. ಅಂತಹ ಯೋಜನೆಯಲ್ಲಿ ಚಾರಿತ್ರ್ಯವು ಏಕಮಾತ್ರ ಪರೀಕ್ಷಾ ಸಾಧನವಾಗುತ್ತದೆ" ಎಂದು ಗಾಂಧೀಜಿಯವರು ಹೇಳಿದ್ದು ದಾರಾಸಿಂಗ್ ಅಂಥವರನ್ನು ಸೃಷ್ಟಿಸಿದವರಿಗೆ ಅರ್ಥವಾಗುವುದೆ?

"ಹಿಂದೂ ಧರ್ಮ ಮತ್ತು ಇತರ ಎಲ್ಲಾ ಧರ್ಮಗಳನ್ನೂ ತಕ್ಕಡಿಯಲ್ಲಿ ತೂಗಲಾಗುತ್ತಿದೆ. ಶಾಶ್ವತ ಸತ್ಯ ಒಂದೇ. ದೇವರು ಒಬ್ಬನೇ. ನಮ್ಮಲ್ಲಿ ಪ್ರತಿಯೊಬ್ಬರೂ ಪರಸ್ಪರ ಘರ್ಷಣೆಯಲ್ಲಿರುವ ಮತಗಳು ಮತ್ತು ಆಚಾರಗಳಿಂದ ದೂರ ಸರಿದು, ಸತ್ಯದ ನೇರ ಮಾರ್ಗವನ್ನು ಅನುಸರಿಸೋಣ. ಆಗ ಮಾತ್ರವೇ ನಾವು ನಿಜವಾದ ಹಿಂದೂಗಳು ಆಗುತ್ತೇವೆ. ತಮ್ಮನ್ನು ಸನಾತನಿಗಳೆಂದು ಕರೆದುಕೊಳ್ಳುತ್ತಾ ಅನೇಕ ಜನ ಭೂಮಿಯ ಮೇಲೆ ಓಡಾಡುತ್ತಿದ್ದಾರೆ. ಅವರಲ್ಲಿ ಎಷ್ಟು ಜನರನ್ನು ದೇವರು ಆಯ್ದುಕೊಳ್ಳುತ್ತಾನೆ ಎನ್ನುವುದನ್ನು ಯಾರು ಬಲ್ಲರು? ದೇವರ ಅನುಗ್ರಹವು ಅವನ ಸಂಕಲ್ಪವನ್ನು ನೆರವೇರಿಸಿ, ಅವನ ಸೇವೆ ಮಾಡುವವರಿಗೆ ದೊರೆಯುತ್ತದೆ, ಸುಮ್ಮನೆ ರಾಮ ರಾಮ ಎಂದು ವಟಗುಟ್ಟುವವರಿಗಲ್ಲ" ಎಂದು ಗಾಂಧೀಜಿಯವರು ಹೇಳಿದ್ದು ಬಾಬರಿ ಮಸೀದಿಯನ್ನು ಕೆಡವಿದವರಿಗೆ ಅರ್ಥವಾಗುವುದೆ?

"ಹಿಂದೂ ಧರ್ಮದ ಅತ್ಯಂತ ಪರಿಶುದ್ಧ ರೂಪದಲ್ಲಿ ಒಬ್ಬ ಬ್ರಾಹ್ಮಣ, ಒಂದು ಇರುವೆ, ಒಂದು ಆನೆ ಮತ್ತು ಒಬ್ಬ ಶ್ವಪಚ ಸಮಾನ ಸ್ಥಾನ ಹೊಂದಿರುತ್ತಾರೆ...ಹಿಂದೂ ಧರ್ಮವು ಇಡೀ ಮಾನವ ಕುಲಕ್ಕೆ ಮಾತ್ರ ಸೀಮಿತವಾದುದಲ್ಲ; ಜೀವಂತವಾಗಿರುವ ಎಲ್ಲದರ ಭ್ರಾತೃತ್ವವನ್ನು ಅದು ಒತ್ತಿ ಹೇಳುತ್ತದೆ. ಮನುಷ್ಯ ಮನುಷ್ಯನ ನಡುವೆ ನಾವು ನಿಜವಾದ, ಜೀವಂತವಾದ ಸಮಾನತೆಯನ್ನು ಪುನಃಸ್ಥಾಪಿಸಿದ ಕ್ಷಣವೇ ಮಾನವನ ಮತ್ತು ಇಡೀ ಸೃಷ್ಟಿಯ ನಡುವೆ ಸಮಾನತೆಯನ್ನು ಸ್ಥಾಪಿಸಲು ನಾವು ಶಕ್ತರಾಗುತ್ತೇವೆ. ಆ ದಿನ ಬಂದಾಗ ನಾವು ಭೂಮಿಯ ಮೇಲೆ ಶಾಂತಿಯನ್ನು ಮತ್ತು ಮನುಷ್ಯರ ಬಗ್ಗೆ ಸದ್ಭಾವನೆಯನ್ನು ಹೊಂದುತ್ತೇವೆ" ಎಂದು ಮಹಾತ್ಮಾ ಗಾಂಧೀಜಿಯವರು ಹೇಳಿದ್ದನ್ನು ನಾವಿಂದು ಮನನ ಮಾಡಬೇಕಿದೆ.

"ಪ್ರಭುವಾದ ದೇವರು ಈ ವಿಶ್ವದಲ್ಲಿರುವ ಎಲ್ಲವನ್ನೂ ವ್ಯಾಪಿಸಿದ್ದಾನೆ. ಆದ್ದರಿಂದ ತ್ಯಾಗಿಗಳಾಗಿ ಮತ್ತು ಎಲ್ಲವನ್ನೂ ಅವನಿಗೆ ಸಮರ್ಪಿಸಿ. ಅನಂತರ ನಿಮ್ಮ ಪಾಲಿಗೆ ಬರಬಹುದಾದುದನ್ನು ಪಡೆಯಿರಿ. ಯಾರದೇ ಆಸ್ತಿಗೆ ಆಸೆಪಡಬೇಡಿ'. ಈಶೋಪನಿಷತ್ತಿನ ಈ ಒಂದು ಮಂತ್ರವನ್ನು ನೆನಪಿಡಿ. ಇತರ ಧರ್ಮಗ್ರಂಥಗಳ ವಿಷಯವನ್ನು ಪೂರ್ತಿ ಮರೆತುಬಿಡಿ. ಧರ್ಮಗ್ರಂಥಗಳ ಸಾಗರದಲ್ಲಿ ನೀವು ಮುಳುಗಿ ಉಸಿರುಗಟ್ಟಬಹುದು. ವಿನಯವಂತರಾಗಿ ವಿವೇಕಿಗಳಾಗಿದ್ದಲ್ಲಿ ಅವು ಪಂಡಿತರಿಗೆ ಒಳ್ಳೆಯವೇ. ಆದರೆ ಸಾಮಾನ್ಯ ಮನುಷ್ಯನಿಗೆ ಸಾಗರವನ್ನು ದಾಟಲು ಈ ಮಂತ್ರವನ್ನು ಬಿಟ್ಟು ಬೇರಾವುದರ ಅಗತ್ಯವಿಲ್ಲ ಎಂದು ಗಾಂಧೀಜಿಯವರು ತಮ್ಮ ಪರಿಕಲ್ಪನೆಯ ಹಿಂದೂ ಧರ್ಮವನ್ನು ಮೇಲಿನ ಈಶೋಪನಿಷತ್ತಿನ ಒಂದು ಮಂತ್ರದಲ್ಲಿ ಹಿಡಿದಿಟ್ಟರು. ಆ ಮೂಲಕ ನಮ್ಮ ಕಾಲದ ಹಿಂದೂ ಧರ್ಮದ ಆಚರಣೆಯನ್ನು ಪರೀಕ್ಷಿಸಿದರು. "ಇಂದು ನಾವು ನೋಡುವುದು ಶುದ್ಧವಾದ ಹಿಂದೂ ಧರ್ಮವನ್ನಲ್ಲ, ಅದರ ವಿಕಟಾನುಕರಣೆಯನ್ನು ಮಾತ್ರ" ಎಂದು ನಿಟ್ಟುಸಿರು ಬಿಟ್ಟರು.

ಗಾಂಧೀಜಿಯವರ ನಿಟ್ಟುಸಿರಿನಲ್ಲಿ ಅಡಗಿದ ಹಿಂದೂ ಧರ್ಮ ಪ್ರತಿ ಮನುಷ್ಯನೊಳಗಿನ ಧರ್ಮವಾಗಲಿ. ಆ ಮೂಲಕ ಎಲ್ಲ ಧರ್ಮಗಳೂ ಒಂದೇ ಎಂಬುದು ಜನಸಮುದಾಯಕ್ಕೆ ಅರಿವಾಗಲಿ, ಕೋಮುವಾದ ಅಳಿಯಲಿ. ಮಾನವೀಯತೆ ಉಳಿಯಲಿ. ●

ಧರ್ಮ ನಿರಪೇಕ್ಷ ಭಾರತ: ಚಾರಿತ್ರಿಕ ವ್ಯಾಖ್ಯಾನ

ಭಾರತದಲ್ಲಿ ಧರ್ಮನಿರಪೇಕ್ಷತ್ವವನ್ನು ಕುರಿತ ಚರ್ಚೆಗಳಲ್ಲಿ ಪ್ರಭುತ್ವವು ಅಗತ್ಯವಿದ್ದಾಗಲೆಲ್ಲ ಧರ್ಮನಿರಪೇಕ್ಷ ನಿಲುವನ್ನು ತಾಳಬೇಕೆಂಬ ಅಪೇಕ್ಷೆ ಇರುತ್ತದೆ. ಇದು, ನಮ್ಮನ್ನು ಪ್ರಭುತ್ವದ ಕಾಳಜಿ ಮತ್ತು ಕ್ರಿಯೆಯ ಮೇಲೆ ಅವಲಂಭಿಸುವಂತೆ ಮಾಡುತ್ತದೆ. ಭಾರತೀಯ ಸಮಾಜದ ಧರ್ಮನಿರಪೇಕ್ಷೀಕರಣವು ಅಷ್ಟೆ ಮುಖ್ಯವಾದುದೆಂದು ನನಗನ್ನಿಸುತ್ತದೆ. ಇದನ್ನು ಧರ್ಮನಿರಪೇಕ್ಷ ಪ್ರಭುತ್ವಕ್ಕೆ ಪೂರಕವಾಗಿ ನಾನು ಕಾಣುತ್ತೇನೆ. ಪ್ರಭುತ್ವದ ಧರ್ಮನಿರಪೇಕ್ಷೀಕರಣವು ಸಮಾಜದ ಧರ್ಮನಿರಪೇಕ್ಷೀಕರಣದೊಂದಿಗೆ ತಾದಾತ್ಮ್ಯ ಹೊಂದಿರಬೇಕು.

ಭಾರತೀಯ ಸಮಾಜದ ಧರ್ಮನಿರಪೇಕ್ಷೀಕರಣ ಪ್ರಕ್ರಿಯೆಯಲ್ಲಿ ಒಳಗಾದ ಮೂರು ಅಂಶಗಳನ್ನು ಈಗ ಚರ್ಚಿಸಲು ಇಚ್ಛಿಸುತ್ತೇನೆ. ಮೊದಲನೆಯದು, ನಾಗರೀಕ ಹಕ್ಕುಗಳನ್ನು ಸಂರಕ್ಷಿಸಲು ಒತ್ತಾಯಿಸುವ ಮೂಲಕ ನಾಗರಿಕ ಸಮಾಜವನ್ನು ಬಲಪಡಿಸುವುದು; ಎರಡನೆಯದು, ಪ್ರಭುತ್ವವು ಈ ಹಕ್ಕುಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿರುವುದು; ಮೂರನೆಯದು, ನಾಗರೀಕ ಸಮಾಜ ಮತ್ತು ಪ್ರಭುತ್ವಗಳಲ್ಲಿ ಧರ್ಮ ಮತ್ತು ಧಾರ್ಮಿಕ ಸಂಸ್ಥೆಗಳ ಪಾತ್ರವನ್ನು ಉದ್ದೇಶಿಸಿರುವುದು. ಈ ಮೂರು ಅಂಶಗಳೂ ಐತಿಹಾಸಿಕ ಗತಕಾಲದೊಂದಿಗೆ ಸಂಬಂಧ ಹೊಂದಿವೆ. ಆದರೆ ಇವುಗಳಲ್ಲಿ ಕೆಲವು ಅಂಶಗಳು ಗತಕಾಲದಲ್ಲಿ ಹೆಚ್ಚು ಬೇರೂರಿವೆ.

ನನ್ನ ಪ್ರಕಾರ ಧರ್ಮನಿರಪೇಕ್ಷತ್ವದ ಅರ್ಥ ಏನು ಎನ್ನುವ ವಿವರಣೆಯೊಂದಿಗೆ ಪ್ರಾರಂಭಿಸುತ್ತೇನೆ. ಈ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಯೂರೋಪಿನಲ್ಲಿಯ ರೋಮನ್ನರ ಕಾಲದಿಂದ ಕ್ರಿಸ್ತಶಕದವರೆಗಿನ ಧರ್ಮ ನಿರಪೇಕ್ಷತ್ವದ ಇತಿಹಾಸಕ್ಕೆ ನಾವು ಹೋಗಬೇಕಾಗಿಲ್ಲ. ಮಧ್ಯಕಾಲಿನ ಯುಗದ ಕೊನೆಯ ಘಟ್ಟದಿಂದಲೂ ಯೂರೋಪಿನಲ್ಲಿ ಚರ್ಚ್ ಮತ್ತು ಪ್ರಭುತ್ವಗಳ ನಡುವೆ ಘರ್ಷಣೆಯಿತ್ತು ಕ್ಯಾಥೊಲಿಸಿಸಂ ಮತ್ತು ಪ್ರೊಟೆಸ್ಟಂಟಿಸಮ್‌ಗಳ ನಡುವಿನ ಘರ್ಷಣೆಯ ಮೂಲಕ ಯೂರೋಪಿನ ಮೇಲ್ವರ್ಗಗಳನ್ನು ಪ್ರಶ್ನಿಸುವುದರಿಂದ ಉದ್ಭವಿಸಿದ ಒಂದು ನಿರ್ದಿಷ್ಟ ಅರ್ಥದಲ್ಲಿ ಧರ್ಮ ನಿರಪೇಕ್ಷತ್ವವನ್ನು ಒಂದು ಪರಿಕಲ್ಪನೆಯಾಗಿ ಬಳಸಲಾಗಿತ್ತು. ಆದರೆ, ಹತ್ತೊಂಬತ್ತನೇ ಶತಮಾನದಿಂದ ಅದು ಒಂದು ಕಲ್ಪನೆಯಾಗಿ ಬೇರೆಯಾದ ಮತ್ತು ಹೆಚ್ಚು ವೈಶಾಲ್ಯವುಳ್ಳ ಅರ್ಥವನ್ನು ಪಡೆದಿದೆ. ಈ ಪರಿಕಲ್ಪನೆಯನ್ನು ಕೇವಲ ಚರ್ಚ್ ಮತ್ತು ಪ್ರಭುತ್ವದ ನಡುವಿನ ಘರ್ಷಣೆಯಾಗಿ ಈಗಲೂ ಸಮೀಕರಿಸುವವರಿಂದ ಈ ವ್ಯತ್ಯಾಸವು ಅನೇಕ ಸಲ ಕಡೆಗಣಿಸಲ್ಪಡುತ್ತದೆ. ಧಾರ್ಮಿಕ ಬಹುತ್ವದ ಇರುವಿಕೆ ಮತ್ತು ಅವುಗಳ ಸಮಾನ ಸ್ಥಾನವನ್ನು ಈ ಹೊಸ ಅರ್ಥವು ನಂಬುತ್ತದೆ. ಅಲ್ಲದೆ ಧಾರ್ಮಿಕ ನೆಲೆಯಿಂದ ಗುರುತಿಸುವುದಕ್ಕಿಂತ ನಾಗರೀಕನಾಗಿ ವ್ಯಕ್ತಿಯ ಹಕ್ಕುಗಳು ಹೆಚ್ಚು ಆದ್ಯತೆಯನ್ನು ಪಡೆಯುವಂತಹ ಸಮಾಜ ಕ್ರಮೇಣ ಮೇಲೇಳುತ್ತದೆಂದು ಕೂಡ ಈ ಹೊಸ ಅರ್ಥವು ಭಾವಿಸುತ್ತದೆ.

> ಭಾರತವು ಎಂದಿಗೂ ಧರ್ಮನಿರಪೇಕ್ಷವಾಗಿರಲಿಲ್ಲ ಮತ್ತು ಆಗುವುದೂ ಇಲ್ಲ. ಏಕೆಂದರೆ ಅದರ ಮೂಲಭೂತ ನಿರ್ದಿಷ್ಟ ಸ್ವಂತಿಕೆಯಿದ್ದದ್ದು ಮತ್ತು ಈಗಲೂ ಇರುವುದು ಪ್ರತಿಯೊಂದು ಸಮಾನವಾದ ಮತ್ತು ಏಕಮುಖಿಯಾದ ಧಾರ್ಮಿಕ ಸಮುದಾಯಗಳದ್ದು ಆಧುನೀಕರಣ ಪ್ರಕ್ರಿಯೆಯಲ್ಲಿ ಸಮುದಾಯಗಳ ಪ್ರಾತಿನಿಧೀಕರಣಕ್ಕೆ ಈಗ ಕರೆಗೊಡಲಾಗಿದೆ ಎಂದು ವಾಸಿದಲಾಗುತ್ತಿದೆ. ಧರ್ಮನಿರಪೇಕ್ಷತ್ವವು ಆಧುನಿಕ ಪೂರ್ವ ಸಮಾಜಗಳಿಗೆ ಸಂಬಂಧಿಸಿದ್ದಲ್ಲ. ಆದ್ದರಿಂದ ಈ ನೋಟವು ಐತಿಹಾಸಿಕವಾಗಿ ನಿಖರವಾದುದೂ ಅಲ್ಲ.
>
> ○ ಪ್ರೊ. ರೊಮಿಲಾ ಥಾಪರ್

ಹತ್ತೊಂಬತ್ತನೇ ಶತಮಾನದ ಈ ಲಕ್ಷಣವು ಒಂದು ಧರ್ಮ ನಿರಪೇಕ್ಷ ಸಮಾಜವನ್ನು ಸಹ-ಮಾನವರ ಒಳಿತಿಗಾಗಿ ಪ್ರಕೃತವಾದ ಮತ್ತು ನಿರಂತರವಾದ ಕಾಳಜಿಯನ್ನು ಆಧರಿಸಿ, ಸಾಮಾಜಿಕ ನೈತಿಕತೆಯುಳ್ಳದ್ದಾಗಿ ಕಾಣುತ್ತದೆ. ಸಾಮಾಜಿಕ ನೈತಿಕತೆಯು ದೇವರ ಮೇಲಿನ ಅಥವಾ ಭವಿಷ್ಯ ಜೀವನದ ಬಗೆಗಿನ ನಂಬಿಕೆಯಿಂದ ಉದ್ಭೃತವಾಗಿರಬೇಕಾಗಿಲ್ಲ. ಅದು ಅಂತಹ ನಂಬಿಕೆಗಳಿಗೆ ವಿರುದ್ಧವಾಗಿಲ್ಲದಿದ್ದರೂ ಅವುಗಳನ್ನು ಸಾಮಾಜಿಕ, ನೈತಿಕತೆಯ ಕಾಳಜಿಗಳಿಗೆ ಅಗತ್ಯವಾದ ಪೂರ್ವ ನಿಬಂಧನೆಗಳಾಗಿ ಭಾವಿಸುವುದಿಲ್ಲ. ಆದ್ದರಿಂದ ಧರ್ಮ ನಿರಪೇಕ್ಷೀಕರಣವು ಐತಿಹಾಸಿಕ ಬದಲಾವಣೆಯ ಪ್ರಕ್ರಿಯೆಗೆ ಸಂಬಂಧಪಟ್ಟದ್ದು ಮತ್ತು ಈ ಪ್ರಕ್ರಿಯೆಯು ಸಮಾಜದ ಆಧುನೀಕರಣದೊಂದಿಗೆ ಗಾಢವಾಗಿ ಕೂಡಿಕೊಂಡಿದೆ. ನಾನು ಒತ್ತಿ ಹೇಳಲು ಬಯಸುವುದೇನೆಂದರೆ, ಅದು ಐತಿಹಾಸಿಕವಾಗಿ ನಿರ್ದಿಷ್ಟವಾಗಿದೆ. ಮತ್ತು ಒಂದು ನಿರ್ದಿಷ್ಟ ಐತಿಹಾಸಿಕ ಸನ್ನಿವೇಶಕ್ಕೆ ಸಂಬಂಧಿಸಿದೆ. ಈ ಐತಿಹಾಸಿಕ ಸನ್ನಿವೇಶವನ್ನು ಆಧುನೀಕರಣದ ಪ್ರಕ್ರಿಯೆಯೊಂದಿಗೆ ಮಿಳಿತವಾಗಿದೆ. ಆಧುನಿಕ ಪೂರ್ವ ಸಮಾಜಗಳನ್ನು ಧರ್ಮನಿರಪೇಕ್ಷ ಅಥವಾ ಧರ್ಮನಿರಪೇಕ್ಷವಲ್ಲ ಎಂದು ತೀರ್ಮಾನಿಸುವುದು ಕಾಲಾನುಕ್ರಮದ ದೃಷ್ಟಿಯಿಂದ ಸರಿಯಾದದ್ದಲ್ಲ.

ಒಂದು ಸಮಾಜದ ಆಧುನೀಕರಣವು ರಾಷ್ಟ್ರ ಪ್ರಭುತ್ವ, ಪ್ರಜಾಪ್ರಭುತ್ವ ಕೈಗಾರೀಕರಣ, ಖಾಸಗೀ ಅಥವಾ ಸಾರ್ವಜನಿಕ ಬಂಡವಾಳ ಹೂಡಿಕೆ ಅಥವಾ ಈ ಬದಲಾವಣೆಯಲ್ಲಿ ಭಾಗವಹಿಸುವ ಮಧ್ಯಮ ವರ್ಗದ ಉಗಮ-ಇವುಗಳ ಅಸ್ತಿತ್ವವನ್ನು ನಂಬುತ್ತದೆ. ಈ ಬದಲಾವಣೆಯು ಅವಶ್ಯಕವಾಗಿ ಒಂದು ಮಾದರಿ ಪರಿಸ್ಥಿತಿಯೆಂದು ನಾನು ಅಂಗೀಕರಿಸುತ್ತಿಲ್ಲ. ವಸಾಹತುಶಾಹಿ ರಾಷ್ಟ್ರೀಯತೆಯ ಬಗ್ಗೆ ನಮ್ಮ ಐತಿಹಾಸಿಕ ಅನುಭವ ಮತ್ತು ಹಿಂದಿನ ದಿನಗಳಲ್ಲಿ ಜಾಗತೀಕರಣದ ದಮನಕಾರಿ ಅಸ್ತಿತ್ವದ ಸಂದರ್ಭದಲ್ಲಿ ಆ ಬದಲಾವಣೆಯು ಐತಿಹಾಸಿಕ ಅಸ್ತಿತ್ವವನ್ನು ಸಮಕಾಲೀನ ಘಟ್ಟದಲ್ಲಿ ನಾನು ಗುರುತಿಸುತ್ತೇನೆ. ರಾಷ್ಟ್ರಪ್ರಭುತ್ವ ಮತ್ತು ಕೈಗಾರೀಕರಣಗಳನ್ನು ಒಪ್ಪದವರೂ ಇದ್ದಾರೆ. ಆದರೆ ಅವರು ಕಾರ್ಯಕಾರಿಯಾದ ಪರ್ಯಾಯಗಳನ್ನು ಸೂಚಿಸಲು ಅಸಮರ್ಥರಾಗಿದ್ದಾರೆ. ಈ ಮಾದರಿಗಳಿಗೆ ನಾವು ಈಗಾಗಲೇ ಬಂದಾಗಿರುವುದರಿಂದ ಅವುಗಳಲ್ಲಿ ನ್ಯಾಯಪರ ಮತ್ತು ನೈತಿಕ ಸಮಾಜವನ್ನು ನಿರ್ಮಿಸುವುದು ನಮಗೆ ಅಗತ್ಯವಾಗಿದೆ. ಇಂತಹ ಸಮಾಜವನ್ನು ಒಂದು ಧರ್ಮ ನಿರಪೇಕ್ಷ ಮಾರ್ಗದಲ್ಲಿ ಮಾತ್ರ ನಿರ್ಮಿಸುವುದಕ್ಕೆ ಸಾಧ್ಯ. ಆಧುನೀಕರಣವು ಒಂದು ಸಿದ್ಧ ವ್ಯವಸ್ಥೆ, ಧರ್ಮ ನಿರಪೇಕ್ಷತ್ವವು ಅದರ ಒಂದು ಭಾಗ. ಮಧ್ಯಮ ವರ್ಗದ ಉಗಮ, ಪ್ರಜಾಪ್ರಭುತ್ವ ಅಥವಾ ಕೈಗಾರೀಕರಣಗಳನ್ನು ಆಧುನೀಕರಣ ಪ್ರಕ್ರಿಯೆಯ ಅಂಗಗಳೆಂದು ವಾದಿಸುತ್ತಾ ಅವುಗಳನ್ನು ನಾವು ವಿರೋಧಿಸದಿದ್ದಾಗ, ಸಮಾಜದ ಧರ್ಮನಿರಪೇಕ್ಷೀಕರಣವನ್ನು ವಿರೋಧಿಸಲು ನಮಗೆ ಸ್ವಲ್ಪವೂ ಇಂಬು ದೊರಕುವುದಿಲ್ಲ.

ಆದ್ದರಿಂದ ಧರ್ಮನಿರಪೇಕ್ಷೀಕರಣವು ಪ್ರಭುತ್ವ ಮತ್ತು ಧರ್ಮಗಳ ನಡುವಿನ ದ್ವಿಮುಖ ವಿರೋಧವನ್ನು ಭಾವಿಸುವುದಿಲ್ಲ. ಅದು ಹೆಚ್ಚಾಗಿ ಸಮಾಜವನ್ನು ಬದಲಿಸುವ ದಿಕ್ಕಿನಲ್ಲಿ ಒಂದು ಸ್ವೀಕೃತ ಆದರೆ ಪ್ರಜ್ಞಾಪೂರ್ವಕವಾದ ಚಲನೆಯಾಗಿದೆ. ಧರ್ಮನಿರಪೇಕ್ಷತ್ವವು ನಾಗರಿಕ ಸಮಾಜದ ಬಗೆಗಿನ ನಮ್ಮ

ಪರಿಕಲ್ಪನೆ ಮತ್ತು ಕ್ರಿಯೆಗೆ ಕೇಂದ್ರವಾದ ಮಹತ್ವ ಹೊಂದಿದೆ. ಸಮಾಜದ ಧರ್ಮ ನಿರಪೇಕ್ಷೀಕರಣವು ನಾಗರಿಕ ಸಮಾಜವನ್ನು ಪುಷ್ಟಿಗೊಳಿಸುತ್ತದೆ, ಹಾಗೂ ಅದು ಪ್ರಭುತ್ವವನ್ನು ಸಮರ್ಥವಾಗಿ ನಿಯಂತ್ರಿಸಲು ಅವಕಾಶ ಕೊಡುತ್ತದೆ. ಇಷ್ಟು ಮಾತ್ರವಲ್ಲ ಪ್ರಭುತ್ವವು ಧಾರ್ಮಿಕ ಸಮುದಾಯಗಳೊಂದಿಗೆ ಅಗತ್ಯವಾದ ನಿಷ್ಪಕ್ಷಪಾತತೆಯನ್ನು ಕಾಪಾಡುವಂತೆ ನೋಡಿಕೊಳ್ಳುತ್ತದೆ. ಮೂಲಭೂತವಾಗಿ ಈ ಪ್ರಕ್ರಿಯೆಗಳು ಪ್ರಜಾಪ್ರಭುತ್ವದೊಂದಿಗೆ ಬೆಸೆದುಹೋಗಿವೆ. ಧರ್ಮನಿರಪೇಕ್ಷತ್ವದ ಅಳಿವು ಉಂಟಾದರೆ ಅಷ್ಟೇ ಮಟ್ಟಕ್ಕೆ ಪ್ರಜಾಪ್ರಭುತ್ವವು ಅಳಿದು ಹೋಗುತ್ತದೆ.

ನಾಗರಿಕ ಸಮಾಜದ ಸೃಷ್ಟಿಯು ಭಾರತಕ್ಕೆ ಸಾಪೇಕ್ಷವಾಗಿ ಹೊಸದಾದ ಅನುಭವ ಮತ್ತು ಅಂತಹ ಸಮಾಜದ ಧರ್ಮನಿರಪೇಕ್ಷೀಕರಣವು ಅಷ್ಟೇ ಮಟ್ಟಿಗೆ ಒಂದು ಆವಿಷ್ಕಾರ ಕೂಡ. ಅದು ವಸಾಹತೋತ್ತರ ಕಾಲದಲ್ಲಿ ಬರುವುದರಿಂದ ಕೆಲವು ರೀತಿಯಲ್ಲಿ ಅದು ಉಪಯುಕ್ತತೆಯನ್ನು ಗುರುತಿಸಲು ಸುಲಭವಾಗುತ್ತದೆ. ಆದರೆ, ಇವು ಆಧುನಿಕ ಭಾರತೀಯರಿಗೆ ಪರಕೀಯವಾದ ವಿಚಾರಗಳಲ್ಲ. ಈ ವಿಚಾರಗಳ ಚರ್ಚೆಯನ್ನು ರಾಜರಾಮ್ ಮೋಹನ್‌ರಾಯ್ ಮತ್ತಿತರರ ಬರಹಗಳಷ್ಟು ಹಿಂದಕ್ಕೆ ಹೋಗುತ್ತದೆ. ಮತ್ತು ಅದರಿಂದಾಗಿ ಅವುಗಳ ಬಗ್ಗೆ ನಾವು ಎರಡು ಶತಮಾನಗಳ ಕಾಲದ ಸುದೀರ್ಘ ಚರ್ಚೆಯನ್ನು ನಾವು ಹೊಂದಿದ್ದೇವೆ. ಇಂದು ನಮಗೆ ಕೇಳಸಿಗುವುದಕ್ಕಿಂತಲೂ ಬಹಳವಾಗಿ ಉದಾರವಾದ, ಈ ಕೆಲವು ಹಿಂದಿನ ಚರ್ಚೆಗಳನ್ನು ಪುನಶ್ಚೇತನಗೊಳಿಸಲು ನಮ್ಮಿಂದ ಸಾಧ್ಯವಾದರೆ ಅದು ಹೆಚ್ಚು ಮಹತ್ವವುಳ್ಳದ್ದಾಗಿರುತ್ತದೆ.

ಭಾರತದ ಧರ್ಮನಿರಪೇಕ್ಷತ್ವವನ್ನು ಟೀಕಿಸುವವರು ಅನೇಕ ಆಕ್ಷೇಪಗಳನ್ನು ಎತ್ತಿದ್ದಾರೆ. ಅವುಗಳಲ್ಲಿ ಒಂದರ ಪ್ರಕಾರ ಧರ್ಮನಿರಪೇಕ್ಷತ್ವವು ಆಧುನೀಕರಣದೊಂದಿಗೆ ಸೇರಿದೆ. ಅದೇ ಅಭಿಪ್ರಾಯವು ಆಧುನೀಕರಣವನ್ನು ಒಂದು ಜಾಡ್ಯವೆಂದು ತೋರಿಸುತ್ತದೆ. ಆದ್ದರಿಂದ ಈ ಶತಮಾನದ ಆರಂಭದಿಂದಲೂ ನಾವು ಆಧುನೀಕರಣ ಪ್ರಕ್ರಿಯೆಯ ಭಾಗಗಳಾಗಿದ್ದರೂ ಅದು ನಮಗೆ ಬೇಡವೆಂದು ಸಾರುತ್ತದೆ. ಆದರೆ ಇದೇ ಟೀಕಾಕಾರರು ಆಧುನೀಕರಣ ತಂದಿರುವಂತಹ ಪ್ರಜಾಪ್ರಭುತ್ವ ಮತ್ತು ಅದರ ಸಮಕಾಲೀನ ರೂಪಗಳ ಸಮರ್ಥನೆಯನ್ನು ಅಥವಾ ಬಹುರಾಷ್ಟ್ರೀಯರ ಹೂಡುವಿಕೆಯಿಂದಾದ ಕೈಗಾರಿಕೀಕರಣದೊಂದಿಗೆ ಬರುವ ಆರ್ಥಿಕ ಉದಾರೀಕರಣಗಳಂತಹ ಇತರ ಬದಲಾವಣೆಗಳನ್ನು ವಿರೋಧಿಸುವುದಿಲ್ಲ. ಮಧ್ಯಮವರ್ಗದ ಘನತೆವೆತ್ತ ಸದಸ್ಯರಾದ ಅವರು ಆಧುನೀಕರಣದ ಸೌಲಭ್ಯಗಳನ್ನು ತಮಗೆ ಮಾತ್ರ ಒಪ್ಪಿಕೊಳ್ಳುತ್ತಾರೆ. ಆದರೆ, ಬಡನತ ರೇಖೆಯಲ್ಲಿ ಅಥವಾ ಅದರ ಕೆಳಗಿರುವವರಿಗೆ ಅವುಗಳನ್ನು ವಿಸ್ತರಿಸಲು ಹಿಂಜರಿಯುತ್ತಾರೆ. ನಾವೆಲ್ಲ ಈಗ ಸೇರಲು ಆಯ್ಕೆ ಮಾಡಿರುವ ಜಾಗತೀಕೃತ ಪ್ರಪಂಚದಲ್ಲಿ ಆಧುನೀಕರಣವನ್ನು ಕುಂಠಿತಗೊಳಿಸಲು ಸಾಧ್ಯವೇ? ಈ ಬದಲಾವಣೆಗಳು ಒಂದಕ್ಕೊಂದು ಸೇರಿಕೊಂಡಿವೆ ಮತ್ತು ಜೊತೆಜೊತೆಯಾಗಿ ಬರುತ್ತವೆ.

ಇನ್ನೊಂದು ಬಗೆಯ ಆಕ್ಷೇಪವು ಚಾರಿತ್ರಿಕ ಗತಕಾಲವನ್ನು ಕುರಿತದ್ದಾಗಿದೆ. ಧರ್ಮನಿರಪೇಕ್ಷತ್ವವು ಯುರೋಪಿನಲ್ಲಿ ಕ್ರೈಸ್ತ ಧರ್ಮಕ್ಕೆ ಒಂದು ಮೂಲಭೂತ ಪ್ರತಿಕ್ರಿಯೆ ಎಂದು ಹೇಳಲಾಗುವುದರಿಂದ ಅದು ಭಾರತಕ್ಕೆ ಪರಕೀಯವೆನ್ನಲಾಗುತ್ತದೆ. ನಾನು ಹಿಂದೆಯೇ ಹೇಳಿರುವಂತೆ ಇದು ಧರ್ಮನಿರಪೇಕ್ಷತ್ವ ಎಂಬ ಪರಿಕಲ್ಪನೆಯ ಇತಿಹಾಸವನ್ನು ತಪ್ಪಾಗಿ ನೋಡುವುದರಿಂದ ಬಂದದ್ದಾಗಿದೆ. ಧರ್ಮನಿರಪೇಕ್ಷತ್ವವು ಒಂದು ಹಂತದಲ್ಲಿ ಚರ್ಚ್‌ನೊಡನೆ ಕಾದಾಡುವುದಕ್ಕೆ ಸಂಬಂಧಿಸಿದ್ದಾದರೂ ಅನಂತರದಲ್ಲಿ ಆಧುನೀಕರಣದ ಸಂಗತಿಗಳಿಗೆ ಸಂಬಂಧಿಸಿದ ಇತರ ಆಯಾಮಗಳನ್ನು ಬೆಳೆಸಿಕೊಂಡಿದೆ.

ಇನ್ನು ಮುಂದುವರೆದ ಒಂದು ಆಕ್ಷೇಪವು ಹೇಳುವುದೇನೆಂದರೆ ಭಾರತವು ಎಂದಿಗೂ ಧರ್ಮನಿರಪೇಕ್ಷವಾಗಿರಲಿಲ್ಲ ಮತ್ತು ಆಗುವುದೂ ಇಲ್ಲ. ಏಕೆಂದರೆ ಅದರ ಮೂಲಭೂತ ನಿರ್ದಿಷ್ಟ ಸ್ವಂತಿಕೆಯಿದ್ದದ್ದು ಮತ್ತು ಈಗಲೂ ಇರುವುದು ಪ್ರತಿಯೊಂದು ಸಮಾನವಾದ ಮತ್ತು ಏಕಮುಖಿಯಾದ ಧಾರ್ಮಿಕ ಸಮುದಾಯಗಳದ್ದು. ಆಧುನೀಕರಣ ಪ್ರಕ್ರಿಯೆಯಲ್ಲಿ ಸಮುದಾಯಗಳ ಪ್ರಾತಿನಿಧೀಕರಣಕ್ಕೆ ಈಗ ಕರೆಗೊಡಲಾಗಿದೆ ಎಂದು ವಾದಿಸಲಾಗುತ್ತಿದೆ. ಧರ್ಮನಿರಪೇಕ್ಷತ್ವವು ಆಧುನಿಕ ಪೂರ್ವ ಸಮಾಜಗಳಿಗೆ ಸಂಬಂಧಿಸಿದ್ದಲ್ಲ. ಆದ್ದರಿಂದ ಈ ನೋಟವು ಐತಿಹಾಸಿಕವಾಗಿ ನಿಖರವಾದುದೂ ಅಲ್ಲ. ಅಷ್ಟೆ ಅಲ್ಲದೆ, ಅದು ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಸಮುದಾಯಗಳು ಭಾರತೀಯ ಸಮಾಜದ ಅಂಗಗಳೆಂಬ ಭಾವನೆಯನ್ನು ಬಲಪಡಿಸುತ್ತದೆ. ಸಮುದಾಯಗಳ ಸ್ವರೂಪವು ಶಾಶ್ವತವಾದದ್ದಲ್ಲ ಎಂಬ ನಿಜಸಂಗತಿಯನ್ನು ಅದು ನಿರಾಕರಿಸುತ್ತದೆ. ಐತಿಹಾಸಿಕ ಬದಲಾವಣೆಯೊಂದಿಗೆ ಅವೂ ಮಾರ್ಪಡುತ್ತವೆ. ಆದ್ದರಿಂದ, ಏಕಮುಖಿಯಾದ ಧಾರ್ಮಿಕ ಸಮುದಾಯಗಳ ಶತಮಾನಗಳಿಂದ ಭಾರತೀಯ ಸಮಾಜದ ಅಂಗಗಳಾಗಿಲ್ಲ. ಈ ರೀತಿಯಾದ ಸಮುದಾಯೀಕರಣವು, ಅದರಲ್ಲೂ ನಮ್ಮಂತಹ ಸಮಾಜಗಳಲ್ಲಿ ತನ್ನದೇ ಆದ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ.

ಇದರೊಂದಿಗೆ ಸೇರಿಕೊಂಡಿರುವ ಇನ್ನೊಂದು ಸಿದ್ಧಾಂತದ ಪ್ರಕಾರ ರಾಷ್ಟ್ರ-ಪ್ರಭುತ್ವವು ಅಪ್ರಸ್ತುತವಾದುದಲ್ಲದೆ ಅನೇಕ ಬೇನೆಗಳಿಗೆ ಆಗರವಾಗಿದೆ. ಆದ್ದರಿಂದ, ಧರ್ಮದಿಂದ ನಿರ್ಧಾರಿತವಾದ ಸಮುದಾಯಕ್ಕೆ ಪ್ರಭುತ್ವವು ದಾರಿ ಬಿಟ್ಟುಕೊಡಬೇಕು. ಎಂಬುದು ಇದರ ವಾದ. ಇಲ್ಲಿ ಇತಿಹಾಸವು ನಿರ್ಲಕ್ಷಿಸಲ್ಪಡುತ್ತದೆ. ರಾಷ್ಟ್ರವೂ ನಿರಾಕರಿಸಲ್ಪಡುತ್ತದೆ. ಯಾವುದೇ ರೀತಿಯ ಆರ್ಥಿಕ ವಿಕಾಸದ ಅಗತ್ಯದ ಬಗ್ಗೆ ಕಾಳಜಿ ಅವಕ್ಕೆ ಇರುವುದಿಲ್ಲ. ಕೆಲವು ಸಮಸ್ಯೆಗಳು, ಅದರಲ್ಲೂ ಆರ್ಥಿಕ ಪ್ರಗತಿಗೆ ಸಂಬಂಧಿಸಿದವು ಪ್ರಭುತ್ವದ ಮಧ್ಯಸ್ಥಿಕೆಯಿಂದ ಮಾತ್ರ ನಿರ್ವಹಿಸಲು ಸಾಧ್ಯವಾಗುವಂತಹವು ಇವೆ ಎನ್ನುವುದು ಸಹ ಈ ವಾದಕ್ಕೆ ಒಪ್ಪಿಗೆಯಾಗುವುದಿಲ್ಲ.

ಒಂದು ಜನಪ್ರಿಯ ಮಟ್ಟದಲ್ಲಿ ಧರ್ಮನಿರಪೇಕ್ಷತ್ವದ ಬಗ್ಗೆ ಪ್ರಚಲಿತವಾಗಿರುವ ನೋಟಗಳು ವಿಶಾಲವಾಗಿ ಎರಡು ಬಗೆಯವು. ಒಂದು ನೋಟದಂತೆ, ಧರ್ಮನಿರಪೇಕ್ಷ ಧರ್ಮಕ್ಕೆ ವಿರೋಧವಾಗಿದೆ. ಎರಡನೆಯದು ಮತ್ತು ಹೆಚ್ಚು ಪ್ರಭಾವವುಳ್ಳ ನೋಟ ಪ್ರಕಾರ ಧರ್ಮನಿರಪೇಕ್ಷತ್ವವೆಂದರೆ ಬೇರೆ ಬೇರೆ ಧರ್ಮಗಳು ಸಹಬಾಳ್ವೆಯಿಂದಿರುವುದು- "ಸರ್ವಧರ್ಮ ಸಮಭಾವ" ಎಂಬ ಉಕ್ತಿಯಲ್ಲಿ ಇದನ್ನು ಅಡಗಿಸಲಾಗಿದೆ. ಈ ಪರಿಕಲ್ಪನೆ ಭಾರತೀಯ ವ್ಯಾಖ್ಯಾನಕ್ಕೆ ಸೇರಿದ್ದು, ಅದು ಪುನಃ ಭಾರತೀಯ ಸಮಾಜವನ್ನು ಧಾರ್ಮಿಕ ಸಮುದಾಯಗಳನ್ನುಳ್ಳದ್ದಾಗಿ ತೋರಿಸುವ ದೃಷ್ಟಿಕೋನದಿಂದ ಏಳುತ್ತದೆ. ಅದು ಖಂಡಿತವಾಗಿ ಹಾಗೆ ನಡೆದಿಲ್ಲ. ಏಕೆಂದರೆ, ಜಾತಿ, ಪ್ರಾಂತ್ಯ, ಭಾಷೆ ಮತ್ತು ಪಂಗಡಗಳು ಬಹಳ ಸಲ ಒಂದು ಊಹಿಸಲ್ಪಟ್ಟ ಸಮಾನ ಧಾರ್ಮಿಕ ಸ್ವಂತಿಕೆಗಿಂತ ಹೆಚ್ಚು ಮುಖ್ಯವಾಗಿದ್ದವು.

ಧರ್ಮನಿರಪೇಕ್ಷತ್ವವು ಧರ್ಮದ ಅರ್ಹತೆಯನ್ನು ತಾನಾಗಿಯೇ ಪ್ರಶ್ನಿಸುವುದಿಲ್ಲ ಆದ್ದರಿಂದ, ಅದು ಧರ್ಮಕ್ಕೆ ವಿರುದ್ಧವಾಗಿಲ್ಲ ಎಂಬುದನ್ನು ಒತ್ತಿ ಹೇಳಬೇಕಾಗಿದೆ. ಧರ್ಮನಿರಪೇಕ್ಷತ್ವವನ್ನು ನಾಸ್ತಿಕವಾದವೆಂದು ಅಪಾರ್ಥ ಮಾಡಿಕೊಳ್ಳಬಾರದು. ಧಾರ್ಮಿಕ ಸಂಸ್ಥೆಗಳು ಅಥವಾ ಧಾರ್ಮಿಕ ಸ್ವರೂಪ ಹೊಂದಿರುವ ಸಂಸ್ಥೆಗಳು ನಾಗರಿಕ ಜೀವನದ ಮೇಲೆ ಹೊಂದಿರುವ ಅಧಿಕಾರವನ್ನು ಧರ್ಮನಿರಪೇಕ್ಷತ್ವವು ಪ್ರಶ್ನಿಸುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಾಗರಿಕ ಸಮಾಜದ ಕಾಳಜಿಗಳು ಧಾರ್ಮಿಕ ಸ್ವಂತಿಕೆಯ ಸುಪರ್ದಿನಲ್ಲಿರ ಬಾರದು. ಧರ್ಮನಿರಪೇಕ್ಷತ್ವವು ಗತಕಾಲದೊಂದಿಗೆ ಹೊಂದಿರುವ ಸಂಬಂಧದ ಕಡೆಗೆ ಈಗ ಗಮನ ಹರಿಸುತ್ತೇನೆ. ಇದು ಸಾಕಷ್ಟು ಮಹತ್ವವುಳ್ಳದ್ದು. ಏಕೆಂದರೆ ಗತಕಾಲವು ಧರ್ಮನಿರಪೇಕ್ಷವಾಗಿತ್ತೆಂದಲ್ಲ-ಧರ್ಮ ನಿರಪೇಕ್ಷತ್ವವು ಆಧುನೀಕರಣ ಪ್ರಕ್ರಿಯೆಯ ಭಾಗವಾಗಿದ್ದಲ್ಲಿ ಗತಕಾಲವು ಸ್ಪಷ್ಟವಾಗಿಯೇ ಧರ್ಮನಿರಪೇಕ್ಷವಾಗಿರಲಿಲ್ಲ-ಆದರೆ ಕೆಲವು ಸಮಾಜಗಳಲ್ಲಿ ಪ್ರಭುತ್ವ, ಸಾಮಾಜಿಕ ಸಂರಚನೆ ಮತ್ತು ಧರ್ಮದ ನಡುವೆ ಇದ್ದ ಐತಿಹಾಸಿಕ ಸಂಬಂಧಗಳು ವರ್ತಮಾನದಲ್ಲಿ ಈ ಸಮಾಜಗಳ ಧರ್ಮನಿರಪೇಕ್ಷೀಕರಣಕ್ಕೆ ಅನುಕೂಲವಾಗುವಂತೆ ಇದ್ದವು. ಅಂದರೆ, ಗತಕಾಲದಲ್ಲಿ ತಾವು ಯಾವ ದೃಷ್ಟಿಕೋನವನ್ನು ಘೋಷಿಸಿದರೋ ಆ ದೃಷ್ಟಿಯಿಂದ ಕೆಲವು ಸಮಾಜಗಳನ್ನು ಈಗ ಧರ್ಮನಿರಪೇಕ್ಷೀಕರಿಸಲು ಸುಲಭವಾಗುತ್ತದೆ. ಭಾರತೀಯ ಸಮಾಜಕ್ಕೆ ಇದು ಒಪ್ಪುತ್ತದೆಂದು ವಾದಿಸಲು ನಾನು ಇಚ್ಛಿಸುತ್ತೇನೆ.

ಧರ್ಮನಿರಪೇಕ್ಷತ್ವ ಮತ್ತು ಇತಿಹಾಸದ ಬಗ್ಗೆ ಮಾತನಾಡುವಾಗ ಮೂರು ವಿಶಾಲವಾದ ಅಂಶಗಳನ್ನು ಚರ್ಚಿಸುತ್ತೇನೆ. ಒಂದನೆಯದಾಗಿ ಭಾರತೀಯ ಗತಕಾಲದ ಬಹುಧಾರ್ಮಿಕ ಸಂಸ್ಕೃತಿ. ಗುಂಪುಗಳ ನಡುವೆ ಕೆಲವೊಮ್ಮೆ ಸಮಾಗಮ ಕೆಲವೊಮ್ಮೆ ಘರ್ಷಣೆಗಳಿದ್ದವೆಂಬ ಹಿನ್ನಲೆಯಲ್ಲಿ ಇಂದು ನಾವು ವಿವರಿಸುವಂತಹ ಧಾರ್ಮಿಕ ಸಮುದಾಯ ಎಂಬ ಪರಿಕಲ್ಪನೆಯ ಸೂಕ್ತತೆಗೆ ಇದು ಹೇಗೆ ಅನ್ವಯಿಸುತ್ತದೆ? ಮತ್ತೊಂದು, ಗತಕಾಲದಲ್ಲಿ ಹಿಂದೂ ಮತ್ತು ಮುಸಲ್ಮಾನರಿಗೆ ಪರಸ್ಪರರ ಬಗ್ಗೆ ಇದ್ದ ಗ್ರಹಿಕೆಗೆ ಸಂಬಂಧಿಸಿದೆ, ಇಸ್ಲಾಂಗೆ ಪರಿವರ್ತನೆಯಾದಾಗ ಈ ಗ್ರಹಿಕೆ ಬದಲಾಯಿತೆ? ಎಂಬುದೂ ಇದರೊಂದಿಗೆ ಕೂಡಿಕೊಂಡಿದೆ. ಕೊನೆಯದಾಗಿ, ಧಾರ್ಮಿಕ ಗುಂಪುಗಳಿಗೆ ಇದ್ದ ಪ್ರಭುತ್ವದ

ಆಶ್ರಯವನ್ನು ಪರಿಶೀಲಿಸಬೇಕು. ಏಕೆಂದರೆ, ಈ ಪರಿಶೀಲನೆ ಧರ್ಮನಿರಪೇಕ್ಷತ್ವ ಎಂಬ ಪರಿಕಲ್ಪನೆಗೆ ಬಹಳ ಮುಖ್ಯವಾದದ್ದು.

ಜಾತಿ, ಕುಲ, ಸಮುದಾಯ, ಪ್ರಾಂತ್ಯ, ಭಾಷೆ ಮತ್ತು ಧಾರ್ಮಿಕ ಅಭಿವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಸಂಪೂರ್ಣವಾಗಿ ಪರಿಶೀಲಿಸಬೇಕಾಗುತ್ತದೆ. ಸಮುದಾಯ ಮತ್ತು ಧರ್ಮ ಎಂಬ ಪರಿಕಲ್ಪನೆಗಳನ್ನು ನಾವು ತೀರ ಸೀಮಿತ ಮತ್ತು ಸ್ಥಗಿತ ರೀತಿಯಲ್ಲಿ ಕಂಡಿದ್ದೇವೆ. ಸಮುದಾಯ ಎಂಬ ಪದವನ್ನು ವಿವೇಚನೆಯಿಲ್ಲದೆ ಧರ್ಮದೊಂದಿಗೆ ಸೇರಿಸಲಾಗುತ್ತದೆ. ಮತ್ತು ಅದೇ ರೀತಿಯಲ್ಲಿ ಧರ್ಮವನ್ನು ಎಲ್ಲ ಚಟುವಟಿಕೆಗಳಲ್ಲೂ ಪ್ರಬಲವಾದ ಪವಿತ್ರ ಶಕ್ತಿಯಾಗಿ ನೋಡಲಾಗುತ್ತದೆ. ಆದರೆ ಹಿಂದಿನ ಕಾಲದಲ್ಲಿ ಸಮುದಾಯಗಳು ಹಲವಾರು ಅಂಶಗಳಿಂದ ಗುರುತಿಸಲ್ಪಡುತ್ತಿದ್ದವು. ಅವು ಆಗಾಗ ಮತ್ತು ಭಾಗಶಃ ಒಂದರ ಮೇಲೊಂದು ಚಾಚಿಕೊಂಡಿದ್ದುವು. ಸಮುದಾಯಗಳ ಅಭೇದ್ಯವಾದ ಇಂದಿನ ಎಲ್ಲೆಗಳು ಗತಕಾಲಕ್ಕೆ ಪರಕೀಯವಾಗಿದ್ದವು. ಹಾಗೆಯೇ, ನಾವು ಇಂದು ಅವಕಾಶ ಕೊಡುವುದಕ್ಕಿಂತಲೂ ಹೆಚ್ಚಾಗಿ ಧರ್ಮವು ಸಾಮಾಜಿಕ ಆಯಾಮದೊಂದಿಗೆ ಅಂತಃಸಂಬಂಧವನ್ನು ಹೊಂದಿತ್ತು. ಸಮಾಜದ ಧರ್ಮನಿರಪೇಕ್ಷೀಕರಣ ಇಲ್ಲವೇ ಕೋಮುವಾದೀಕರಣ ಕಡೆಗೆ ನಮ್ಮ ಇಂದಿನ ಆಯ್ಕೆ ಸಾಗುತ್ತಿರುವಂತೆ ತೋರುತ್ತಿದೆ. ಆದುದರಿಂದ, ಭಾರತದಲ್ಲಿ ಕ್ರೈಸ್ತಧರ್ಮ ಮತ್ತು ಇಸ್ಲಾಮ್ ಆಗಮನವನ್ನು ಕಂಡ ಕ್ರಿ.ಶ. ಎಂಟನೆಯ ಶತಮಾನದಿಂದೀಚೆಗಿನ ಕಾಲದಲ್ಲಿ ಧರ್ಮ ಮತ್ತು ಸಮಾಜದ ನಡುವಿನ ಸಂಬಂಧವನ್ನು ಪರಿಶೀಲಿಸಬೇಕಾಗಿದೆ. ಇದಕ್ಕೂ ಹಿಂದಿನ ಕಾಲದ ಸಾಮಾಜಿಕ-ಧಾರ್ಮಿಕ ಸ್ವರೂಪದ ಅರಿವು ನಮಗೆ ಈ ಸಂದರ್ಭದಲ್ಲಿ ಸಹಕಾರಿಯಾಗುತ್ತದೆ.

ಗತಕಾಲದ ಭಾರತೀಯ ಧಾರ್ಮಿಕ ಅಭಿವ್ಯಕ್ತಿಯು ಯೂರೋಪಿಗಿಂತ ಹೆಚ್ಚು ಸೂಕ್ಷ್ಮವಾಗಿತ್ತು. ಧರ್ಮದ ವಿನ್ಯಾಸ ಬೇರೆಯಾಗಿದ್ದುದೇ ಇದಕ್ಕೆ ಸ್ವಲ್ಪಮಟ್ಟಿಗೆ ಕಾರಣ. ಯೂರೋಪ್ ಮತ್ತು ಪಶ್ಚಿಮ ಏಷ್ಯಾಗಳ ಧಾರ್ಮಿಕ ಇತಿಹಾಸವು ರೇಖಾತ್ಮಕವಾದವು. ಇದು ಒಬ್ಬ ಐತಿಹಾಸಿಕ ಸ್ಥಾಪಕನಿಂದ ಪ್ರಾರಂಭವಾಗಿ ಮತ್ತು ನಂತರದಲ್ಲಿ ಸ್ಥಾಪಕನ ಮೂಲ ಧಾರ್ಮಿಕ ಬೋಧನೆಗೆ ಸಂಬಂಧಿಸಿದಂತೆ ಸಂಪ್ರದಾಯಬದ್ಧತೆಯನ್ನು ಅಥವಾ ಸಂಪ್ರದಾಯ ವಿರೋಧತ್ವವನ್ನು ಬೆಂಬಲಿಸುವ ವಿಭಜನಾತ್ಮಕ ಚಲನೆಗಳನ್ನೊಳಗೊಂಡಿತ್ತು. ಭಾರತದಲ್ಲಿ ಪ್ರಾರಂಭಿಕ ಧಾರ್ಮಿಕ ಅಭಿವ್ಯಕ್ತಿಯು ಬಹುಧರ್ಮೀಯ ಸಂಸ್ಕೃತಿಯ ಮೇಲೆ ನಿರ್ಮಿಸಿದ ನೆಲೆಗಟ್ಟಾಗಿತ್ತು. ಮತ್ತು ಈಗಲೂ ಅದು ಮುಂದುವರೆದಿದೆ. ಆದರೆ ಈಗ ಹಿಂದುತ್ವ ಎಂಬ ಹೊಸ ಧೋರಣೆಯು ಈ ನೆಲಗಟ್ಟನ್ನು ನಾಶಮಾಡಲು ಯತ್ನಿಸುತ್ತಿದೆ. ಇಸ್ಲಾಮಿಗೂ ಹಿಂದಿನ ಕಾಲದಲ್ಲಿ ಅನೇಕ ದೇಶೀಯ ಧರ್ಮಗಳಿದ್ದವು ಮತ್ತು ಏಕಮುಖ ಧರ್ಮದ ಪರಿಕಲ್ಪನೆ ಪ್ರಚಲಿತವಾಗಿರಲಿಲ್ಲ. ಜಾತಿ ಮತ್ತು ಪಂಗಡಗಳ ನಡುವೆ ಒಂದು ಜೋಡಣೆ ಇತ್ತು. ಎಲ್ಲೆಗಳು ಮತ್ತು ಸಿದ್ಧಾಂತಗಳನ್ನು ಕೆಲವು ಹಂಚಿಕೊಳ್ಳುತ್ತಿದ್ದವು. ಕೆಲವು ನಿರ್ದಿಷ್ಟವಾಗಿ ಮತ್ತು ವಿಭಿನ್ನವಾಗಿದ್ದು, ಅನೇಕ ನಂಬಿಕೆಯ ಪದ್ಧತಿಗಳು ಮತ್ತು ಆಚರಣೆಗಳನ್ನು ಸೃಷ್ಟಿಸುತ್ತಿದ್ದವು. ಬೇರೆ ಬೇರೆ ಧಾರ್ಮಿಕ ಆಕಾರಗಳೊಂದಿಗೆ ಗುರುತಿಸಿಕೊಳ್ಳುವ ಪ್ರಜ್ಞೆಯು ವಿಭಿನ್ನ ಸಾಮಾಜಿಕ ನೆಲೆಗಳಿಗಿತ್ತು. ಇದು ನಂತರದ ಕಾಲಗಳಲ್ಲಿಯೂ ಉಳಿಯಿತು. ಧರ್ಮ ಮತ್ತು ಸಮಾಜಗಳ ನಡುವೆ ಪರಿಣಮಿಸಿದ ಸಂಬಂಧವು ಯೂರೋಪಿಗಿಂತ ಬೇರೆ ರೀತಿಯದಾಗಿತ್ತು. ಆದರೆ, ಹದಿನೆಂಟನೆಯ ಶತಮಾನದಲ್ಲಿ 'ಪ್ರಾಚ್ಯವಾದ'ವು ಭಾರತೀಯ ಧರ್ಮಗಳನ್ನು ವ್ಯಾಖ್ಯಾನ ಮಾಡುವಾಗ ಯೂರೋಪಿನ ಮಾದರಿಯನ್ನು ಬಳಸಿತು. ಇದರಿಂದ ಪರಿಣಮಿಸಿದ ಪುನಾರಚನೆಯನ್ನು ನಾವು ವಿಶ್ಲೇಷಣಾತ್ಮಕವಾಗಿ ಪ್ರಶ್ನಿಸಿದಂತೆ ತೋರುವುದಿಲ್ಲ.

ಧಾರ್ಮಿಕ ಪಂಗಡಗಳ ನಡುವಿನ ವ್ಯತ್ಯಾಸವನ್ನು ಸಾಮಾನ್ಯವಾಗಿ ಬ್ರಾಹ್ಮಣತ್ವ ಮತ್ತು ಶ್ರಮಣತ್ವ ಎಂದು ಕರೆದು ವಿಭಜಿಸಲಾಗಿದೆಯಷ್ಟೆ. ಇವು ಭಾರತೀಯ ಇತಿಹಾಸದ ಹೆಚ್ಚು ಭಾಗಗಳಲ್ಲಿ ನಿರ್ವಿಕಾರವಾಗಿ ಇಂದಿಗೂ ಉಳಿದಿವೆ. ಬ್ರಾಹ್ಮಣರು ಪ್ರತಿಪಾದಿಸುವ ಧರ್ಮವನ್ನು ವೈದಿಕ ಸಂಹಿತೆಯಿಂದ ಉದ್ಧರಿಸಲಾಗಿತ್ತು. ಶ್ರಮಣರು ಬೋಧಿಸುತ್ತಿದ್ದುದು ಮತ್ತು ಆಚರಿಸುತ್ತಿದ್ದುದು ಬೌದ್ಧಧರ್ಮ, ಜೈನಧರ್ಮ ಮತ್ತಿತರ ಸಮಾನ ಪಂಗಡಗಳಿಗೆ ಸಂಬಂಧಿಸಿತ್ತು. ವೈದಿಕ ಬ್ರಾಹ್ಮಣತ್ವದ ಅನುಷ್ಠಾನವು ಹೆಚ್ಚಾಗಿ ಮೇಲ್ಜಾತಿಗಳಿಗೆ ಸೀಮಿತಗೊಳಿಸಲ್ಪಟ್ಟಿತ್ತು. ಏಕೆಂದರೆ ಅನೇಕ ನೇಮಗಳನ್ನು ಶೂದ್ರರಿಗೆ ನಿಷೇಧಿಸಲಾಗಿತ್ತು. ಸಂಪ್ರದಾಯಸ್ಥವಲ್ಲದ ಪಂಗಡಗಳು ಎಂದು ಹೆಸರಿಸಲಾದ ಬೌದ್ಧ, ಜೈನ ಮತ್ತಿತರ ಪಂಗಡಗಳು ಎಲ್ಲ ಜಾತಿಗಳ ಸದಸ್ಯರಿಗೂ ತೆರೆದಿದ್ದವು.

ಬ್ರಾಹ್ಮಣ ಮತ್ತು ಶ್ರಮಣ ಎಂಬ ವಿಭಾಗೀಕರಣವನ್ನು ಮೌರ್ಯರ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ ಮೆಗಾಸ್ತನೀಸ್ ವರದಿ ಮಾಡಿದ್ದಾನೆ. ವೈಯಾಕರಣಿ ಪತಂಜಲಿ ಇವುಗಳೆರಡರ ನಡುವೆ ಇದ್ದ ಅಂತರ್ಗತ ವಿರೋಧದ ಬಗ್ಗೆ ಬರೆದು ಅದನ್ನು ಹಾವು-ಮುಂಗಿಸಿ ಅಥವಾ ಇಲಿ-ಬೆಕ್ಕುಗಳಿಗೆ ಹೋಲಿಸುತ್ತಾನೆ. ಬಹುಶಃ ಈ ಕಾರಣಕ್ಕಾಗಿಯೇ ಮೌರ್ಯರಾಜ ಅಶೋಕನು ಬ್ರಾಹ್ಮಣರು ಮತ್ತು ಶ್ರಮಣರಿಬ್ಬರನ್ನೂ ಗೌರವಿಸಬೇಕಾದ ಅಗತ್ಯದ ಬಗ್ಗೆ ಮತ್ತೆ ಮತ್ತೆ ಕರೆಕೊಡುತ್ತಾನೆ. ಕೆಲವು ಜೈನ ಗ್ರಂಥಗಳಲ್ಲಿ, ಉದಾಹರಣೆಗೆ ವಿಮಲಸೂರಿಯ 'ಪೌಮಾಚರಿಯಮ್' ಗ್ರಂಥದಲ್ಲಿ ಬ್ರಾಹ್ಮಣರನ್ನು ಪಾಷಂಡರು ಮತ್ತು ಸುಳ್ಳುಗಾರರೆಂದು ಹೇಳಲಾಗಿದೆ. ಕೆಲವು ಬ್ರಾಹ್ಮಣ ಲೇಖಕರು ಉದಾಹರಣೆಗೆ 'ಪ್ರಬೋಧ-ಚಂದ್ರೋದಯ'ವೆಂಬ ನಾಟಕದ ಕರ್ತೃ ಎನ್ನಲಾಗುವ ಕೃಷ್ಣ ಮಿಶ್ರರಂತಹವರು ಜೈನಮುನಿಗಳನ್ನು ಲಂಪಟರು ಮತ್ತು ಕುಡುಕರೆಂದು ವ್ಯಂಗ್ಯ ಮಾಡುತ್ತಾರೆ. ಹನ್ನೊಂದನೆಯ ಶತಮಾನದಲ್ಲಿ ಬರೆದ ಆಲ್ಬರೂನಿ ಅನೇಕ ಧಾರ್ಮಿಕ ಪಂಗಡಗಳನ್ನು ಉಲ್ಲೇಖಿಸಿದ್ದಾನೆ. ಮತ್ತು ಶ್ರಮಣೀಯರನ್ನು ಪ್ರತ್ಯೇಕವಾಗಿ ಸೂಚಿಸಿದ್ದಾನೆ.

ಈ ದ್ವಂದ್ವವು ಮೇಲ್ವರ್ಗಗಳ ನೆಲೆಯಲ್ಲಿ ಸುಲಭವಾಗಿ ಕಾಣಿಸುತ್ತದೆ. ಮತ್ತು ಸಾಹಿತ್ಯದಲ್ಲಿ ವ್ಯಕ್ತವಾಗುತ್ತದೆ. 'ಪೌರಾಣಿಕ ಹಿಂದೂ ಧರ್ಮ' ಎಂದು ಯಾವುದನ್ನು ಇವತ್ತು ನಾವು ಕರೆಯುತ್ತೇವೆಯೋ ಅದು ಹೆಚ್ಚಾಗಿ ಮಧ್ಯಮ ನೆಲೆಗಳಲ್ಲಿ ಪ್ರಚಲಿತವಾಗಿತ್ತು. ವೈದಿಕ ಬ್ರಾಹ್ಮಣತ್ವವನ್ನು ಬೆಂಬಲಿಸುವ ಕೆಲವು ಪಂಗಡಗಳು ಮತ್ತು ಅದಕ್ಕೆ ವಿರುದ್ಧವಾದ ಕೆಲವು ಪಂಗಡಗಳು, ಹೀಗೆ ವೈರುಧ್ಯ ಹೊಂದಿರುವ ಅನೇಕ ರೀತಿಯ ಪಂಗಡಗಳನ್ನು ಈ ಮಾದರಿಯು ಒಳಗೊಂಡಿತ್ತು. ಇದು ನಿಜವಾಗಿ ಧಾರ್ಮಿಕ ಅಭಿವ್ಯಕ್ತಿ ಮತ್ತು ಸಾಮಾಜಿಕ ಸ್ಥಿತಿಗತಿಗಳ ನಡುವೆ ಕೊಡು-ಕೊಳ್ಳುವಿಕೆಯ ಸೃಜನಶೀಲ ಅಭಿವ್ಯಕ್ತಿಯಾಗಿತ್ತು. ವಿಭಿನ್ನ ಧಾರ್ಮಿಕ ಸಿದ್ಧಾಂತಗಳು ಮತ್ತು ಸಾಮಾಜಿಕ ನಿಯಮಗಳನ್ನೊಳಗೊಂಡ ಪಂಗಡಗಳು ಬಹಳ ಸಮರ್ಪಕವಾಗಿ ಹೊಂದಿಕೊಳ್ಳುವುದಕ್ಕೆ ಅದು ಬೆಂಬಲಿಸಿದ ಮುಕ್ತತೆಯೂ ಒಂದು ಕಾರಣ. ಇದು ಸಾಮಾನ್ಯವಾಗಿ ಸಾಮಾಜಿಕ ಹಾಗೂ ರಾಜಕೀಯ ಕಾರಣಗಳಿಗೆ ಜೀರ್ಣಿಸಿಕೊಳ್ಳುವ ಮತ್ತು ಶಾಮೀಲು ಮಾಡಿಕೊಳ್ಳುವ ಅಗತ್ಯದಿಂದ ಬೆಳೆದು ಬಂದಿತ್ತು. ಇದಕ್ಕಾಗಿ ಹೊಸ ದೇವತೆಗಳು, ಆಚರಣೆಗಳು ಹಾಗೂ ನಂಬಿಕೆಗಳನ್ನು ಒಪ್ಪಿಕೊಂಡರೂ ಸರಿಯೆ. ಅಥವಾ ಆಗಲೆ ಇದ್ದ ದೇವತೆಗಳನ್ನು ಹೆಚ್ಚುವರಿ ದೇವತಾಖ್ಯಾನಗಳಿಂದ ಮತ್ತು ನೇಮಗಳ ಸೇರುವಿಕೆಯಿಂದ ಮರುಸಂಸ್ಕರಣಗೊಳಿಸಿದರೂ ಸರಿಯೆ.

ಈ ರೀತಿಯ ಧಾರ್ಮಿಕ ಅಭಿವ್ಯಕ್ತಿಯಿಂದ ಒಂದು ಸಮಾನ, ಏಕರೂಪೀ ಧಾರ್ಮಿಕ ಸಮುದಾಯವನ್ನು ಕಟ್ಟುವುದು ಅಸಾಧ್ಯವಷ್ಟೆ. ಪ್ರತಿಯೊಂದು ಸಮುದಾಯವೂ ಒಂದು ಜಾತಿ ಅಥವಾ ಕೆಲವು ಜಾತಿಗಳ ಒಂದು ಗುಂಪಿನೊಂದಿಗೆ ತನ್ನ ಸಂಬಂಧದಿಂದಾಗಿ ಪ್ರಭಾವಶಾಲಿಯಾಗಿರುತ್ತಿತ್ತು. ಒಂದು ಪಂಗಡವು ಹಲವಾರು ಜಾತಿಗಳ ಅಂಶಗಳನ್ನು ಹೊಂದಿದ್ದರೆ ಅದು ಕೊನೆಗೆ ಒಂದು ಸ್ವತಂತ್ರವಾದ ಮತ್ತು ಪ್ರತ್ಯೇಕವಾದ ಜಾತಿಯಾಗುತ್ತಿತ್ತು. ಅವುಗಳ ಪೋಷಕರು ಯಾರು ಎನ್ನುವುದರ ಮೇಲೆ ವಿಭಿನ್ನ ಪಂಗಡಗಳು ಸಾಮಾಜಿಕ ಅಂತಸ್ತು ಅವಲಂಬಿಸಿತ್ತು. ಸುಮಾರಾಗಿ ದೀನವಾದ ಒಂದು ಪಂಗಡವು ರಾಜಾಶ್ರಯವನ್ನು ಪಡೆದರೆ, ಕೆಲವೇ ತಲೆಮಾರುಗಳಲ್ಲಿ ಪ್ರಮುಖವಾದದ್ದಾಗಿ ರೂಪಾಂತರಗೊಳ್ಳುತ್ತಿದ್ದುದು ಸಾಮಾನ್ಯವೇನಲ್ಲ. ಈ ಪ್ರಕ್ರಿಯೆಯ ಭಾಗವಾಗಿ ಅನೇಕ ನಿರಾಕಾರ ದೈವಗಳು ರಾಜರ ಆರಾಧನೆಯ ಕೇಂದ್ರವಾಗಿ ಹುಟ್ಟಿದುವು. ಬುಂದೇಲ್ ಖಂಡದ ಚಂಡೇಲ ಅರಸರು ಪೂಜಿಸಿದ 'ಮಣಿದಯದೇಯೊ' ಇದಕ್ಕೊಂದು ನಿದರ್ಶನ. ನಂಬಿಕೆ, ನೇಮ ಮತ್ತು ಬದಲಾಗುತ್ತಿರುವ ಸಾಮಾಜಿಕ ಸ್ಥಿತಿಕೆಯ ನಡುವಿನ ಮುಖಾಮುಖಿಯಲ್ಲಿ ತಂತ್ರ ಮತ್ತು ಶಾಕ್ತ ಪಂಥಗಳ ಸಾಮಾಜಿಕ ಚಲನೆಯ ಒಂದು ಆಶ್ಚರ್ಯಕರ ಅಧ್ಯಯನೀಯ ವಿಷಯವಾಗುತ್ತದೆ. ಅದು ಸಾಪೇಕ್ಷವಾಗಿ ಸೀಮಿತವಾದ ಸುಫಲೀಕರಣದ (Fertility Worship) ಆರಾಧನೆಯಿಂದ ಹಿಡಿದು ಖಜುರಾಹೊ ತರಹದ ಅತಿ ಶ್ರೀಮಂತ ದೇವಾಲಯಗಳಲ್ಲಿ ಕಾಣಿಸಿಕೊಳ್ಳುವವರೆಗೂ ಹರಡಿದೆ. ಅಜ್ಞಾತ ಕುಟುಂಬಗಳು ರಾಜಮನೆತನಗಳ ಸ್ಥಾನ ಪಡೆದಾಗ ತಮ್ಮ ಪಂಥಗಳನ್ನೂ ತಮ್ಮೊಂದಿಗೆ ಒಯ್ದು, ಇವುಗಳನ್ನು ಹೆಚ್ಚು ಅಂತಸ್ತು ದೊರಕಿಸುವ ಬ್ರಾಹ್ಮಣ

ದೈವಗಳ ಆರಾಧನೆಯೊಂದಿಗೆ ಕೂಡಿಸಿದವು. ಕುಟುಂಬ ಮತ್ತು ಜಾತಿಗಳ ಚಲನೆಯೆಂಬ ಈ ಸಾಮಾಜಿಕ ಪ್ರಕ್ರಿಯೆಗಳು ಹಿಂದೂ ಪಂಗಡಗಳು ಎಂದು ನಾವು ಗುರುತಿಸುವ ಸಮುದಾಯಗಳಿಗೆ ದಾರಿ ಮಾಡಿಕೊಟ್ಟವು.

ಈ ಹಿಂದು ಪಂಗಡಗಳಿಂದ ಹೆಚ್ಚು ದೂರದಲ್ಲಿದ್ದ ಮತ್ತು ಸಾಮಾಜಿಕ ಶ್ರೇಣಿಯಲ್ಲಿ ಬಹಳ ಕೆಳಗೆ ಇರುವ ಆದಿವಾಸಿ ಜನರ ಮತ್ತು ಜಾತಿಯಿಂದ ಹೊರಗಿರುವವರ ನಂಬಿಕೆಯ ಪದ್ಧತಿಗಳು ಮತ್ತು ಆಚರಣೆಗಳು ಇದ್ದವು. ಇವರಲ್ಲಿ ಅಟವಿಕರು ಅಥವ ಕಾಡು ನಿವಾಸಿಗಳು-ನಿಶಾದ, ಶಬರ, ಬಿಲ್ಲ, ಪುಲಿಂದ ಇನ್ನೂ ನೂರಾರು ಇತರರಿದ್ದರು. ಇನ್ನೊಂದು ತುದಿಯಲ್ಲಿ ಸಾಹಿತ್ಯದಲ್ಲಿ ಉಲ್ಲೇಖಿತರಾದ ಚಂಡಾಳ, ಡೋಮ ಮುಂತಾದವರಿದ್ದರು. ಅವರದು ತಮ್ಮದೇ ದೇವತೆಗಳು ಮತ್ತು ಆಚಾರಗಳನ್ನೊಳಗೊಂಡ ಸರ್ವಸಜೀವತ್ವ (animistic) ಧರ್ಮಗಳಾಗಿದ್ದವು. ಕೆಲವು ಬ್ರಾಹ್ಮಣಿಕ ಆಚರಣೆಗಳಿಗೆ ವಿರುದ್ಧವಾಗಿದ್ದುವು. ಆದ್ದರಿಂದಲೇ, ಮುಂಚಿನ ವೈದಿಕ ಯಾಗಕ್ರಿಯೆಯು ಪ್ರಾಣಿ ಬಲಿಯನ್ನೊಳಗೊಂಡಿದ್ದರೂ, ನಂತರದ ಕಾಲಗಳಲ್ಲಿ ಸರ್ವಸಜೀವತ್ವ ಪಂಥಗಳಲ್ಲೂ ಪ್ರಚಲಿತವಾದ ಪ್ರಾಣಿಬಲಿ ಮತ್ತು ಮದ್ಯದ ಸಮರ್ಪಣೆಗಳು ಹಲವಾರು ಬ್ರಾಹ್ಮಣ ಪಂಗಡಗಳಿಗೆ ನಿಷಿದ್ಧವಾದವು. ಹಲವು ಶತಮಾನಗಳಿಂದ ಮೇಲ್ಜಾತಿ ಹಿಂದೂಗಳಿಗೆ ಈ ಪಂಗಡಗಳು ಮ್ಲೇಚ್ಛ ಅಥವಾ ಅಪವಿತ್ರದ್ದಾಗಿವೆ ಹಾಗೂ ತಮ್ಮ ಧಾರ್ಮಿಕ ಸ್ವಂತಿಕೆಗೆ ಸೇರದವುಗಳಾಗಿವೆ.

ಮತವನ್ನು ಅರ್ಥಮಾಡಿಕೊಳ್ಳಲು 'ಧರ್ಮ' ಎಂಬ ಪರಿಕಲ್ಪನೆ ಏಕೆ ಮುಖ್ಯವಾಯಿತೆಂಬುದನ್ನು ಈ ವ್ಯತ್ಯಾಸವು ಸ್ವಲ್ಪಮಟ್ಟಿಗಾದರೂ ವಿವರಿಸಬಹುದು. ಈ ವ್ಯತ್ಯಾಸವು ಒಬ್ಬನು ತಾನು ಸೇರಿದ ವರ್ಣ, ಜಾತಿ, ಪಂಗಡಕ್ಕನುಗುಣವಾಗಿ ಪಾಲಿಸಬೇಕಾದ ಸಾಮಾಜಿಕ ಋಣಗಳು ಮತ್ತು ಆಚರಣಾತ್ಮಕ ಕರ್ತವ್ಯಗಳಿಗೆ ಸಂಬಂಧಿಸಿದಾಗಿತ್ತು. ಕರ್ತವ್ಯಗಳು ಜಾತಿಯ ಅಂತಸ್ತಿಗೆ ತಕ್ಕ ಹಾಗೆ ಬದಲಾಗುತ್ತಿದ್ದವು. 'ಧರ್ಮಕ್ಕೆ' ಎಷ್ಟುಮಟ್ಟಿಗೆ ಬದ್ಧರಾಗಿರುವರೆಂಬುದರಿಂದ ಮೇಲ್ಜಾತಿಗಳನ್ನು ಕೆಳಜಾತಿಗಳಿಂದ ಬೇರ್ಪಡಿಸಲಾಗುತ್ತಿತ್ತು. ಏಕೆಂದರೆ, ಮೇಲ್ಜಾತಿಗಳು 'ಧರ್ಮ'ವನ್ನು ಹೆಚ್ಚು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬ ಅಪೇಕ್ಷೆ ಇರುತ್ತಿತ್ತು. ಕೆಳಜಾತಿಗಳು ಹೆಚ್ಚು ಸಡಿಲತೆಯಿಂದ ಕೂಡಿದ್ದವೆಂದು ಊಹಿಸಲಾಗುತ್ತಿತ್ತು. ಸಾರ್ವತ್ರಿಕವಾದ ಮತ್ತು ಏಕರೂಪಿ ಹಿಂದೂಧರ್ಮವು ಗತಕಾಲದಲ್ಲಿತ್ತೆಂದು ತೋರಿಸುವ ಇಂದಿನ ಪ್ರಯತ್ನಗಳಿಗೆ ಮತ್ತು ಮೇಲ್ಜಾತಿಗಳ ನಂಬಿಕೆಗಳು ಹಾಗೂ ಪದ್ಧತಿಗಳು ಹಿಂದೂ ಧರ್ಮವನ್ನು ನಿಶ್ಚಯಿಸುತ್ತದೆಂದು ಬಗೆಯುವುದಕ್ಕೆ ಮೇಲೆ ಹೇಳಿದ ವಿಚಾರಗಳು ಸಮಸ್ಯೆಗಳನ್ನು ಒಡ್ಡುತ್ತವೆ.

ಮೇಲ್ಜಾತಿಯವರ ಧರ್ಮಕ್ಕೂ ಸಮಾಜದ ಶ್ರೇಣಿಯಲ್ಲಿ ಕೆಳಗಿದ್ದವರ ಧರ್ಮಕ್ಕೂ ವ್ಯತ್ಯಾಸವಿತ್ತೆಂದು ನಾವು ಗುರುತಿಸಬೇಕು. ಪಂಗಡಗಳ ನಡುವಿನ ಶ್ರೇಣಿಕೃತ ವ್ಯವಸ್ಥೆಯು ಅನೇಕ ಬಾರಿ ಜಾತಿಯ ಶ್ರೇಣಿಕೃತ ವ್ಯವಸ್ಥೆಯನ್ನು ಅನುಸರಿಸುತ್ತದೆ. ಎಲ್ಲದಕ್ಕಿಂತ ಮುಖ್ಯವಾಗಿ, ನಿಜವಾಗಿಯೂ ಬಹುಸಂಖ್ಯಾತರಾದ ಜನರ ಧರ್ಮವನ್ನು ಹಿಂದಿನ ಐತಿಹಾಸಿಕ ಆಕರಗಳಲ್ಲಿ ಅಪರೂಪವಾಗಿ ದಾಖಲಿಸಲಾಗಿದೆ. ಸಾಮಾನ್ಯವಾಗಿ ಪರೋಕ್ಷ ಪ್ರಮಾಣಗಳಿಂದ ಈ ಅಂಶಗಳನ್ನು ತೀರ್ಮಾನಿಸಬೇಕು. ಏಕೆಂದರೆ, ಈಗ ಉಳಿದಿರುವುದೊಂದು ಬಹುಪಾಲು ಮೇಲ್ಜಾತಿಗಳ ಸಾಹಿತ್ಯ ಮತ್ತು ದೃಶ್ಯ ಪ್ರಮಾಣಗಳೇ ಆಗಿವೆ. ಈ ಪ್ರಮಾಣಗಳನ್ನು ಎಲ್ಲ ಸಾಮಾಜಿಕ ನೆಲೆಗಳಿಗೂ ವಿಸ್ತರಿಸಲು ನಾವು ತೊಡಗುತ್ತೇವೆ. ಇದು ಐತಿಹಾಸಿಕವಾಗಿ ನಿಖರವಲ್ಲದ ಕ್ರಮ. ಆದರೆ, ಬಹುಸಂಖ್ಯಾತರ ಧರ್ಮದ ನಿಷ್ಠಾವಂತ ಪುನರ್ನಿರ್ಮಾಣವು ಕೆಲವು ಆಶ್ಚರ್ಯಗಳ ಕಡೆಗೆ ನಮ್ಮನ್ನು ಒಯ್ಯುತ್ತದೆ. ಸಾಮಾಜಿಕ ಶ್ರೇಣಿಯ ಕೆಳತುದಿಯಲ್ಲಿರುವವರ ನಂಬಿಕೆಗಳು ಮತ್ತು ಆಚರಣೆಗಳು, ಒಂದು ರೀತಿಯ ಪ್ರತಿ-ಸಂಸ್ಕೃತಿಯ ಭಾಗವಾಗಿವೆ. ಧಾರ್ಮಿಕ ಎಲ್ಲೆಗಳು ಮಸುಕಾಗಿವೆ, ಧಾರ್ಮಿಕ ಅಭ್ಯಾಸಗಳು ಒಂದರ ಮೇಲೆ ಮತ್ತೊಂದು ವಿಸ್ತೃತವಾಗಿವೆ. ಪುರಾಣಗಳು ಒಂದಕ್ಕೊಂದು ಹೆಣೆಯಲ್ಪಟ್ಟಿವೆ. ನಾವು ನಂಬಲು ಇಷ್ಟಪಡುವಂತೆ ಈ ರೀತಿ ಆಗಲು ಕಾರಣ ಭಾರತದ ದೇಶೀಯ ಧರ್ಮಗಳು ಅಗತ್ಯವಾಗಿ ಸಹಿಷ್ಣುವಾಗಿದ್ದವೆಂದಲ್ಲ, ಬದಲಿಗೆ ಬಹುಸಂಖ್ಯಾತರ ಧಾರ್ಮಿಕ ಅಭಿವ್ಯಕ್ತಿಯು ವ್ಯತ್ಯಾಸಗಳನ್ನು ನಿರ್ವಹಿಸುವುದರಿಂದ ಉಂಟಾಯಿತು. ಇಂತಹ ಮುಖಾಮುಖಿಗಳು ಧರ್ಮನಿರಪೇಕ್ಷೀಕರಣ ಪ್ರಕ್ರಿಯೆಗೆ ಬಹಳ ಮುಖ್ಯವಾಗಬಹುದು.

ಭಾರತೀಯ ಸಮಾಜದ ಧರ್ಮನಿರಪೇಕ್ಷೀಕರಣವು ಇತರ ಅನೇಕ ಸಮಾಜಗಳ ಧರ್ಮನಿರಪೇಕ್ಷೀಕರಣಕ್ಕಿಂತ ಸುಲಭವಾಗಿರುತ್ತದೆ. ಈ ಸಂಗತಿಯನ್ನು ಆಗಲೇ ನಾನು ಹೇಳಿದ್ದೇನೆ. ಇದನ್ನೇ ನಾವು ವಿಸ್ತರಿಸುತ್ತೇನೆ. ಗತಕಾಲದಲ್ಲಿ ಬಹಳವಾಗಿ ಮತ್ತು ಈಗಲೂ ಕೆಲವೊಮ್ಮೆ, ಧಾರ್ಮಿಕ ಪಂಥೀಯ ಸ್ವಂತಿಕೆಯನ್ನು ಜಾತಿಯ ಸ್ವರೂಪದ ಅಡಿಯಲ್ಲಿ ಇಡಲಾಗುತ್ತದೆಯಷ್ಟೆ. ಜಾತಿಯೊಂದರ ಲಕ್ಷಣವು ವಿವಾಹ ನಿಯಮಗಳು ಮತ್ತು ವೈಯಕ್ತಿಕ ಕಾನೂನು, ಆಸ್ತಿ ವಿತರಣೆಯ ನಿಮಯಗಳು, ಕಸುಬು, ಪೂಜೆಯ ಸ್ಥಳ ಮತ್ತು ರೀತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಆದ್ದರಿಂದ, ಯಾವುದನ್ನು ಇಂದು ನಾಗರಿಕ ಸಮಾಜದ ನಿರ್ಮಾಣಕ್ಕೆ ಬೇಕಾದ ವಿಷಯಗಳೆಂದು ಬಗೆಯುತ್ತೇವೆಯೋ ಅವು ಆಗಿನಿಂದಲೂ ಮುಖ್ಯವಾಗಿಯೇ ಉಳಿದಿವೆ. ಹಿಂದೂಗಳಲ್ಲಿ ಧಾರ್ಮಿಕ ಆಚರಣೆಗಳು ಜಾತಿಗೆ ತಕ್ಕಂತೆ ಇರುತ್ತಿದ್ದವು. ಯಾರು ಯಾವ ದೇವಸ್ಥಾನವನ್ನು ಪ್ರವೇಶಿಸಬಹುದು ಹಾಗೂ ಒಬ್ಬ ವ್ಯಕ್ತಿ ಯಾವ ಸ್ಥಳದಲ್ಲಿ ಪೂಜಿಸಬಹುದೆಂಬುದನ್ನು ಜಾತಿಯೇ ನಿರ್ಣಯಿಸುತ್ತಿತ್ತು.

ಧಾರ್ಮಿಕ ನಂಬಿಕೆಯು ಬಹುತೇಕವಾಗಿ ವೈಯಕ್ತಿಕ ವಿಷಯವಾಗಿತ್ತೆಂಬುದು ಇದರ ಇನ್ನೊಂದು ಮಗ್ಗುಲಲ್ಲಿ ಕಂಡುಬರುತ್ತದೆ. ಎಲ್ಲಿಯವರೆಗೆ ಜಾತಿಯ ನಿಯಮಾವಳಿಗಳು ಪಾಲಿಸಲ್ಪಡುತ್ತಿದ್ದವೋ ಅಲ್ಲಿಯವರೆಗೆ ವೈಯಕ್ತಿಕ ನಂಬಿಕೆಯು ವ್ಯಕ್ತಿಗಳಿಗೆ ಬಿಟ್ಟದ್ದಾಗಿತ್ತು. ಆಚರಣೆಗಳು ಕೆಲವು ನಂಬಿಕೆಯ ಪ್ರಕಾರಗಳನ್ನು ಅಪೇಕ್ಷಿಸುತ್ತಿದ್ದವಾದರೂ, ಧಾರ್ಮಿಕ ಬೋಧನೆಯು ದೊಡ್ಡದಾದ ಸಾಮಾಜಿಕ ವಿಸ್ತೃತಿಯ ಮೇಲೆ ಹಬ್ಬಿರುವುದು ಅಪರೂಪವಾಗಿತ್ತು. ಇದು ಈ ಧರ್ಮಗಳಲ್ಲಿ ಒಂದು ಬಗೆಯ ಮುಕ್ತತೆಯನ್ನು ಉತ್ತೇಜಿಸಿತು.

ಸೆಮೆಟಿಕ್ ಧರ್ಮಗಳಿಂದ ನಮಗೆ ಪರಿಚಿತವಾದ ಮಾದರಿಗಿಂತ ಇದು ಭಿನ್ನವಾಗಿತ್ತು. ಆದರೆ, ಈಗ ಧರ್ಮದ ಬಗ್ಗೆ ಒಂದು ಸಮಾನ ಮತ್ತು ಏಕರೂಪೀದೃಷ್ಟಿಕೋನವನ್ನು ಹೇರುವುದರಿಂದ ಮತ್ತು ಸಮಾಜದ ಕೋಮುವಾದೀಕರಣದಿಂದ ಈ ಮುಕ್ತತೆಯು ಕ್ಷೀಣಿಸುತ್ತದೆ. ಅನೇಕ ಧಾರ್ಮಿಕ ಪಂಗಡಗಳು-ಉದಾಹರಣೆಗೆ ಶ್ರಮಣ ಮತ್ತು ಭಕ್ತಿ ಸಂಪ್ರದಾಯದಲ್ಲಿ ಸೇರಿಸಲ್ಪಡುವವು ಮತ್ತು ಹೆಚ್ಚು ಗೂಢವಾದ ಬೇರೆ ಸಂಪ್ರದಾಯಗಳು ವ್ಯಕ್ತಿಯ ಆತ್ಮದ ವಿಮುಕ್ತಿಯ ಕಡೆ ಗಮನಕೊಡುತ್ತಿದ್ದವು ಮತ್ತು ಪೂಜಿಸುವವರು ಅನೇಕ ರೀತಿಯ ಆರಾಧನಾ ಪ್ರಕಾರಗಳನ್ನು ಅನುಸರಿಸಬಹುದಿತ್ತು. ಪೂಜಿಸುವವರು ಮತ್ತು ದೇವರ ನಡುವೆ ಕಲ್ಪಿಸಿದ ಸಂಬಂಧವು ಆಚರಣೆ ಮತ್ತು ನಂಬಿಕೆಗಳ ಅಗತ್ಯಗಳಿಂದ ನಿರ್ಬಂಧಿತವಾಗಿರಲಿಲ್ಲ. ಧಾರ್ಮಿಕ ನಂಬಿಕೆಯು ಒಂದು ವೈಯಕ್ತಿಕ ವಿಷಯ ಎಂಬ ವಾದವು ಭಾರತೀಯ ಸಂಪ್ರದಾಯಕ್ಕೆ ಸಂಪೂರ್ಣವಾಗಿ ಪರಕೀಯವಾದದ್ದೇನೂ ಅಲ್ಲ.

ಈ ಸಂದರ್ಭದಲ್ಲಿ ನಾನು ಮತ್ತೊಂದು ವಿಚಾರವನ್ನು ಹೇಳಲು ಬಯಸುವುದೇನೆಂದರೆ, ಸುಮಾರು ಸಾವಿರ ವರ್ಷಗಳಷ್ಟು ಕಾಲ ಬೌದ್ಧಧರ್ಮವು ಒಂದು ಪ್ರಮುಖ ಭಾರತೀಯ ಧರ್ಮವಾಗಿತ್ತು. ಅದು ಹಲವು ರೀತಿಗಳಲ್ಲಿ ತನ್ನ ಕುರುಹನ್ನು ಬಿಟ್ಟುಹೋಗಿದೆ. ನಾವು ಆ ಕುರುಹನ್ನು ತಕ್ಷಣವೆ ಗುರುತಿಸಲಾಗದಿರಬಹುದು. ಬುದ್ಧನು ದೇವರಲ್ಲಿ ನಂಬಿಕೆ ಇಡಲು ಒತ್ತಾಯಿಸಲಿಲ್ಲ. ಅದು ಸಾಬೀತುಪಡಿಸಲಾಗದ ವಿಷಯವೆಂದು ಅವನ ವಾದ. ಸಾಮಾಜಿಕ ನೈತಿಕತೆಯು ಮಾನವ ನಿರ್ಮಿತವೆಂದೂ ಅವನು ಪ್ರತಿಪಾದಿಸುತ್ತಿದ್ದನು. ಈ ವೈಚಾರಿಕತೆಯ ಅಂಶವು ಭಾರತೀಯ ಚಿಂತನೆಗೆ ಅಪರಿಚಿತವಾದುದ್ದೇನಲ್ಲ. ಆದರೆ ನಾವು ಅದನ್ನು ಆಲಕ್ಷಿಸಲು ಅಥವಾ ನಿರಾಕರಿಸಲು ಕೂಡ ಹವಣಿಸಿದ್ದೇವೆ. ಕೆಲವೊಮ್ಮೆ, ಭಿನ್ನಾಭಿಪ್ರಾಯ ಹೊಂದಿದ್ದ ವಿರಕ್ತರನ್ನು ಪರ್ಯಾಯ ನಂಬಿಕೆಯ ಪದ್ಧತಿಗಳು ಅನುಮೋದಿಸುತ್ತಿದ್ದವು. ಏಕೆಂದರೆ, ಅವರು ಜಾತಿ ಅಥವಾ ಆಚರಣೆಗಳಿಗೆ ಬದ್ಧರಾಗಿರಲಿಲ್ಲ. ಸನ್ಯಾಸಿ, ಭಿಕ್ಷು, ಸೂಫಿ ಫೀರ್, ಫಕೀರ್, ಗುರು ಅಥವಾ ಸಂತರಾಗಿ ಅವರು ಎಲ್ಲ ಕಡೆ ಗೌರವಿಸಲ್ಪಡುತ್ತಿದ್ದರು. ಅವರಿಗೆ ಸಮಾಜದ ಸ್ಥಾನವಿರುತ್ತಿತ್ತು ಮತ್ತು ಸಂದರ್ಭ ಬಂದಾಗ ಸ್ಥಳೀಯ ರಾಜಕೀಯದಲ್ಲಿ ಭಾಗಿಗಳಾಗಿ ಅವರು ಬೆಂಬಲವನ್ನೂ ಗಳಿಸುತ್ತಿದ್ದರು.

ಈ ರೀತಿಯ ಭೂಮಿಕೆಯ ನಿದರ್ಶನವಿರುವಾಗ ಪಂಗಡಗಳು ಹೇಗೆ ಸಂಘರ್ಷಗಳನ್ನು ಮತ್ತು ಸಮಾಗಮಗಳನ್ನು ನಿರ್ವಹಿಸಿದವು ಎಂಬ ಪ್ರಶ್ನೆ ಏಳುತ್ತದೆ ಪೌರಾಣಿಕ ಹಿಂದೂ ಧರ್ಮದಲ್ಲಿ, ಭಕ್ತಿ ಪಂಥಗಳಲ್ಲಿ ಮತ್ತು ಹೆಚ್ಚು ಪ್ರಖ್ಯಾತವಾದ ಧಾರ್ಮಿಕ ಆಂದೋಲನಗಳಲ್ಲಿ ಕೂಡ ಈ ರೀತಿಯ ಸಮಾಗಮಗಳು ವೇದ್ಯವಾಗುತ್ತವೆ. ಸಮಾಗಮಗಳಿಂದ ವಿಭಕ್ತ ಜಾತಿಗಳಾದವು. ಹಾಗೆಯೇ ಅನೇಕ ಜಾತಿಗಳು ಸಮ್ಮಿಶ್ರಗೊಂಡು ಹೊಸ ಜಾತಿಗಳು ಉಂಟಾದವು. ಆದರೆ, ಒಂದು ಸಂಕೀರ್ಣ ಸಮಾಜದಲ್ಲಿ ಇರಬಹುದಾದ

ಸಂಘರ್ಷಗಳೂ ಇದ್ದವು. ಕಾಶ್ಮೀರದಲ್ಲಿ ಬೌದ್ಧರ ಮೇಲೆ ನಡೆದ ಹಲ್ಲೆಗಳನ್ನು ಕಲ್ಹಣನು 'ರಾಜತರಂಗಿಣಿಯಲ್ಲಿ' ಸೂಚಿಸಿದ್ದಾನೆ. ಹರ್ಷಚರಿತೆಯ ಲೇಖಕನಾದ ಬಾಣಭಟ್ಟನ ಪ್ರಕಾರ ಪೂರ್ವ ಭಾರತದಲ್ಲಿ ಶಶಾಂಕನು ಇದನ್ನೇ ಮಾಡಿದ್ದಾನೆ. ಆರೋಪಿತನಾಗಿದ್ದಾನೆ. ಜೈನರು ಮತ್ತು ಶೈವರ ನಡುವಿನ ವೈರ ಒಬ್ಬರನ್ನೊಬ್ಬರು ಹಾನಿ ಮಾಡುವ ಉದ್ದೇಶವುಳ್ಳವರೆಂದು ಆರೋಪಿಸುವಂತೆ ಮಾಡಿತು. ಕುಂಭಮೇಳದಲ್ಲಿ ದಶನಾಮಿಗಳು ಮತ್ತು ಬೈರಾಗಿಗಳ ಮಧ್ಯೆ ಆದ್ಯತೆಗೋಸ್ಕರ ನಡೆದ ಹಿಂಸಾತ್ಮಕ ಕಲಹಗಳನ್ನು ಕಿರುಚಿತ್ರಗಳಲ್ಲಿ ಚಿತ್ರಿಸಲಾಗಿದೆ.

ಇಂತಹ ಕಲಹಗಳಲ್ಲಿ ಅಧಿಕಾರ ಪಾತ್ರವಹಿಸುವ ಅಂಶಗಳಿದ್ದವು. ಇದರಲ್ಲಿ ರಾಜಪೋಷಣೆಗಾಗಿ ಸ್ಪರ್ಧೆಗಳಿದ್ದವು. ಅಲ್ಲದೆ ಆರ್ಥಿಕ ಮತ್ತು ವೃತ್ತಿಗೆ ಸಂಬಂಧಿಸಿದ ಆತಂಕಗಳಿದ್ದವು. ಆದರೆ ಕಲಹಗಳು ನಿರ್ದಿಷ್ಟ ಪ್ರದೇಶಗಳು ಮತ್ತು ಗುಂಪುಗಳಿಗೆ ಸೀಮಿತವಾಗಿದ್ದುವೆ ಹೊರತು ಇಡೀ ಭಾರತಕ್ಕೆ ಹೊಂದುವ ಸಂಗತಿಗಳಾಗಿರಲಿಲ್ಲ. ಒಂದು ಪವಿತ್ರ ಯುದ್ಧ ಅಥವಾ ಜಿಹಾದ್ ಅಥವಾ ಧರ್ಮಯುದ್ಧದ ಕಲ್ಪನೆ ಇರಲಿಲ್ಲ. ಯುರೋಪ್ ಅಥವಾ ಪಶ್ಚಿಮ ಏಷ್ಯಾಗಳಿಗೆ ಹೋಲಿಸಿದರೆ ಧಾರ್ಮಿಕ ಅಸಹಿಷ್ಣುತೆಯು ಇಲ್ಲಿ ಸಾಮಾಜಿಕ ರೂಪವನ್ನು ಪಡೆಯಿತು. ಅದರಲ್ಲಿ ಅಸ್ಪೃಶ್ಯತೆ ಎಂಬುದು ಮಾನವ ಸಮಾಜ ಕಂಡ ಅತ್ಯಂತ ನೀಚ ಅವಹೇಳನೆಯ ಸಂಗತಿ. ಅಂತಹ ಪಂಗಡಗಳನ್ನು ಮೇಲ್ಜಾತಿ ಹಿಂದುಗಳ ಧರ್ಮ ಮತ್ತು ಆಚರಣೆಗಳಿಂದ ಹೊರಗಿಡಲಾಗುತ್ತಿತ್ತು. ಆದ್ದರಿಂದ ನಾವು ಘರ್ಷಣೆಗಳು ಇಲ್ಲವೆ ಸಂಯೋಗಗಳಿಗೆ ಕಾರಣಗಳನ್ನು ಪರಿಶೋಧಿಸಬೇಕು ಮತ್ತು ಅವುಗಳನ್ನು ಒಳಗೊಂಡಿರುವ ಸಾಮಾಜಿಕ ಆತಂಕಗಳನ್ನು ಪತ್ತೆಹಚ್ಚಬೇಕು. ಸೆಣಸಾಟಗಳು ಇರಲೇ ಇಲ್ಲ ಎಂದು ನಟಿಸುವುದರಿಂದ ಅಥವ ಭಾರತಕ್ಕೆ ಇಸ್ಲಾಮ್ ಬಂದ ನಂತರದಲ್ಲೆ ಎಲ್ಲ ಘರ್ಷಣೆಗಳೂ ಉಂಟಾದವೆಂದು ವಿವರಿಸಲು ಪ್ರಯತ್ನಿಸುವುದರಿಂದ ನಮಗೆ ಯಾವ ಪ್ರಯೋಜನವು ದಕ್ಕುವುದಿಲ್ಲ.

ಇತ್ತೀಚಿನ ಕಾಲಗಳಲ್ಲಿ ನಾವು ಯಾವುದನ್ನು ಹಿಂದೂ ಮತ್ತು ಮುಸ್ಲಿಮ್ ಸಮುದಾಯಗಳೆಂದು ಉದ್ದೇಶಿಸುತ್ತೇವೆಯೊ, ಅವುಗಳ ನಡುವೆ ಗತಕಾಲದಲ್ಲಿದ್ದ ಸಂಬಂಧಗಳು ಭಾರತದಲ್ಲಿನ ಧರ್ಮನಿರಪೇಕ್ಷತೆ ಕುರಿತ ಅವಲೋಕನಗಳಲ್ಲಿ ಮಹತ್ವದ ವಿಷಯವಾಗಿದೆ. ಈ ಸಂಬಂಧದ ದೀರ್ಘ ಇತಿಹಾಸವನ್ನು ನೋಡುವುದಕ್ಕೆ ಪ್ರಾರಂಭಿಸಲು ಇದು ತಪ್ಪಾದ ಪೂರ್ವಗ್ರಹವೆಂದು ಸೂಚಿಸಲು ನಾನು ಇಚ್ಛಿಸುತ್ತೇನೆ. ವಿಭಿನ್ನ ನಂಬಿಕೆಗಳ ಪ್ರಶ್ನೆ ಇತ್ತು. ಇಸ್ಲಾಂ ಮತ್ತು ಹಿಂದೂ ಧರ್ಮಗಳ ಅನೇಕ ಪಂಗಡಗಳ ಆಕೃತಿಗಳ ಪ್ರಶ್ನೆ ಇತ್ತು. ಆದರೆ ಒಂದು ಸಮನಾದ, ಏಕರೂಪೀ ಹಿಂದೂ ಸಮುದಾಯದ ಅಥವಾ ಅದರಂತೆಯೆ ಮುಸ್ಲಿಂ ಸಮುದಾಯದ ಪ್ರಶ್ನೆಯು ಕಳೆದ ಕೆಲವು ಶತಮಾನಗಳವರೆಗೂ ಇರಲಿಲ್ಲ. ಅದಕ್ಕೂ ಹಿಂದೆ, ಮುಖಾಮುಖಿಯ ಪ್ರಕ್ರಿಯೆ ಸಂಭವಿಸುತ್ತಿದ್ದವು. ಕೆಲವು ಸಂದರ್ಭಗಳಲ್ಲಿ ಹೊಸ ಧಾರ್ಮಿಕ ಧ್ವನಿಗಳೂ ಇರುತ್ತಿದ್ದವು.

ಹಾಗಾದರೆ, ಈ ಗುಂಪುಗಳು ಒಬ್ಬರನ್ನೊಬ್ಬರು ಹೇಗೆ ಗ್ರಹಿಸಿದವು? ಇಂದು ಯಾರನ್ನು 'ಹಿಂದೂ'ಗಳೆಂದು ನಾವು ಕರೆಯುತ್ತೇವೆ. ಅವರು ಹಿಂದೂ ಎಂಬುದನ್ನು ತಮ್ಮ ಸ್ವಂತಿಕೆಯ ಗುರುತಾಗಿ ಬಳಸಲು ಪ್ರಾರಂಭಿಸಿದ್ದು ಹದಿನೈದನೆಯ ಶತಮಾನದ ತನಕ ಕಂಡುಬರುವುದಿಲ್ಲ. ಅದಕ್ಕೆ ಹಿಂದೆ, ಧಾರ್ಮಿಕ ಸ್ವಂತಿಕೆಯು ಪಂಗಡ ಹಾಗೂ ಜಾತಿಯನ್ನಾಧರಿಸಿತ್ತು ಮತ್ತು ಎಲ್ಲವನ್ನೂ ಒಳಗೊಂಡ

ಒಂದು ಪದದ ಅಗತ್ಯ ತೋರಿರಲಿಲ್ಲ. ಹಿಂದೂ ಎಂಬುದು ಈ ಉಪಖಂಡವನ್ನು ಇಂಡಸ್ ನದಿಯ ಆಚೆಯಿಂದ ಕಂಡವರು ಸೃಷ್ಟಿಸಿದರೆಂಬುದು ಪ್ರಸಿದ್ಧವಾದ ಸಂಗತಿ ಮತ್ತು ಆ ಹೆಸರು ಸಿಂಧೂನದಿಯಿಂದ ಉತ್ಪನ್ನವಾಯಿತು. ಇದು ಪುರಾತನ ಇರಾನಿನ ಕಾಲದಷ್ಟು ಹಿಂದಕ್ಕೆ ಹೋಗುತ್ತದೆ. ಕ್ರಿ.ಶ. ಎಂಟನೆಯ ಶತಮಾನದಲ್ಲಿ ಅರಬರು ಈ ಪ್ರದೇಶವನ್ನು ಅಲ್-ಹಿಂದ್ ಎಂದು ಕರೆದರು. ಅದು ಆರಂಭದಲ್ಲಿ ಭೌಗೋಳಿಕ ಸಂಜ್ಞೆಯಾಗಿತ್ತು ಹಾಗೂ 'ಹಿಂದೂ' ಎಂಬುದು ಒಂದು ಜನ ಸಮುದಾಯದ ಗುರುತಾಗಿತ್ತು. ನಂತರದಲ್ಲಿ ಇಸ್ಲಾಂ ಮತ್ತು ಕ್ರೈಸ್ತ ಧರ್ಮ ಬಿಟ್ಟು ಬೇರೆ ಧರ್ಮಗಳನ್ನು ಅನುಸರಿಸಿದ ಉಪಖಂಡದ ಎಲ್ಲಾ ನಿವಾಸಿಗಳಿಗೂ ಅದನ್ನು ವಿಸ್ತರಿಸಲಾಯಿತು.

ಇದರಷ್ಟೆ ಕುತೂಹಲಕಾರಿಯಾದ ಸಂಗತಿ ಎಂದರೆ ಇಸ್ಲಾಮಿನ ಅನುಯಾಯಿಗಳಾಗಿ ಭಾರತಕ್ಕೆ ಬಂದವರನ್ನು ಹಿಂದೂಗಳು ಪ್ರಾರಂಭದಲ್ಲಿ ಮುಸ್ಲೀಮರೆಂದು ಕರೆಯಲಿಲ್ಲ. ಅವುಗಳಲ್ಲಿ ತಮ್ಮದೇ ಚಾರಿತ್ರಿಕ ಆಸಕ್ತಿಗಳಿದ್ದ ವಿಭಿನ್ನ ಪ್ರಕಾರದ ಸ್ವಂತಿಕೆಗಳಿದ್ದವು. ಅರಬರು ಸಿಂಧನ್ನು ಗೆದ್ದರೂ ಸಹ ಹೆಚ್ಚುಬಾರಿ ಪಶ್ಚಿಮ ಏಷ್ಯದ ವ್ಯಾಪಾರಿಗಳಾಗಿಯೇ ಇಲ್ಲಿಗೆ ಬಂದರು. ರಾಷ್ಟ್ರಕೂಟ ಅರಸರ ರಾಜ್ಯದಲ್ಲಿ ಅವರು ಉನ್ನತ ಆಡಳಿತ ಸ್ಥಾನಗಳಲ್ಲಿ ನೇಮಕಗೊಂಡಿದ್ದರು ಮತ್ತು ಅವರನ್ನು ತಜಿಕರೆಂದು ಕರೆಯಲಾಗುತ್ತದೆ. ಮಧ್ಯ ಏಷ್ಯ ಮತ್ತು ಆಫ್‌ಘಾನಿಸ್ತಾನದಿಂದ ಬಂದ ಟರ್ಕರನ್ನು ತುರುಷ್ಕ ಎಂಬ ಜನವಾಚಕ ಹೆಸರಿನಿಂದ ಕರೆಯಲಾಗುತ್ತದೆ. ಕೆಲವರನ್ನು ಶಕರು ಮತ್ತು ಯವನರೆಂದು ಕರೆಯಲಾಗುತ್ತದೆ. ಶಕ ಎಂಬುದು ಮಧ್ಯ ಏಷ್ಯದ ಸ್ಕಿಥಿಯನ್ನರ ಹಳೆಯ ಹೆಸರು ಮತ್ತು ಯವನ ಎಂಬುದು ಗ್ರೀಕರ ಹಳೆಯ ಹೆಸರು. ಮ್ಲೇಚ್ಛ ಎಂಬ ಪದದ ಬಳಕೆಯು ಸಾಮಾಜಿಕ ಅಂತರದ ಗುರುತಾಗಿದ್ದು, ಜಾತೀಯ ಸಮಾಜದಿಂದ ಹೊರಗಿದ್ದವರನ್ನು ಸೂಚಿಸಲು ಅದನ್ನು ಉಪಯೋಗಿಸಲಾಗುತ್ತಿತ್ತು. ಆದಿವಾಸಿಗಳಿಂದ ಹಿಡಿದು ಸ್ಥಳೀಯ ರಾಜರವರೆಗೆ ಅನೇಕ ಪ್ರಕಾರದ ಜನರನ್ನು ಬೇರೆ ಬೇರೆಯಾಗಿ ಮ್ಲೇಚ್ಛ ಎಂದು ಕರೆಯಲಾಗುವುದರಿಂದ ಅದಕ್ಕೆ ಯಾವಾಗಲೂ ತಿರಸ್ಕಾರದ ಅರ್ಥವಿತ್ತೆಂದು ತಿಳಿಯಲಾಗುವುದಿಲ್ಲ.

ಈ ಪದಗಳ ಬಳಕೆಯಿಂದ ಒಂದು ಐತಿಹಾಸಿಕ ನಿರಂತರತೆ ಇದೆ, ಏಕೆಂದರೆ ಆ ಜನರನ್ನು ಅದಕ್ಕೂ ಹಿಂದೆ ಶತಮಾನಗಳಿಂದ ಸಂಪರ್ಕವಿದ್ದ ಪಶ್ಚಿಮ ಮತ್ತು ಮಧ್ಯ ಏಷ್ಯದಿಂದ ಬಂದವರೆಂದು ಅವು ಗುರುತಿಸುತ್ತವೆ. ಅಲ್ಲಿ ಬಳಸಿರುವ ಹೆಸರುಗಳು ಇಸ್ಲಾಮಿಗಿಂತ ಹಿಂದಿನ ಕಾಲದ ಹೆಸರುಗಳಿಗೆ ಹೋಲುತ್ತವೆ. ಈ ಹೆಸರುಗಳಲ್ಲಿ ಸ್ವಲ್ಪಮಟ್ಟಿಗೆ ಪರಿಚಯದ ಸೂಚನೆಯೂ ಇದೆ. ಏಕೆಂದರೆ, ಒಂದು ಸಮುದಾಯಕ್ಕೆ ಇತಿಹಾಸದಲ್ಲಿ ಹಿಂದೆ ಬಳಸಲಾದ ಹೆಸರನ್ನು ಕೊಟ್ಟರೆ ಅವರು ಸಂಪೂರ್ಣವಾಗಿ ಪರಕೀಯರೆಂದು ಪರಿಗಣಿಸಲ್ಪಡಲಿಲ್ಲವೆಂದು ತಿಳಿದು ಬರುತ್ತದೆ. ಇದರೊಂದಿಗೆ ಮತ್ತೊಂದು ಆಶ್ಚರ್ಯಕರ ಸಂಗತಿ ಎಂದರೆ ಟರ್ಕರು ಮತ್ತು ಅರಬ್ಬರು ತಮ್ಮನ್ನು ಒಂದೇ ಇಸ್ಲಾಮಿನ ದಂಡಿಗೆ ಸೇರಿದವರಾಗಿ ಬಗೆಯುವ ಹಾಗೆ ತೋರುವುದಿಲ್ಲ.

ಟರ್ಕಿ ಮತ್ತು ಪರ್ಶಿಯದ ಕಾಲಾನುಕ್ರಮ ಚರಿತ್ರೆಗಳಲ್ಲಿ ಭಾರತದಲ್ಲಿ ನಡೆದ ದಂಡಯಾತ್ರೆಗಳು ಮತ್ತು ದೆಹಲಿ ಸುಲ್ತಾನಶಾಹಿಯ ಮೂಲಕ ಇಸ್ಲಾಮಿನ ಆಳ್ವಿಕೆಯ ಸ್ಥಾಪನೆಯನ್ನು ಸಂಪೂರ್ಣವಾಗಿ ಘುಸ್ನಿ ಮಹಮ್ಮದನಿಗೆ ಆರೋಪಿಸಲಾಗಿದೆ. ಅರಬ್ಬರ ಸಂಪರ್ಕಗಳು ಮತ್ತು ದಂಡಯಾತ್ರೆಗಳು ಮಹಮ್ಮದನಿಗೆ ಹಿಂದಿನಿಂದಿದ್ದರೂ ಸಾಮಾನ್ಯವಾಗಿ ಅವರನ್ನು ನಿರ್ಲಕ್ಷಿಸಲಾಗಿದೆ.

ಭಾರತದ ಮುಸ್ಲಿಮರಲ್ಲಿ ಇಸ್ಲಾಮಿಗೆ ಪರಿವರ್ತಿತರಾದ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಗತಕಾಲದ ಧರ್ಮಾಂತರ ಪ್ರಕ್ರಿಯೆಯ ಬಗ್ಗೆ ಅಮೂಲಾಗ್ರವಾದ ಅಧ್ಯಯನದ ಅಗತ್ಯವಿದೆ, ಏಕೆಂದರೆ, ಈ ಪರಿವರ್ತನೆಯನ್ನು ಕುರಿತಂತೆ ಅನೇಕ ಜನಪ್ರಿಯ ತಪ್ಪು ಗ್ರಹಿಕೆಗಳಿವೆ. ಟರ್ಕಿ ಮತ್ತು ಪರ್ಶಿಯದ ಕಾಲಾನುಕ್ರಮ ಚರಿತ್ರೆಗಳು ನಿಗದಿಪಡಿಸಿದ ಸಂಖ್ಯೆಗಳನ್ನು ಸೂಚಿಸುವಂತೆ ತೋರುತ್ತದೆ. ಅವು ಕೆಲವೊಮ್ಮೆ ಐವತ್ತು ಸಾವಿರ ಅವಿಶ್ವಾಸಿಗಳು ಕೊಲ್ಲಲ್ಪಟ್ಟದ್ದಾಗಿ ಅಥವಾ ಧರ್ಮಾಂತರಗೊಳಿಸಲ್ಪಟ್ಟದ್ದಾಗಿ ಮತ್ತು ಅಷ್ಟೇ ಸಂಖ್ಯೆಯ ಮುಸಲ್ಮಾನ ಪಾಖಂಡಿಗಳು ಮಹಮ್ಮದ ಘುಸ್ನಿಯಂತಹ ಉತ್ಕಟ ಸುನ್ನಿ ಮುಸಲ್ಮಾನ ಆಕ್ರಮಣಕಾರರಿಂದ ಕೊಲ್ಲಲ್ಪಟ್ಟದ್ದಾಗಿ ಹೇಳುತ್ತವೆ. ಈ ಸಂಖ್ಯೆ ಕಾಲ್ಪನಿಕವೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಅದನ್ನು ಹಾಗೆಯೆ ಯಾವ ಸಂದರ್ಭದಲ್ಲಿ ಬೇಕಾದರೂ ಬಳಸಬಹುದು ಮತ್ತು ಅದು ನಮಗೆ ಏನನ್ನೂ ತಿಳಿಸಕೊಡುವುದಿಲ್ಲ. ಇಸ್ಲಾಮಿಗೆ ಪರಿವರ್ತನೆ ಹೊಂದಿದ್ದರ ಬಗ್ಗೆ ಕುತೂಹಲಕಾರಿಯಾದುದೇನೆಂದರೆ ಅವುಗಳಲ್ಲಿ ಎರಡು ಮುಖ್ಯ ಪ್ರಭೇದಗಳಿದ್ದವು; ಒಂದು, ಒಬ್ಬ ವ್ಯಕ್ತಿ ನಿಷ್ಠೆಯಿಂದಾಗಿ ಪರಿವರ್ತಿತನಾಗಿರಬಹುದು ಅಥವಾ ಕೆಲವು ರಜಪೂತರಂತೆ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿದ್ದವರು ರಾಜಕೀಯ ಅನುಕೂಲಕ್ಕಾಗಿ ಪರಿವರ್ತನೆ ಹೊಂದಿರಬಹುದು. ಮತ್ತೊಂದು, ಜಾತ್ಯಾಧಾರಿತ ಪರಿವರ್ತನೆಗಳು. ಇಲ್ಲಿ ಒಂದು ಇಡೀ ಜಾತಿಯೇ ಪರಿವರ್ತನೆ ಹೊಂದುತ್ತಿತ್ತು ಮತ್ತು ಇವೇ ಹೆಚ್ಚು ಸಂಖ್ಯೆಯಲ್ಲಿ ನಡೆಯುತ್ತಿದ್ದವು ಹಾಗೂ ಹೆಚ್ಚು ಪ್ರಚಲಿತವಾಗಿದ್ದವು.

ಪರಿವರ್ತನೆಗಳು ಜಾತಿಯನ್ನಾಧರಿಸಿದ್ದವೆಂದ ಮೇಲೆ, ಪರಿವರ್ತನೆ ಅಥವ ಸಾವಿನ ನಡುವೆ ಒಂದನ್ನು ಆಯ್ಕೆ ಮಾಡಬೇಕೆಂಬ ಕಥೆಗಳು ನಿಸ್ಸಂದೇಹವಾಗಿ ಉತ್ಪ್ರೇಕ್ಷೆಗಳು ಕೆಲವು ಸಂದರ್ಭಗಳಲ್ಲಿ ಬೆದರಿಕೆಗಳಿದ್ದಿರಬಹುದು. ಆದರೆ, ಇದು ಎಲ್ಲರಿಗೂ ಸಲ್ಲುವ ನಿಯಮವಾಗಿರಲಿಲ್ಲ ಎಂಬುದು ಸ್ಪಷ್ಟವಾಗಿದೆ. ಒಂದೇ ಹಳ್ಳಿ ಅಥವಾ ಪಟ್ಟಣದಲ್ಲಿ ಏತಕ್ಕಾಗಿ ಕೆಲವು ಜಾತಿಗಳು ಪರಿವರ್ತನೆ ಹೊಂದುತ್ತವೆ ಮತ್ತೆ ಇತರ ಜಾತಿಗಳು ಹೊಂದುವುದಿಲ್ಲ ಎಂಬ ಪ್ರಶ್ನೆಯು ಮಹತ್ವವುಳ್ಳದ್ದು. ಅಲ್ಲದೆ, ಜಾತ್ಯಾಧಾರಿತ ಪರಿವರ್ತನೆ ಆದಾಗಿ ವಿಶೇಷವಾಗಿ ಮದುವೆ ಮತ್ತು ಬಾಂಧವ್ಯ ಬೆಳೆಸುವ ಸಂಬಂಧಗಳು, ಉತ್ತರಾಧಿಕಾರಿ ಮತ್ತು ಆ ಜಾತಿಯ ಸಾಂಪ್ರದಾಯಿಕ ಕಾನೂನಿಗೆ ಸಂಬಂಧಪಟ್ಟ ಅನೇಕ ಆಚರಣೆಗಳನ್ನು ಕೈ ಬಿಡುತ್ತಿರಲಿಲ್ಲ. ಆಯಾಯ ಜಾತ್‌ನ ಕಟ್ಟಳೆಗಳನ್ನು ಉಳಿಸಿಕೊಂಡಿರುವ ಸಾಮಾಜಿಕ ಆಚರಣೆಗಳಿಂದ ಇದು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ರಾಜಸ್ಥಾನದ ಮಿಯೋಗಗಳು ಮುಸ್ಲಿಮರಾದರೂ ತಮ್ಮ ಸಾಮಾಜಿಕ ಅಂತಸ್ತಿನ ಮುಸ್ಲಿಮೇತರರಲ್ಲಿ ಚಾಲ್ತಿಯಲ್ಲಿರುವ, ಆದರೆ ಅದೇ ಪ್ರದೇಶದ ಮುಸಲ್ಮಾನ ರಜಪೂತರಿಂದ ಆಚರಿಸಲ್ಪಡದ ವಿಶೇಷ ಸಾಮಾಜಿಕ ಪದ್ಧತಿಗಳನ್ನು ಈಗಲೂ ಆಚರಿಸುತ್ತಾರೆ. ಪರಿವರ್ತನೆಗೊಂಡ ಮೇಲ್ಜಾತಿಯವರು ಷರೀಯತ್‌ಅನ್ನು ಪಾಲಿಸಲು ಹೆಚ್ಚು ಉತ್ಸುಕರಾಗಿರುತ್ತಾರೆ. ಹೇಗೇ ಇರಲಿ, ಅವರ ಜಾತಿಯ ಆಚರಣೆಗಳು ಕೆಳ ಅಂತಸ್ತಿನ ಮಿಯೋಗಗಳಿಗಿಂತ ಬೇರೆಯಾಗಿರುತ್ತವೆ. ಇಂತಹ ಪರಿಸ್ಥಿತಿಯು ಉಪಖಂಡದ ಬೇರೆ ಭಾಗಗಳಲ್ಲಿ ಕೊನೆಯಿಲ್ಲದ ಪುನರಾವೃತ್ತಿಯನ್ನು ಕಾಣುತ್ತದೆ.

ಪದ್ಧತಿಗಳು ಮತ್ತು ಧಾರ್ಮಿಕ ಆಚರಣೆಗಳೆರಡನ್ನೂ ಜಾತಿಯ ನಿರ್ದಿಷ್ಟ ಸ್ವಂತಿಕೆಗಳು ನಿರ್ಧರಿಸುತ್ತಿದ್ದವು. ಶತಮಾನಗಳ ಹಿಂದೆ ಬಂದ ಅರಬ್ಬಿ ವ್ಯಾಪಾರಿಗಳು ಕಾಲಾನುಕ್ರಮದಲ್ಲಿ ಸ್ಥಳೀಯ ಹೆಂಡತಿಯರು ಮತ್ತು ಆಚರಣೆಗಳನ್ನು ಪಡೆದುಕೊಂಡರು. ಅವರ ಪೀಳಿಗೆಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಅನೇಕ ಸಮುದಾಯಗಳು ಪಶ್ಚಿಮ ತೀರದುದ್ದಕ್ಕೂ ಇವೆ. ಕೆಲವನ್ನು ಮಾತ್ರ ಹೆಸರಿಸುವುದಾದರೆ-ಖೋಜ, ಬೊಹರ, ನವಾಯತ್, ಮಾಪಿಲ್ಲಾಗಳು ಆಚರಿಸುತ್ತಿದ್ದ ಇಸ್ಲಾಂ ಧರ್ಮವು ಉತ್ತರ ಪ್ರದೇಶ ಮೊಮಿನ್ ನೇಕಾರರಿಗೆ ಮಾನ್ಯವಾಗದಿರಬಹುದು. ಅತ್ಯಂತ ಹೆಚ್ಚಿನ ಮುಸಲ್ಮಾನ ಜನರು ಕೆಳಜಾತಿಗೆ ಸೇರಿದವರೆಂದು 1881ರ ಬಿಜಾಪುರದ ಗೆಝೆಟಿಯರ್ ವಿವರಿಸುತ್ತದೆ. ಅವರು ತಮ್ಮ ಮೂಲ ಜಾತಿಗಳ ಹೆಸರುಗಳನ್ನು ಉಳಿಸಿಕೊಂಡರಲ್ಲದೆ ಹಿಂದೂ ದೇವರುಗಳನ್ನು ಪೂಜಿಸುವುದಾಗಿ, ಹಿಂದೂ ಹಬ್ಬಗಳನ್ನು ಆಚರಿಸುವುದಾಗಿ, ಗೋಮಾಂಸ ತಿನ್ನುವುದನ್ನು ನಿಷೇಧಿಸಿದ್ದಾಗಿ ಮತ್ತು ಪ್ರಾರ್ಥನೆಗಾಗಿ ಮಸೀದಿಗೆ ಅಪರೂಪವಾಗಿ ಮಾತ್ರ ಹೋಗುವುದಾಗಿ ಹೇಳಿಕೊಂಡಿದ್ದಾರೆ. ಈ ಗುಂಪುಗಳನ್ನು ಹಿಂದೂ ಎಂದಾಗಲಿ ಮುಸ್ಲಾಮರೆಂದಾಗಲಿ ನಾವು ಪೂರ್ವಭಾವಿಯಾಗಿ ಅವಸರದಿಂದ ಗುರುತಿಸಲು ಹೊರಟ್ಟಿದ್ದೇವೆಯೆ? ಏಕೆಂದರೆ ಅವರನ್ನು ಹಿಂದೂವಾಗಿಸಲ್ಪಟ್ಟ ಮುಸಲ್ಮಾನರು ಅಥವಾ ಇಸ್ಲಾಮೀಕರಣಗೊಂಡ ಹಿಂದುಗಳು ಎಂದು ವರ್ಣಿಸುವುದು ಹೆಚ್ಚು ಸಮರ್ಪಕವಾಗುತ್ತದೆ. ಅವರು ಮತ್ತು ಅವರಂತೆ ಇರುವ ಇತರರು, ಈಗ ಮುಸಲ್ಮಾನ ಅಥವ ಹಿಂದೂ ಎಂದು ಪಟ್ಟಿ ಮಾಡಲ್ಪಟ್ಟ ಇವರೇ ನಿಜವಾಗಿಯೂ ಬಹುಸಂಖ್ಯಾತರು. ಇವರ ಧರ್ಮವು ನಾನು ಈಗಾಗಲೇ ಉಲ್ಲೇಖಿಸಿದ 'ಪ್ರತಿ-ಸಂಸ್ಕೃತಿ'ಯ ಭಾಗವಾಗಿತ್ತು. ಅವು ಮೇಲ್ವರ್ಗದವರ ಧರ್ಮಗಳ ಸಂಪ್ರದಾಯಿಕತೆಗೆ ಬದ್ಧರಾಗಿರಲಿಲ್ಲ ಮತ್ತು ಅವು ಒಂದು ಸಮಾನವಾದ, ಏಕರೂಪೀ ಸಮುದಾಯವನ್ನು ನಿರ್ಮಿಸಲಿಲ್ಲ'.

ಧಾರ್ಮಿಕ ಆಚರಣೆಗಳು ಸಮಾನವಾಗಿ ಆಚರಿಸಲ್ಪಡುತ್ತವೆ ಎನ್ನಲಾದರೂ ಅವುಗಳಿಗಿಂತ ಭಾರತೀಯ ಸಾಮಾಜಿಕ ರಚನೆಯು ಪ್ರಾಮುಖ್ಯತೆ ಪಡೆಯುತ್ತದೆಂದು ಗೋಚರವಾಗುತ್ತದೆ. ಆದರೆ ನೈಜ ಆಚರಣೆಗಳು ಹಿಂದೂಗಳಲ್ಲದವರಲ್ಲಿ ಕೂಡ ಧರ್ಮದ ನಿಯಮಗಳಿಗಿಂತ ಜಾತಿಯ ನಿಯಮಗಳಿಗೆ ಹೆಚ್ಚು ಸಮ್ಮತವಾಗಿರುತ್ತವೆ.

ಇದು ಖಂಡಿತವಾಗಿ ಇತ್ತೀಚಿನ ಕಾಲಗಳಲ್ಲಿ ಬದಲಾಗುತ್ತಿದೆ. ಅಪಾಯಕ್ಕೆ ಈಡಾಗಬಹುದಾದ ಅಲ್ಪಸಂಖ್ಯಾತರು ಎನ್ನುವ ಭಯವು ಧಾರ್ಮಿಕ ಆಚರಣೆಗಳನ್ನು ಸಮರೂಪಗೊಳಿಸಲು ಮತ್ತು ಧಾರ್ಮಿಕ ಸ್ವಂತಿಕೆಗಳನ್ನು ರಾಜಕೀಯಗೊಳಿಸಲು ಉತ್ತೇಜಿಸುತ್ತಿದೆ. ಕಳೆದ ಕೆಲವು ತಿಂಗಳುಗಳಿಂದ ಹಿಂದುಗಳಲ್ಲದವರೆಂದು ಗುರುತಿಸಲಾದ ಜನರ ಮೇಲೆ ಮತ್ತು ಅವರ ಆಸ್ತಿಗಳ ಮೇಲೆ ನಡೆಯುತ್ತಿರುವ ನಿಯಂತ್ರಣವಿಲ್ಲದ ಹಲ್ಲೆಗಳಿಂದ ಈ ಆತಂಕಗಳು ಸಮರ್ಥನೀಯ ಎಂಬುದು ಹೇರಳವಾಗಿ ಪ್ರದರ್ಶಿತವಾಗುತ್ತಿದೆ.

ಆದ್ದರಿಂದ, ಇಸ್ಲಾಮಿನ ಆಗಮನವು ಹಿಂದೂ ಮತ್ತು ಮುಸ್ಲಿಂ ಎಂಬ ಪರಸ್ಪರ ವಿರುದ್ಧವಾದ ಎರಡು ಏಕರೂಪೀ ಸಮುದಾಯಗಳನ್ನು ಸೃಷ್ಟಿಸಲಿಲ್ಲ. ಇದು ಭಾರತೀಯ ಗತಕಾಲದ ಕೋಮುವಾದಿ ವ್ಯಾಖ್ಯಾನವನ್ನು ಬೆಂಬಲಿಸುವವರ ನಂಬಿಕೆಗೆ ವಿರುದ್ಧವಾಗಿವೆ. ಕಳೆದ ಸಾವಿರ ವರ್ಷಗಳ ಇತಿಹಾಸದ ವಾಚಿಕೆಗಳು ಬಹಳವಾಗಿ ಆಸ್ಥಾನಗಳ ಕಾಲಾನುಕ್ರಮ ಬರವಣಿಗೆಗಳ ಮೇಲೆ ಆಧಾರಿತವಾಗಿವೆ. ಅವುಗಳಿಗೆ ಹಲವು ಉದ್ದೇಶಗಳಿದ್ದವು, ಅದರಲ್ಲಿ ಇಸ್ಲಾಮಿನ ಧಾಳಿಗಳು ಮತ್ತು ಪರಿವರ್ತನೆಯ ಕಥಾನಕಗಳ ಉತ್ಪ್ರೇಕ್ಷೆಯೂ ಸೇರಿದೆ. ಈಗ ಇವುಗಳನ್ನು ಯಥಾವತ್ತಾಗಿ ಸ್ವೀಕರಿಸಲಾಗುತ್ತಿಲ್ಲ ಮತ್ತು ಇವನ್ನು ಹೆಚ್ಚು ವಿಶ್ಲೇಷಣಾತ್ಮಕವಾಗಿ ಪರೀಕ್ಷಿಸಲು ಪ್ರಾರಂಭಿಸಲಾಗಿದೆ. ಧಾರ್ಮಿಕ ಅಥವ ಬೇರೆ ಯಾವ ಮೂಲಗಳಿಂದಲೇ ಬಂದಿರಲಿ, ಈ ಪ್ರಕ್ರಿಯೆಯನ್ನು ಇತಿಹಾಸಜ್ಞರು ಎಲ್ಲ ರೀತಿಯ ಸಾಕ್ಷಿಗಳಿಗೂ ಅಳವಡಿಸಬೇಕು. ಇವುಗಳಲ್ಲದ ಬೇರೆ ವಿವರಗಳೂ ಇವೆ. -ಇವುಗಳಲ್ಲಿ ಪ್ರಾದೇಶಿಕ ಮತ್ತು ಸ್ಥಳೀಯ ಚರಿತ್ರೆಯ ವಿವಿಧ ರೀತಿಯ ಪಠ್ಯಗಳು, ಜನಪ್ರಿಯ ಧಾರ್ಮಿಕ ಪಂಗಡಗಳಿಗೆ ಸೇರಿದ ರಚನೆಗಳು, ಮೌಖಿಕ ಸಂಪ್ರದಾಯದ ಜಾನಪದ ಸಾಹಿತ್ಯ ಮತ್ತು ಜಗತ್ತಿನ ಬಗ್ಗೆ ನೋಟಗಳ ಸಚಿತ್ರ ನಿರೂಪಣೆಯೂ ಸೇರಿವೆ. ಇವು, ಹಿಂದಿನ ಕಾಲದ ಸಮಾಜಗಳ ಬಗ್ಗೆ ಬೇರೆಯಾದ ದೃಷ್ಟಿಕೋನಕ್ಕೆ ನಮ್ಮನ್ನು ಸ್ಪಂದಿಸಲು ಪ್ರಾರಂಭಿಸುತ್ತಿವೆ.

ಇದರಿಂದ ಸಾಂಸ್ಕೃತಿಕ ಬದಲಾವಣೆ ಮತ್ತು ಸಾಮಾಜಿಕ ಸಂಧಾನದ ನಿರಂತರ ಪ್ರಕ್ರಿಯೆಗಳನ್ನೊಳಗೊಂಡ ಚಿತ್ರವು ಹೊರಹೊಮ್ಮುತ್ತದೆ. ಈ ಪ್ರಕ್ರಿಯೆಯನ್ನು ಬಹಳ ಹಿಂದಿನ ಕಾಲದವರೆಗೂ ಗುರುತಿಸಬಹುದು ಮತ್ತು ಅದು ಅನಂತರದಲ್ಲಿ ಕೂಡ ಮುಂದುವರೆಯಿತು. ಆದರೆ ಆ ಪ್ರಕ್ರಿಯೆಯ ಅಂಗಗಳು ಬದಲಾವಣೆ ಹೊಂದಿದವು. ಹಗೆತನ ಅಥವ ಮೈತ್ರಿ ಸಂದರ್ಭದಿಂದ ಸಂದರ್ಭಕ್ಕೆ ಬದಲಾಗುತ್ತಿತ್ತು. ಪರಿವರ್ತನೆ ಹೊಂದಲು ಬಯಸಿದವರು ಬೇರೆ ಸಮಾಜವನ್ನು ಆಶಿಸುತ್ತಿದ್ದರು. ಅಥವ ಇತರ ಪ್ರಯೋಜನಗಳನ್ನು ಆಶಿಸುತ್ತಿದ್ದರು ಮತ್ತು ಇದಕ್ಕೆ ಕೊಡಕೊಳ್ಳುವಿಕೆಯ ಅಗತ್ಯವಿರುತ್ತಿತ್ತು. ಹೊಸ ಆಚರಣೆಗಳನ್ನು ಎಷ್ಟು ಮಟ್ಟಿಗೆ ಅನುಸರಿಸಬೇಕೆಂಬ ಆಯ್ಕೆಯು ಗುಂಪಿನಿಂದ ಗುಂಪಿಗೆ ಅದರ ಆಸಕ್ತಿಗನುಗುಣವಾಗಿ ಬೇರೆಯಾಗಿತ್ತು. ಇದು ಪ್ರಾದೇಶಿಕ ಸಮುದಾಯಗಳ ಮತ್ತು ಕೆಳಜಾತೀಯ ಗುಂಪುಗಳ ಅಧ್ಯಯನಗಳಲ್ಲಿ ಪ್ರತಿಬಿಂಬಿತವಾಗಿದೆ. ನಮ್ಮ ಗತಕಾಲದ ಅಧ್ಯಯನಗಳಲ್ಲಿ ಬದಿಗೊತ್ತಲ್ಪಟ್ಟ ಈ ಜನರೇ ಹಿಂದೆಯೂ ಮತ್ತು ಈಗಲೂ, ನಿಜವಾದ ಬಹುಸಂಖ್ಯಾತರೇ ಹೊರತು ಬ್ರಾಹ್ಮಣೀಕರಣಗೊಂಡ ಹಿಂದೂ ಅಥವ ಮುಲ್ಲಾಗಳು ನಿರ್ಧರಿಸದಂತಹ ಮುಸಲ್ಮಾನರಲ್ಲ.

ಮೂರನೆಯ ಅಂಶವಾದ ರಾಜಶ್ರಯಕ್ಕೆ ಬರುವುದಾದರೆ, ಇದನ್ನು ಹೆಚ್ಚಾಗಿ ರಾಜಕೀಯ ಯುಕ್ತತೆಯ ವಿಚಾರವೆಂದು ವಿಶ್ವದಾದ್ಯಂತ ಪರಿಗಣಿಸಲಾಗಿದೆ. ಆದರೂ ಪದೆ ಪದೆ ಅದನ್ನು ಸಹೃದಯತೆ ಎಂದು ಮರೆಮಾಚುವ ಪ್ರಯತ್ನಗಳನ್ನು ಮಾಡಲಾಗುತ್ತಿವೆ. ಭಾರತದಲ್ಲಿ ಆಳಿದ ರಾಜವಂಶಗಳು ಅನೇಕ ರೀತಿಯ ಧಾರ್ಮಿಕ ಪಂಗಡಗಳಿಗೆ ವಿಶೇಷ ಆದ್ಯತೆ ನೀಡುವ ಅಗತ್ಯದ ಬಗ್ಗೆ ಪಾರದರ್ಶಿಕತೆಯನ್ನು ಕಾಪಾಡಿಕೊಂಡಿವೆ. ರಾಜನ ಸ್ವಂತ ಅಭಿಲಾಷೆ ಬೌದ್ಧಧರ್ಮದ್ದಾದರೂ ಬ್ರಾಹ್ಮಣರು ಮತ್ತು ಶ್ರಮಣರಿಬ್ಬರನ್ನೂ ಗೌರವಿಸಬೇಕಾಗಿ ಮೌರ್ಯ ಚಕ್ರವರ್ತಿ ಅಶೋಕನ ಶಾಸನಗಳು ಒತ್ತಾಯಿಸುತ್ತವೆ. ಇಕ್ಷ್ವಾಕು ವಂಶವು ಲಿಂಗಾಧಾರಿತ ಹಂಚಿಕೆಯನ್ನು ಬೆಂಬಲಿಸುವಂತೆ ತೋರುತ್ತದೆ : ಪುರುಷರು ವೈದಿಕ ಯಾಗಾದಿ ಆಚರಣೆಗಳನ್ನು ಪೋಷಿಸುತ್ತಿದ್ದರು ಹಾಗೂ ಸ್ತ್ರೀಯರು ಬೌದ್ಧ ಸಂಘಕ್ಕೆ ದಾನಗಳನ್ನು ನೀಡುತ್ತಿದ್ದರು. ಏಳನೆಯ ಶತಮಾನದ ದೊರೆ ಕನೋಜದ ಹರ್ಷನು ಬೌದ್ಧರ ಆಶ್ರಯದಾತನೊ ಅಥವ ಶೈವರ ಆಶ್ರಯದಾತನೊ ಎಂಬ ವಿವಾದವು ಈಗಲೂ ನಡೆಯುತ್ತಿದೆ. ಏಕೆಂದರೆ ಅವನು ಪ್ರತಿಯೊಬ್ಬರಿಗೂ ಸಮವಾಗಿ ದಾನಗಳನ್ನು ನೀಡುತ್ತಿದ್ದ. ಸೋಲಂಕಿಗಳು ಗುಜರಾತಿನಲ್ಲಿ ಜೈನ ದೇವಾಲಯಗಳ ನಿರ್ಮಾಣವನ್ನು ಪ್ರೋತ್ಸಾಹಿಸಿದರು. ತಮ್ಮೊಡನೆ ವ್ಯಾಪಾರದಲ್ಲಿ ತೊಡಗಿದ್ದ ಅರಬ್ಬರಿಗಾಗಿ ಒಂದು ಮಸೀದಿಯನ್ನೂ ಕಟ್ಟಿಸಿದರು. ಹಾಗೆಯೇ ಮೊಗಲರು ಅಂದರೆ ಔರಂಗಜೇಬನೂ ಸೇರಿದಂತೆ, ಸೂಫಿಗಳು ಮತ್ತು ಬ್ರಾಹ್ಮಣರಿಗೆ ಸಹಾಯಧನ ನೀಡುತ್ತಿದ್ದರು, ದೇವಸ್ಥಾನಗಳು ಮತ್ತು ಮಸೀದಿಗಳ ನಿರ್ಮಾಣಕ್ಕೆ ಸಹಾಯ ಮಾಡುತ್ತಿದ್ದರು ಮತ್ತು ಜೋಗಿಗಳ ಮಠಗಳ ನಿರ್ವಹಣೆಗೆ ಕೂಡ ದಾನ ನೀಡುತ್ತಿದ್ದರು. ಅಕ್ಬರನು ಪ್ರಚಾರದಲ್ಲಿದ್ದ ಧರ್ಮಗಳ ಅಂಶಗಳನ್ನು ಕೂಡಿಸಿ ಒಂದು ಹೊಸ ಧರ್ಮವನ್ನೇ ಸೃಷ್ಟಿಸಿದನು, ಆದರೆ ಅದು ನಿರೀಕ್ಷಿಸಿದಂತೆ ಉಳಿಯಲಿಲ್ಲ.

ಕ್ರಿ.ಶ. ಎಂಟನೆಯ ಶತಮಾನದಿಂದ ಮುಂದೆ ಬಹಳ ಸಲ ನಡೆದದ್ದೇನೆಂದರೆ, ಅಜ್ಞಾತ ಮೂಲಗಳುಳ್ಳ ಪರಿವಾರಗಳು ಆಳುವವರಾಗಿ ಏಳಿಗೆ ಹೊಂದಿದಾಗ ಅವರು ತಮ್ಮ ಸಾಂಪ್ರದಾಯಿಕ ಪಂಥಗಳನ್ನು ಮೇಲೆತ್ತಿದರು ಮತ್ತು ಅವುಗಳನ್ನು ಹೆಚ್ಚು ಸ್ಥಾಪಿತ ಧರ್ಮಗಳ ಆಚರಣೆಗಳಲ್ಲಿ ಲೀನಗೊಳಿಸಿದರು. ಇದಕ್ಕೆ ವಿರುದ್ಧವಾದ ಪ್ರಕ್ರಿಯೆಯೂ ಇತ್ತು. ರಾಜಕೀಯ ಸ್ಥಿರತೆಗಾಗಿ ಬದಿಗೊತ್ತಲ್ಪಟ್ಟ ಪಂಥಗಳ ನಿಷ್ಠೆಯು ಅಗತ್ಯವಾಗಿತ್ತು. ಅಂತಹ ಪಂಥಗಳನ್ನು ರಾಜಮನೆತನಗಳು ಪೋಷಿಸಿದವು. ರಾಜಪೋಷಣೆ ಜನಪ್ರಿಯ ಧಾರ್ಮಿಕ ಪಂಗಡಗಳಿಗೆ ಹೆಚ್ಚಿನ ಬಲವನ್ನು

ನೀಡಿತು. ಹೀಗೆಯೇ ದೇವಗಿರಿಯ ಯಾದವರು ವಿಠೋಬ ಪಂಥದ ಪೋಷಕರಾದರು, ಅದು ಮೂಲತಃ ಆ ಪ್ರದೇಶದ ಗೊಲ್ಲರ ಪಂಥವಾಗಿತ್ತು. ಒರಿಸ್ಸಾದ ಜಗನ್ನಾಥ ಪಂಥಕ್ಕೂ ಇದೇ ರೀತಿಯ ಜಾನಪದ ಮತ್ತು ಆದಿವಾಸಿ ಮೂಲಗಳಿವೆ ಎಂದು ವಾದಿಸಲಾಗಿದೆ.

ಈ ಹಲವಾರು ಚಟುವಟಿಕೆಗಳು ಒಂದುಗೂಡಿಸುವ ಗುಣ ಹೊಂದಿದ್ದರೆ, ಇನ್ನು ಕೆಲವು ಪ್ರತ್ಯೇಕಗೊಳಿಸುವ ಗುಣವನ್ನು ಹೊಂದಿದ್ದವು. ದೇವಾಲಯಗಳ ನಾಶವು ಇವುಗಳಲ್ಲೊಂದಾಗಿತ್ತು. ದೇವಾಲಯಗಳು ಧಾರ್ಮಿಕ ಪಂಥಗಳ ಜೊತೆಗೆ ಶ್ರದ್ಧೆಯ ಸಂಕೇತಗಳಾಗಿದ್ದವು. ಅವು ಸಾಂಸ್ಕೃತಿಕ ಸಂಕೇತಗಳು ಮತ್ತು ಆರ್ಥಿಕ ಖಜಾನೆಗಳು ಕೂಡ ಆಗಿದ್ದವು. ಅವು ಅರಸೊತ್ತಿಗೆಯಿಂದ ನಿರ್ಮಿಸಲ್ಪಟ್ಟಾಗ ರಾಜಕೀಯವಾಗಿ ಮಹತ್ವ ಹೊಂದಿರುತ್ತಿದ್ದವು. ದೇವಾಲಯಗಳ ಮೇಲೆ ಧಾಳಿಗಳು ಇಸ್ಲಾಮ್ ಬರುವ ಹಿಂದೆಯೇ ಪ್ರಾರಂಭವಾದವು. ಶೈವರು ಮತ್ತು ಜೈನರ ನಡುವೆ ನಡೆದ ಹಾಗೆ ಕೆಲವು ಸಲ ಧಾರ್ಮಿಕ ಶತೃತ್ವದಿಂದ ಆದವು. ಕಾಶ್ಮೀರದಲ್ಲಿ ನಡೆದ ಹಾಗೆ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದ ರಾಜರಿಂದ ಕೆಲವು ಸಂಭವಿಸಿದವು. ಜಯಶಾಲಿಗಳಾದ ರಾಷ್ಟ್ರಕೂಟರು ಪರಮಾರರ ವಿರುದ್ಧ ನಡೆಸಿದ ಹಾಗೆ ದಂಡಯಾತ್ರೆಯಲ್ಲಿ ವಿಜಯದ ಪ್ರತೀಕವಾಗಿ ಕೆಲವು ಅಪವಿತ್ರಗೊಂಡವು.

ದೇವಾಲಯದ ಆರಾಧನೆಯ ಸ್ಥಳ ಮಾತ್ರವಾಗಿರಲಿಲ್ಲ. ಚರ್ಚ್ ಮತ್ತು ಮಸೀದಿಯಂತೆ ಅದೂ ಒಂದು ಸಂಸ್ಥೆಯಾಗಿತ್ತು. ಆದ್ದರಿಂದ ದೇವಾಲಯಗಳ ನಾಶಪಡಿಸುವಿಕೆಯನ್ನು ಏಕಪ್ರಕಾರವಾದ ತೀವ್ರ ಶ್ರದ್ಧೆಯ ಪ್ರಕಟಣೆ ಎಂದು ಸುರಳೀಕೃತ ರೀತಿಯಲ್ಲಿ ವಿವರಿಸಿ ಬಿಡಲಾಗುವುದಿಲ್ಲ. ಈ ಕಾರ್ಯದ ಇತರ ಆಯಾಮಗಳನ್ನೂ ಅರ್ಥಮಾಡಿಕೊಳ್ಳಬೇಕು. ಈ ಗ್ರಹಿಕೆಯು ರಾಜಕೀಯ ಮತ್ತು ಆರ್ಥಿಕ ಯುಕ್ತತೆ, ಅಧಿಕಾರದ ಪ್ರದರ್ಶನ ಮತ್ತು ದ್ರೋಹಕ್ಕಾಗಿ ಶಿಕ್ಷೆಯಂತಹ ವಿಷಯಗಳಿಗೆ ಬಹಳ ಸಲ ಸಂಬಂಧಪಟ್ಟಿರುತ್ತದೆ. ಮೂರ್ತಿ ಭಂಜನೆ, ಸಂಪತ್ತಿನ ಅಪಹರಣ ಮತ್ತು ವಿನಾಶವನ್ನು ಗೆಲ್ಮೆಯ ಸಂಕೇತವಾಗಿ ತೋರಿಸುವುದು. ಇವುಗಳಿಂದ ಪ್ರಯೋಜನ ಪಡೆಯಲು ಟರ್ಕಿಯ ಆಕ್ರಮಣಕಾರರು ದೇವಾಲಯಗಳನ್ನು ಧ್ವಂಸ ಮಾಡಿದರು.

ಭಾರತದಲ್ಲಿ ರಾಜಾಶ್ರಯದ ಗುಣವಿಶೇಷವೇನೆಂದರೆ : ಅದು ಒಂದೇ ವಂಶದಲ್ಲಿ ರಾಜನಿಂದ ರಾಜನಿಗೆ ಬದಲಾಗಬಹುದಿತ್ತು. ಸ್ವೀಕರಿಸುವವರ ಆಯ್ಕೆಯು ರಾಜನ ವೈಯಕ್ತಿಕ ಒಲವುಗಳು ಮತ್ತು ರಾಜನೀತಿಗಳ ಮೇಲೆ ಅವಲಂಬಿಸಿತ್ತು. ರಾಜನ ಧರ್ಮ ಯಾವುದೇ ಇರಲಿ, ನಿಷ್ಪಕ್ಷಪಾತವೆಂದು ಹೇಳಲಾಗದಿದ್ದರೂ ಅನೇಕ ಧಾರ್ಮಿಕ ಪಂಗಡಗಳಿಗೆ ಆಶ್ರಯ ಕೊಡುವ ಈ ನೀತಿಯು ಧರ್ಮನಿರಪೇಕ್ಷತ್ವವೇನಲ್ಲ. ಅದು ಕೆಲವು ಧಾರ್ಮಿಕ ಪಂಗಡಗಳನ್ನು ನಿರಾತಂಕವಾಗಿರಲು ಅನುವು ಮಾಡಿಕೊಡುತ್ತದೆಯಷ್ಟೆ. ಅಂತಹ ಬಹುಧರ್ಮಗಳ ಆಶ್ರಯದ ಇತಿಹಾಸವು ಇವತ್ತು ಸಮಾಜದ ಧರ್ಮನಿರಪೇಕ್ಷೀಕರಣವು ಹೆಚ್ಚು ಒಪ್ಪಿಗೆಯಾಗುವಂತೆ ಮಾಡುತ್ತದೆ. ಇದರಿಂದ ಪ್ರಭುತ್ವವು ಬಹುಧರ್ಮಗಳ ಆಶ್ರಯ ನೀತಿಯನ್ನು ಮುಂದುವರಿಸಬೇಕೆಂದು ನಾನು ಹೇಳುತ್ತಿಲ್ಲ. ಧಾರ್ಮಿಕ ಪಂಗಡಗಳಿಗೆ ಆ ಬಗೆಯ ಆಶ್ರಯವು ಆಧುನಿಕ ಪೂರ್ವ ಸಮಾಜದ ಕುರುಹಾಗಿದ್ದು, ಆದ್ದರಿಂದಲೇ ಬದಲಾದ ಐತಿಹಾಸಿಕ ಸನ್ನಿವೇಶದಲ್ಲಿ ಈಗ ಅದು ಅನಗತ್ಯ. ಆದರೆ ಅದರ ಐತಿಹಾಸಿಕ ಪರಂಪರೆಯು ಬಹುಧಾರ್ಮಿಕ ಸಮಾಜದ ರಾಜಕೀಯ ಒಪ್ಪಿಗೆಯನ್ನು ಒತ್ತಿ ಹೇಳುತ್ತದೆ ಮತ್ತು ಬಹು ಧಾರ್ಮಿಕ ಸಮಾಜದಿಂದ ಧರ್ಮನಿರಪೇಕ್ಷ ಸಮಾಜಕ್ಕೆ ಮಾರ್ಪಾಟನ್ನು ಸುಲಭಗೊಳಿಸುತ್ತದೆ.

ಧರ್ಮನಿರಪೇಕ್ಷತ್ವಕ್ಕೆ ಇರುವ ವಿರೋಧ ಅದು ಧರ್ಮದ ನಿರಾಕರಣೆಯೆಂದು ತೋರಿಸಲ್ಪಡುವುದರಿಂದ

ಬಂದದ್ದು. ಧರ್ಮನಿರಪೇಕ್ಷತ್ವದ ಅರ್ಥ ಇದಲ್ಲವೆಂದು ತೋರಿಸುವ ಪ್ರಯತ್ನ ಮಾಡಿದ್ದೇನೆ. ಹೆಚ್ಚು ಭೀಕರ ವಿರೋಧವು ಹುಟ್ಟಿರುವುದು ಧರ್ಮವು ದುರ್ಬಲವಾಗುತ್ತದೆಂಬ ಭಯದಿಂದಲ್ಲ. ಅದು ಧಾರ್ಮಿಕ ಸಮುದಾಯಗಳ ರಾಜಕೀಯವನ್ನು ನಾಗರಿಕ ಸಮಾಜವನ್ನು ಸಬಲಗೊಳಿಸುವ ಪ್ರಯತ್ನದಿಂದ ಬದಲಾಯಿಸಿದರೆ, ಸಮಾಜದ ಧರ್ಮನಿರಪೇಕ್ಷೀಕರಣಕ್ಕೆ ಅಗತ್ಯವಾದ ಎಲ್ಲ ನಾಗರಿಕರ ಹಕ್ಕುಗಳು ಮತ್ತು ಸಮಾನತೆಗೆ ಆದ್ಯತೆ ನೀಡುವ ಒಂದು ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತದೆಂಬ ಭಯದಿಂದ ಬಂದಿದೆ. ಎಲ್ಲಿಯವರೆಗೂ ಕೆಲವು ನಾಗರಿಕರು ಇತರರಿಗಿಂತ ಹೆಚ್ಚಾಗಿ ಭಾರತೀಯರೆಂದು ಪರಿಗಣಿಸಲ್ಪಡುತ್ತಾರೆಯೋ ಮತ್ತು ಈ ಬೇರ್ಪಡಿಸುವಿಕೆಯ ಪ್ರತ್ಯೇಕ ಧಾರ್ಮಿಕ ಸಮುದಾಯಗಳೆಂಬ ಕಲ್ಪನೆಯಿಂದ ಬರುವುದೋ, ಅಲ್ಲಿಯವರೆಗೂ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗೆ ಸೇರಿದ ವಿಷಯಗಳ ಬಗ್ಗೆ ಕಾಳಜಿಯು ಬದಿಗೊತ್ತಲ್ಪಡುತ್ತದೆ. ಧರ್ಮ ಹಾಗೂ ರಾಷ್ಟ್ರಗಳನ್ನು ಸಂರಕ್ಷಿಸುವ ನೆಪದ ಕಡೆಗೆ ಗಮನವನ್ನು ಸೆಳೆಯಲಾಗುತ್ತದೆ.

ಹಿಂದುತ್ವದ ತೀವ್ರತೆಯು, ಅದರ ಅನುಯಾಯಿಗಳು ಆಶಿಸಿದಂತೆ, ಭಾರತದ ಸುಮಾರು ಅರ್ಧದಷ್ಟು ಜನರು ಬಡತನ ರೇಖೆಯಲ್ಲಿ ಅಥವಾ ಅದರ ಕೆಳಗಡೆ ಇದ್ದು, ಅವರಿಗೆ ಅತ್ಯಂತ ಮೂಲಭೂತ ಹಕ್ಕುಗಳು ಮತ್ತು ಸೌಲಭ್ಯಗಳು ನಿರಾಕರಿಸಲ್ಪಟ್ಟಿವೆ ಎಂಬ ವಸ್ತುಸ್ಥಿತಿಯಿಂದ ಗಮನವನ್ನು ದೂರಸರಿಸುವಂತೆ ಕೆಲಸ ಮಾಡಿದೆ. ಈ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಆದಿವಾಸಿಗಳು ಮತ್ತು ಯಾರು ಪರಕೀಯರು ಎಂಬ ಗುರುತಿಸುವಿಕೆಯು ಅವರು ಅನುಸರಿಸುವ ಧರ್ಮವು ಉಪಖಂಡಕ್ಕೆ ದೇಶೀಯವಾದುದೊ ಅಥವಾ ಪಶ್ಚಿಮ ಏಷ್ಯದ ಮೂಲವನ್ನು ಹೊಂದಿರುವುದೋ ಎನ್ನುವ ಸುಳ್ಳು ಪೂರ್ವಗ್ರಹದ ಮೇಲೆ ಆಧಾರಿತವಾಗಿದ್ದು, ಆ ವಿಷಯವನ್ನು ಸುತ್ತುವರೆದಿರುವ ಅಬ್ಬರವು ಹಿಂದೂ ಧರ್ಮವನ್ನು ಕಾಪಾಡುವುದಾಗಿ ದಾವೆ ಮಾಡುವ ಗುಂಪುಗಳ ವತಿಯಿಂದ ತೀರ ಅಮಾನವೀಯ ಮತ್ತು ಅನೈತಿಕ ನಡತೆಗೆ ದಾರಿ ಮಾಡಿದೆ ಮತ್ತು ಮುಸಲ್ಮಾನರು ಹಾಗೂ ಕ್ರೈಸ್ತರೆಂದು ಹೆದರಿಸಲಾಗುವವರ ಕಡೆಗೆ ಅದು ನಿರ್ದೇಶಿತವಾಗಿದೆ.

ಭಾರತೀಯರನ್ನು ಧಾರ್ಮಿಕ ಸಮುದಾಯಗಳಿಂದ ಗುರುತಿಸಬೇಕೆಂಬ ಒತ್ತಾಯವು, ಯಾವುದು ಬಹುಸಂಖ್ಯಾತ ಸಮುದಾಯ ಮತ್ತು ಯಾವುದು ಅಲ್ಪಸಂಖ್ಯಾತ ಸಮುದಾಯ ಎಂಬುದನ್ನು ನಿರ್ಧರಿಸುತ್ತದೆ. ಈ ರೀತಿಯ ಬಹುಸಂಖ್ಯಾತತೆಯು ಪ್ರಜಾಪ್ರಭುತ್ವವನ್ನು ಅಣಕಿಸುತ್ತದೆ. ಏಕೆಂದರೆ, ಅದು ಒಂದು ಪೂರ್ವನಿರ್ಧಾರಿತ ಕಲ್ಪನೆ. ಧಾರ್ಮಿಕ ಸಮುದಾಯಗಳಿಂದ ನಿರ್ಧರಿಸಲ್ಪಟ್ಟ ಭಾರತೀಯ ಸಮಾಜವು ವಸಾಹತುಶಾಹಿ ದೃಷ್ಟಿಕೋನದಿಂದ ಬಂದದ್ದು. ಈ ದೃಷ್ಟಿಕೋನವನ್ನು ಒತ್ತಾಯಿಸುತ್ತಿರುವುದರಿಂದ ನಾವು ಸ್ವತಂತ್ರ ಮತ್ತು ಪ್ರಜಾಪ್ರಭುತ್ವದ ದಿಕ್ಕಿನಲ್ಲಿ ಸಾಗುವ ಬದಲಿಗೆ ವಸಾಹತುಶಾಹಿಯ ರಾಜಕೀಯವನ್ನು ಪುಷ್ಟಿಗೊಳಿಸುತ್ತಿದ್ದೇವೆ.

ಭಾರತೀಯ ಸಮಾಜದ ಧರ್ಮನಿರಪೇಕ್ಷೀಕರಣವು ಬಡನತ ರೇಖೆಯ ಕೆಳಗಿರುವವರ ಮತ್ತು ಬಹುಸಂಖ್ಯಾತರ ಕೋಮುವಾದಕ್ಕೆ ಬಲಿಯಾದವರ ಸ್ಥಿತಿಯನ್ನು ಉದ್ಧರಿಸಲು ಅಗತ್ಯವಾಗಿದೆ. ಇದಕ್ಕಾಗಿ ನಾಗರಿಕ ಸಮಾಜವನ್ನು ಸಬಲಗೊಳಿಸಬೇಕಾಗುತ್ತದೆ. ಅದು ಸಾಮಾಜಿಕ ನೈತಿಕತೆಯ ಪ್ರಾಮುಖ್ಯತೆಯ ಮೇಲೆ ಆಧರಿಸಿರಬೇಕು, ಸಹ ನಾಗರಿಕರ ಬಗ್ಗೆ ಕಾಳಜಿ ಮತ್ತು ಗೌರವವನ್ನು ಕೇಂದ್ರವಾಗಿ ಉಳ್ಳ ಮೌಲ್ಯಗಳನ್ನು ಸೃಷ್ಟಿಸಬೇಕು ಮತ್ತು ಬೆಳೆಸಬೇಕು. ಸಮಾಜದ ಧರ್ಮನಿರಪೇಕ್ಷೀಕರಣಕ್ಕೆ ಇದೊಂದು ಅಗತ್ಯವಾದ ಪೂರ್ವಸ್ಥಿತಿ ಮತ್ತು ಅದು ತನ್ಮೂಲಕ ಪ್ರಭುತ್ವದ ಧರ್ಮನಿರಪೇಕ್ಷ ನೀತಿಗಳನ್ನು ಬಲಪಡಿಸುತ್ತದೆ. ಸಾಮಾಜಿಕ ನೈತಿಕತೆಯು ಕಾನೂನು ವ್ಯವಸ್ಥೆ, ರಾಜಕೀಯ ಸ್ವಾತಂತ್ರ್ಯ, ವೈಯಕ್ತಿಕ ಸ್ವಾಯತ್ತತೆ ಮತ್ತು ದ್ರವ್ಯಾನುಕೂಲಗಳನ್ನು ಒಳಗೊಂಡಿರುತ್ತದೆ. ಒಟ್ಟಿನಲ್ಲಿ ಇವುಗಳ ಅರ್ಥವೇನೆಂದರೆ ಪ್ರತಿಯೊಬ್ಬ ನಾಗರಿಕನಿಗೂ ಕಾನೂನು ಎಟಕುವಂತಿರುತ್ತದೆ; ಪ್ರತಿನಿಧೀಕರಣದಂತಹ ಪ್ರಜಾಪ್ರಭುತ್ವದ ಹಕ್ಕುಗಳಲ್ಲಿ ಮುಕ್ತವಾದ ವಯಸ್ಕರ ಮತದಾನ ಇರುತ್ತದೆ ಮತ್ತು ಸಾಮಾಜಿಕ ಶ್ರೇಣಿಗಳನ್ನು ಸಮರ್ಥಿಸುವ ಸಿದ್ಧಾಂತಗಳನ್ನು ವಿರೋಧಿಸುತ್ತದೆ. ದ್ರವ್ಯಾನುಕೂಲವು ಸಮಾಜ ಕಲ್ಯಾಣದ ರೂಪದಲ್ಲಿ ಅನಿಷ್ಟ ಆರ್ಥಿಕ ಭದ್ರತೆಯನ್ನು ಒಳಗೊಂಡಿರುತ್ತದೆ. ಸಮಾಜ ಕಲ್ಯಾಣವು ಪ್ರಾಥಮಿಕ ಶಿಕ್ಷಣದ ಹಕ್ಕು ಮತ್ತು ಮೂಲಭೂತ ಆರೋಗ್ಯ ಸೌಲಭ್ಯಗಳ ಲಭ್ಯತೆಯನ್ನು ಒಳಗೊಂಡಿರುತ್ತದೆ. ಒಂದು ಆಧುನಿಕ ಪ್ರಭುತ್ವವು ಒದಗಿಸಬೇಕಾಗದ ನಿರೀಕ್ಷೆಗಳಲ್ಲಿ ಇದು ಕನಿಷ್ಠವಾದುದು. ಈ ಬದಲಾವಣೆಯಲ್ಲಿ ಶಿಕ್ಷಣದ ಪಾತ್ರ ಅತ್ಯಂತ ಮಹತ್ವದ್ದು. ವೈಯಕ್ತಿಕ ಧಾರ್ಮಿಕ ಅಭಿವ್ಯಕ್ತಿಯ ಹಕ್ಕು, ವೈಯಕ್ತಿಕ ಸ್ವಾಯತ್ತತೆಯ ಪ್ರಶ್ನೆಯಲ್ಲಿ ಕಾಪಾಡಲ್ಪಡುತ್ತದೆ.

ಈವರೆಗೆ ಈ ಅಗತ್ಯಗಳನ್ನು ಯಾವುದೇ ಪ್ರಶಂಸನೀಯ ಪ್ರಮಾಣದಲ್ಲಿ ಜಾರಿಗೆ ತರುವಲ್ಲಿ ವಿಫಲವಾಗಿರುವುದು, ಅವುಗಳನ್ನು ಒಂದು ಸರ್ಕಾರದ ಇಚ್ಛೆಗೂ ಅಥವಾ ಪ್ರಭುತ್ವದ ಚಿತ್ತ ಚಂಚಲತೆಗೂ ಬಿಡಲಾಗುವುದಿಲ್ಲವೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಈ ಬೇಡಿಕೆಗಳಲ್ಲಿ ಅಡಗಿರುವಂತಹ ಮಾದರಿಯ ಸ್ವಾತಂತ್ರ್ಯವನ್ನು ಸ್ಥಾಪಿಸುವ ನಿಟ್ಟಿನಲ್ಲಿ ನಾಗರಿಕ ಸಮಾಜವು ಈಗ ಕೆಲಸ ಮಾಡಬೇಕಾದ ಅಗತ್ಯವಿದೆ ಮತ್ತು ಸಾಮಾಜಿಕ ನೈತಿಕತೆಯನ್ನು ಎತ್ತಿ ಹಿಡಿಯಬೇಕಾಗಿದೆ. ಸುಮಾರು ಇನ್ನೂರು ವರ್ಷಗಳ ಹಿಂದೆ 1810ರಲ್ಲಿ ರಾಮಮೋಹನ್ ರಾಯ್ ಅವರು ಹೀಗೆ ಹೇಳಿದ್ದರೆಂದು ನಿಮಗೆ ನಾನು ನೆನಪಿಸುತ್ತೇನೆ. 'ರಾಜಕೀಯ ಸಮುದಾಯದ ಸ್ವಾತಂತ್ರ್ಯವು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅಗತ್ಯವಾದ ಪೂರ್ವಾಪೇಕ್ಷಿತ ಸ್ಥಿತಿ. ನಾವು ಈ ಸ್ವಾತಂತ್ರ್ಯದ ಸಂಪೂರ್ಣತೆಯನ್ನು ಇನ್ನೂ ಸಾಧಿಸಬೇಕಾಗಿದೆ'.

(ಪ್ರೊ|| ರೊಮಿಲಾ ಥಾಪರ್‌ರವರು ನೀಡಿದ ನಾಲ್ಕನೆಯ ಕ್ಯಾಪ್ಟನ್ ಸ್ಮಾರಕ ಉಪನ್ಯಾಸ)

ಕೃಪೆ : ವಿಸ್ತಾರ್

ಮನುಷ್ಯನನ್ನು ನುಂಗಿ ಜೀರ್ಣಿಸಿಕೊಂಡ ಜಾತಿ

ಕೆಲವು ದಿನಗಳ ಹಿಂದೆ ಸ್ನೇಹಿತನೊಬ್ಬ ನನ್ನನ್ನು ನಿಲ್ಲಿಸಿ "ಏನ್ರಿ ನೀವು ಸಹ ಜಾತಿವಾದಿಯಾಗಿ ಬಿಟ್ರಿ" ಎಂದು ಕೋಪದಿಂದ ಪ್ರಶ್ನಿಸಿದ. ನಾನು ಕೆಲವು ಕ್ಷಣ ತಡೆದು, ಸಾವಧಾನವಾಗಿ ವಿಚಾರಿಸಿದಾಗ ಆತ ಹೇಳಿದಿಷ್ಟು. ನಾನು ಕೆಳಜಾತಿ-ವರ್ಗ ಸಂಘಟನೆಗಳಿಗೆ ಬೆಂಬಲ ನೀಡಿ ಕನ್ನಡ ಭಾಷಾ ಚಳುವಳಿಗೆ ಬೆಂಬಲ ನೀಡುತ್ತಿಲ್ಲ ಎಂಬುದೇ ಆತನ ಆಕ್ಷೇಪಣೆಯಾಗಿತ್ತು. ಇಂಥದ್ದರ ಗ್ರಹೀತವೆಂದರೆ ಶೋಷಿತರು ಯಾರು? ಅವರೇಕೆ ಶೋಷಿತರಾಗುತ್ತಿದ್ದಾರೆಂದು ಪ್ರಶ್ನೆಗಳನ್ನು ಕೇಳಿದಲ್ಲಿ, ಪ್ರಶ್ನೆಗಳಿಗೆ ಉತ್ತರ ನೀಡುವ ಬದಲು ಪ್ರಶ್ನೆ ಕೇಳುವ ವ್ಯಕ್ತಿಯ ಮೇಲೆ "ಜಾತಿ-ಗೂಬೆ"ಯನ್ನು ಕೂರಿಸಿ ಬಿಡುವುದು. ಹೀಗೆ ನಮ್ಮ ಈ ದೇಶದಲ್ಲಿ ಹುಟ್ಟು, ಸಾವು, ಊಟ, ಪದ್ಧತಿಯಿಂದ ದಿನನಿತ್ಯದ ಕ್ರಿಯೆಗಳನ್ನೊಳಗೊಂಡ ವಿವಾಹ ಪದ್ಧತಿಯವರೆಗೂ ಹಬ್ಬಿದ ಈ ಜಾತಿ ಪದ್ಧತಿ ಮನುಷ್ಯನನ್ನು ನುಂಗಿ ಜೀರ್ಣಿಸಿಕೊಂಡಿದೆ ಎನ್ನಬೇಕೇನೋ! ಇದಕ್ಕೆ ಪೂರಕವಾಗಿ ಇಂದಿನ ಜಾಗತೀಕರಣ ಉಚ್ಚ ಜಾತಿಗಳಿಗೆ ವರದಾನವಾಗಿ ಬಿಟ್ಟಿದೆ. ಕೆಳಜಾತಿ-ಕೆಳವರ್ಗಗಳಲ್ಲಿ ಎಂದೂ ಇಲ್ಲದ ಕೀಳರಿಮೆಯನ್ನು ತುಂಬಿ ಶಿಕ್ಷಿತರನ್ನೂ ಬಿಡದೆ ಕಾಡಿದೆ ಈ ಜಾತಿ ಪದ್ಧತಿ. ಜಾತಿಯನ್ನು ವಿರೋಧಿಸುವವರೂ ಸಹ ಒಂದು ಜಾತಿಗೆ ಜೋತು ಬೀಳುತ್ತಾರೆ. ಇದನ್ನು ಬಹಳ ಸೂಕ್ಷ್ಮವಾಗಿ ಗಮನಿಸಿದ ಲೋಹಿಯಾ ಹೀಗೆಂದಿದ್ದಾರೆ : "ಜಾತಿಯೆನ್ನುವುದು ಬದಲಾಯಿಸಲಿಕ್ಕಾಗದ ಚೌಕಟ್ಟು, ಅದರೊಳಗೆ ಬದುಕಬೇಕೆಂದರೆ ಭಾರೀ ಚಾತುರ್ಯ, ಆಲೋಚನೆ, ದ್ವಿಪಾತ್ರ, ತ್ರಿಪಾತ್ರ ಹೀಗೆ ಹಲವಾರು ಭೂಮಿಕೆಯ ನಟನೆ ಅವಶ್ಯವಾಗುತ್ತದೆ" ಅಂದರೆ ಮೋಸ ಮಾಡಿ ಬದುಕಬೇಕೆಂಬ ಅರ್ಥವಲ್ಲ. ಲೋಹಿಯಾ ಅವರೇ ಮತ್ತೊಂದೆಡೆಯಲ್ಲಿ "ಜಾತಿ ಪದ್ಧತಿ ಬದಲಾವಣೆಯನ್ನು ವಿರೋಧಿಸುವುದರ ಜೊತೆಗೆ ಸ್ಥಿರತೆಯು ಭಯಂಕರ ಶಕ್ತಿಯಾಗಿದೆ. ಅದು ಪ್ರಚಲಿತವಿರುವ ಎಲ್ಲ ಬಗೆಯ ಕ್ಷುದ್ರತೆ ಅಗೌರವ, ಸುಳ್ಳನ್ನು ದೃಢೀಕರಿಸುವ ಶಕ್ತಿಯೂ ಹೌದು... ಶತಮಾನಗಳಿಂದ ಬಹುತೇಕ ಜನರ ಬುದ್ಧಿಯನ್ನು ಸರಿಯಾಗಿ ಬಳಸಿಕೊಳ್ಳದೇ ಇದ್ದದ್ದರಿಂದ ಅವರು ಹಾಗೂ ಅವರ ದೇಶ ಪಾರ್ಶ್ವವಾಯುವಿಗೆ ತುತ್ತಾಗಬೇಕಾಯಿತು...(ಆದ್ದರಿಂದಲೇ) ಶೇಕಡ ಒಂದರಷ್ಟಿರುವ ಇಂಗ್ಲೀಷ್‌ಗೆ ಮೊರೆ ಹೊಕ್ಕ ಶ್ರೀಮಂತರು, ಉಚ್ಚ ಜಾತಿಯವರು ಹಾಗೂ ವಿಶೇಷಾಧಿಕಾರ ಹೊಂದಿದ ಜನ ಭಾರತದ ಜನಸಂಖ್ಯೆಯ ಶೇ. 99ರಷ್ಟು ಜನರನ್ನು ನಿರಂತರ ಜೀತದಾಳುಗಳಾಗಿ ನಡೆಸಿಕೊಳ್ಳುತ್ತಿದ್ದಾರೆ" ಎಂದಿದ್ದಾರೆ. ಆದ್ದರಿಂದ ಈ ಲೇಖನದಲ್ಲಿ ಸ್ಥಳೀಯವಾಗಿ ಜಾತಿ ವ್ಯವಸ್ಥೆಯ ಅತೀ ಕೆಳಸ್ತರದಲ್ಲಿ ಜೀವಿಸುತ್ತಿರುವ ದಲಿತರ ಬದುಕಿನತ್ತ ಗಮನ ಹರಸಲಿದ್ದೇನೆ.

> **ನಮ್ಮ ಈ ದೇಶದಲ್ಲಿ ಹುಟ್ಟು, ಸಾವು, ಊಟ, ಪದ್ಧತಿಯಿಂದ ದಿನನಿತ್ಯದ ಕ್ರಿಯೆಗಳನ್ನೊಳಗೊಂಡ ವಿವಾಹ ಪದ್ಧತಿಯವರೆಗೂ ಹಬ್ಬಿದ ಈ ಜಾತಿ ಪದ್ಧತಿ ಮನುಷ್ಯನನ್ನು ನುಂಗಿ ಜೀರ್ಣಿಸಿಕೊಂಡಿದೆ ಎನ್ನಬೇಕೇನೋ! ಇದಕ್ಕೆ ಪೂರಕವಾಗಿ ಇಂದಿನ ಜಾಗತೀಕರಣ ಉಚ್ಚ ಜಾತಿಗಳಿಗೆ ವರದಾನವಾಗಿ ಬಿಟ್ಟಿದೆ. ಕೆಳಜಾತಿ-ಕೆಳವರ್ಗಗಳಲ್ಲಿ ಎಂದೂ ಇಲ್ಲದ ಕೀಳರಿಮೆಯನ್ನು ತುಂಬಿ ಶಿಕ್ಷಿತರನ್ನೂ ಬಿಡದೆ ಕಾಡಿದೆ ಈ ಜಾತಿ ಪದ್ಧತಿ. ಜಾತಿಯನ್ನು ವಿರೋಧಿಸುವವರೂ ಸಹ ಒಂದು ಜಾತಿಗೆ ಜೋತು ಬೀಳುತ್ತಾರೆ.**
>
> **○ ಡಾಮಿನಿಕ್ ಡಿ.**

ಜಾತಿ ಪದ್ಧತಿಯ ಸೂಕ್ಷ್ಮಗಳು : ಹಲವಾರು ವರ್ಷಗಳ ಕಾಲ ಹಳ್ಳಿಯಿಂದ ಹಿಡಿದು ನಗರ ಕೊಳಚೆಗೇರಿಯವರೆಗೆ ನನ್ನ ಬದುಕು ಹರಡಿಕೊಳ್ಳಲು, ಅಲ್ಲಿನ ಬದುಕು ನನ್ನಲ್ಲಿ ವಿಶೇಷ ಹೊಳಹುಗಳಿಗೆ ಕಾರಣವಾಗಿದೆ. ಅವಮಾನ ಶೋಷಣೆಗಳಿಗೊಳಗಾದ ಅಲ್ಲಿನ ಜನರ ಹೆಮ್ಮೆಯ ಆಸ್ತಿಯೆಂದರೆ ಅನಕ್ಷರತೆ, ಶಕ್ತಿ ಹೀನತೆ ಮತ್ತು ಅಸಹಾಯಕತೆ ಆಗಿವೆ. ಈ ಸ್ಥಿತಿಯು ತಮ್ಮ ಕರ್ಮವೆಂದು ಈ ಜನ ಸಮುದಾಯಗಳು ಒಪ್ಪಿಕೊಂಡು ಬಿಟ್ಟಿವೆ. ತಮ್ಮ ಇಚ್ಛೆಗೆ ವಿರುದ್ಧವಾಗಿ ಮತ್ತೊಬ್ಬರು ತಮ್ಮ ಮೇಲೆ ದಬ್ಬಾಳಿಕೆಯನ್ನು ನಡೆಸುತ್ತಿದ್ದಾರೆಂಬುದು ಇನ್ನು ಈ ಜನಕ್ಕೆ ತಿಳಿದಿಲ್ಲ! ತಿಳಿದಿದ್ದರೂ ಈ ವ್ಯವಸ್ಥೆ ನೀಡುವ "ಸಹಿಸಿದವನು ಬಾಳಿಯಾನು" ಎಂಬ ಗುಣವನ್ನು ಒಪ್ಪಿ ಬದುಕುತ್ತಿದ್ದಾರೆಯೇ ವಿನಃ ತಮ್ಮ ನೋವನ್ನು ಅವಮಾನವನ್ನು ತಿರಸ್ಕರಿಸುವ ಧೈರ್ಯವನ್ನು ತೋರುತ್ತಿಲ್ಲ. ಆದ್ದರಿಂದ ಬಹು ನಾಜೂಕಾಗಿ ಈ ಕೆಳಗಿನ ನಾಣ್ನುಡಿಗಳು ಶೋಷಣೆಯನ್ನು ಹೇರುತ್ತಿರುವುದು. "ಚರಿತ್ರೆ ಯಾವಾಗಲೂ ಜಯಶಾಲಿಯಿಂದ ಮಾತ್ರ ಬರೆಯಲಾಗುತ್ತದೆ"

"ಹದ್ದು ಯಾವಾಗಲೂ ಕೋಳಿ ಮರಿಯ ಮೇಲೆ ಮಾತ್ರ ಎರಗುತ್ತದೆ" "ಬಲಿ ಕೊಡುವಾಗ ಯಾವಾಗಲೂ ಸಾಧು ಪ್ರಾಣಿಯನ್ನು ಮಾತ್ರ ಬಲಿ ಕೊಡಲಾಗುತ್ತದೆ" ಅಂದರೆ ಪ್ರಕೃತಿಯ ಪ್ರಾಣಿ-ಪಕ್ಷಿಗಳ ಸಂಕೇತಗಳನ್ನು ಉಪಯೋಗಿಸಿ ಈ ಅನಾರೋಗ್ಯಕರ ವ್ಯವಸ್ಥೆಗೆ ಸಹಜತೆಯ ಚೌಕಟ್ಟನ್ನು ಒದಗಿಸಲಾಗುತ್ತದೆ. ಅಲ್ಲದೆ ಯಜಮಾನಿಕೆಯನ್ನು ಮುಂದುವರಿಸುವ ಸಾರ್ವಜನಿಕ ಅಭಿಪ್ರಾಯವಾಗಿ ಬಿಡುತ್ತದೆ.

ಈ ತಂತ್ರವನ್ನು ಬೇಧಿಸುವ ಶಿಕ್ಷಿತ ಮನಸ್ಸು ಸಹ ಕೊನೆಗೆ ಇದೆಲ್ಲ ಅನಿವಾರ್ಯವೆಂಬಂತೆ ವ್ಯವಸ್ಥೆಯೊಡನೆ ರಾಜಿಮಾಡಿಕೊಳ್ಳುತ್ತದೆ. ಏಕೆಂದರೆ ಜಾತಿ ಪದ್ಧತಿ ತನ್ನೊಳಗಿನ ವಿರೋಧಾಭಾಸಗಳಾದ ಶುದ್ಧ-ಅಶುದ್ಧ, ಮಡಿ-ಮೈಲಿಗೆ, ಶಿಷ್ಟ-ಪರಿಶಿಷ್ಟ, ಕನಿಷ್ಟ-ಶ್ರೇಷ್ಟ, ಸ್ಪೃಶ್ಯ-ಅಸ್ಪೃಶ್ಯ, ಪಾಪ-ಪುಣ್ಯ ಎಂಬಂಥ ಭಾವನಾತ್ಮಕ ಅಂಶಗಳ ಮೂಲಕ ಎಲ್ಲವನ್ನು, ಎಲ್ಲರನ್ನು ಕಪ್ಪು-ಬಿಳುಪು ಬಣ್ಣದೊಳಗೆ ನಿಷ್ಕ್ರಿಯರನ್ನಾಗಿ ಮಾಡಿ ಬಿಡುತ್ತದೆ. ಉತ್ತರ ಕರ್ನಾಟಕದ ಕಡೆ ಅಲ್ಲಿ ಕಂಡಂಥ ಒಂದು ವಿಚಿತ್ರ ಸಂಗತಿಯೆಂದರೆ ಹಗಲಲ್ಲಿ ಅಸ್ಪೃಶ್ಯರೆಂದು ಭಾವಿಸುವ ಸ್ಪೃಶ್ಯಜಾತಿಯವರಿಗೆ, ರಾತ್ರಿಯಲ್ಲಿ ಅಸ್ಪೃಶ್ಯ ಹೆಣ್ಣು ಸ್ಪೃಶ್ಯಳಾಗಿ ಬಿಡುತ್ತಾಳೆ. ಅಂದರೆ ಜಾತಿಯ ಈ 'ಗೋಮುಖವ್ಯಾಘ್ರ ನೀತಿ'ಯನ್ನು ನಾವೇಕೆ ಒಪ್ಪಿಕೊಂಡಿದ್ದೇವೆ?

ಮತ್ತೊಂದು ಸೂಕ್ಷ್ಮವೆಂದರೆ ಅಸ್ಪೃಶ್ಯ ಜಾತಿಗಳು ಅವಮಾನವನ್ನು ಸಹಿಸಿಕೊಳ್ಳುವುದಲ್ಲದೆ, ಸ್ಪೃಶ್ಯ ಜಾತಿಗಳು ಆಜ್ಞಾಪಿಸಿದಂತೆ ನಡೆದುಕೊಳ್ಳುತ್ತದೆ. ಇಂದಿಗೂ ಸಹ ಹಳ್ಳಿಗಳಲ್ಲಿ ಸಾರ್ವಜನಿಕವಾಗಿ ಎಲ್ಲರಂತೆ ವರ್ತಿಸುವ ಹಾಗಿಲ್ಲ. ಹೋಟೇಲುಗಳಲ್ಲಿ ಅವರಿಗೇ ಪ್ರತ್ಯೇಕ ಸ್ಥಳಗಳು! ಮೀಸಲಾತಿ ಇದೆಯೇನೊ! ಕಾನೂನು ಬಾಹಿರವೆಂದು ಸಂವಿಧಾನಾತ್ಮಕವಾಗಿ ಪರಿಗಣಿಸಿದರೂ ಸಹ ಕಾನೂನು ಕ್ರಮ ಜರುಗಿಸುವವರು ಯಾರು? ಅಲ್ಪ-ಸ್ವಲ್ಪ ವಿದ್ಯಾಭ್ಯಾಸ ಪಡೆದುಕೊಂಡ ಮೇಲ್ಜಾತಿ ಯುವಕ-ಯುವತಿಯರು ಬಾಹ್ಯದಲ್ಲಿ 'ಜಾತ್ಯಾತೀತ'ರೆಂದು ಮಧ್ಯಮ ವರ್ಗದ ಮೌಲ್ಯಗಳನ್ನು ಪ್ರಚುರ ಪಡಿಸುತ್ತಿರುತ್ತಾರೆ. ಆದರೆ ಒಳಗೊಳಗೇ ತಮ್ಮ ಜಾತಿಯನ್ನು ಮಾತ್ರ ಪ್ರೇಮಿಸುತ್ತಿರುತ್ತಾರೆ. ಅದೇ ಕೆಳಜಾತಿ ಯುವಜನ ತಮ್ಮ ಜಾತಿಯನ್ನು ಮೀರಲು "ಜಾತಿ ವಿರುದ್ಧ" ಘೋಷಣೆಗಳನ್ನು ಕೂಗುತ್ತಾರಷ್ಟೆ. ಎಲ್ಲರೂ ತಿಳಿದಿರುವಂತೆ ಇದು ಹೇಗೆ ನಡೆಯುತ್ತದೆಯೆಂದರೆ ಅತ್ತ ಕೋಲೂ ಮುರಿಯಬಾರದು, ಇತ್ತ ಹಾವೂ ಸಾಯಬಾರದು"

ಮೇಲ್ಜಾತಿಯ ಬುದ್ಧಿಜೀವಿಗಳ ತಮ್ಮ ಜಾತಿಯ ಹಿತಾಸಕ್ತಿಗಳನ್ನು ಮಾತ್ರ ರಕ್ಷಿಸಿಕೊಳ್ಳಲು ಹೆಣಗುತ್ತಿರುತ್ತಾರೆ. ಈ ಶತಮಾನದ ಮುವತ್ತರ ದಶಕದಲ್ಲಿ ಮಹಾರಾಷ್ಟ್ರದ ನಾಗ್ಪುರ ಮತ್ತು ತಮಿಳುನಾಡಿನ ರಾಮೇಶ್ವರಂನಲ್ಲಿ ನಡೆದ ಎರಡು ಬ್ರಾಹ್ಮಣ ಮಹಾ ಸಮಾವೇಶಗಳಲ್ಲಿ ಕಾಕತಾಳೀಯವೆಂಬಂತೆ ಈ ಕೆಳಗಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಅವುಗಳೆಂದರೆ.

ಪ್ರಿಯ ಓದುಗರೇ,

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದಲ್ಲಿ ಸ್ವಾಭಿಮಾನ, ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹಂಬಲಿಸುವ ಎಲ್ಲರ ವೇದಿಕೆಯಾಗಬೇಕೆಂಬುದು 'ಸಂವಾದ'ದ ಆಸೆ. ಎಲ್ಲ ಜನ ವರ್ಗದ ಸಂಕಟ-ನೋವು ಮತ್ತು ಪರಿಹಾರಗಳಿಗೆ ತನ್ನನ್ನು ತೊಡಗಿಸಿಕೊಳ್ಳಲು ಪತ್ರಿಕೆ ಇಚ್ಛಿಸುತ್ತದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ. ತಮ್ಮೆಲ್ಲರ ಪಾಲ್ಗೊಳ್ಳುವಿಕೆಯೇ ಪತ್ರಿಕೆಯ ಯಶಸ್ಸು! ತಾವೆಲ್ಲ ಲೇಖನ-ಪ್ರತಿಕ್ರಿಯೆಗಳನ್ನು ಕಳುಹಿಸುವ ಮೂಲಕ ಸಹಕರಿಸಬೇಕೆಂದು ಕೋರುತ್ತೇವೆ.

— ಸಂಪಾದಕ

ಚಂದಾ ವಿವರ :

ಬಿಡಿ ಪ್ರತಿ : ಹತ್ತು ರೂಪಾಯಿಗಳು (ರೂ. 10/-) **ವಾರ್ಷಿಕ : ಒಂದು ನೂರು ರೂಪಾಯಿಗಳು (ರೂ. 100/-)**

ಆಜೀವ : ಐದು ಸಾವಿರ ರೂಪಾಯಿಗಳು (ರೂ. 5,000/-)

ಚಂದಾ ಹಣವನ್ನು ಚೆಕ್, ಡಿಡಿ, ಎಂ.ಓ, ಮೂಲಕ ಮಾತ್ರ ಸ್ವೀಕರಿಸಲಾಗುವುದು

ಚಂದಾ ಕಳಿಸಬೇಕಾದ ವಿಳಾಸ : 'ಸಂವಾದ' ಮಾಸ ಪತ್ರಿಕೆ

ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕ ಕೇಂದ್ರ ಅಂಚೆ ಪೆಟ್ಟಿಗೆ ಸಂಖ್ಯೆ : 9143, ಹೇರೋಹಳ್ಳಿ, ಮಾಗಡಿರಸ್ತೆ

ವಿಶ್ವನೀಡಂ ಅಂಚೆ, ಬೆಂಗಳೂರು - 560 091 ದೂರವಾಣಿ : 3287943 / 3281667

1. ದಲಿತರು ಜಮೀನನ್ನು/ಆಸ್ತಿಯನ್ನು ಹೊಂದುವಂತಿಲ್ಲ. 2. ಅವರ ಕಸುಬೆಂದರೆ ಕೂಲಿ ಮಾಡಿ ಬದುಕುವುದು. 3. ಅವರ ಮಕ್ಕಳು ಶಾಲೆಗೆ ಹೋಗಬಾರದು. 4. ಅವರ್‍ಯಾರು ಚಪ್ಪಲಿಗಳನ್ನು ಧರಿಸಬಾರದು. 5. ಈ ಜಾತಿಯ ಹೆಣ್ಣು ಮಕ್ಕಳು ಕುಪ್ಪಸಗಳನ್ನು ಧರಿಸಬಾರದು. 6. ಅವರ್‍ಯಾರು ಮಣ್ಣಿನ ಮಡಿಕೆಗಳನ್ನು ಹೊರತುಪಡಿಸಿ ಬೇರೆ ಪಾತ್ರೆಗಳಲ್ಲಿ ಅಡಿಗೆ ಮಾಡಬಾರದು. ಈ ನಿರ್ಣಯಗಳಂತೆ ದಲಿತರು ನಡೆದುಕೊಳ್ಳಬೇಕು. ಇಲ್ಲವಾದಲ್ಲಿ ಅವರನ್ನು ಸಾರ್ವಜನಿಕವಾಗಿ ಬಹಿಷ್ಕರಿಸಲಾಗುತ್ತಿತ್ತು. ಇಲ್ಲಿ ಮುಖ್ಯವಾದ ಸಂಗತಿಯೆಂದರೆ ಇತರ ಜಾತಿಗಳ ಬಗ್ಗೆ ನಿರ್ಧರಿಸಲು ಇವರಿಗೆ ಇದ್ದಂತಹ ಹಕ್ಕೇನು? ಅಥವಾ ದಲಿತರು ಮಾಡಿದ ಅಪರಾಧವಾದರೂ ಏನಿತ್ತು? ಕೇವಲ ಆ ಜಾತಿಯಲ್ಲಿ ಹುಟ್ಟಿದ್ದೇ ಶಾಪವಾಯಿತೇನೋ?! ಜಾತಿ ಹಿತಾಸಕ್ತಿ ಏನನ್ನೂ ಮಾಡಿಸಬಹುದು! ಸ್ವಾತಂತ್ರ್ಯ ನಂತರದ ಭಾರತದಲ್ಲಿ ಈ ಕೆಳಜಾತಿಗಳ ಬದುಕೇನು ಉತ್ತಮವಾಗಿಲ್ಲ. ಜಾತಿ ಪದ್ಧತಿ ಮತ್ತಷ್ಟು ತನ್ನ ಅಸ್ತಿತ್ವವನ್ನು ಸ್ಥಾಪಿಸಿತಷ್ಟೆ. ಅಂದರೆ ಈ ಪದ್ಧತಿಯೊಳಗೆ ದಲಿತ ಜಾತಿಗಳು ಹೇಗೆ ಬದುಕುತ್ತಿವೆ ಎಂಬುದನ್ನು ಒಂದು ಉದಾಹರಣೆಯ ಮೂಲಕ ವಿವರಿಸಬಹುದು: ನಿಮಗೆ ಹೊಟ್ಟೆ ನೋವು ಬರುತ್ತದೆ. ಆಗ ನೀವು ಡಾಕ್ಟರ ಬಳಿ ಹೋಗುತ್ತೀರಿ, ಡಾಕ್ಟರು ನಿಮಗೆ ಔಷಧಿ ನೀಡುತ್ತಾರೆ ಆ ಮೂಲಕ ನಿಮ್ಮ ಹೊಟ್ಟೆ ಶುದ್ಧವಾಗಿ ಗುಣರಾಗುತ್ತೀರಿ. ಇಲ್ಲಿ ಡಾಕ್ಟರಿಗೆ ಹಣ ಗೌರವ ಎರಡೂ ದೊರೆಯುತ್ತದೆ. ಆದರೆ ಜಾತಿ ವ್ಯವಸ್ಥೆಯಲ್ಲಿ ನಡೆಯುವುದು ಇದಕ್ಕೆ ವಿರುದ್ಧವಾಗಿ ದಲಿತ ಜಾತಿಗೆ ಸೇರಿದ ಭಂಗಿ ಜನ ಹಿಂದಿನಿಂದಲೂ ತಲೆ ಮೇಲೆ ಮಲ ಹೊರುತ್ತಿದ್ದಾರೆ. ಇಲ್ಲಿ ಕಕ್ಕಸು ಮಾಡುವುದು ಮೇಲ್ಜಾತಿ ಜನ ಅದನ್ನು ಸ್ವಚ್ಛಮಾಡುವವರು ಈ ಭಂಗಿ ಜನ. ಇಲ್ಲಿ ಮರ್‍ಯಾದೆ ಇರುವುದು ಕಕ್ಕಸು ಮಾಡುವವರಿಗೆ ಮಾತ್ರ. ಅದನ್ನು ಶುದ್ಧ ಮಾಡುವವರಿಗಲ್ಲ! ಇದೇ ಜಾತಿ ಪದ್ಧತಿಯಲ್ಲಿನ ಶೋಷಣೆಯ ಮುಖ. ಶೋಷಿತ ಜನಗಳ ನೆನಪುಗಳನ್ನು ಮರೆಮಾಚಿ ಅಲ್ಲಿ ಹಿಂಸಾತ್ಮಕ ನೆನಪುಗಳನ್ನು ಒತ್ತಾಯ ಪೂರ್ವಕವಾಗಿ ಹೇರಲಾಗುತ್ತದೆ. ಈ ಮೂಲಕ ಕೆಳ ಜಾತಿಗಳ ದೇಹ ಮತ್ತು ಮನಸ್ಸುಗಳೆರಡರ ಮೇಲೂ ಅತ್ಯಾಚಾರ ಎಸಗಲಾಗುತ್ತಿದೆ. ಇದು ನಡೆಯುವುದು ಸಾಂಸ್ಕೃತಿಕವಾದ ನಂಬಿಕೆಗಳ ಮೂಲಕ.

ಈ ಕಾರ್ಯವನ್ನು ಮೀರಬೇಕೆನ್ನುವ ವ್ಯಕ್ತಿ ಸೃಜನಾತ್ಮಕವಾಗಿ ಹಲವೊಂದು ಚಟುವಟಿಕೆಗಳನ್ನು ಶತಮಾನಗಳಿಂದ ಬೆಳೆದು ಬಂದ ಪರಂಪರೆ-ಸಂಪ್ರದಾಯಗಳ ಮೂಲಕ ಹತ್ತಿಕ್ಕಲಾಗುತ್ತದೆ. ಅಲ್ಲದೆ ಶೋಷಣೆಯ ವಿರುದ್ಧ ಹೋರಾಡುವ ಪ್ರೇರಣೆಯನ್ನು ಶೋಷಕನೇ ನೀಡುತ್ತಿರುತ್ತಾನೆ! ಈ ಅಂಶ ಕರ್ನಾಟಕದ ಚರಿತ್ರೆಯನ್ನು ಗಮನಿಸಿದಾಗ ಗೊತ್ತಾಗುತ್ತದೆ. ಇಲ್ಲಿ ಬ್ರಿಟಿಷರ ಆಡಳಿತದ ಸಂದರ್ಭದಲ್ಲಿ ಮದ್ರಾಸಿನ ಬ್ರಾಹ್ಮಣ ದಿವಾನರು ಮೈಸೂರು ಆಡಳಿತವನ್ನು ನಿರ್ವಹಿಸುತ್ತಿದ್ದರು. ಇದನ್ನು ಕಂಡ ಸ್ಥಳೀಯ ಲಿಂಗಾಯಿತರು ಮತ್ತು ಒಕ್ಕಲಿಗರು ಸಂಘಟಿತರಾಗಿ ತಮ್ಮ ಪಂಗಡದವರನ್ನೇ ದಿವಾನರನ್ನಾಗಿ ನೇಮಕ ಮಾಡುವಂತೆ ಒತ್ತಡ ಹೇರುವುದರಲ್ಲಿ ಯಶಸ್ವಿಯಾದರು. ಆ ಸಂದರ್ಭದಲ್ಲಿ ದಲಿತ ಸಮುದಾಯಗಳು ಒಕ್ಕಲಿಗ ಮತ್ತು ಲಿಂಗಾಯಿತರಿಂದ ಮತ್ತಷ್ಟು ಶೋಷಣೆಗೆ ಒಳಗಾಗಲು, ಅಧಿಕಾರ ಕಳೆದುಕೊಂಡ ಬ್ರಾಹ್ಮಣ ನಾಯಕರು, ಈ ದಲಿತರ ಗುಂಪುಗಳಲ್ಲಿ ಸಂಘಟಿಸಿ, ಪುನಃ ಅಧಿಕಾರ ಪಡೆಯುವುದರಲ್ಲಿ ಯಶಸ್ವಿಯಾದರು. ಇದೇ ಸ್ಥಿತಿ ಇಂದಿನ ಕರ್ನಾಟಕದಲ್ಲೂ, ಭಾರತದಲ್ಲೂ ನಡೆದಿರುವುದು ಚರಿತ್ರೆ ಮರುಕಳಿಸಿದೆ ಎನ್ನಬೇಕೇನೋ? ಇಲ್ಲಿ ಮುಖ್ಯವಾಗಿ ಗಮನಿಸತಕ್ಕ ಅಂಶವೆಂದರೆ ದೈಹಿಕವಾಗಿ ದುಡಿಯುವ ಜನ ಎಂದೂ ತಮ್ಮ ಶ್ರಮವನ್ನು ಪ್ರತಿಭೆ-ಬುದ್ಧಿಯೆಂದು ಗುರುತಿಸುವುದಿಲ್ಲ. ಈ ರೀತಿ ಮಾಡಲು ಜಾತಿ ವ್ಯವಸ್ಥೆ ಬಿಡುವುದೂ ಇಲ್ಲ. ●

ರಾಷ್ಟ್ರೀಯತೆಯ ವ್ಯಾಖ್ಯಾನದಲ್ಲಿ ಗ್ರಾಮಗಳ ಪಾತ್ರ : ಹೀಗೊಂದು ದೃಷ್ಟಿಕೋನ

ಐಕ್ಯಗ್ರಾಮದ ಕಲ್ಪನೆಯು ಜಾಜ್ಮಾನಿ ಪದ್ಧತಿಯ ಆಧಾರದ ಮೇಲೆ ರೈತರು, ಕುಶಲಕರ್ಮಿಗಳು ಮತ್ತು ಇತರೆ ಕಸುಬು ಜಾತಿಗಳ ನಡುವೆ ಸ್ಥಳೀಯವಾಗಿ ನಡೆಯುತ್ತಿದ್ದ ವಸ್ತು ವಿನಿಮಯವು ಕೊಳಕೊಡುಗೆ ಹಾಗೂ ಸಮಾನತೆಯ ಚಿತ್ರಣವನ್ನು ಪ್ರೇರೇಪಿಸುತ್ತದೆಂದು ಭಾವಿಸಲಾಯಿತು. ಈ ಸ್ಥಳೀಯ ಸಾಮಾಜಿಕ ಉತ್ಪಾದನಾ ಹಂಚಿಕೆಯು ಗ್ರಾಮೀಣ ಭಾರತದ ಪ್ರಧಾನ ಲಕ್ಷಣವಾಗಿ ತೋರಿಸಲಾಗುತ್ತದೆ.

○ ಮನೀಶ್‌ಕುಮಾರ್ ಠಾಕೂರ್

ಪ್ರಸ್ತುತ ಪ್ರಬಂಧವು ಪರಿಕಲ್ಪಿತ ರಾಷ್ಟ್ರೀಯತೆಯಲ್ಲಿ ಗ್ರಾಮದ ಸ್ಥಾನವನ್ನು ಕುರಿತದ್ದು. ಅಂದರೆ ರಾಷ್ಟ್ರೀಯತೆಯ ಚಿಂತನೆ ಮತ್ತು ಆಚರಣೆಯ ವಿವಿಧ ಸೆಳೆತಗಳು ಚಲಾವಣೆಗೆ ಬಂದಾಗ, ಗ್ರಾಮವೂ ಸಹ ಒಂದು ಆಲೋಚನಾ ರೂಪಿಕೆಯಾಗಿ ಬರುವುದನ್ನು ಈ ಪ್ರಬಂಧ ಅನಾವರಣಗೊಳಿಸಲು ಪ್ರಯತ್ನಿಸುತ್ತದೆ. ರಾಷ್ಟ್ರೀಯತಾ ವ್ಯಾಖ್ಯಾನ ಗ್ರಾಮವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಾಗ, ಅದು ಪ್ರವರ್ಧಮಾನ ರಾಷ್ಟ್ರೀಯ ಮಧ್ಯಮ ವರ್ಗಗಳಿಗೆ ನೂತನ ರೀತಿಯ ಮಾನ್ಯತೆಯನ್ನು ನೀಡಿತ್ತಲ್ಲದೆ, ರೂಪಿಕೆಯ ಹಂತದಲ್ಲಿದ್ದ ರಾಷ್ಟ್ರದ ಕಲ್ಪನೆಯನ್ನು ಸಹ ವಿಸ್ತೃತಗೊಳಿಸುವಲ್ಲಿ ನೆರವಾಯಿತು. ಇದಲ್ಲದೆ, ರಾಷ್ಟ್ರೀಯತೆಯ ಪರಿಭಾವಿಸುವಿಕೆಯಲ್ಲಿ ಭಾರತದ ಭೂತ (ಪ್ರಾಚೀನ)ವಾದ ಗ್ರಾಮವನ್ನು ನಾಗರೀಕತೆಯ ಸತ್ತ್ವವನ್ನಾಗಿ ಬಿಂಬಿಸಲಾಗುತ್ತದೆ. ಹಾಗೂ ಅದರಲ್ಲಿ ನೈಜ ಮತ್ತು ಪ್ರಾಮಾಣಿಕವಾದ ಭಾರತ ಅಡಗಿದೆಯೆಂದು ಕಾಣಲಾಗುತ್ತದೆ. ಗ್ರಾಮವನ್ನು ಕುರಿತ ಅಳತೆಗೂ ಮೀರಿದ ಅಂಥ ರೀತಿಯ ರೂಪಿಕೆಗಳು ಬಹುಮಟ್ಟಿಗೆ ಆದದ್ದು ವಸಾಹತುಶಾಹಿಯ ಓರಿಯಂಟಲಿಸ್ಟ್ ವಿದ್ವತ್ತಿನಿಂದ. ಇದನ್ನೇ ಮುಂದೆ ರಾಷ್ಟ್ರೀಯತೆಯ ಜ್ಞಾನ (ವಿವೇಕ)ವೆಂದೂ ಸಹ ಪರಿಭಾವಿಸಲಾಗುತ್ತದೆ. ಈ ಗ್ರಹಿತದ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧವು ರಾಷ್ಟ್ರೀಯತೆ ಮತ್ತು ವಸಾಹತುಶಾಹಿಯ ಗ್ರಾಮದ ರೂಪಿಕೆಗಳು ಹೇಗಾದುವೆಂಬುದನ್ನು ಶೋಧಿಸಲು ಪ್ರಯತ್ನಿಸುತ್ತದೆ.

ಪ್ರಬಂಧದ ಎರಡನೇ ಭಾಗವು ರಾಷ್ಟ್ರೀಯತೆಯ ಯೋಜನೆಗಳಿಗೆ ಅಡಕವಾಗಿರುವ ಮಿಥ್ಯೆಗಳನ್ನು ಗುರುತಿಸಲು ಪ್ರಯತ್ನಿಸುತ್ತದೆ. ಪರಸ್ಪರ ಪೈಪೋಟಿಯಲ್ಲಿದ್ದ ವಿವಿಧ ಗುಂಪುಗಳ ಮತ್ತು ಶಕ್ತಿಗಳ ಹಿತಾಸಕ್ತಿಗಳು ಭಾರತೀಯ ಗ್ರಾಮದ ಬಗೆಗಿನ ಆದರ್ಶೀಕರಿಸುವಿಕೆ/ವಿಮರ್ಶೆಯ ಮೇಲೆ ಮಹತ್ತ್ವದ ಪ್ರಭಾವವನ್ನು ಬೀರಿವೆ. ಹಳ್ಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯತೆಯ ಹಿತಾಸಕ್ತಿಯ ಒಳಗಿನ ಭಿನ್ನ ಧಾರೆಗಳನ್ನು ಪರಿಶೀಲಿಸಿ ಸಂದರ್ಭೀಕರಿಸಲು ಸಂವಿಧಾನಾತ್ಮಕ ಸಭೆಯ ಚರ್ಚೆಗಳು ಉಪಯುಕ್ತ ಮಾಹಿತಿಯನ್ನು ಒದಗಿಸುತ್ತವೆ. ಸಂಕ್ಷಿಪ್ತವಾಗಿ ಈ ಪ್ರಬಂಧದ ಉದ್ದೇಶವೆಂದರೆ, ಭಾರತೀಯ ರಾಷ್ಟ್ರ ಚಿಂತನೆಯು ತೀವ್ರವಾಗಿದ್ದಂತಹ ಸಂದರ್ಭದಲ್ಲಿ ರಾಷ್ಟ್ರ ಮತ್ತು ಗ್ರಾಮದ ನಡುವಿನ ವಸ್ತುಸ್ಥಿತಿ ಮತ್ತು ನಡಾವಳಿಗಳನ್ನು ಪರೀಕ್ಷೆಗೆ ಒಳಪಡಿಸುವುದಾಗಿದೆ.

1870ರ ನಂತರದ ರಾಷ್ಟ್ರೀಯತೆಯ ಬೌದ್ಧಿಕ ಚಿಂತನೆ ರೂಪಿಕೆಯಲ್ಲಿ 'ರೈತಾಪಿ ರಾಷ್ಟ್ರದ ಪರಿಕಲ್ಪನೆ'ಯ ರೂಪಿಕೆಯನ್ನು ಗುರುತಿಸಬಹುದಾಗಿದೆ (ಲ್ಯೂಡೆನ್, 1999 : 9) ಆಗಷ್ಟೇ ಉದಯಗೊಳ್ಳುತ್ತಿದ್ದ ರಾಷ್ಟ್ರೀಯ ಚಿಂತನೆಯ ವ್ಯಾಖ್ಯಾನದಲ್ಲಿ ಹಲವಾರು ಸಂಗತಿಗಳು ಗ್ರಾಮವನ್ನು ತನ್ನ ತೆಕ್ಕೆಯೊಳಗೆ ಸೇರಿಸಿಕೊಳ್ಳುವಂತೆ ಪ್ರಭಾವಿಸಿದವು. ಭಾರತೀಯ ರಾಷ್ಟ್ರ ಚಳುವಳಿಯ ಸಂದರ್ಭದಲ್ಲಿ ಗ್ರಾಮವು ಒಂದು ಹೊಸ ಜಾಗವಾಗಿ ಸಾಮ್ರಾಜ್ಯ ಮತ್ತು ರಾಷ್ಟ್ರಗಳ ಹೆಣಿಗೆಯ ವ್ಯಾಖ್ಯಾನವು ಅನಾವರಣಗೊಳ್ಳುತ್ತದೆ. ಈ ರಾಷ್ಟ್ರೀಯತೆಯ ವ್ಯಾಖ್ಯಾನದಲ್ಲಿ ಅದನ್ನು ಸ್ವಾಧೀನಪಡಿಸಿಕೊಳ್ಳುವಾಗ, ಬ್ರಿಟಿಷರಿಗೆ ಭಾರತವು ಒಡ್ಡಿದ ಅಮೂರ್ತ ಪ್ರತಿರೋಧವನ್ನು ಸಹ ಸೃಷ್ಟಿಸುವಲ್ಲಿ ನೆರವಾಗುತ್ತದೆ. ಅಂದರೆ ಭಾರತೀಯ ರಾಷ್ಟ್ರೀಯತೆಯು ಬ್ರಿಟಿಷ್ ಪ್ರಭುತ್ವದೊಳಗೆ ರೈತಾಪಿ ಭೌಗೋಳಿಕತೆಯ ವಿಶಿಷ್ಟ ರಾಷ್ಟ್ರಪ್ರಜ್ಞೆಯನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಗುತ್ತದೆ. ಅಲ್ಲದೆ, ವಸಾಹತುಶಾಹಿಯ ದಬ್ಬಾಳಿಕೆಯ ವಿರುದ್ಧ ಭಾರತೀಯರು ಒಂದಾಗಲು ಬೇಕಾದ, ವಸಾಹತುಶಾಹಿಯ ಆಕ್ರಮಣದ ಹೊರತಾಗಿಯೂ ಮೈಲಿಗೆಯಾಗದೆ ಉಳಿದಂತಹ ಅಂತಃಸತ್ತ್ವದ ದ್ರವ್ಯವನ್ನು ರೂಪಿಸುವಲ್ಲಿ ಅದು ನೆರವಾಯಿತು. ರಾಷ್ಟ್ರೀಯತೆಯ ದೃಷ್ಟಿಯಿಂದ ಹೇಳುವುದಾದರೆ, ಸಂಪ್ರದಾಯಬದ್ಧ ಭಾರತದ ಹಳ್ಳಿಯ ಈ ಉತ್ಸವವು ನಗರದ ಮಧ್ಯಮ ವರ್ಗದ 'ಬುದ್ಧಿಜೀವಿಗಳು' ಹಾಗೂ ಗ್ರಾಮೀಣ, ಜಡ್ಡುಗಟ್ಟಿದ ಸಂಪ್ರದಾಯಬದ್ಧ ಗ್ರಾಮದ ನಡುವಿನ ಅಂತರವನ್ನು ತಗ್ಗಿಸಲು ನೆರವಾಯಿತು. ಭಾರತೀಯ ಗ್ರಾಮದ ಈ ಅಂತಃಸತ್ತ್ವವು ರಾಷ್ಟ್ರದ ಏಕರೂಪಿ ಚರಿತ್ರೆಯ ಪ್ರಜ್ಞೆಯೊಂದನ್ನು ಹುಟ್ಟುಹಾಕುತ್ತಾ ಈ ಭೌಗೋಳಿಕ ರಾಷ್ಟ್ರಚರಿತ್ರೆ ಹಾಗೂ ಎಲ್ಲ ಜನರ ಚರಿತ್ರೆಯನ್ನು ಒಂದು ರಾಷ್ಟ್ರೀಯ ಸೀಮಾರೇಖೆಯೊಳಗೆ ಜೀರ್ಣಿಸಿಕೊಳ್ಳಲಾಗುತ್ತದೆ. ಹೀಗೆ ಗ್ರಾಮವನ್ನು ತಮ್ಮ ಪ್ರವಚನದಲ್ಲಿ ಒಳಗೊಳ್ಳುತ್ತಾ ದೇಶದ ಶಿಕ್ಷಿತ ನಾಯಕರು ದೇಶ ಮತ್ತು ಹಳ್ಳಿ ಜನರ ಪರವಾಗಿ ಮಾತನಾಡುವಾಗ ಅಖಿಲ ಭಾರತೀಯ ರಾಷ್ಟ್ರೀಯ ಕ್ಷೇತ್ರವೊಂದರ ಸೃಷ್ಟಿಯನ್ನು ಪರೋಕ್ಷವಾಗಿ ಸೂಚಿಸುತ್ತಾರೆ. ಅಶಿಕ್ಷಿತ ಜನರಿಗಾಗಿ ಈ ಶಿಕ್ಷಿತ ಧ್ವನಿಯು, ರಾಷ್ಟ್ರೀಯ ಬೌದ್ಧಿಕ ಚಿಂತನೆಯಲ್ಲಿ ಗ್ರಾಮವನ್ನು ಗ್ರಾಮೀಣ ಜನಸಮೂಹಗಳಿಗೆ ಮತ್ತು ಸಾರ್ವಜನಿಕರಿಗೆ ಪ್ರತಿನಿಧೀಕರಿಸಲಾಗುತ್ತದೆ. ಈ ಪರಿಕಲ್ಪಿತ ರಾಷ್ಟ್ರದ ಸ್ವಯಂಘೋಷಿತ ಪ್ರತಿನಿಧಿಯಾಗಿ ತಮಗೆ ತಾವೇ ಪರಂಪರೆಯ (Vernacular) ಗ್ರಾಮವನ್ನು ಆಧುನಿಕ ಪರಿಭಾಷೆ (ಇಂಗ್ಲಿಷ್)ಗೆ ಭಾಷಾಂತರಿಸಿಕರಿಸುವ ಹೊಣೆಯನ್ನು ಹೊರುತ್ತಾರೆ. ತಮ್ಮ ಮಧ್ಯವರ್ತಿಯ ಈ ಮೌಲ್ಯದಿಂದಾಗಿ ಈ ರಾಷ್ಟ್ರೀಯತೆಯ ಧ್ವನಿಗಳು ದೇಶದ ಸಮಸ್ಯೆಗಳನ್ನು ಮತ್ತು ಭಾರತೀಯ ಗ್ರಾಮವನ್ನು ವಸಾಹತುಶಾಹಿಯ ನೀತಿ ಮತ್ತು ಸಮಸ್ಯೆಯನ್ನಾಗಿ ಮಾಡುವಲ್ಲಿ ಯಶಸ್ವಿಯಾಗುತ್ತದೆ. (ಅದನ್ನೆ ನೋಡಿ : 9-10)

ಕ್ರಮೇಣ, ಗ್ರಾಮವು ಕಾದಂಬರಿಗಳಲ್ಲಿ, ಸಣ್ಣಕಥೆಗಳಲ್ಲಿ, ನಾಟಕದಲ್ಲಿ, ಕಾವ್ಯದಲ್ಲಿ ಹಾಗೂ ಇತರ ಸಾಹಿತ್ಯ ರೂಪಗಳಲ್ಲಿ ಒಂದು ಮೂರ್ತಿವೆತ್ತ ಪ್ರತೀಕವಾಗಿ ಪ್ರತಿನಿಧಿಕೊಳ್ಳುತ್ತದೆ (ಬಳ್ಳ, 1992) ಭಾರತೀಯ ಗ್ರಾಮದ ಈ ಸಾಹಿತ್ಯಿಕ ಚಿತ್ರಣವು ಬಂಕಿಮಚಂದ್ರ ಚಟ್ಟೋಪಾಧ್ಯಾಯರಿಂದ ಹಿಡಿದು ಮುಖ್ಯ ಪ್ರೇಮಚಂದ್ರರ ತನಕವೂ ಒಂದು ಪರಂಪರೆಯನ್ನೇ ಒಳಗೊಳ್ಳುತ್ತಾರೆ. ಈ ಸಾಹಿತ್ಯಿಕ ಚಿತ್ರಣಗಳು ವಿಶಿಷ್ಟವಾಗಿ ಉದಯಮಾನ ರಾಷ್ಟ್ರೀಯತೆಯ ಧಾರೆಗಳನ್ನು ಜಾಳುಜಾಳಾದ ಲಕ್ಷಣದೊಟ್ಟಿಗೆ ಒಳಗೊಳ್ಳುತ್ತವೆ (ನೋಡಿ, ಕವಿರಾಜಾ, 1992). 1920ರ ವೇಳೆಗೆ ಗ್ರಾಮದ ಕುರಿತ ಶಿಸ್ತುಬದ್ಧ ಅಧ್ಯಯನಗಳು ಸಂಸ್ಥೀಕರಣಗೊಂಡು ಗ್ರಾಮದ ಮೇಲೆ ವಿಜಯಿಯಾದ ರಾಷ್ಟ್ರೀಯ ಪರಿಕಲ್ಪನೆಯು ಗೋಚರವಾಗುತ್ತದೆ. ಸ್ಪಷ್ಟವಾಗಿ ಹೇಳುವುದಾದರೆ, ರಾಷ್ಟ್ರೀಯತೆ ಎಲಿಟರು ಹಾಗೂ ಅದರ ಪ್ರತಿನಿಧಿಗಳು ತಮ್ಮ ವಸಾಹತುಪೂರ್ವದ ಭೂತದ ಬಗ್ಗೆ ಮೂಲಭೂತ

ಭಿನ್ನದೃಷ್ಟಿಕೋನವನ್ನು ಹೊಂದಿದ್ದವರಲ್ಲದೆ ತಮ್ಮ ಆಳರಸರೊಡನೆ ಭಿನ್ನವಾಗಿತ್ತೆನ್ನುತ್ತಾರೆ. ಆದಾಗ್ಯೂ ಒಂದು ಸುವರ್ಣಯುಗದ ತಮ್ಮ ಹಂಬಲದಲ್ಲಿ, ಸ್ಥರವಿನ್ಯಾಸಕೊಳ್ಳಪಟ್ಟ, ಸ್ವಯಂ ನಿರ್ಧರಿತ ಮತ್ತು ಆಂತರಿಕ ದೃಷ್ಟಿಯುಳ್ಳ ಗ್ರಾಮೀಣ ಸಮುದಾಯದ ಮಿಥ್ಯೆಯು ಒಂದು ಪ್ರಮುಖ ಪಾತ್ರವನ್ನು ವಹಿಸುವಲ್ಲಿ ಮುಂದುವರಿಯುತ್ತದೆ. ಕುತೂಹಲದ ಅಂಶವೆಂದರೆ, ಈ ಗ್ರಾಮದ ಕಲ್ಪನೆಯು ವಸಾಹತು ನಿರ್ಮಾತೃಗಳು ಭಿನ್ನವಾದ ಕಾರಣ ಮತ್ತು ಉದ್ದೇಶಗಳಿಗಾಗಿ ರೂಪಿಸಿದ್ದೇ ಈ ರಾಷ್ಟ್ರೀಯತೆಯ ಹೇಳಿಕೆಗಳಲ್ಲೂ, ಪ್ರತಿಧ್ವನಿಗೊಳ್ಳುತ್ತದೆ (ನೋಡಿ ಸುಮೋ : 1970). ಗ್ರಾಮದ ಕುರಿತ ಈ ವಸಾಹತು ಚಿಂತನೆಯೊಳಗೆ ಇರುವುದೇನೆಂದರೆ ಗ್ರಾಮವು ರಾಷ್ಟ್ರೀಯ ಪ್ರತಿರೋಧದ ಸಂಕೇತವಾಗಿ ಹಾಗೂ ಅಪ್ಪಟ, ಪ್ರಾಮಾಣಿಕ ಹಾಗೂ ಶ್ರೇಷ್ಠ ನಾಗರಿಕತೆಯ ಪರಿಶುದ್ಧ ಅಂಶವಾಗಿ ಬಿಡುತ್ತದೆ. ರಾಷ್ಟ್ರೀಯ ಆತ್ಮದ ಚರಮಗೀತೆಯಾಗಿ ಅದನ್ನು ಭಾವಿಸಲಾಗುತ್ತದೆ. ಓರಿಯಂಟಲಿಸ್ಟ್ ಪ್ರವಚನವನ್ನು ಮೈಗೂಡಿಸಿಕೊಂಡ ಈ ರಾಷ್ಟ್ರೀಯ ಬುದ್ಧಿಜೀವಿಗಳಿಗೆ ನಾವು ಋಣಿಗಳೆಂದೇ ಹೇಳಬೇಕು; ಯಾಕೆಂದರೆ ವಸಾಹತುಶಾಹಿಯ ದಬ್ಬಾಳಿಕೆಯ ಮಧ್ಯೆಯು ಯಥಾರ್ಥವಾಗಿ ಮಿಳಿದುಕೊಂಡ ಗ್ರಾಮದ ಸ್ವರೂಪದಲ್ಲಿ ರಾಷ್ಟ್ರೀಯತ್ವವನ್ನು ಜೀವಂತವಾಗಿ ಉಳಿಸಿಕೊಳ್ಳಲಾಗುತ್ತದೆ. ಅಂದರೆ ವಸಾಹತುಶಾಹಿ - ಓರಿಯಂಟಲಿಸ್ಟ್ (ಪೌರಸ್ತ್ಯದ ಚಿಂತನೆ) ಪರಂಪರೆಯ ಶೋಧನೆಯನ್ನು ರಾಷ್ಟ್ರೀಯತೆಯ ಉದ್ದೇಶಗಳಿಗೆ ಪೂರಕವಾಗಿ ಪರಿವರ್ತಿಸಲಾಗುತ್ತದೆ. (ಈ ಪೌರಸ್ತ್ಯ ಪ್ರವಚದಲ್ಲಿ, ಗ್ರಾಮವೂ ಒಂದು ಅತಿ ಮುಖ್ಯ ಘಟಕವಾಗಿ ಬಿಟ್ಟಿತ್ತು.)

ಅನಂತರದಲ್ಲಿ, ಅಂದರೆ 20ನೇ ಶತಮಾನದ ಆರಂಭದಲ್ಲಿ ಗ್ರಾಮಸಮುದಾಯವು ವಿಶೇಷವಾದ ಬೌದ್ಧಿಕ ಅಭಿವ್ಯಕ್ತಿಯಲ್ಲಿ ಒಂದು ವಿಶೇಷವಾದ ರಾಷ್ಟ್ರೀಯತೆಯ ಅಭಿರುಚಿಯನ್ನು ಹೊಂದಿ ಸಾಮಾಜಿಕ ವೈಜ್ಞಾನಿಕ ಬರವಣಿಗೆಗಳಾಗಿ ಕರೆಯಲಾಗುತ್ತದೆ. ಈ ಬರವಣಿಗೆಗಳು ಸಹ ಗ್ರಾಮದ ಬಗೆಗೆ ಒಂದು ಚಿಂತನೆಯನ್ನು ಮಂಡಿಸುವುದಲ್ಲದೆ ಅಂದಿನ ಬ್ರಿಟಿಷ್ ಇಂಡಿಯಾದಲ್ಲಿ ದೇಶ ಭಕ್ತಿಯ ಸಂಕೇತವಾಗಿಯೂ ಗೋಚರಿಸುತ್ತದೆ. ಆರ್ಮ್ಯಾಂಬದತ್ತನ ಭಾರತೀಯ ಆರ್ಥಿಕ ಚರಿತ್ರೆಯು (1901-03) ರಾಷ್ಟ್ರೀಯ ಚಿಂತನೆಯಲ್ಲಿ ಒಂದು ಮಹತ್ತ್ವದ ಸ್ಫೂರ್ತಿದಾಯಕ ಅಂಶವಾಗಿ ಬಿಡುತ್ತದೆ. ನೆಹರೂ ಸಹ ಇದೇ ರೀತಿಯಾಗಿ ಒಂದು ಸಾಂಪ್ರದಾಯಿಕ ಬೇಸಾಯ ಪದ್ಧತಿಯ ಸಮೂಹ ಅಥವಾ ಸಹಕಾರ ಗ್ರಾಮವನ್ನಾಗಿ ಪರಿಕಲ್ಪಿಸುತ್ತಾರೆ (ನೋಡಿ ನೆಹರೂ : 1945). ಕ್ರಮೇಣ, ಪರಂಪರೆಯ ಈ ಗ್ರಾಮ ಪರಿಷತ್ ಕಲ್ಪನೆಯು ಮುನ್ನೆಲೆಗೆ ಬಂದು ಪಂಚಾಯತಿ ಎನ್ನುವುದು ಗ್ರಾಮವಾಗಿ ಕ್ರಿಯಾಶೀಲವಾಗಿರದೆ, ಅದೊಂದು ಜಾತಿಪರಿಷತ್ತಾಗಿ ಕ್ರಿಯಾಶೀಲವಾಗಿ ಪರ್ಯವಸಾನಗೊಳ್ಳುತ್ತದೆ (ಇಂಡೋನೇಷ್ಯಾ : 1996-47; ಮೆಂಡೆಲ್‌ಸನ್ : 1993). ಇದಕ್ಕೆ ಸಂಬಂಧಿಸಿದಂತೆ ಐಕ್ಯಗ್ರಾಮದ ಕಲ್ಪನೆಯು ಜಾಜ್ಮಾನಿ ಪದ್ಧತಿಯ ಆಧಾರದ ಮೇಲೆ ರೈತರು, ಕುಶಲಕರ್ಮಿಗಳು ಮತ್ತು ಇತರೆ ಕಸುಬು ಜಾತಿಗಳ ನಡುವೆ ಸ್ಥಳೀಯವಾಗಿ ನಡೆಯುತ್ತಿದ್ದ ವಸ್ತು ವಿನಿಮಯವು ಕೊಳ್ಳುಕೊಡು ಪದ್ಧತಿ ಹಾಗೂ ಸಮಾನತೆಯ ಚಿತ್ರಣವನ್ನು ಪ್ರೇರೇಪಿಸುತ್ತದೆಂದು ಭಾವಿಸಲಾಯಿತು. ಈ ಸ್ಥಳೀಯ ಸಾಮಾಜಿಕ ಉತ್ಪಾದನಾ ಹಂಚಿಕೆಯು ಗ್ರಾಮೀಣ ಭಾರತದ ಪ್ರಧಾನ ಲಕ್ಷಣವಾಗಿ ತೋರಿಸಲಾಗುತ್ತದೆ. ಚರಿತ್ರಕಾರರಾದ ಕೋಸಂಬಿ ಮತ್ತು ಅಲ್ಟೇಕರಾರವರು ವಸಾಹತುಪೂರ್ವ ಗ್ರಾಮ ಸಮುದಾಯದ ಮುಚ್ಚಿಕೊಂಡ ಮತ್ತು ಜಡಗೊಂಡ ಲಕ್ಷಣವನ್ನು ಪ್ರಶ್ನಿಸಿದ್ದಾಗಿಯೂ, ಎಲ್ಲವನ್ನೂ ಮೀರಿದ ಪ್ರಭುತ್ವದ ಚೌಕಟ್ಟನೊಳಗೆ ಅದನ್ನು ಒಳಗೊಂಡು ಆಧುನಿಕ ಲಕ್ಷಣಗಳಾದ ಪ್ರಜಾಪ್ರಭುತ್ವ ಮತ್ತು ಸಮಾನತೆಯನ್ನು ಭಾರತೀಯ ಗ್ರಾಮದ ಮೇಲೆ ನಾಚಿಕೆಯಿಲ್ಲದೆ ಹೊರಿಸಲಾಗುತ್ತದೆ. ಆದರೂ ಆದರ್ಶೀಕೃತ ಗ್ರಾಮದ ಕಲ್ಪನೆಯನ್ನು ಹೊಂದಿದ ಜನ, ಆ ಕಲ್ಪನೆಗೆ ಪೂರಕವಾಗಿ ವಾಸ್ತವವನ್ನು ಆದಷ್ಟು ರೂಪಿಸಲು ಪ್ರಯತ್ನಿಸುತ್ತಾರೆ (ಬೆಡೆಲ್ಲಿ : 1980 : 110-1).

ಈ ರಾಷ್ಟ್ರೀಯತೆಯ ಸಾಹಿತ್ಯದಲ್ಲಿನ ಮತ್ತೊಂದು ಪ್ರಧಾನ ವಿಷಯವೆಂದರೆ ಭಾರತೀಯ ಗ್ರಾಮವು ವಸಾಹತುಶಾಹಿಯ ನೀತಿಯಿಂದಾಗಿ ಛಿದ್ರಗೊಳ್ಳ ತೊಡಗಿತ್ತೆನ್ನುವುದು ವಸಾಹತುಶಾಹಿ ಆಡಳಿತವು ಪ್ರಧಾನ ಅಪರಾಧಿಯಾಗಿ, ಹಳ್ಳಿಯೊಳಗಿನ ಸಾಮಾಜಿಕ ಹೊಂದಾಣಿಕೆ ಮತ್ತು ಒಗ್ಗಟ್ಟನ್ನು ನಾಶಮಾಡಿತಲ್ಲದೆ, ಅಳಿವಿಗೂ ಕಾರಣವಾಯಿತ್ತೆನ್ನಲಾಗುತ್ತದೆ. ಇದಕ್ಕೆ ಮುಂಚೆ ಹಳ್ಳಿಯ ಐಡೆಂಟಿಟಿಯು ಆವೃತ್ತವಾಗಿದ್ದು ಸಂಪ್ರದಾಯಬದ್ಧ ರೈತ ಸಮುದಾಯದಿಂದ. ಆದರೆ ಕ್ರಮೇಣವಾಗಿ ಜಾರಿಯಾದ ವಸಾಹತುಶಾಹಿ ಭೂಕಂದಾಯ ನೀತಿಗಳು ಗ್ರಾಮದೊಳಗೆ ನುಗ್ಗಿತ್ತಲ್ಲದೆ ಅಗಾಧ ರೀತಿಯ ಸಂಘ-ಸಂಸ್ಥೆಗಳಿಂದಾಗಿ ಪರಸ್ಪರ ಸಹಕಾರದಲ್ಲಿ ನಡೆಯುತ್ತಿದ್ದ ಬದುಕು ಬಿಕ್ಕಟ್ಟಿಗೊಳಗಾಗುತ್ತದೆ. ಭಾರತೀಯ ಗ್ರಾಮದೊಳಗೆ ಅಳವಡಿಸಿಕೊಂಡಿದ್ದ ರೈತನ ಆರ್ಥಿಕತೆ ವಸಾಹತುಶಾಹಿಯಡಿ ಮಾರುಕಟ್ಟೆ ಕೇಂದ್ರವಾಗಿ ವಾಣಿಜ್ಯ ಬೇಸಾಯ ನೀತಿಗೆ ಪಲ್ಲಟಗೊಳ್ಳುತ್ತದೆ. ಇದರ ಪರಿಣಾಮವಾಗಿ ಸಮಾನ ಹಿತಾಸಕ್ತಿಗಳು ಹೋಗಿ, ಸಂಘರ್ಷ ಮತ್ತು ಪೈಪೋಟಿಗೆ ಎಡೆಯಾಗುತ್ತದೆ. ರಾಷ್ಟ್ರೀಯ ಪರಿಭಾಷೆ ಮತ್ತು ಅದರ ಅಭಿವ್ಯಕ್ತಿಯ'ಸ್ವದೇಶಿ' ಐಡಿಯಾಲಜಿಯಾಗಿ ಮೇಲಿನ ಚಿಂತನೆಯನ್ನೇ ಧ್ವನಿಸುತ್ತದೆ. ಇದನ್ನೇ ಬಿಂಬಿಸುವ ದೇಶಿ ಕರಕುಶಲತೆ ಮತ್ತು ಗೃಹಕೈಗಾರಿಕೆಗಳ ನಾಶ, ಮ್ಯಾಂಚೆಸ್ಟರ್ ಉತ್ಪಾದಿತ ಸಿದ್ಧವಸ್ತುಗಳ ಉನ್ನತೀಕರಣ, ಹಣನೀಡುವ ಲೇವಾದೇವಿಗಾರರ ಪ್ರವೇಶ, ಗೈರುಹಾಜರಿಯ ಭೂಮಾಲೀಕತ್ವ, ರೈತರ ಆಸ್ತಿ ಹಕ್ಕುಗಳ ಕಳೆದುಕೊಳ್ಳುವಿಕೆ, ಅತಿಯಾದ ಬಡತನ ಮತ್ತು ಸ್ವಾವಲಂಬನೆಯ ಆರ್ಥಿಕ ಸ್ಥಿತಿಯ ನಾಶ...ಮುಂತಾದ ವಾದಗಳನ್ನು ಹೆದರಿಸಬೇಕಿಲ್ಲ, ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಈ ಎಲ್ಲ ಕಾಯಿಲೆಗಳು ರಮ್ಯ ಮನೋಹರ ಭಾರತೀಯ ಗ್ರಾಮವು ಕುಂಠಿತಗೊಂಡದ್ದಕ್ಕೆ ವಸಾಹತುಶಾಹಿ ಆಡಳಿತವನ್ನೇ ದೂರುವುದು. ಇಂತಹ ರಾಷ್ಟ್ರೀಯ ಮಾಧುರ್ಯತೆಯಲಿ, ವಸಾಹತುಶಾಹಿಯಲಿ ಚಿತ್ರಿಸಿದ ಗ್ರಾಮದ ಬಗೆಗಿನ ಹಿಂದಿನ ರೂಪಿಕೆಗಳನ್ನು ಎಳ್ಳಷ್ಟು ಪ್ರಶ್ನಿಸದೇ, ವೇದ ವಾಕ್ಯವೆಂಬಂತೆ ರಾಷ್ಟ್ರೀಯರು ಒಪ್ಪಿ ಬಿಡುತ್ತಾರೆ. ಇದರ ಮತ್ತೊಂದು ತೀವ್ರವಾದ ನಿಲುವೆಂದರೆ ಬ್ರಿಟಿಷ್ ಪೂರ್ವದ ಗ್ರಾಮ ಸಮುದಾಯವು ಅವರ ಆಡಳಿತ ಮತ್ತು ಆರ್ಥಿಕ ನೀತಿಯಿಂದಾಗಿ ನಾಶವಾಗುತ್ತದೆಯಾದರೂ ಅದೊಂದು ಸುಖಿ ಸಮುದಾಯವಾಗಿಯೇ ಇತ್ತು ಎನ್ನುವುದು. ಅಲ್ಲದೆ ಅದೊಂದು ಗಣರಾಜ್ಯ ಸಮುದಾಯವಾಗಿತ್ತೆಂದು ಒತ್ತಿ ಹೇಳಲಾಗುತ್ತದೆ ಹಾಗೂ ಇಂಥ ಹೇಳಿಕೆಗಳ ಗ್ರಹಿತವೆಂದರೆ ಅದು ಪ್ರಜಾಪ್ರಭುತ್ವದ ಸಮುದಾಯವಾಗಿತ್ತೆನ್ನುವುದು.

ಇಲ್ಲಿ ಅಚ್ಚರಿಯಿಲ್ಲದ ಸಂಗತಿಯೆಂದರೆ ವಸಾಹತು ಆಡಳಿತಗಾರ-ವಿದ್ವಾಂಸರು ಭಾರತೀಯ ಗ್ರಾಮ ಸಮುದಾಯದ ಮಿಥ್ಯೆಯನ್ನು ರೂಪಿಸಿದ್ದು, ಆನಂತರದಲ್ಲಿ ಅದು ಭಾರತೀಯ ರಾಷ್ಟ್ರೀಯವಾದಿಗಳ ದೃಷ್ಟಿಯಲ್ಲಿ ಭೂತದ ಪ್ರತಿಬಿಂಬವಾಗುತ್ತದೆ. (ಡುಮೋ 1970; ಕ್ಲೂನ್ 1987). ಈ ಮಿಥ್ಯೆಯು ತನ್ನ ಪ್ರಬಲವಾದ ಅಭಿವ್ಯಕ್ತಿಯನ್ನು ಪಡೆಯುವುದು ಮೋಹನದಾಸ್ ಕರಮಚಂದಾ ಗಾಂಧಿಯ ರಾಜಕಾರಣದಲ್ಲಿ. 1920ರ ಹೊತ್ತಿಗೆ ಭಾರತೀಯ ರಾಷ್ಟ್ರೀಯ ಚಳುವಳಿಯ ಸಾಮಾಜಿಕ ಲಕ್ಷಣವು ಬದಲಾದುದು, ಗಾಂಧೀಜಿಯು ಗ್ರಾಮ ಮತ್ತು ಗ್ರಾಮೀಣರ ಬಗ್ಗೆ ಹೊಂದಿದಂತಹ ಕಾಳಜಿಯಿಂದಲೇ ಗೊತ್ತಾಗುತ್ತದೆ. (ಚಂದ್ರ 1979). ತದ ನಂತರದಲ್ಲಿ ಅವರ ಇಡೀ ರಾಜಕೀಯ ಬದುಕು ಭಾರತಕ್ಕಾಗಿ ಒಂದು ವಿವರಣಾತ್ಮಕ ಸಿದ್ಧ ಮಾದರಿಯನ್ನು ಚಿತ್ರಿಸಲು ಮುಡಿಪಾಗುತ್ತದೆ. ಅದು ಮುಂದೆ ಸ್ವಾವಲಂಬಿ ಮತ್ತು ರಾಜಕೀಯವಾಗಿ ಸ್ವತಂತ್ರವಾದ ಗ್ರಾಮಗಳ ಸ್ವರೂಪವನ್ನು ಪಡೆಯುತ್ತದೆ. ಈ ಮಿಥ್ಯೆಯ ಅನುವಾದವು ರಾಜಕೀಯ ಕ್ರಿಯೆಗೆ ಆಧಾರವಾಗಿ, ಅದನ್ನು 'ಗ್ರಾಮಸ್ವರಾಜ್ಯ', 'ಗ್ರಾಮೋದ್ಧಾರ', 'ಸ್ವಾವಲಂಬನೆ' ಮುಂತಾಗಿ ಕರೆಯಲಾಗುತ್ತದೆ. ಈ ಪರಿಕಲ್ಪನೆಗಳೊಳಗಿನ ಗ್ರಹಿತವೆಂದರೆ 'ಸುವರ್ಣಯುಗ'ವೊಂದರ ಭೂತವನ್ನು ಪ್ರಚೋದಿಸಿ, ಭಾರತವೊಂದು ಆದಿಮ ಗ್ರಾಮ ಸಮುದಾಯಗಳಾಗಿದ್ದು, ಭಾರತೀಯ ಸಂವಿಧಾನ ರೂಪಿಕೆಯ ಪ್ರಕ್ರಿಯೆಯನ್ನು ಸಹ ಪ್ರಭಾವಿಸುವುದು. ಸಂವಿಧಾನದಲ್ಲಿ ಅದೊಂದು ಪ್ರಧಾನ ನೀತಿಯಾಗಿ ಬಾರದಿದ್ದರೂ, ಅದರ ಪ್ರತ್ಯಕ್ಷತೆಯನ್ನು ನಿರಾಕರಿಸಲಾಗದು. ರಾಜ್ಯ ನಿರ್ದೇಶಕ ತತ್ವಗಳಲ್ಲಿ ಗ್ರಾಮ ಪಂಚಾಯಿತಿಗಳ ಸೇರಿರುವಿಕೆ ಹಾಗೂ 1950ರ ಆರಂಭದಲ್ಲಿ ದೊಡ್ಡದಾಗಿ ಜಾರಿಯಾದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ (ಸಿ.ಡಿ.ಪಿ.)ಗಳು ಗ್ರಾಮದೊಂದಿಗಿನ ಭಾರತೀಯ ಸರ್ಕಾರದ ಧೋರಣೆಗಳತ್ತ ಬೆಳಕು ಚೆಲ್ಲುತ್ತವೆ.

ಈ ಸ್ವತಂತ್ರರಾದ ಗ್ರಾಮ ಸಮುದಾಯದ ರಾಷ್ಟ್ರೀಯತೆಯ ಮಿಥ್ಯೆಯು 'ಭಾರತೀಯ ರಾಜಕಾರಣದ

ಮರುಸಂಘಟಿಸುವಿಕೆ' ಎಂಬ ಜಯಪ್ರಕಾಶ ನಾರಾಯಣ್ ಮನವಿಗೂ ಹೊಸ ಆಧಾರವನ್ನು ನೀಡುತ್ತದೆ. ಅಂದರೆ ಸ್ವಾತಂತ್ರ್ಯೋತ್ತರ ಭಾರತದಲ್ಲೂ ರಾಜಕೀಯ ನೀತಿಯೊಳಗೂ ಗಾಂಧೀಜಿಯವರ ಚಿಂತನೆಗಳನ್ನು ಕಾಣಬಹುದಾಗಿದೆ. ಜಯಪ್ರಕಾಶ ನಾರಾಯಣರವರ ಪ್ರಕಾರ, "ಗ್ರಾಮ ಸಮುದಾಯವು ಅಗತ್ಯಗಳಿಗೆ ಸ್ವಯಂ ಮಿತಿ ಮತ್ತು ಸಾಮಾಜಿಕ-ರಾಜಕೀಯ ಚಿಂತನೆಗಳಲ್ಲಿನ ಒಮ್ಮತ-ಈ ಎರಡೂ ಆದರ್ಶಗಳನ್ನು ಉಳಿಸುವುದು ಮತ್ತು ಪೋಷಿಸುವುದು ಭಾರತೀಯ ರಾಜಕೀಯ ವ್ಯವಸ್ಥೆಗೆ ಮೂಲಭೂತ ಅಂಶವಾಗುತ್ತದೆ" (ಉದ್ಧೃತ, ಬೊಲ್ಯಾಮೊಕಾ 1972 : 107). ಇನ್ನು ನಂತರದಲ್ಲಿ 'ಭಾರತ Vs ಇಂಡಿಯಾ' ವಿವಾದವು ರಾಜ್ಯ-ಗ್ರಾಮ ಸಂಬಂಧ ಕುರಿತಂತೆ ಹೊಸ ಆಶಯಗಳನ್ನು ಸೂಚಿಸುತ್ತದೆ (ನೋಡಿ, ಜೋಶಿ 1985, 1987). ಆದ್ದರಿಂದ, 'ಗ್ರಾಮ' ಎನ್ನುವ ಕಲ್ಪನೆಯು ವಿಸ್ತಾರವಾದ ಭೂಪ್ರದೇಶವಾಗಿ ವ್ಯಾಪಿಸುತ್ತಾ, ಭಾರತ ಎನ್ನುವುದರೊಡನೆ ಒಂದಾಗಿ, ಪ್ರಾಮಾಣಿಕ ಮತ್ತು ನೈಜ ಭಾರತವಾಗಿ, ಗ್ರಾಮೀಣ ಬೂರ್ಜ್ವಾಗಳ ಹಿತಾಸಕ್ತಿಗಳನ್ನು ಉಳಿಸಿಕೊಳ್ಳುವ ರಾಜಕೀಯ ತಂತ್ರಗಾರಿಕೆಯಾಗಿ ಬಿಡುತ್ತದೆ (ಫ್ರಾಂಕೆಲಾ 1978; ಬರ್ದಗಾ 1984; ರುಡೊಲ್ಫಾ ಮತ್ತು ರುಡೊಲ್ಫಾ 1987).

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿಯೆನ್ನುವುದು ಅತಿಯಾದ ರಾಷ್ಟ್ರೀಯತೆ ವಿಶ್ವಾಸ ಮತ್ತು ಕಾವಿನಿಂದ ಮೂಡಿದ್ದೆಂದು ವಾದಿಸಿದಲ್ಲಿ ವಿಷಯಾಂತರವೇನೂ ಆಗಲಾರದು. ವಸಾಹತ್ತೋತ್ತರ ರಾಷ್ಟ್ರ ನಿರ್ಮಾಣದ ಉದ್ದೇಶದಲ್ಲಿ ಗ್ರಾಮಾಭಿವೃದ್ಧಿಯು ಅತ್ಯಗತ್ಯ ಅಂಶವಾಗಿ ಪರಿಗಣಿತವಾಗುತ್ತದೆ. ಸಿ.ಡಿ.ಪಿ. (CDP)ಯ ಆರಂಭದ ಘೋಷಣೆಯ ತರಾತುರಿಯು ಅಂಥದೊಂದು ಅಂಶವಾಗುತ್ತದೆ. ಮುಖ್ಯವಾಗಿ, ಗಾಂಧೀಜಿಯವರ ಪರಿಕಲ್ಪನೆಗಳು ಭಾರತೀಯ ರಾಷ್ಟ್ರದ ಅಡಿಗಲ್ಲಾಗದಿದ್ದರೂ, ಅವುಗಳ ಘೋಷಿತ ದಾಟಿಯನ್ನು ದೂರಲಾಗದೆ, ಶಕ್ತಿಯುತವಾಗಿಯೇ ಇದ್ದು, ಇದಕ್ಕೆ ತದ್ವಿರುದ್ಧವಾದ ಅಂಬೇಡ್ಕರ್‌ರವರ ಶಕ್ತಿಯುತವಾದ ವಾದರೂ ಅಲ್ಲಿ ನಿಲ್ಲದಾಗುತ್ತದೆ. (ನೋಡಿ, ಚಟರ್ಜಿ 1986). ನಿರೀಕ್ಷಿಸಿದಂತೆ, ಗಾಂಧೀಜಿಯವರು, ರಾಷ್ಟ್ರೀಯ ವಾದಿಗಳಲ್ಲಿ ಪ್ರಮುಖರಾಗಿ, ನಂಬಿದ್ದೆಂದರೆ ವಸಾಹತು ದಬ್ಬಾಳಿಕೆಯ ನಡುವೆಯೂ ನಿಜವಾದ ಭಾರತ ಗ್ರಾಮಗಳಲ್ಲಿ ಜೀವಂತವಾಗಿತ್ತೆಂದು ಈ ಪರಂಪರಾನುಗತ ವಾಸದ ನೆಲೆಯಲ್ಲಿ ಅವರು, ಸ್ವಾತಂತ್ರ್ಯದ ನಂತರ ಆಧುನಿಕ ಸಮಾಜವನ್ನು ನಿರ್ಮಿಸಲು ಆಶಿಸಿದ್ದರು. ಅವರಿಗೆ, ಗ್ರಾಮೀಣ ಜನ ಸಮೂಹಗಳನ್ನು ತನ್ನ ಬಡತನ, ಅನಕ್ಷರತೆ, ಕಾಯಿಲೆ ಮತ್ತು ದುಂದುಗಾರಿಕೆಯ ಸ್ಥಿತಿಯಿಂದ ಬಿಡುಗಡೆಗೊಳಿಸದಿದ್ದಲ್ಲಿ ರಾಷ್ಟ್ರೀಯ ವಿಮೋಚನೆಯೆನ್ನುವುದು ಒಂದು ಬರೀ ಘೋಷಣೆಯಾಗುತ್ತಿತ್ತಷ್ಟೆ. ಗ್ರಾಮೀಣ ಸಾಮಾಜಿಕ ಬದುಕಿನ ಸಮಗ್ರ ಪರಿವರ್ತನೆ ಮತ್ತು ಗ್ರಾಮಗಳಿಗೆ ಹೆಚ್ಚಿನ ರಾಜಕೀಯಾಧಿಕಾರ ಸಿಗಬೇಕೆಂದು ಅವರು ಆಶಿಸಿದ್ದರು. ಅವರ ಸಾಮಾಜಿಕ ಮರುನಿರ್ಮಾಣದ ಕಾರ್ಯಕ್ರಮಗಳಲ್ಲಿ ಗ್ರಾಮವು ಒಂದು ಕೇಂದ್ರ ಪಾತ್ರವಾಗಿ, ಅಲ್ಲಿ ಮೂಲಭೂತ ಸಮಾನತೆಯಡಿ, ಸದಸ್ಯರೆಲ್ಲರೂ ಸ್ವ-ಆಸಕ್ತಿಯಿಂದ ಮುಕ್ತರಾಗಿ ಗುಂಪಾಗಿರುವುದನ್ನು ಕೊಂಡಾಡಲಾಗುತ್ತದೆ (ನೋಡಿ, ಗಾಂಧಿ : 1948)

ಕಾಂಗ್ರೆಸ್ ಚಳುವಳಿಯ ನಾಯಕತ್ವವು, ಆ ಸಂಗತಿಯ ಬಗ್ಗೆ ಭಿನ್ನಾಭಿಪ್ರಾಯವಿದ್ದಾಗ್ಯೂ, ಪದೇ ಪದೇ ವಸಾಹತ್ತೋತ್ತರ ಅಭಿವೃದ್ಧಿ ನೀತಿಯು ಗ್ರಾಮ ಪುನರ್-ಸಂಘಟಿಸುವಿಕೆಯಲ್ಲಿ ಗಾಂಧಿಯ ನಿಯಮಗಳನ್ನೇ ಅನುಸರಿಸಿತ್ತು. ಈ ವಿಷಯ ಸಂವಿಧಾನ ಸಭೆಯಲ್ಲಿ ಚರ್ಚೆಗೆ ಬಂದು ಕೆಲವು ಸದಸ್ಯರು, ಹೊಸ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಗ್ರಾಮವನ್ನು ಪ್ರಧಾನ ಘಟಕವನ್ನಾಗಿಸಲು ಇಷ್ಟಪಟ್ಟಿದ್ದರು. ಇದಾವುದನ್ನು ಒಪ್ಪದ ಅಂಬೇಡ್ಕರ್ ತನ್ನ ಟೀಕಾಕಾರರಿಗೆ, ಭಾರತೀಯ ಗ್ರಾಮವೆನ್ನುವುದು ಯಾವಾಗಲೂ ಅಸಮಾನತೆಯ ಗುಹೆಯಾಗಿತ್ತಲ್ಲದೆ, ಒಡಕುಗಳ ಮಡುವಾಗಿತ್ತೆಂದು ಹೇಳಿ ಬಾಯಿ ಮುಚ್ಚಿಸುತ್ತಾರೆ. ಅವರ ಈ ಮಧ್ಯಪ್ರವೇಶಿಕೆ ತನ್ನ ಕೇಳುಗರಲ್ಲಿ ಅಧಿಕ ಮಂದಿಯ ಅನುಮೋದನೆಯನ್ನು ಪಡೆಯುತ್ತದೆ. ಹೀಗಿರುವಾಗಲೂ, ಗಾಂಧಿಯ ಆದರ್ಶೀಕೃತ ದಾರ್ಶನಿಕತೆಯು ನೆಹರು-ಅಂಬೇಡ್ಕರ್‌ರವರ ಗಾಢವಾದ ವಾಸ್ತವವಾದಿ ದಾರ್ಶನಿಕತೆಗೆ ಅವಕಾಶ ನೀಡಿತ್ತೆಂದು ಕಾಣುತ್ತದೆ. ಅದಕ್ಕೆ ಸಂವಿಧಾನ ಸಭೆಯಲ್ಲಿ ಸ್ಪಷ್ಟವಾದ ಅನುಮೋದನೆ ದೊರೆಯದಾಗಲೂ ಅನೇಕ ಸದಸ್ಯರು ಗಾಂಧಿಯವರ ಚಿಂತನೆಗಳಿಂದ ಬಹಳಷ್ಟು ಪ್ರಚೋದಿತರಾಗಿದ್ದರು. ಉದಾಹರಣೆಗೆ ಟಿ. ಪ್ರಕಾಸಂ ಚರ್ಚೆಯಲ್ಲಿ ಪಾಲ್ಗೊಂಡು ಹೇಳಿದ್ದೇನೆಂದರೆ :

"ಸಾರಾ, ಗ್ರಾಮ ಗಣರಾಜ್ಯ ಅಥವಾ ಗ್ರಾಮ ಘಟಕವನ್ನು ಸಂವಿಧಾನದ ನಿಜವಾದ ಆಧಾರವನ್ನಾಗಿ ಮಾಡಿಕೊಳ್ಳದೆ ತುಂಬಾ ಉದ್ರೇಕಕಾರಿಯಾದ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ. ಇದರ ನಿರ್ಮಾಣವು ಮೇಲಿನಿಂದ ಆರಂಭವಾಗಿದ್ದು, ತಳದತ್ತ ಸಾಗುತ್ತಿದೆಯೆಂಬುದನ್ನು ಎಲ್ಲ ಕರಗಳಿಂದಲೂ ಒಪ್ಪಿಕೊಳ್ಳಲೇಬೇಕಾಗುತ್ತದೆ. ಈ ನಿಟ್ಟಿನಲ್ಲಿ ಡಾ|| ರಾಜೇಂದ್ರಪ್ರಸಾದ್‌ರವರು ಸೂಚಿಸುವುದೇನೆಂದರೆ ರಚನೆಯೆನ್ನುವುದು ಅಡಿಪಾಯದಿಂದ ಆರಂಭವಾಗಿ ಮೇಲಿನತ್ತ ಸಾಗತಕ್ಕದು. ಸಾರಾ, ಸಂವಿಧಾನವೆನ್ನುವುದು ಅದಾಗಿದ್ದು, ಅಗಲಿದ ಮಹಾತ್ಮಗಾಂಧಿಯವರು ಅದನ್ನು ಸೂಚಿಸಿದ್ದರು ಮತ್ತು ಸುಮಾರು 30 ವರ್ಷಗಳ ಕಾಲ ಅದಕ್ಕಾಗಿ ಶ್ರಮಿಸಲು ಪ್ರಯತ್ನಿಸುತ್ತಿದ್ದರು" (ಉದ್ಧೃತ : ಡಿಸೋಜ 2001-02)

ನಿದರ್ಶನವೆಂದರೆ, ಗ್ರಾಮ ಸ್ವರಾಜ್ಯವು ಗಾಂಧಿ ದಾರ್ಶನಿಕತೆಯಲ್ಲಿ ಸ್ವತಂತ್ರ ಭಾರತದ ಕೇಂದ್ರಬಿಂದುವಾಗಿತ್ತು. ಗಾಂಧೀಜಿಗೆ ಹಳ್ಳಿಗಳನ್ನು ನಿಜವಾದ ಸ್ವಾತಂತ್ರ್ಯದ ಕೇಂದ್ರವಾಗಿಸಿದ್ದ. ಗಾಂಧೀಜಿಗೆ ನಿಜವಾಗಿದ್ದುಕೊಂಡೇ ಹೇಳುವುದಾದರೆ, ಆತನ ಗ್ರಾಮದ ಆದರ್ಶಿಕ ರೂಪು ಪಾರ್ಲಿಮೆಂಟರಿ ವ್ಯವಸ್ಥೆಯ ಬಗ್ಗೆ ಇದ್ದ ಮೂಲಭೂತ ವಿರೋಧದಿಂದ ಕೂಡಿದುದ್ದಾಗಿತ್ತು. ಗಾಂಧಿಯ ಮಾತುಗಳನ್ನೇ ಉಲ್ಲೇಖಿಸುವುದಾದರೆ,

"ಗ್ರಾಮ ಸ್ವರಾಜ್ಯದ ನನ್ನ ಕಲ್ಪನೆಯೆಂದರೆ ಅದೊಂದು ಸಂಪೂರ್ಣ ಗಣರಾಜ್ಯ, ತನ್ನ ಮುಖ್ಯ ಅಗತ್ಯಗಳಿಗಾಗಿ ನೆರೆಹೊರೆಯವರಿಂದ ಸ್ವತಂತ್ರವಾದುದು. ಅದೂ ಇತರ ಅನೇಕ ಅಗತ್ಯಗಳಿಗೆ ಪರಸ್ಪರಾವಲಂಬಿತ ಅವಲಂಬನೆಯು ಅಗತ್ಯವಾದುದು. ಆದ್ದರಿಂದ, ಪ್ರತಿಯೊಂದು ಗ್ರಾಮದ ಪ್ರಥಮ ಕಾಳಜಿಯೆಂದರೆ ತನಗಾಗಿ ಆಹಾರ ಬೆಳೆಗಳನ್ನು ಮತ್ತು ಬಟ್ಟೆಗಾಗಿ ಹತ್ತಿಯನ್ನು ಬೆಳೆಸುವುದು. ಅದು ತನ್ನ ಜಾನುವಾರುಗಳಿಗೆ ಬೇಕಾದಷ್ಟನ್ನು ಕೂಡಿಟ್ಟು, ಮನರಂಜನೆ ಮತ್ತು ವಯಸ್ಕರಿಗೆ ಮತ್ತು ಮಕ್ಕಳಿಗಾಗಿ ಮೈದಾನವನ್ನು ಹೊಂದಿರತಕ್ಕದ್ದು. ತದನಂತರ ಅಧಿಕ ಭೂಮಿ ಉಳಿದಲ್ಲಿ, ಅದರಲ್ಲಿ ಉಪಯುಕ್ತ ವಾಣಿಜ್ಯ ಬೆಳೆಗಳನ್ನು ಬೆಳೆಸಬಹುದು. ಗಾಂಜಾ, ಹೊಗೆಸೊಪ್ಪು, ಅಫೀಮು ಮುಂತಾದುವುಗಳನ್ನು ಬೆಳೆಸಬಾರದು. ಗ್ರಾಮವು ಗ್ರಾಮವಾಗಿದ್ದುಕೊಂಡೇ ಶಾಲೆ ಮತ್ತು ಸಮುದಾಯ ಭವನವನ್ನು ವ್ಯವಸ್ಥೆಗೊಳಿಸಿಕೊಳ್ಳಬಹುದು. ಅದು ಶುದ್ಧ ನೀರು ಸರಬರಾಜಿಗಾಗಿ ಬೇಕಾದ ನೀರಿನ ವ್ಯವಸ್ಥೆಯನ್ನು ಹೊಂದಿರಬೇಕು...ಸಾಧ್ಯವಾದಷ್ಟು ಚಟುವಟಿಕೆಗಳನ್ನು ಸಹಕಾರದ ನೆಲೆಯಲ್ಲೇ ನಡೆಸಬೇಕು...ಗ್ರಾಮದ ಆಡಳಿತವನ್ನು ಪಂಚಾಯತಿಯೇ ನಡೆಸತಕ್ಕದ್ದು...ಇಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನಾಧರಿಸಿದ ನಿಜವಾದ ಪ್ರಜಾಪ್ರಭುತ್ವವಿರುತ್ತದೆ (ಗಾಂಧಿ 1956 : 5-6)

ಗಾಂಧಿಯ ಈ ದಾರ್ಶನಿಕತೆಯು ಅಂಬೇಡ್ಕರ್‌ರವರಿಗೆ ಗ್ರಾಮವನ್ನು ಕುರಿತ ರಮ್ಯ ಕಲ್ಪನೆಯಾಗಿತ್ತು. ಗಾಂಧೀಜಿಯವರು ಇದೊಂದು ಸಾಧ್ಯವಿರುವ ಸಂಗತಿಯೆಂದು ಸ್ಪಷ್ಟವಾಗಿ ನುಡಿಯುವಾಗಲೂ, 'ನನ್ನ ಕನಸಿನ ಗ್ರಾಮ'ವೇ ಹೊರತು ಈಗಿರುವ ಗ್ರಾಮ ಬದುಕಲ್ಲ' ಎಂದಾಗಲೂ ಅಂಬೇಡ್ಕರ್ ಅಂಥ ಸಾಧ್ಯತೆಯನ್ನು ಕಾಣುತ್ತಿರಲಿಲ್ಲ. ಅವರಿಗೆ ಗ್ರಾಮವೆನ್ನುವುದು ದಮನಕಾರಿ ರೂಪವಾಗಿದ್ದು, ಅಲ್ಲಿಂದ ಸ್ವಾತಂತ್ರ್ಯವೆನ್ನುವುದೇನೂ ಬರುವಂತಿರಲಿಲ್ಲ. ಅವರು ತೀವ್ರವಾಗಿ ಗಾಂಧಿಯ ಆದರ್ಶದ ಗ್ರಾಮವನ್ನು ವಿರೋಧಿಸುತ್ತಾರೆ.

"ಹೊಸ ಸಂವಿಧಾನವನ್ನು ಗ್ರಾಮ ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತ್‌ಗಳಾಗಿ ರೂಪಿಸಬೇಕೆಂದು ಹೇಳಲಾಗುತ್ತಿದೆ...ಅವರ ಬೇಡಿಕೆಯೆಂದರೆ ಭಾರತವೆನ್ನುವುದು ಅಂತಹ ಅನೇಕ ಸರ್ಕಾರಗಳನ್ನು ಹೊಂದಿರಬೇಕು. ಗ್ರಾಮ ಸಮುದಾಯಕ್ಕಾಗಿ ಮಿಡಿಯುತ್ತಿರುವ ಭಾರತೀಯ ಬುದ್ಧಿಜೀವಿಯ ಪ್ರೇಮ ಮರುಕವಲ್ಲದಿದ್ದರೂ, ಶಾಶ್ವತವಾಗಿರುವಂಥದ್ದು...ನನ್ನ ಪ್ರಕಾರ ಗ್ರಾಮ ಗಣರಾಜ್ಯವೆನ್ನುವುದು ಭಾರತವನ್ನು ನಾಶಮಾಡಿದಂತೆಯೇ. ಆದ್ದರಿಂದ ನನಗೆ ಆಶ್ಚರ್ಯವೆಂದರೆ ಯಾರು ಪ್ರಾಂತೀಯತೆಯನ್ನು ಮತ್ತು ಕೋಮುವಾದವನ್ನು ವಿರೋಧಿಸಲು ಮುಂದೆ ಬಂದರೋ ಅವರೇ ಗ್ರಾಮದ ಚಾಂಪಿಯನ್ನರಾಗಿರುವುದು. ಹಳ್ಳಿಯೆಂದರೆ ಸ್ಥಳೀಯತೆಯ ಕೂಪವಲ್ಲದೆ, ಅಜ್ಞಾನದ ಗೂಡಲ್ಲದೆ, ಸಂಕುಚಿತ-ಮನಸ್ಸು

ಮತ್ತು ಕೋಮುವಾದವಾಗಿರದೆ ಬೇರೇನು? ಸಂವಿಧಾನದ ಕರಡು ಪ್ರತಿಯು ಹಳ್ಳಿಯನ್ನು ಬಿಟ್ಟು, ವ್ಯಕ್ತಿಯನ್ನು ಅದರ ಘಟಕವಾಗಿ ಸ್ವೀಕರಿಸಿರುವುದು ನನಗೆ ಸಂತಸವಾಗಿದೆ" (ಉದ್ಧೃತ ಡಿಸೋಜಾ 2001 : 6-7)

ಅಂತಿಮವಾಗಿ, ಭಾರತೀಯ ಸಂವಿಧಾನದಲ್ಲಿ ಗ್ರಾಮಕ್ಕೆ ಸಂಬಂಧಿಸಿದಂತೆ ಅವರ ವಿಚಾರಗಳು ಅಂಬೇಡ್ಕರ್‌ಗೆ ಸೇರಿದಂತಹವು. ಆದರೂ, ಇದನ್ನು ಸಂಪೂರ್ಣ ಚಿತ್ರವೆಂಬಂತೆ ನೋಡಲಾಗದು. ಏಕೆಂದರೆ ಗಾಂಧಿಯ ದಾರ್ಶನಿಕತೆಗೆ ರಾಷ್ಟ್ರೀಯತೆಯ ಆರಾಧನೆಯು ಯಾವೊತ್ತಿದ್ದರೂ ಪುನರುತ್ಥಾನಗೊಳ್ಳಬಹುದಾಗಿದೆ. ನಾವು ನಾಲ್ಕನೇ ಅಧ್ಯಾಯದಲ್ಲಿ ನೋಡುವಂತೆ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಇತರ ಗ್ರಾಮೀಣ ಅಭಿವೃದ್ಧಿ ಕ್ರಮಗಳು ಭಿನ್ನ ಧೋರಣೆಗಳ ಹೊರತಾಗಿಯೂ ಗಾಂಧೀಜಿಯವರ ಕ್ಷೇತ್ರಕ್ಕೆ ಸಂಬಂಧಿಸಿದುದಾಗಿದೆ. ಪ್ರಸ್ತುತ ಉದ್ದೇಶಕ್ಕೆ ಸಂಬಂಧಿಸಿದಂತೆ ಗುರುತಿಸುವುದೇನೆಂದರೆ, ವೈರುಧ್ಯವೆಂಬಂತೆ, ಗಾಂಧಿ ಮತ್ತು ಅಂಬೇಡ್ಕರ್‌ಗಳಿಬ್ಬರೂ ಸಹ ಗ್ರಾಮದ ಬಗೆಗಿನ ತಮ್ಮ ಅರ್ಥೈಸುವಿಕೆಯನ್ನು ಓರಿಯಂಟರಿಸ್ಟರ್ ಕಟ್ಟಿಕೊಟ್ಟ ಸ್ವಾವಲಂಬಿತ ಮತ್ತು ಬದಲಾವಣೆಯಲ್ಲಿನ ಗ್ರಾಮದ ಕಲ್ಪನೆಯನ್ನೇ ಒಪ್ಪಿದ್ದಾರೆ (ನೋಡಿ, ಡಿಸೋಜ 2001). ಅವರಿಬ್ಬರೂ ತಮ್ಮ ಗ್ರಹಿಕೆಯನ್ನು ಭಿನ್ನ ಉಪಯೋಗಗಳಿಗೆ ಬಳಸುತ್ತಾರೆಂಬುದು ಇಲ್ಲಿ ನಮಗೆ ಮುಖ್ಯವಲ್ಲ. ವಿನ್ನಿತಾಸೌ ಪಿ.ಕೆ. ಎಸ್. 1979 ಗಾಂಧಿ ಮತ್ತು ಸಾಮಾಜಿಕ ಬದಲಾವಣೆ ಜೋಧಾಪುರ; ರಾವಣ ಪ್ರಕಟಣೆ ನಗರ ಮತ್ತು ಗ್ರಾಮದ ನಡುವೆ ಸಮತೋಲನವನ್ನು ಬಯಸಿದ ಅವರು ಸಾಮಾಜಿಕ ಕೆಡುಕುಗಳಿಂದ ನಿರುದ್ಯೋಗ, ವರ್ಗಬೇಧಗಳು ಮುಂತಾದುವುಗಳನ್ನು ಹೋಗಲಾಡಿಸಲು ನಗರ ಮತ್ತು ಗ್ರಾಮಗಳ ಮಧ್ಯೆ ಸಂಪೂರ್ಣ ಐಕ್ಯತೆ ಅಗತ್ಯವೆಂದು ನಂಬಿದ್ದರು.

ಗಾಂಧೀಜಿಯವರು ಪದೇ ಪದೇ ಹೇಳುವುದೇನೆಂದರೆ ನೈಜ ಭಾರತವು ಬರೀ ಪಟ್ಟಣಗಳಲ್ಲಿಲ್ಲದೆ 'ಅಲ್ಲಿನ ಏಳು ಲಕ್ಷ ಹಳ್ಳಿಗಳಲ್ಲಿ' ಅಡಗಿದೆಯೆನ್ನುತ್ತಾರೆ. ಹೀಗೆ ಹೇಳುವಾಗ ಅಂದಿನ ಗ್ರಾಮಗಳ ಕರುಣಾಮಯ ಸಂಸ್ಕೃತಿಗಳನ್ನು ಆತ ಮರೆತುಬಿಟ್ಟಿದ್ದನೆಂದು ಅರ್ಥವಲ್ಲ. ಆತ ಲಯೋನೆಲಾ ಕರ್ಟಿಸಾನ ಭಾರತೀಯ ಹಳ್ಳಿಗಳ ವಿವರಣೆಯಾದ 'ಅಶುಚಿಯ ಆಗರವಾಗಿದ್ದು ಸಗಣಿಕುಪ್ಪೆಯಲ್ಲಿ ನಿರ್ಮಿತವಾದುದು' ಎಂಬುದನ್ನು ಒಪ್ಪುತ್ತಾನಾದರೂ ಗ್ರಾಮಗಳನ್ನು ಕಡೆಗಣಿಸುವದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತಾನೆ. ಗಾಂಧೀಜಿಯನ್ನು ತಮ್ಮ ಸಮಕಾಲೀನವಾದ ನೆಹರೂ ಮತ್ತು ಅಂಬೇಡ್ಕರ್‌ರವರಿಂದ ಭಿನ್ನವಾಗಿಸುವುದೇನೆಂದರೆ, ಭಾರತೀಯ ಗ್ರಾಮದ ಹೀನಾಯ ಸ್ಥಿತಿಯು ವಿದೇಶಿ ಆಳ್ವಿಕೆಯ ಚಾರಿತ್ರಿಕ ಫಲವಾಗಿದ್ದು, ಗ್ರಾಮದ ಪರಿಸ್ಥಿತಿಯು ಉಪೇಕ್ಷೆಗೆ ಒಳಗಾದದ್ದೆ ಕಾರಣವೆಂಬ ಬಲವಾದ ನಂಬುಗೆ. ಆತನ ಭವಿಷ್ಯವಾಣಿ ಹೀಗಿತ್ತು. 'ಗ್ರಾಮಗಳು ನಾಶವಾದಲ್ಲಿ ಭಾರತವೂ ಸಹ ನಾಶವಾಗುತ್ತದೆ' ಈ ಘೋಷಣೆಯು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಗ್ರಾಮದ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆಯೇ ಹೊರತು, ಅದನ್ನು ಆದರ್ಶೀಕರಿಸಿ, ವರ್ತಮಾನದ ಬದುಕನ್ನು ರಮ್ಯಾಕೃತವಾಗಿ ಬಿಂಬಿಸುವುದೂ ಆಗಿರಲಿಲ್ಲ. ಗಾಂಧಿಯೇನಾದರೂ ಅರ್ಕೇಡಿಯಸಾ ರಮ್ಯವಾದಿಯಾಗಿದ್ದಲ್ಲಿ ತನ್ನ ರಾಜೀಕಯ ಶಕ್ತಿಯನ್ನು ಭಾರತೀಯ ಹಳ್ಳಿಗಳ ಸುಧಾರಣೆಗಾಗಿ ಅಷ್ಟೇನೂ ಬಳಸುತ್ತಿರಲಿಲ್ಲ. ಆತನ ದೃಷ್ಟಿಯಲ್ಲಿ ಹಳ್ಳಿಗಳ ಶಾಶ್ವತ ಹಾಗೂ ಸಮೃದ್ಧ ಬೆಳವಣಿಗೆಯು ಅವುಗಳ ಸೂಕ್ತ ಅಭಿವೃದ್ಧಿಯಿಂದಲೇ ಸಾಧ್ಯ. ಆದ್ದರಿಂದ ಗಾಂಧೀಜಿ 'ಹುಟ್ಟು ಪ್ರಜಾಪ್ರಭುತ್ವ'ವಾದಿಯಾಗಿದ್ದು, ಆ ಪ್ರಜಾಪ್ರಭುತ್ವದ ಸಂರಚನೆಯನ್ನು ಹಂತಹಂತವಾಗಿ ತಳದಿಂದ ಕಟ್ಟಲು ಇಚ್ಛಿಸಿದ್ದರು.

ಪ್ರತಿಯೊಂದು ಗ್ರಾಮವು ತನ್ನ ಅಗತ್ಯಗಳಿಗಾಗಿ ಸ್ವತಂತ್ರ ಗಣರಾಜ್ಯವಾಗಿದ್ದು ಇತರ ಅಗತ್ಯಗಳಿಗೆ ನೆರೆಹೊರೆಯವರೊಡನೆ ಪರಸ್ಪರ ಅವಲಂಬಿಸಬೇಕಾದುದು ಅನಿವಾರ್ಯವಾಗಿದೆ. ಆತನ ಆದರ್ಶೀಕೃತ ಶುದ್ಧ ಪ್ರಜಾಪ್ರಭುತ್ವವು ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹೊಂದಿಕೊಂಡಿರುವಾಗಲೇ ಸಮೂಹ ಮತ್ತು ಸಹಕಾರಿ ಕ್ರಿಯೆಯ ಮೇಲೆ ಆಧರಿಸಿದ ನೈಜ ಗ್ರಾಮ ಸರ್ಕಾರದ ಮಾದರಿಯನ್ನು ನೀಡಲು ಇಚ್ಛಿಸಿದ್ದ. ಆತನ ಪ್ರಾಮಾಣಿಕ ಪ್ರಯತ್ನವೆಂದರೆ ಆತನ ಆದರ್ಶೀಕೃತ ಕಲ್ಪನೆಯ ಹಳ್ಳಿಯನ್ನು ಸೂಚಿಸಿದ್ದು ಮತ್ತು ಅದು ಇಡೀ ಜೀವಮಾನವನ್ನೇ ಅಂತಹ ಗ್ರಾಮದ ಮಾದರಿಗಾಗಿ ತೆಗೆದುಕೊಳ್ಳುವುದಾಗಿತ್ತು. ನಿಜವಾದ ಪ್ರಜಾಪ್ರಭುತ್ವ ಮತ್ತು ಗ್ರಾಮವನ್ನು ಪ್ರೀತಿಸುತ್ತಾರೆ ಅವರು. ಅಂತಹ ಕಾರ್ಯವನ್ನು ಕೈಗೊಂಡು ಗ್ರಾಮದ ಕರ್ಮಚಾರಿ, ನೇಯುವವ, ಕಾವಲುಗಾರ, ವೈದ್ಯ ಹಾಗೂ ಶಾಲಾ ಉಪಾಧ್ಯಾಯ ವೃತ್ತಿಯನ್ನು ಒಪ್ಪಿಗೆ ಆರಂಭಿಸುವುದನ್ನು ಗಾಂಧೀಜಿ ಆಶಿಬದ್ದ. ಆತನ ಪ್ರಕಾರ "ಭಾರತದ ಎಲ್ಲ ಗ್ರಾಮಗಳು ಈ ಆದರ್ಶಕ್ಕೆ ಬಂದುದಾದರೆ, ಭಾರತವು ತನ್ನ ದುಗುಡಗಳಿಂದ ಮುಕ್ತವಾಗಬಹುದು" (ಪುಟ 106-108)

ಸಮುದಾಯ ಅಭಿವೃದ್ಧಿ ಕಾರ್ಯಕ್ರಮವು ಗಾಂಧೀಜಿ ಕಟ್ಟುವ ಕಾರ್ಯಕ್ರಮದ ಅಧಿಕೃತ ಮಾದರಿಯಾಗಿದ್ದು, ಸಾಮಾಜಿಕ ಸುಧಾರಣೆಯ ಕೆಲವು ಪ್ರಮುಖ ಭಾಗಗಳನ್ನು ಬಿಟ್ಟುಬಿಡಲಾಗಿತ್ತು. ಅಲ್ಲದೆ ಈ ಅಭಿವೃದ್ಧಿ ಕಾರ್ಯವು ಯುನೈಟೆಡ್‌ಸ್ಟೇಟ್ಸ್‌ನ ಗ್ರಾಮೀಣ ಸೇವೆ ಮತ್ತು ಕೈಗಾರಿಕೀಕರಣದ ಸಾಕಷ್ಟು ತಂತ್ರಗಳನ್ನು ಒಳಗೊಂಡಿತ್ತು (ಉನ್ನಿತನ, 1979 : 208). ಆದ್ದರಿಂದ ಇಲ್ಲಿ ಸರ್ಕಾರಿ ನೀತಿಗಳು ಹಾಗೂ ಗಾಂಧಿಯ ಉಪದೇಶಗಳ ಮಧ್ಯೆ ಬಿರುಕು ಸ್ಪಷ್ಟವಾಗಿ ಕಾಣುತ್ತದೆ (208-210)

ವಲೇರಿಯನ್ ರೋಡ್ರಿಗಸೋ, 2002, ಎಸೆಂಟ್ಸಿಯನ್ ರೈಟಿಂಗ್ಸ್ ಆಫ್ ಬಿ.ಆರ್. ಅಂಬೇಡ್ಕರ್ ದೆಹಲಿ : ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಅಂಬೇಡ್ಕರ್‌ರವರಿಗೆ ಭಾರತೀಯ ಗ್ರಾಮವು ಹಿಂದೂ ಸಾಮಾಜಿಕ ವ್ಯವಸ್ಥೆಯಡಿ 'ಅಸ್ಪೃಶ್ಯರ' ಸ್ಥಾನವೇನು ಎಂಬುದನ್ನು ಪರಿಶೀಲಿಸುವ ಜಾಗವಾಗಿರುತ್ತದೆ. ಏಕೆಂದರೆ ಹಿಂದೂ ಗ್ರಾಮವು, ಹಿಂದೂ ಸಾಮಾಜಿಕ ವ್ಯವಸ್ಥೆಯ ಕ್ರಿಯಾಶೀಲ ಗಿಡವಾಗಿದೆ" (323) "ಅಲ್ಲಿ ಹಿಂದೂ ಸಾಮಾಜಿಕ ವ್ಯವಸ್ಥೆಯು ಪೂರ್ಣ ಕ್ರಿಯಾಶೀಲವಾಗಿರುವುದನ್ನು ಒಬ್ಬ ಕಾಣಬಹುದು. ಒಬ್ಬ ಸಾಧಾರಣ ಹಿಂದೂ ಭಾರತೀಯ ಗ್ರಾಮದ ಬಗ್ಗೆ ಯಾವಾಗಲಾದರೂ ಮಾತನಾಡಿದಲ್ಲಿ, ಆತ ಪರವಶನಾಗಿಬಿಡುತ್ತಾನೆ. ಆತನಿಗೆ ಅದೊಂದು ಆದರ್ಶ ಸಾಮಾಜಿಕ ಸಂಘಟನೆಯಾಗಿದ್ದು, ಅದಕ್ಕೆ ಸಮನಾದುದು ಜಗತ್ತಿನಲ್ಲಿ ಬೇರೆಲ್ಲೂ ಇರದು ಎಂದು ನಂಬುತ್ತಾನೆ. ಸಾಮಾಜಿಕ ಸಂಘಟನೆಯ ಸಿದ್ಧಾಂತಕ್ಕೆ ಅದೊಂದು ವಿಶೇಷ ಕೊಡುಗೆಯಾಗಿದ್ದು ಭಾರತವು ಅದಕ್ಕಾಗಿ ಹೆಮ್ಮೆ ಪಡಬೇಕಾಗಿದೆ ಎಂದು ಸಮರ್ಥಿಸಲಾಗುತ್ತದೆ.

ಅಂಬೇಡ್ಕರ್‌ರವರಿಗೆ ಭಾರತೀಯ ಗ್ರಾಮದ ಇಂಥ ಆದರ್ಶೀಕೃತ ಸಾಮಾಜಿಕ ಸಂಘಟನೆಯಲ್ಲಿ ಅಪರಿಮಿತ ನಂಬಿಕೆ ಇಡುವ ಹಿಂದೂಗಳೆಲ್ಲರೂ ಮತಾಂಧರೇ. ಅವರು ಉದಾಹರಣೆ ಸಹಿತ 'ಹಿಂದೂ' ಸದಸ್ಯರು ಸಂವಿಧಾನ ಸಭೆಯಲ್ಲಿ ಕೋಪೋದ್ರಿಕ್ತರಾಗಿ ಮಾಡಿದ ಭಾಷಣಗಳನ್ನು ಉಲ್ಲೇಖಿಸುತ್ತಾರೆ. ಈ ಹಿಂದೂ ಸದಸ್ಯರಿಗೆ ಭಾರತೀಯ ಸಂವಿಧಾನವು ಭಾರತೀಯ ಗ್ರಾಮವನ್ನು ಅದರ ಆಧಾರವೆಂಬಂತೆ ಗುರುತಿಸಿ, ಸ್ವತಂತ್ರ ಆಡಳಿತ ಘಟಕಗಳಾಗಿ ತನ್ನದೇ ಆದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವನ್ನು ಹೊಂದಿರತಕ್ಕದ್ದೆಂದು ವಾದಿಸುತ್ತಾರೆ. ಅಸ್ಪೃಶ್ಯರ ದೃಷ್ಟಿಯಲ್ಲಿ ಅದಕ್ಕಿಂತ ಮಿಗಿಲಾದ ವಿಕೋಪ ಮತ್ತೊಂದಿಲ್ಲ. ಸಂವಿಧಾನ ಸಭೆಯು ಅದನ್ನು ಸ್ವೀಕರಿಸದ್ದಕ್ಕೆದೇವರಿಗೆ ನಮನಗಳು! ಆದರೂ, ಭಾರತೀಯ ಗ್ರಾಮವು ಸಾಮಾಜಿಕ ಸಂಘಟನೆಯ ಆದರ್ಶವೆಂಬ ನಿರಂತರ ನಂಬಿಕೆ ಹಿಂದೂಗಳಿಗಿದೆ. (234) ಈ ನಂಬಿಕೆಯಲ್ಲಿ ಅಂಥ ಹೊಸತೇನೂ ಇಲ್ಲ. ಏಕೆಂದರೆ ಹಿಂದೂಗಳ ಈ ನಂಬಿಕೆಯು ಪುರಾತನ ನಂಬಿಕೆ ಅಥವಾ ಪ್ರಾಚೀನ ಕಾಲದಿಂದ ಬಂದುದೇನೂ ಅಲ್ಲ. ಮೆಟಾಕಾಫೆಯಿಂದ ತೆಗೆದುಕೊಂಡ ಉಲ್ಲೇಖಗಳನ್ನು ದೀರ್ಘವಾಗಿ ನೀಡುತ್ತಾ, ಇಂಥ ಆದರ್ಶೀಕೃತ ಭಾರತದ ಗ್ರಾಮದ ವಿವರಣೆಯೂ ಉನ್ನತ ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿದ ವರ್ಗದವರಿಂದ ಬಂದಿದ್ದರಿಂದ, ಹಿಂದೂಗಳು ಪುಳಕಿತರಾಗಿ, ಅವರ ನಿರೂಪಣೆಯನ್ನು ಪ್ರಶಂಸೆಯಾಗಿಯೇ ಸ್ವೀಕರಿಸುತ್ತಾರೆ. ಭಾರತದ ಗ್ರಾಮದ ಬಗೆಗಿನ ಈ ವಿವರಣೆಯನ್ನು ಒಪ್ಪುವುದರಿಂದ ಹಿಂದೂಗಳು ತಮ್ಮ ಬುದ್ಧಿ ಅಥವಾ ವಿವೇಕಕ್ಕೆ ನ್ಯಾಯ ಒದಗಿಸುವುದಿಲ್ಲ. ಅವರೆಲ್ಲರೂ ಅಧೀನಗೊಂಡ ಜನರಂತೆ ತಮ್ಮ ಮಿತಿಯನ್ನಷ್ಟೆ ಪ್ರದರ್ಶಿಸಿದರು.

ಈ ಆದರ್ಶೀಕೃತ ಭಾರತೀಯ ಗ್ರಾಮದ ಚಿತ್ರಣವು ವಿದೇಶಿಯರ ಮತ್ತು ಜಾತಿ ಹಿಂದೂಗಳ ಸಹ ಪ್ರಯತ್ನದಿಂದಾಗಿ ಬಂದುದು. ಇದಕ್ಕೆ ಮುಖಾಮುಖಿಯೆಂಬಂತೆ ಅಂಬೇಡ್ಕರ್‌ರವರು ಒಂದು ವಾಸ್ತವಿಕ ಚಿತ್ರಣವನ್ನು ನೀಡುತ್ತಾರೆ. "ಭಾರತೀಯ

ಗ್ರಾಮವು ಒಂದು ಸಾಮಾಜಿಕ ಏಕ ಘಟಕವಲ್ಲ. ಅದು ಜಾತಿಗಳನ್ನು ಹೊಂದಿದೆ....(1) ಸ್ಪೃಶ್ಯರು ಮತ್ತು (2) ಅಸ್ಪೃಶ್ಯರು (235) ಬಹುಸಂಖ್ಯಾತರು - ಅಲ್ಪಸಂಖ್ಯಾತರು: ಗ್ರಾಮದೊಳಗೆ, ಗ್ರಾಮದ ಹೊರಗೆ ಪ್ರತ್ಯೇಕ ಕೇರಿಗಳಲ್ಲಿ ಜೀವಿಸುವವರು, ಆರ್ಥಿಕವಾಗಿ ಬಲಾಢ್ಯ ಮತ್ತು ಅಧಿಕಾರಿ ಸಮುದಾಯ, ಬಡವರು ಮತ್ತು ಪರಾವಲಂಬಿತರು : ಆಳುವ ಜನಾಂಗ ಮತ್ತು ಸಾಂಪ್ರದಾಯಿಕವಾಗಿ ಜೀತದಲ್ಲಿರುವ ಅಧೀನ ಜನಾಂಗಗಳು ಅಲ್ಲಿ ಇದ್ದಾರೆ" (325)

"ಈ (ಗ್ರಾಮ) ಗಣರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಜಾಗವೇ ಇಲ್ಲ. ಸಮಾನತೆಗೆ ಅಲ್ಲಿ ಸ್ಥಳವೇ ಇಲ್ಲ-ಸ್ವಾತಂತ್ರ್ಯ ಹಾಗೂ ಸಹೋದರತೆಗೆ ಅಲ್ಲಿ ಎಡೆಯೇ ಇಲ್ಲ. ಭಾರತೀಯ ಗ್ರಾಮವೆನ್ನುವುದು ಗಣರಾಜ್ಯದ ನಿರಾಕರಣೆಯೇ ಆಗಿದೆ. ಅದೇನಾದ್ರೂ ಗಣರಾಜ್ಯವಾಗಿದ್ದರೆ, ಅದು ಸ್ಪೃಶ್ಯರ, ಸ್ಪೃಶ್ಯರಿಂದ ಮತ್ತು ಸ್ಪೃಶ್ಯರಿಗಾಗಿ ಇರುವಂಥದು. ಈ ಗಣರಾಜ್ಯವು ಅಸ್ಪೃಶ್ಯರ ಮೇಲಿರುವ ಹಿಂದೂಗಳ ಸಾಮ್ರಾಜ್ಯವಾಗಿದೆ. ಇದೊಂದು ರೀತಿಯ ಹಿಂದೂಗಳ ವಸಾಹತುಶಾಹಿಯಾಗಿದ್ದು ಅಸ್ಪೃಶ್ಯರನ್ನು ದ್ವೇಷಿಸಲು ರೂಪಿತವಾದುದು" (330-1) "ಅದೊಂದು ಹಿಂದೂಗಳ ಗ್ರಾಮವಾಗಿದೆ. ಏಕೆಂದರೆ ಅಸ್ಪೃಶ್ಯರಿಗೆ ಹಕ್ಕುಗಳೇ ಇಲ್ಲ. ಅಲ್ಲಿ ಅವರು ಕಾಯಲು, ಸೇವೆ ಸಲ್ಲಿಸಲು ಮತ್ತು ಅಧೀನತೆಗೊಳಗಾಗಲು ಅಷ್ಟೇ, ಅವರಿಗೆ ಹಕ್ಕುಗಳೆಂಬುದು ಇಲ್ಲ, ಏಕೆಂದರೆ ಅವರು ಗ್ರಾಮ ಗಣರಾಜ್ಯದಿಂದ ಹೊರಗಿದ್ದಾರೆ. ಹಾಗೂ...ಏಕೆಂದರೆ ಅವರು ಹಿಂದೂ ಪಂಗಡದ ಹೊರಗೆ ಇರುವವರು. ಇದೊಂದು ವಿಷ ಚಕ್ರವಾಗಿದೆ' (331) ಭಾರತೀಯ ಗ್ರಾಮವೊಂದರಲ್ಲಿ ಜೀವಿಸುವ ಸ್ಪೃಶ್ಯರಿಗೆ ಮತ್ತು ಅಸ್ಪೃಶ್ಯರಿಗೆ ಅದು ಸಹಬಾಳ್ವೆಯ ನಿಯಮಗಳನ್ನು ನೀಡುತ್ತದೆ. 'ಪ್ರತಿಯೊಂದು ಗ್ರಾಮದಲ್ಲೂ ಸ್ಪೃಶ್ಯರು ಒಂದು ಕಾನೂನನ್ನು ಇಟ್ಟಿದ್ದು, ಅದನ್ನು ಅಸ್ಪೃಶ್ಯರು ಅನುಸರಿಸಲೇಬೇಕು' (325)

ಎಸಾ ಸುರಿಂದರ್ ಜೋದ್ಕರಾ 2002, 'ರಾಷ್ಟ್ರ ಮತ್ತು ಗ್ರಾಮ : ಗಾಂಧಿ, ನೆಹರು ಮತ್ತು ಅಂಬೇಡ್ಕರ್‌ರವರಲ್ಲಿ ಗ್ರಾಮೀಣ ಭಾರತದ ರೂಪಗಳು", ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ : 37 (32) : 3343-3353. ಅವರ ಐಡಿಯಾಲಾಜಿಕಲ್ ನಿಲುವುಗಳಲ್ಲಿ ಅಸಮ್ಮತಿಗಳು ಮತ್ತು ಭಿನ್ನಾಭಿಪ್ರಾಯಗಳು ಅಥ'ವಾ ರಾಜಕೀಯ ಉದ್ದೇಶಗಳಿದ್ದರೂ 'ಗ್ರಾಮ'ವೆನ್ನುವುದು ಒಂದು ಕೇಂದ್ರ ನಗರವಾಗಿ, ಅದರೊಳಗೆ ಅವರೆಲ್ಲ ಭಾರತದ 'ಪರಂಪರೆ'ಯ ಸಾಮಾಜಿಕ ಬದುಕನ್ನು ಪರಿಕಲ್ಪಿಸುತ್ತಾರೆ ಅಥವಾ ಅರ್ಥೈಸುತ್ತಾರೆ. ಹೀಗಿದ್ದಾಗ್ಯೂ, ವಸಾಹತು ಆಡಳಿತಗಾರರಂತೆ ಗ್ರಾಮವು ಭಾರತೀಯ ನಾಗರೀಕತೆಯ 'ಮೂಲಘಟಕ' ಎಂಬುದನ್ನು ರಾಷ್ಟ್ರೀಯವಾದಿ ನಾಯಕರು ಭಾವಿಸಲಿಲ್ಲ. ಇವರಲ್ಲಿ ಅನೇಕರಿಗೆ, ಹಳ್ಳಿಯೇ 'ನೈಜ' ಭಾರತವಾಗಿದ್ದು, ಅಲ್ಲಿಂದಲೆ ರಾಷ್ಟ್ರವನ್ನು ಶೋಧಿಸತಕ್ಕದ್ದು. ಮುಕ್ತಿಗೊಳಿಸಿ, ಪರಿವರ್ತಿತಬೇಕಾಗಿರುವುದೂ ಸಹ (3343). ಅಲ್ಲಿಂದಲೆ ರಾಷ್ಟ್ರೀಯ (ರಾಷ್ಟ್ರೀಯವಾದಿ ನಾಯಕರು) ಪರಿಕಲ್ಪನೆಯೆಂದರೆ ಭಾರತದ ಭೂತ ಅಥವಾ ಪರಂಪರೆಯ ಸಾಮಾಜಿಕ ವ್ಯವಸ್ಥೆಯು ಮುಖ್ಯವಾಗಿ, ಭಾರತದ ಬಿಡುಗಡೆಯ ಭವಿಷ್ಯವನ್ನು ಪರ್ಯಾಯವಾಗಿ ಒಳಗೊಂಡಿದೆ. ಅವರ ಯೋಜನೆಯಲ್ಲಿ ಗ್ರಾಮವು ಒಂದು ಕೇಂದ್ರ ವರ್ಗವಾಗಿಯೇ ಉಳಿಯುತ್ತದೆ. ಸಂವಿಧಾನ ಸಭೆಯಲ್ಲೂ ಸಹ ಗ್ರಾಮ ಅಥವಾ ವ್ಯಕ್ತಿಯಲ್ಲಿ ಭಾರತದ ರಾಜಕಾರಣದ ಪ್ರಧಾನ ಘಟಕವಾಗಿರಬೇಕೇ? ಎಂಬ ಪ್ರಶ್ನೆಯು ಉದ್ವೇಗ ಭರಿತವಾಗಿ ಚರ್ಚೆಗೊಳಗಾಗುತ್ತದೆ (3344). ಪೂರ್ಣ ನಾಗರಿಕತೆಯ ಸಾಮಾಜಿಕ ಸ್ವರೂಪದ ಬಿಂಬ ಗ್ರಾಮವಾಗಿತ್ತಲ್ಲದೆ, "ಅದರೊಳಗೆ ಕೇವಲ ಜನ ಜೀವಿಸಿದರು; ಭಾರತದ ನಾಗರಿಕತೆಯ ಮೂಲ ಮೌಲ್ಯಗಳು ಅದರ ಸ್ವರೂಪದಲ್ಲೇ ಇತ್ತು" (ಲೆಡಿಲ್ಲೆ 1980 : 108).

ಸ್ವತಂತ್ರ ಭಾರತದಲ್ಲಿ ಅಭಿವೃದ್ಧಿ ಮತ್ತು ಬದಲಾವಣೆಗಾಗಿ ರಾಜ್ಯ ನೀತಿಗಳನ್ನು ಈ ರೂಪಿಕೆಗಳು ಪ್ರಭಾವಿಸಿದ್ದನ್ನು ಹೊರತುಪಡಿಸಿ, ಅವು ಭಾರತೀಯ ಹೊಸ ಸಾಮಾಜಿಕ ಚಳುವಳಿಗಳನ್ನು ಪ್ರೇರೇಪಿಸುವ ಸಾಮಾನ್ಯ ಪ್ರಜ್ಞೆಯ ಭಾಗವೂ ಆಗಿದ್ದವು. ಅಲ್ಲದೆ ಈ ರೂಪಿಕೆಗಳು ಭಾರತೀಯ ಗ್ರಾಮ ಅಥವಾ ಬೇಸಾಯದ ಪ್ರಶ್ನೆಯನ್ನು ರಾಷ್ಟ್ರೀಯವಾದಿ ನಾಯಕತ್ವ ತೆಗೆದುಕೊಂಡಾಗಲೂ, ತನ್ನ ಮಧ್ಯೆ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದಾಗ್ಯೂ ತೌಲನಿಕ ಅಧ್ಯಯನಗಳನ್ನು ಪ್ರಭಾವಿಸುತ್ತವೆ.

ರಾಷ್ಟ್ರೀಯವಾದಿ ಪರಿಕಲ್ಪನೆಗಳಲ್ಲಿ ಗ್ರಾಮವು ಒಂದು ಕೇಂದ್ರವರ್ಗವಾಗಿದ್ದರೂ ಸಹ, ಭಾರತೀಯ ಪರಂಪರಾಗತ ಸಾಮಾಜಿಕ ವ್ಯವಸ್ಥೆಯನ್ನು ಅದು ಅಮೂಲಾಗ್ರವಾಗಿ ಪ್ರತಿನಿಧಿಸುತ್ತದೆ ಎನ್ನುವುದರಲ್ಲಿ ಸಮ್ಮತವಿದ್ದೇ ಇತ್ತು. ಪರಂಪರಾಗತ ಭಾರತೀಯ ಗ್ರಾಮ ಬದುಕಿನ ಅನುಕೂಲತೆಗಳು ಮತ್ತು ಭವಿಷ್ಯ ಭಾರತದ ಅವರ ದಾರ್ಶನಿಕತೆಯ ಬಗ್ಗೆ ವ್ಯತ್ಯಾಸಗಳಿದ್ದರೂ ಮೇಲಿನ ಅಂಶವನ್ನು ಒಪ್ಪಿಕೊಂಡಿದ್ದರು.

ಆದರೂ ಹಳ್ಳಿ ಬದುಕಿನ ಬಗ್ಗೆ ಅವರ ವಿಚಾರಗಳು ವಾಸ್ತವ ನೆಲೆಯಲ್ಲಿ ಏನಾಗುತ್ತಿದ್ದವು ಎಂಬುದನ್ನಷ್ಟೇ ಗಮನಿಸದೆ ಭಾರತದ ಭೂತ ಮತ್ತು ಭವಿಷ್ಯತ್‌ಗಳ ದಾರ್ಶನಿಕತೆಯನ್ನು ಸಹ ಅವು ಬಿಂಬಿಸುತ್ತಿದ್ದವು. ಇವರ್‍ಯಾರೂ ಗ್ರಾಮವನ್ನು ಮೂಲ ವಾಸ್ತವ (Conerete reality)ವನ್ನಾಗಿ ಅದರಲ್ಲಿ ಪ್ರಾಂತೀಯ ವ್ಯತ್ಯಾಸಗಳು ಹಾಗೂ ನಿರ್ದಿಷ್ಟ ಚಾರಿತ್ರಿಕಾಂಶಗಳು ಬದಲಾವಣೆಯ ಆಂತರ್ಯವನ್ನು ಒಳಗೊಂಡಿದ್ದವು ಎಂಬುದನ್ನು ನೋಡುವುದಿಲ್ಲ. ಗ್ರಾಮದ ಬಗೆಗಿನ ಇವರ ಒಟ್ಟು ಸೈದ್ಧಾಂತಿಕ ನಿಲುವುಗಳು ಮತ್ತು ನಡವಳಿಗಳ ಹೊರತಾಗಿಯೂ ಇವರೆಲ್ಲರಿಗೂ ಗ್ರಾಮವು ಒಂದು ನಾಗರಿಕತೆಯ ಅಂಶವಾಗಿಯೇ ಇತ್ತು. ಬಹುಮುಖ್ಯವಾಗಿ ಅವರ ಗ್ರಹಿತವೆಂದರೆ ಗ್ರಾಮದ ಸಾಮಾಜಿಕ ಚೌಕಟ್ಟು, ಉಪಖಂಡದ ಎಲ್ಲ ಕಡೆಯಲ್ಲಿಯೂ ಒಂದೇ ಆಗಿತ್ತು (ಪುಟ 3345). ಗಾಂಧೀಜಿಯು ಪಶ್ಚಿಮದೊಂದಿಗೆ ಭಾರತೀಯ ನಾಗರಿಕತೆಯನ್ನು ಮೂರು ಹಂತಗಳಲ್ಲಿ ಮುಖಾಮುಖಿಯಾಗಿಸುತ್ತಾರೆ. ಗ್ರಾಮವನ್ನು ನಗರಕ್ಕೆ ಹಾಗೂ ಗ್ರಾಮ ಬದುಕನ್ನು ಆಧುನಿಕ ಸಂಸ್ಕೃತಿ ಮತ್ತು ನಾಗರೀಕತೆಗೆ ಒಂದು ವಿಶ್ಲೇಷಣೆ ಮತ್ತು ಪರ್ಯಾಯವಾಗಿ ಇಡುತ್ತಾರಲ್ಲದೆ, ಅವರ ಮುಖ್ಯ ಕಾಳಜಿಯು ಪ್ರಸ್ತುತ ಗ್ರಾಮದ ಸ್ಥಿತಿಯತ್ತ ಇದ್ದು, ಅದನ್ನು ಸುಧಾರಿಸಲು ಮಾರ್ಗೋಪಾಯಗಳನ್ನು ಯೋಚಿಸುವಾಗಲೂ ಅವರ ಕಲ್ಪನೆಯಲ್ಲಿ ಪರ್ಯಾಯ ನಾಗರೀಕತೆಯು ಸಾಧ್ಯತೆಯಾಗುವಲ್ಲಿ ಭವಿಷ್ಯವಾಣಿಯಂತಿತ್ತು.

ಸ್ವಾತಂತ್ರ್ಯೋತ್ತರ ಭಾರತದ ಅಂದರೆ 1950ರ ದಶಕ ಮತ್ತು 1960ರ ದಶಕದಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿ ಯೋಜಿಸಿದ ಅಧಿಕೃತ ನೀತಿಗಳು ಮತ್ತು ಕಾರ್ಯಕ್ರಮಗಳು ನೆಹರೂವಿನ ಆಧುನಿಕತೆಯ ದಾರ್ಶನಿಕತೆಯಿಂದ ಮೂಡಿಬಂದವು.

ಆದರೂ ನೆಹರೂ ಗ್ರಾಮಗಳ ವಾಸ್ತವ ಸ್ಥಿತಿಯು ವರ್ಗ ವಿಂಗಡನೆಗಳು, ಹಿಂದಿಳಿದಿರುವಿಕೆ ಮತ್ತು ಅಜ್ಞಾನದಿಂದ ಕೂಡಿದ್ದು, ಪಾರಂಪಾರಿಕ ಭಾರತೀಯ ಗ್ರಾಮ ಸಮುದಾಯವು ಭೂತವಾಗಿತ್ತು ಎನ್ನುವಾಗ ಗಾಂಧೀಜಿಯವರೊಡನೆ ಅನೇಕ ಅಂಶಗಳನ್ನು ಒಪ್ಪುತ್ತಾರೆ. (ಈ ಗ್ರಾಮಗಳ ಪುನರ್ ಸಂಘಟನೆ ಸಾಧ್ಯವೂ ಇರಲಿಲ್ಲ). ತಳಸ್ತರ ಗ್ರಾಮದ ಪರಿಕಲ್ಪನೆಯಲ್ಲಿ ಹಿಂದೂ ಗ್ರಾಮವು ದಲಿತರನ್ನು ಚಾರಿತ್ರಿಕವಾಗಿ ತಿರಸ್ಕರಿಸಿದ್ದು, ಆ ಗ್ರಾಮದ ಕಲ್ಪನೆಯು ಅವರನ್ನು ವಿಮುಖರನ್ನಾಗಿಸಿ ತಮ್ಮ ಜಾತಿ ಐಡೆಂಡಿಟಿಯಿಂದ ತಪ್ಪಿಸಿಕೊಳ್ಳಲು ಅಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಮರು ನಿರ್ಮಾಣವು ಸಾಧ್ಯವಿರಲಿಲ್ಲ. ಆದರೂ ಕೆಲವು ಅಖಿಲ ಭಾರತೀಯ ನಾಗರೀಕತೆಯ ಲಕ್ಷಣಗಳು ಒಂದು ನಿರಂತರತೆಯನ್ನು ಸೂಚಿಸುತ್ತಿರುವಾಗಲೂ ಅದು ರಾಷ್ಟ್ರೀಯವಾದಿ ನಿಲುವೇ ಆಗಿದ್ದು, ಗ್ರಾಮ ಬದುಕಿನಲ್ಲಿ ಬದಲಾವಣೆ ಇದ್ದಾಗ್ಯೂ, ಆ ಬದಲಾವಣೆಯಲ್ಲಿ ಮತ್ತೊಂದು ಬದಲಾವಣೆಯನ್ನು ಬಾಹ್ಯ ಮೂಲದಿಂದ ತರುವುದು ಅಥವಾ ಸರ್ಕಾರದಿಂದ ಮಾಡುವುದು. ಸಾಧ್ಯವಿರದ ಮಾತಾಗಿತ್ತು. ಈ ರೀತಿಯ ಪರಿಕಲ್ಪನೆಗಳಲ್ಲಿ ಅಂಬೇಡ್ಕರ್‌ರವರಿಗೆ ಯಾವುದೇ ರೀತಿಯ ಬೇಡಿಕೆ ಇರಲಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಗ್ರಾಮವನ್ನು ಪರಿಕಲ್ಪಿಸುವ ಸಾಧ್ಯತೆಗಳು ಓರಿಯಂಟಲಿಸ್ಟ್, ವಸಾಹತುಶಾಹಿಯ ವರ್ಗೀಕರಣದಲ್ಲಿ ಸಾಧ್ಯವಿದ್ದರೂ, ಅವು ತಮ್ಮ ರಾಜಕೀಯ ಮತ್ತು ತಾತ್ವಿಕ ಧೋರಣೆಗಳಿಗೆ ಪೂರ್ಣ ಮಿತಿಯನ್ನಾಗಲಿ ಅಥವಾ ನಿರ್ದಿಷ್ಟತೆಯನ್ನಾಗಲಿ ಮಾಡಲು ಸಾಧ್ಯವಾಗಲಿಲ್ಲ (3352) ನೆಹರೂ-ಗಾಂಧೀ ಅನೇಕ ತಾತ್ವಿಕ ನೆಲೆಗಳಲ್ಲಿ ಒಂದೇಯಾಗಿದ್ದು, ಭವಿಷ್ಯದ ಭಾರತದ ಹಳ್ಳಿಯು ಆರ್ಥಿಕವಾಗಿ ಸ್ವಾವಲಂಬಿಯಾಗಲು ಸಾಧ್ಯವಿರಲಿಲ್ಲವೆಂದು ನೆಹರು ಭಾವಿಸುವಾಗಲೂ ಅವರ ಸಾಮಾಜಿಕ ಮತ್ತುರಾಜಕೀಯ ವಿಚಾರಗಳು ಗಾಂಧೀಜಿಯವರಂತೆಯೇ ಇದ್ದವು. (3350). ●

(ಲೇಖಕರು ಗೋವಾ ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ಉಪನ್ಯಾಸಕರಾಗಿದ್ದಾರೆ.)

ಅಂಬೇಡ್ಕರ್ ಹೀಗೆ ಹೇಳುತ್ತಾರೆ...

ಭಾರತದಲ್ಲಿ ಜಾತಿಗಳು

ಮಾನವ ನಾಗರಿಕತೆಯನ್ನು ಒಟ್ಟು ರೂಪಿಸುವ ಭೌತ ಪದಾರ್ಥಗಳ ಸ್ಥಳೀಯ, ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ನಿರೂಪಣೆಗಳನ್ನಷ್ಟೇ ನಮ್ಮಲ್ಲಿ ಬಹು ಜನರು ಗಮನಿಸಿದ್ದೇವೆಂದು ನಾನು ಧಾರಾಳವಾಗಿ ಹೇಳಬಲ್ಲೆ. ಆದರೆ ಮಾನವ ಸಂಸ್ಥೆಗಳ ವ್ಯಾಖ್ಯಾನದಂಥ ಸಂಗತಿಯೂ ಇದೆಯೆಂಬ ಆಲೋಚನೆಯನ್ನು ಕೆಲವರಷ್ಟೇ ಆಸ್ವಾದಿಸಬಲ್ಲರು. ಮಾನವ ಸಂಸ್ಥೆಗಳ ಪ್ರದರ್ಶನವೆಂಬುದು ಒಂದು ವಿಚಿತ್ರ ಆಲೋಚನೆ. ಕೆಲವರಂತೂ ಇದನ್ನು ಹುಚ್ಚುಕಲ್ಪನೆಯೆಂದೇ ಕರೆಯಬಹುದು. ಆದರೆ ಮಾನವಕುಲಶಾಸ್ತ್ರದ ವಿದ್ಯಾರ್ಥಿಗಳಿಗಾಗಿ ನೀವು ಈ ಆವಿಷ್ಕಾರದ ಬಗ್ಗೆ ಕಠಿಣರಾಗುವುದಿಲ್ಲವೆಂದು ಆಶಿಸುತ್ತೇನೆ. ಏಕೆಂದರೆ ಅದು ಹಾಗಿಲ್ಲ. ಅದರಲ್ಲಿಯೂ ನಿಮಗೆ ಅದು ಹೊಸದಾಗಿರಬಹುದು.

ಪ್ರಸಿದ್ಧ ಮಾನವ ಕುಲಶಾಸ್ತ್ರಜ್ಞರ ಪ್ರಕಾರ ಭಾರತದ ಜನತೆಯು ಆರ್ಯ, ದ್ರಾವಿಡ, ಮಂಗೋಲ ಮತ್ತು ಸಿಥಿಯನ್ನರ ಕಲಬೆರಕೆಯಾಗಿದೆ. ಈ ಜನಾಂಗದವರೆಲ್ಲ, ಅವರನ್ನೂ ಆದಿವಾಸಿಗಳಾಗಿದ್ದಾಗಲೇ ತಮ್ಮೆಲ್ಲ ವಿವಿಧ ಸಂಸ್ಕೃತಿಯೊಂದಿಗೆ ಹಲವು ಶತಮಾನಗಳ ಹಿಂದೆ ಭಾರತಕ್ಕೆ ನಾನಾ ಕಡೆಗಳಿಂದ ಬಂದರು. ಅವರಿಗಿಂತ ಮುಂಚಿನಿಂದ ಇಲ್ಲಿದ್ದ ಜನರೊಂದಿಗೆ ಅವರು ಹೋರಾಡುತ್ತ ತಳ್ಳಿಕೊಂಡು ಭಾರತ ದೇಶದೊಳಕ್ಕೆ ಪ್ರವೇಶಿಸಿದರು. ಈ ಸಾಹಸ ಕಾರ್ಯಮುಗಿದ ಮೇಲೆ ಅವರು ಪರಸ್ಪರ ಸೌಹಾರ್ದಯುತವಾಗಿ ನೆರೆಹೊರೆಯವರಂತೆ ನೆಲಸಿದರು. ನಿರಂತರ ಸಂಪರ್ಕದಿಂದಲೂ, ಪರಸ್ಪರ ವ್ಯವಹಾರ ಸಂಬಂಧದಿಂದಲೂ, ಅವರು ತಮ್ಮ ಪ್ರತ್ಯೇಕ ಸಂಸ್ಕೃತಿಗಳನ್ನು ತಳ್ಳಿಹಾಕಿದ ಸಮಾನ ಸಂಸ್ಕೃತಿಯೊಂದನ್ನು ರೂಪಿಸಿಕೊಂಡು, ಭಾರತದ ಜನತೆಯಾಗಿರುವ ವಿವಿಧ ಸಮುದಾಯಗಳು ಸಂಪೂರ್ಣವಾಗಿ ಮಿಶ್ರಣವಾಗಿಲ್ಲವೆಂಬುದನ್ನು ಒಪ್ಪಬಹುದು. ಭಾರತದ ಗಡಿಯೊಳಗಿನ ಪ್ರವಾಸಿಗೂ ಸಹ, ಪೂರ್ವದವನಿಗೂ ಪಶ್ಚಿಮದವನಿಗೂ ಹಾಗೂ ದಕ್ಷಿಣದವನಿಗೂ ಉತ್ತರದವನಿಗೂ, ದೈಹಿಕ ಹಾಗೂ ಬಣ್ಣದಲ್ಲಿ ಕೂಡ ಎದ್ದುಕಾಣುವ ವೈದೃಶ್ಯಗಳಿವೆ. ಯಾವುದೇ ಜನಾಂಗದ ಬಗ್ಗೆ ನಿರೀಕ್ಷಿಸುವಂತೆ, ಸಮರೂಪಧಾರಣೆಗೆ ಸಮ್ಮಿಶ್ರಣಗೊಳ್ಳುವಿಕೆಯೊಂದೇ ಅಳತೆಗೋಲು ಆಗಲಾರದು. ಜನಾಂಗಿಕವಾಗಿ ಎಲ್ಲ ಜನರೂ ಭಿನ್ನ ಭಿನ್ನ ಅಂಶಗಳಿಂದ ಕೂಡಿದವರು. ಸಮಾನತೆಯ ಮಾಪನವೆಂದರೆ ಸಾಂಸ್ಕೃತಿಕವಾಗಿರುವ ಅಖಂಡತೆ, ಇದನ್ನು ಅಂಗೀಕರಿಸಿ, ತನ್ನ ಸಂಸ್ಕೃತಿಯಲ್ಲಿ ಏಕತೆಯನ್ನು ಹೊಂದಿರುವ ವಿಚಾರದಲ್ಲಿ ಭಾರತದ ದ್ವೀಪಕಲ್ಪವನ್ನು ಮೀರಿಸುವ ಮತ್ತೊಂದು ದೇಶವಿಲ್ಲವೆಂದು ಹೇಳುವ ಧೈರ್ಯ ಕೂಡ ನಾನು ಮಾಡುತ್ತೇನೆ. ಭಾರತದಲ್ಲಿರುವುದು ಭೌಗೋಳಿಕವಾದ ಏಕರೂಪತೆ ಮಾತ್ರವಲ್ಲ. ಇದೆಲ್ಲಕ್ಕೂ ಮೀರಿ, ಆಳವೂ ಮೂಲಭೂತವೂ ಆದ ಒಂದು ಒಗ್ಗಟ್ಟಿದೆ. ಅದೆಂದರೆ ದೇಶವನ್ನು ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಆಚ್ಛಾದಿಸಿರುವ ಅಸಂದಿಗ್ಧವಾದ ಸಾಂಸ್ಕೃತಿಕ ಅಖಂಡತೆ. ಆದರೆ ಈ ಸಮಾನತೆಯಿಂದಾಗಿಯೇ ಜಾತಿ ಎಂಬುದು ವಿವರಿಸಲು ತುಂಬ ಕ್ಲಿಷ್ಟವಾದೊಂದು ಸಮಸ್ಯೆಯಾಗಿರುವುದು. ಹಿಂದೂ ಸಮಾಜವೆಂಬುದು ಕೇವಲ ಪರಸ್ಪರ ಪ್ರತ್ಯೇಕವಾಗಿರುವ ಘಟಕಗಳ ಒಂದು ಒಕ್ಕೂಟವಾಗಿದ್ದಲ್ಲಿ ಈ ವಿಷಯ ಸರಳವಾಗಿರುತ್ತಿತ್ತು. ಆದರೆ ಜಾತಿಯೆಂಬುದು ಆಗಲೇ ಸಮರೂಪಧಾರಣೆ ಮಾಡಿರುವ ಘಟಕಗಳ ವಿಂಗಡಣೆಯಾಗಿದೆ. ಜಾತಿಯ ಮೂಲ ಕುರಿತ ವಿವರಣೆಯೆಂಬುದು ಈ ವಿಂಗಡಣೆಯ ಪ್ರಕ್ರಿಯೆಯ ವಿವರಣೆಯೂ ಆಗಿದೆ. ನಮ್ಮ ಈ ಅಧ್ಯಯನ ಕ್ಷೇತ್ರದ ಅನ್ವೇಷಣೆಗೆ ತೊಡಗುವ ಮೊದಲು ಜಾತಿಯ ಸ್ವರೂಪ ಕುರಿತು ನಾವು ತಿಳಿದುಕೊಳ್ಳುವುದು ಒಳ್ಳೆಯದು. ಆದುದರಿಂದ ನಾನು ಜಾತಿಯ ಕೆಲವು ಅತ್ಯುತ್ತಮ ಅಭ್ಯಾಸಿಗಳ ನಿರ್ವಚನಗಳನ್ನು ಇಲ್ಲಿ ನಿರೂಪಿಸುತ್ತೇನೆ: (1) ಸೆನಾರ್ಟ್ ಎಂಬೊಬ್ಬ ಫ್ರೆಂಚ್ ಅಧಿಕಾರಿಯು ಮಾಡಿದ ಜಾತಿಯ ವ್ಯಾಖ್ಯಾನ ಹೀಗಿದೆ: "(ಜಾತಿಯೆಂಬುದು) ಒಂದು ಬದ್ಧ ಸಂಸ್ಥೆ. ಅಂತೂ ತತ್ವಶಃ ಕಟ್ಟುನಿಟ್ಟಾದ ವಂಶಪರಂಪರೆ ಸ್ವಲ್ಪ ಸಾಂಪ್ರದಾಯಿಕವಾದ ಮತ್ತು ಸ್ವತಂತ್ರವಾದ ಸಂಸ್ಥೆಯಿಂದ ಸಜ್ಜಾದದ್ದು, ಅದಕ್ಕೊಬ್ಬ ಪ್ರಧಾನನೂ, ಮತಸಭೆಯೂ ಉಂಟು; ಸಂದರ್ಭಾನುಸಾರ ನಡೆಯುವ ಹೆಚ್ಚು ಕಡಿಮೆ ನಿರುಪಾಧಿಕ ಅಧಿಕಾರದ ಸಭೆಗಳಲ್ಲಿ ಕಲೆಯಬೇಕು. ಕೆಲವು ಹಬ್ಬಗಳಲ್ಲಿಯೂ ಒಟ್ಟಿಗೆ ಕೂಡಬೇಕು; ಸಮಾನ ವೃತ್ತಿ ವ್ಯವಹಾರಗಳಿಂದ ಒಟ್ಟಿಗೆ ಇರುವುದು; ಇವು ಹೆಚ್ಚು ನಿರ್ದಿಷ್ಟವಾಗಿ ಸೇರುವುದು, ಮದುವೆ ಆಹಾರ ಮತ್ತು ಧಾರ್ಮಿಕ ಅಪವಿತ್ರೀಕರಣ ಸಂಬಂಧದ ಪ್ರಶ್ನೆ ಬಂದಾಗ; ತನ್ನ ಸಧಸ್ಯರನ್ನು ನ್ಯಾಯ ನಿರ್ವಾಹಾಧಿಕಾರ ಚಲಾವಣೆಯಿಂದ ಆಳುವುದು; ಈ ಅಧಿಕಾರದ ವ್ಯಾಪ್ತಿಯು ವ್ಯತ್ಯಾಸವಾಗುವುದಾದರೂ ಇದು ಯಶಸ್ವಿಯಾಗುವುದುಂಟು. ಏಕೆಂದರೆ ಕೆಲವು ತಪ್ಪು ದಂಡಗಳನ್ನು ವಿಧಿಸುವ ಮತ್ತು ಎಲ್ಲಕ್ಕೂ ಹೆಚ್ಚಿನದಾಗಿ ಗುಂಪಿನಿಂದಲೇ ಮತ್ತೆ ಹಿಂದಕ್ಕೆ ತೆಗೆದುಕೊಳ್ಳಲಾಗದ ಹಾಗೆ ಹೊರಹಾಕುವ ದತ್ತಾಧಿಕಾರವನ್ನು ಸಮಾಜದ ಮುಖಂಡನಿಗೆ ಕೊಟ್ಟಿದೆ".

2) ನೆಸ್‌ಫೀಲ್ಡರ (Nesfield) ವ್ಯಾಖ್ಯಾನ : "(ಜಾತಿಯೆಂಬುದು) ಸಮಾಜದ ಒಂದು ಗುಂಪು, ಇದು ಯಾವುದೇ ಇನ್ನೊಂದು ಗುಂಪಿನೊಂದಿಗೆ ಯಾವುದೇ ಸಂಬಂಧವನ್ನು ನಿರಾಕರಿಸುತ್ತದೆ. ತಮ್ಮದೇ ಆದ ಒಂದು ಸಮಾಜಕ್ಕೆ ಸೇರಿದ ವ್ಯಕ್ತಿಗಳ ಹೊರತಾಗಿ ಬೇರೆಯವರೊಂದಿಗೆ ಮದುವೆಯಾಗುವಂತಿಲ್ಲ, ತಿನ್ನುವಂತಿಲ್ಲ, ಕುಡಿಯುವಂತಿಲ್ಲ"

(3) ಸರ್.ಎಚ್. ರಿಸ್ಲೆಯವರ (Sir H. Risley) ಪ್ರಕಾರ "ಜಾತಿಯನ್ನು ಸಮಾನ ಹೆಸರುಗಳಿರುವ ಕುಟುಂಬಗಳ ಒಕ್ಕೂಟ ಅಥವಾ ಹಲವು ಕುಟುಂಬ ಗುಂಪುಗಳ ಒಕ್ಕೂಟವೆಂದು ವ್ಯಾಖ್ಯಾನಿಸಬಹುದು. ಈ ಸಮಾನ ಹೆಸರುಗಳು ಸಾಮಾನ್ಯವಾಗಿ ನಿರ್ದಿಷ್ಟ ವೃತ್ತಿಯನ್ನು ಸೂಚಿಸುತ್ತವೆ, ಇಲ್ಲವೆ ವೃತ್ತಿಗೆ ಸಂಬಂಧಿಸಿರುತ್ತವೆ ಈ ಹೆಸರುಗಳು ಅದೇ ವೃತ್ತಿನಾಮಗಳನ್ನು ಹೊಂದಿರುವ ಮಾನವ ಇಲ್ಲವೆ ದೈವವೊಂದರ ಪೌರಾಣಿಕ ಪ್ರಾಚೀನರೊಬ್ಬರ ಸಮಾನ ಮೂಲದಿಂದ ಬಂದಿರುವುದಾಗಿ ಹೇಳಿಕೊಳ್ಳುತ್ತಾರೆ. ಈ ಬಗ್ಗೆ ಅಭಿಪ್ರಾಯ ಕೊಡಬಲ್ಲ ಅರ್ಹತೆಯಿರುವವರು ಕೂಡ ಈ ಹೆಸರುಗಳನ್ನು ಒಂದು ಏಕರೂಪ ಸಮಾಜಕ್ಕೆ ಸೇರಿದ್ದೆಂದು ಮನ್ನಿಸುತ್ತಾರೆ"

(4) ಡಾ. ಕೇತ್ಕರ್ ಅವರು ಜಾತಿಯನ್ನು ವಿವರಿಸಿರುವುದು ಹೀಗೆ : "(ಜಾತಿಯು) ಎರಡು ಲಕ್ಷಣಗಳನ್ನು ಪಡೆದಿರುವ ಒಂದು ಸಾಮಾಜಿಕ ಗುಂಪು;

(i) ಸದಸ್ಯತ್ವವು ಸದಸ್ಯರಿಂದ ಹುಟ್ಟಿದವರಿಗಷ್ಟೇ ಸೀಮಿತವಾಗಿದ್ದು ಹಾಗೆ ಹುಟ್ಟಿದವರನ್ನೆಲ್ಲ ಒಳಗೊಂಡಿರುತ್ತದೆ. (ii) ಸದಸ್ಯರು ತಮ್ಮ ಗುಂಪಿನಿಂದ ಹೊರಗಿನವರನ್ನು ಮದುವೆಯಾಗುವುದನ್ನು ಅನುಲ್ಲಂಘನೀಯವಾದ ಸಾಮಾಜಿಕ ಕಟ್ಟಳೆಯಿಂದ ನಿಷೇಧಿಸಲಾಗಿದೆ.

ಈ ವ್ಯಾಖ್ಯಾನಗಳನ್ನು ಸಮೀಕ್ಷಿಸುವುದು ನಮ್ಮ ಉದ್ದೇಶಕ್ಕೆ ಮಹತ್ವದ್ದಾಗಿದೆ. ಒಂದೊಂದಾಗಿ ತೆಗೆದುಕೊಂಡಾಗ ಮೂವರು ಲೇಖಕರ ವ್ಯಾಖ್ಯಾನಗಳು ಅತಿ ಹೆಚ್ಚಿನ ಇಲ್ಲವೆ ಅತಿ ಕಡಿಮೆ ಅಂಶಗಳನ್ನೊಳಗೊಂಡಿವೆಯೆಂಬುದನ್ನು ನೋಡಬಹುದಾಗಿದೆ. ಯಾವೊಂದು ವ್ಯಾಖ್ಯಾನವೂ ಸ್ವಯಂಪೂರ್ಣ ಅಥವಾ ಸಮರ್ಪಕವಾಗಿಲ್ಲ. ವ್ಯಾಖ್ಯಾನಕಾರರೆಲ್ಲ ಜಾತಿ ವ್ಯವಸ್ಥೆಯ ಕಾರ್ಯ ವಿಧಾನದ ಕೇಂದ್ರ ಬಿಂದುವನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ. ತನ್ನೊಳಗಿನ ಒಂದು ಗುಂಪಾಗಿ ಹಾಗೂ ನಿರ್ದಿಷ್ಟ ಸಂಬಂಧದೊಂದಿಗೆ ಜಾತಿಯ ವ್ಯವಸ್ಥೆಯನ್ನು ಅಖಂಡವಾಗಿ ನೋಡದೆ, ಜಾತಿಯನ್ನು ಒಂದು ಪ್ರತ್ಯೇಕ ಘಟಕವೆಂದು ವ್ಯಾಖ್ಯಾನಿಸಲು ಪ್ರಯತ್ನಿಸಿದ್ದು ಅವರು ಮಾಡಿದ ತಪ್ಪು. ಆದರೂ ಒಟ್ಟಾರೆ ತೆಗೆದುಕೊಂಡಾಗ ಅವರೆಲ್ಲರೂ ಪರಸ್ಪರ ಪೂರಕವಾಗಿಯೇ ಇದ್ದಾರೆ, ಒಬ್ಬೊಬ್ಬರೂ ಇನ್ನೊಬ್ಬರು ಬಿಟ್ಟಿರುವುದನ್ನು ಒತ್ತಿ ಹೇಳಿದ್ದಾರೆ. ಆದ್ದರಿಂದ ನಾನು ವಿಮರ್ಶಾತ್ಮಕವಾಗಿ ಮೇಲಿನ ವ್ಯಾಖ್ಯಾನಗಳಲ್ಲಿ ಜಾತಿಯ ವೈಶಿಷ್ಟ್ಯಗಳೆಂದು ಪರಿಗಣಿತವಾದಂಥ ಮತ್ತು ಎಲ್ಲಾ ಜಾತಿಗಳಿಗೂ ಸಮಾನವಾಗಿರುವಂಥ ಅಂಶಗಳನ್ನಷ್ಟು ಮಾತ್ರ ತೆಗೆದುಕೊಂಡು ಹಾಗೆಯೇ ಮೌಲ್ಯಮಾಪನ ಮಾಡುತ್ತೇನೆ.

(ಮುಂದಿನ ಸಂಚಿಕೆಗೆ)

'SAMVADA' KANNADA MONTHLY DECEMBER 2002 - JANUARY 2003 DECL NO. M.A.G.(2) PRB.DECL 65/02-03



ದಯವಿಟ್ಟು ಓದಿರಿ

ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರವರ ಬದುಕು ಮತ್ತು ಸಾಧನೆ ಬಗ್ಗೆ ಅದೆಷ್ಟೋ ಕೃತಿಗಳು ಕನ್ನಡದಲ್ಲಿ ಬಂದಿದ್ದರೂ ಡಾ॥ ಅಂಬೇಡ್ಕರ್‌ರವರ ಸಹವರ್ತಿಯಾಗಿದ್ದ ಧನಂಜಯ ಕೀರ್‌ರವರು ಬರೆದಿರುವ 'ಆಂಗ್ಲ ಕೃತಿ' ಇಂದಿಗೂ ಓದುಗರನ್ನು ಬಹುವಾಗಿ ಆಕರ್ಷಿಸುತ್ತಿರುವುದನ್ನು ಮರೆಯುವಂತಿಲ್ಲ.
ಸ್ವತಃ ಅಂಬೇಡ್ಕರ್‌ರವರಿಂದಲೇ ಅನುಮೋದಿಸಲ್ಪಟ್ಟಿದ್ದ ಈ ಆಂಗ್ಲ ಗ್ರಂಥವನ್ನು ಲೇಖಕ ಮಂಗ್ಳೂರ ವಿಜಯರವರು ಇದೀಗ ಕನ್ನಡಕ್ಕೆ ಅನುವಾದಿಸಿದ್ದು, ಕನ್ನಡ ಭಾಷಾ ಓದುಗರಿಗಾಗಿ ಲಭ್ಯವಿದೆ.

ಪ್ರತಿಗಳಿಗಾಗಿ ಸಂಪರ್ಕಿಸಿ : **ಸಂಬುದ್ಧ ಪ್ರಕಾಶನ**
ವಿದ್ಯಾ ಟ್ಯುಟೋರಿಯಲ್ಸ್ ಪಕ್ಕ, ವಿ. ನಾಗೇನಹಳ್ಳಿ, ಬೆಂಗಳೂರು-560 032
ದೂರವಾಣಿ : 3433787   ಬೆಲೆ : ರೂ. 375/-

ಭಾರತೀಯ ಸಂಸ್ಕೃತಿಯು ತನ್ನ ಹಲವಾರು ವೈಶಿಷ್ಟತೆಗಳಿಂದಾಗಿ ಜಗತ್ತಿನ ಇತಿಹಾಸಕಾರರ, ಅಧ್ಯಯನಶೀಲರ ಸಂಶೋಧನೆ ಮತ್ತು ಬರಹಗಾರರ ಗಮನ ಸೆಳೆದಿದೆ.
ಮೇಲಿಂದ ಮೇಲೆ ಈ ಬಗ್ಗೆ ಅನೇಕ ಚಿಂತನೆ ಹಾಗೂ ಸಂಶೋಧನೆಗಳು ನಡೆದಿದ್ದರೂ ಕಳೆದ ಕಾಲು ಶತಮಾನದಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ನಮ್ಮ ನಡುವಿನ ಅಪರೂಪದ ಚಿಂತಕ ದಿವಂಗತ ಡಾ॥ ಡಿ.ಆರ್. ನಾಗರಾಜ್ ಕಂಡ ವಿಭಿನ್ನ ದೃಷ್ಟಿಯ ಸಂಸ್ಕೃತಿ ಚಿಂತನ ಕುರಿತು ಬರೆದ ಕೃತಿ ಇದೀಗ ಮಾರುಕಟ್ಟೆಯಲ್ಲಿ ಲಭ್ಯ.

ಪ್ರತಿಗಳಿಗಾಗಿ ಸಂಪರ್ಕಿಸಿ : **ಕನ್ನಡ ಪುಸ್ತಕ ಪ್ರಾಧಿಕಾರ**
ಪಂಪಮಹಾಕವಿರಸ್ತೆ, ಚಾಮರಾಜಪೇಟೆ, ಬೆಂಗಳೂರು - 560 018
ಬೆಲೆ : ರೂ. 200/-





ಶಾಂತಿ, ದಯೆ, ಕರುಣೆ, ಪ್ರೀತಿ ಮತ್ತು ಸಮಾನತೆಯಂತ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರಿದ ಮಹಾನ್ ದಾರ್ಶನಿಕ ಭಗವಾನ್ ಬುದ್ಧನ ಬದುಕು ಮತ್ತು ಸಂದೇಶಗಳನ್ನು ಕುರಿತು ಸಂಸ್ಕೃತದಲ್ಲಿ ಅಶ್ವಘೋಷ ಬರೆದ ಬುದ್ಧ ಚರಿತ ಕೃತಿ ಎಲ್ಲ ಕಾಲಕ್ಕೂ ಒಂದು ಅಮೂಲ್ಯ ಕೃತಿ. ಸಂಸ್ಕೃತದಲ್ಲಿರುವ ಈ ಕೃತಿಯನ್ನು ಪುನರ್ ಸೃಷ್ಟಿಸಿ ಕನ್ನಡದ ಓದುಗರಿಗಾಗಿ ನೀಡಿರುವವರು ಹಿರಿಯ ವಿದ್ವಾಂಸ ಡಾ॥ ಎಲ್. ಬಸವರಾಜುರವರು. ಈಗ ಮಾರುಕಟ್ಟೆಯಲ್ಲಿ ದೊರೆಯುತ್ತದೆ.

ಪ್ರತಿಗಳಿಗಾಗಿ ಸಂಪರ್ಕಿಸಿ : **ಲೋಹಿಯಾ ಪ್ರಕಾಶನ**
'ಕ್ಷಿತಿಜ' ಈಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ - 583103
ದೂರವಾಣಿ : 08392/57412   ಬೆಲೆ : ರೂ. 180/-